ಹುಬ್ಬಳ್ಳಿ
ಶನಿವಾರ, 6 ಜೂನ್ 2026
ಸಂಪುಟ 16, ಸಂಚಿಕೆ 73, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೇರಳದಲ್ಲಿ ಭಾರೀ ಮಳೆ: ರೆಡ್‌ಅಲರ್ಟ್ | ೦೭
ಭಾರತದ ಆರ್ಥಿಕ ಬೆಳವಣಿಗೆ ಶೇ.7.7ಕ್ಕೆ | ೦೭
ಇಂದಿನಿಂದ ಭಾರತ-ಆಫ್ಘನ್ ಟೆಸ್ಟ್ |೧೧

ಆತ್ಮನಿರ್ಭರಕ್ಕೆ ಭಾರತದ ಪ್ರಮುಖ ಆದ್ಯತೆ: ಪ್ರಧಾನಿ ಮೋದಿ

ಇಂಧನ ಭದ್ರತೆ ಭವಿಷ್ಯ

ಸೂರತ್‌ನಲ್ಲಿ 18,000 ಕೋಟಿ ರೂ. ಮೊತ್ತದ ಯೋಜನೆಗಳಿಗೆ ಮೋದಿ ಚಾಲನೆ, ಶಿಲಾನ್ಯಾಸ

◆**ಸೂರತ್:** ಜಾಗತಿಕ ಉದ್ವಿಗ್ನತೆ, ಯುದ್ಧಗಳು ಮತ್ತು ಇಂಧನ ಬಿಕ್ಕಟ್ಟುಗಳಂತಹ ಸವಾಲುಗಳು ಭಾರತಕ್ಕೆ ಇಂಧನ ಸ್ವಾವಲಂಬನೆಯ ಮಹತ್ವವನ್ನು ಮತ್ತಷ್ಟು ಸ್ಪಷ್ಟಪಡಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಗುಜರಾತ್‌ನ ಸೂರತ್‌ನಲ್ಲಿ ಸುಮಾರು 18,000 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಹಾಗೂ ಶಿಲಾನ್ಯಾಸ ನೆರವೇರಿಸಿದ ಅವರು, ಆತ್ಮನಿರ್ಭರ ಭಾರತ ಪರಿಕಲ್ಪನೆಯ ಅಗತ್ಯವನ್ನು ಮತ್ತೊಮ್ಮೆ ಸಮರ್ಥಿಸಿದರು.

ಕೋವಿಡ್ ಮಹಾಮಾರಿ, ವಿವಿಧ ಯುದ್ಧಗಳು ಹಾಗೂ ಪಶ್ಚಿಮ ಏಷ್ಯಾದ ಸಂಘರ್ಷಗಳಿಂದ ಉಂಟಾದ ಇಂಧನ ಕೊರತೆಯಂತಹ ಸವಾಲುಗಳಿಂದ ವಿಶ್ವ ಕಳೆದ ಒಂದು ದಶಕದಲ್ಲಿ ತೀವ್ರ ಒತ್ತಡ ಅನುಭವಿಸಿದೆ. ಆದರೆ 140 ಕೋಟಿ ಭಾರತೀಯರ ಒಗ್ಗಟ್ಟಿನ ಪ್ರಯತ್ನದಿಂದ ಭಾರತ ಈ ಎಲ್ಲ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿದೆ ಎಂದು ತಿಳಿಸಿದರು.

ಇಂಧನ ಕ್ಷೇತ್ರದಲ್ಲಿ ಮಹತ್ತರ ಸಾಧನೆಗಳು: ಕಳೆದ 12 ವರ್ಷಗಳಲ್ಲಿ ಭಾರತ ಇಂಧನ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ಎಂದು ಪ್ರಧಾನಿ ಹೇಳಿದರು. ದೇಶದ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 250 ಗಿಗಾವ್ಯಾಟ್‌ಗೆ ಏರಿಕೆಯಾಗಿದೆ. ಎಥನಾಲ್ ಮಿಶ್ರಣ ಕಾರ್ಯಕ್ರಮ ವಿಸ್ತರಿಸಿದ್ದು, ರೈಲ್ವೆ ವಿದ್ಯುದೀಕರಣ ವೇಗ ಪಡೆದುಕೊಂಡಿದೆ. ಪರಮಾಣು ಶಕ್ತಿ ಯೋಜನೆಗಳು, ವಿದ್ಯುತ್ ಜಾಲಗಳ ಆಧುನೀಕರಣ, ಅನಿಲ ಪೈಪ್‌ಲೈನ್ ವಿಸ್ತರಣೆ ಹಾಗೂ ಪೆಟ್ರೋಲಿಯಂ ಸಂಗ್ರಹ ಮತ್ತು ಸಾಗಣೆ ಸೌಲಭ್ಯಗಳ ಅಭಿವೃದ್ಧಿಯೂ ವೇಗವಾಗಿ ನಡೆಯುತ್ತಿದೆ ಎಂದು ವಿವರಿಸಿದರು.

ಹಸಿರು ಅಭಿವೃದ್ಧಿಯತ್ತ ಹೆಜ್ಜೆ

ವಿಶ್ವ ಪರಿಸರ ದಿನದಂದು ಮಾತನಾಡಿದ ಪ್ರಧಾನಿ, ಭಾರತ ಹಸಿರು ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ ಎಂದು ಹೇಳಿದರು. ➡ಪುಟ ೪



ಎಲ್ ಆ್ಯಂಡ್ ಟಿ ಹಜೀರಾ ಘಟಕಕ್ಕೆ ಭೇಟಿ

ಇದಕ್ಕೂ ಮುನ್ನ ಪ್ರಧಾನಿ ಮೋದಿ ಸೂರತ್ ಜಿಲ್ಲೆಯ ಹಜೀರಾದಲ್ಲಿರುವ ಲಾರ್ಸನ್ ಆ್ಯಂಡ್ ಟೂಬ್ರೋ (ಎಲ್ ಆ್ಯಂಡ್ ಟಿ) ಸಂಸ್ಥೆಯ ಭಾರೀ ಎಂಜಿನಿಯರಿಂಗ್ ಸಂಕೀರ್ಣಕ್ಕೆ ಭೇಟಿ ನೀಡಿದರು. ಅಲ್ಲಿ ನಿರ್ಮಾಣವಾಗುತ್ತಿರುವ ಜೊರಾವರ್ ಲಘು ಟ್ಯಾಂಕ್ ಸೇರಿದಂತೆ ವಿವಿಧ ರಕ್ಷಣಾ ಸಾಧನಗಳ ಬಗ್ಗೆ ಮಾಹಿತಿ ಪಡೆದರು. ಡಿಆರ್‌ಡಿಒ ಮತ್ತು ಎಲ್ ಆ್ಯಂಡ್ ಟಿ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ 25 ಟನ್ ತೂಕದ ಈ ಟ್ಯಾಂಕ್‌ನ್ನು ವಿಶೇಷವಾಗಿ ಚೀನಾ ಗಡಿಯಂತಹ ಪ್ರದೇಶಗಳಲ್ಲಿ ತ್ವರಿತ ನಿಯೋಜನೆಗಾಗಿ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಲಾಯಿತು. ಭಾರತದ ಇಂಧನ ಭದ್ರತೆ, ಕೈಗಾರಿಕಾ ಸಾಮರ್ಥ್ಯ ಹಾಗೂ ಆತ್ಮನಿರ್ಭರತೆಯೇ ದೇಶದ ಭವಿಷ್ಯದ ಬೆಳವಣಿಗೆಯ ಪ್ರಮುಖ ಆಧಾರಗಳಾಗಿವೆ ಎಂದು ಪ್ರಧಾನಿ ಮೋದಿ ಹೇಳಿದರು.

ಭಾರತದಲ್ಲಿ ₹3 ಲಕ್ಷ ಕೋಟಿ ಹೂಡಿಕೆ: ಏರ್‌ಟ್ರಂಕ್ ಘೋಷಣೆ

◆**ಹೊಸದಿಲ್ಲಿ:** ಹೈಪರ್‌ಸ್ಕೇಲ್ ಡೇಟಾ ಸೆಂಟರ್ ಕ್ಷೇತ್ರದ ಪ್ರಮುಖ ಸಂಸ್ಥೆಯಾದ ಏರ್‌ಟ್ರಂಕ್, 2030ರೊಳಗೆ ಭಾರತದಲ್ಲಿ 3 ಲಕ್ಷ ಕೋಟಿ ರೂ. (30 ಬಿಲಿಯನ್ ಡಾಲರ್) ಹೂಡಿಕೆ ಮಾಡುವುದಾಗಿ ಘೋಷಿಸಿದೆ. ಈ ಹೂಡಿಕೆಯಿಂದ ದೇಶದಲ್ಲಿ 5 ಗಿಗಾವಾಟ್ (ಜಿಡಬ್ಲ್ಯು) ಡೇಟಾ ಸೆಂಟರ್ ಸಾಮರ್ಥ್ಯ ಅಭಿವೃದ್ಧಿಪಡಿಸುವ ಗುರಿಯನ್ನು ಕಂಪನಿ ಹೊಂದಿದೆ. ಪ್ರಧಾನಿ ಮೋದಿ ಯವರು ಶುಕ್ರವಾರ ಏರ್‌ಟ್ರಂಕ್ ಸಂಸ್ಥಾಪಕ ಹಾಗೂ ಸಿಇಒ ರಾಬಿನ್ ಖುದಾರೊಂದಿಗೆ ನಡೆದ ಸಭೆ ಬಳಿಕ ಈ ಮಾಹಿತಿ ನೀಡಿದರು. ➡ಪುಟ ೪

ತುಮಕೂರಲ್ಲಿ ಪೊಲೀಸರ ಕಾರ್ಯಾಚರಣೆ

ಉಗ್ರರ ಜತೆ ಸಂಪರ್ಕ ರಾಜ್ಯದ ಇಬ್ಬರ ಸೆರೆ

◆**ತುಮಕೂರು:** ಪಾಕಿಸ್ತಾನ ಮೂಲದ ಶಂಕಿತ ಉಗ್ರರೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇರೆಗೆ ದಾವಣಗೆರೆ ಮತ್ತು ತುಮಕೂರಿನಲ್ಲಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಯುವಕರು ದೇಶದ ಆಂತರಿಕ ಬೆಳವಣಿಗೆಗಳ ಕುರಿತು ಪ್ರಚೋದನಾತ್ಮಕ ಸಂದೇಶಗಳನ್ನು ರವಾನಿಸುತ್ತಿದ್ದರು ಪೊಲೀಸರು ತಿಳಿಸಿದ್ದಾರೆ.

ತುಮಕೂರಿನ ಬೀಡಿ ಲೇಔಟ್ ನಿವಾಸಿ ದಾವಣಗೆರೆ ಮೂಲದ ಜಮೀರ್ ಖಾನ್(22) ಹಾಗೂ ತುಮಕೂರಿನ ಶ್ರೀರಾಮನಗರದ ಅಲ್ಲಾಭಕ್ಷು (24) ಬಂಧಿತರು. ಇವರು ಪಾಕಿಸ್ತಾನ ಮೂಲದ ಶಂಕಿತ ಉಗ್ರರಾದ ಶಾಬಾಸ್ ಭುಟ್ಟಿ ಮತ್ತು ರಾಣಾ ಉನೇನ್ ಜತೆ ನಿರಂತರ ಸಂಪರ್ಕದಲ್ಲಿದ್ದರು ಎಂಬ ಮಾಹಿತಿ ಗುಪ್ತಚರ ಇಲಾಖೆಗೆ ಲಭ್ಯವಾಗಿತ್ತು. ಈ ಮಾಹಿತಿ ಆಧಾರದ ಮೇಲೆ ಪೊಲೀಸರು ಇಬ್ಬರನ್ನೂ ಬಂಧಿಸಿದ್ದಾರೆ.

ವಾಟ್ಸ್ಆ್ಯಪ್, ಇನ್‌ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣಗಳ ಮೂಲಕ ಆರೋಪಿಗಳು ವಿದೇಶದಲ್ಲಿರುವ ಶಂಕಿತ ಉಗ್ರರೊಂದಿಗೆ ಸಂಪರ್ಕದಲ್ಲಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ ದೇಶದಲ್ಲಿ ಅಶಾಂತಿ ಸೃಷ್ಟಿಸುವ ಹಾಗೂ ವಿಧ್ವಂಸಕ ಚಟುವಟಿಕೆಗಳಿಗೆ ನೆರವಾಗುವ ಉದ್ದೇಶದಿಂದ ಸ್ಥಳೀಯ ಯುವಕರನ್ನು ಸಂಪರ್ಕಿಸುವ ಪ್ರಯತ್ನ ನಡೆದಿತ್ತು. ಈ ಹಿನ್ನೆಲೆ ಆರೋಪಿಗಳ ಡಿಜಿಟಲ್ ಸಂಪರ್ಕ, ಹಣಕಾಸು ವ್ಯವಹಾರ, ವಿದೇಶಿ ನಂಟುಗಳ ಕುರಿತು ತನಿಖೆ ಮುಂದುವರಿದಿದೆ. ➡ಪುಟ ೪

ಕೇಂದ್ರ ತನಿಖಾ ಸಂಸ್ಥೆಗಳ ನಿಗಾ

ಅಲ್ಲಾಭಕ್ಷು ಸಾಮಾಜಿಕ ಜಾಲತಾಣಗಳಲ್ಲಿ ನಡೆಸುತ್ತಿದ್ದ ಅನುಮಾನಾಸ್ಪದ ಚಟುವಟಿಕೆಗಳು ಹಾಗೂ ದೇಶ ವಿರೋಧಿ ಚಾಟಿಂಗ್‌ಗಳ ಬಗ್ಗೆ ಕೇಂದ್ರ ತನಿಖಾ ಸಂಸ್ಥೆಗಳು ತೀವ್ರ ನಿಗಾ ವಹಿಸಿದ್ದವು. ಆತನ ಲಿಂಕ್‌ಗಳನ್ನು ಪತ್ತೆಹಚ್ಚಿದ ಬಳಿಕ, ತನಿಖಾ ಸಂಸ್ಥೆಗಳು ರಾಜ್ಯ ಪೊಲೀಸರಿಗೆ ಮಾಹಿತಿ ರವಾನಿಸಿದ್ದವು. ಈ ಹಿನ್ನೆಲೆ ಕಾರ್ಯಾಚರಣೆ ನಡೆಸಿದ ತುಮಕೂರು ನಗರ ಪೊಲೀಸರು ಗುರುವಾರ ರಾತ್ರಿ ಕ್ಯಾತಸಂದ್ರದಲ್ಲಿ ಆರೋಪಿಯನ್ನು ಬಂಧಿಸಿದ್ದಾರೆ. ➡ಪುಟ ೪



ಎಕ್ಸ್ ಮೂಲಕ ಉಗ್ರರ ಲಿಂಕ್

ಬಂಧಿತ ಅಲ್ಲಾಭಕ್ಷುಗೆ 20 ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ವಿದೇಶಿ ಶಂಕಿತ ಉಗ್ರನೊಬ್ಬ ಪರಿಚಯವಾಗಿದ್ದ. ಇನ್ಸ್ಟಾಗ್ರಾಮ್‌ನಲ್ಲಿ ಶಂಕಿತ ಮಾಡುತ್ತಿದ್ದ ಪೋಸ್ಟ್‌ಗೆ ಈತ ಲೈಕ್ ಮಾಡುವುದರ ಜತೆ ಮೆಸೇಜ್ ಸಹ ಮಾಡುತ್ತಿದ್ದ. ನಂತರ ಇವರಿಬ್ಬರ ಸಂಪರ್ಕ ಎಕ್ಸ್‌ನಲ್ಲಿ ಮುಂದುವರಿದಿದ್ದು, ಹಲವು ವಿಷಯಗಳ ಕುರಿತು ಚರ್ಚೆ ಮಾಡಿದ್ದರು ಎಂಬ ಆಘಾತಕಾರಿ ಮಾಹಿತಿ ತಿಳಿದುಬಂದಿದೆ. ದೇಶದ ಆಂತರಿಕ ಭದ್ರತೆ ಮತ್ತು ಶಾಂತಿ ಕದಡುವ ನಿಟ್ಟಿನಲ್ಲಿ ಈತ ಸರಣಿ ಪ್ರಚೋದನಾತ್ಮಕ ಸಂದೇಶಗಳನ್ನು ರವಾನಿಸುತ್ತಿದ್ದ ಹಾಗೂ ದೇಶ ವಿರೋಧಿ ಚಟುವಟಿಕೆಗಳ ಕುರಿತು ಚಾಟ್ ನಡೆಸುತ್ತಿದ್ದ ಎಂಬ ಆರೋಪವಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ:ಧನಿಷ್ಠೆ

ದಿನದ ಮಾತು

ಸರಿಯಾದ ಚಿಂತನೆ ಇಲ್ಲದಿದ್ದರೆ ಅಭಿವೃದ್ಧಿ ಹೊಂದುವುದು ತೀರಾ ಅಸಾಧ್ಯ.
▲ಜೆ. ಕೃಷ್ಣಮೂರ್ತಿ

ಸೂರ್ಯ ರೇಖೆಯ ಕುರಿತಾದ ಪ್ರಶ್ನೆಗಳು

ಪೂರ್ಣ ಪರಿಪೂರ್ಣ
◆ಪೂರ್ಣಪ್ರಜ್ಞ ಬೇಲೂರು

◆ಪುಟ ೬

ಕಿರುಸುದ್ದಿ

ಇಂದು ಸಿಇಟಿ ಫಲಿತಾಂಶ

◆**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ (ಯುಜಿಸಿಇಟಿ) ಫಲಿತಾಂಶವನ್ನು ಜೂ.6ರಂದು ಪ್ರಕಟಿಸಲಿದೆ. ವೈದ್ಯಕೀಯ ಶಿಕ್ಷಣ ಸಚಿವ ಮತ್ತು ಪ್ರಾಧಿಕಾರದ ಸಹ ಅಧ್ಯಕ್ಷ ಡಾ.ಶರಣ ಪ್ರಕಾಶ ಪಾಟೀಲ್ ಅವರು ಮಧ್ಯಾಹ್ನ 12 ಗಂಟೆಗೆ ಸುದ್ದಿಗೋಷ್ಠಿ ನಡೆಸಿ, ಫಲಿತಾಂಶದ ವಿವರಗಳನ್ನು ಪ್ರಕಟಿಸಲಿದ್ದಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಈ ವೇಳೆ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಖುಷ್ಬು ಗೋಯಲ್ ಉಪಸ್ಥಿತರಿರಲಿದ್ದಾರೆ ಎಂದು ಹೇಳಿದ್ದಾರೆ. ಸಾರ್ವಜನಿಕರು, ಅಂದು ಮಧ್ಯಾಹ್ನ 2 ಗಂಟೆಯ ನಂತರ https://keaonline.karnataka.gov.in/ugcet_2026_results/, https://keaonline.karnataka.gov.in/ugcet_2026_result/ ಹಾಗೂ https://cetonline.karnataka.gov.in/kea/ ಲಿಂಕ್‌ಮೂಲಕ ಫಲಿತಾಂಶ ಪಡೆಯಬಹುದು ಎಂದು ವಿವರಿಸಿದ್ದಾರೆ.

ಯುವ ವೈದ್ಯರ ನೇರ ನೇಮಕ: ಸಚಿವ ಖಾದರ್

◆**ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಇಚ್ಛಿಸುವ ಎಂಬಿಬಿಎಸ್ ಪದವೀಧರರು ನೇರವಾಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಅನುಮತಿ ಪತ್ರ ರವಾನಿಸಿ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಒಂದು ವಾರದೊಳಗೆ ಅವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಹೊಸದಾಗಿ ನೇಮಕಾತಿ ಆಗುವ ವೈದ್ಯರಿಗೆ ತಿಂಗಳಿಗೆ 60,000 ರೂ. ವೇತನ ನಿಗದಿಪಡಿಸಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

◆ಪುಟ ೫

ಭಾರತದಲ್ಲೇ ಫೈಟರ್ ಜೆಟ್ ಜಂಟಿ ಉತ್ಪಾದನೆ

◆ಪುಟ ೭

ಒತ್ತಡಕ್ಕೆ ಬಗ್ಗುವವರಲ್ಲ ಪಿಎಂ ಮೋದಿ: ಪುಟಿನ್

◆ಪುಟ ೭



ದೇಶದ ಭದ್ರತೆಗೆ ಮತ್ತಷ್ಟು ಬಲ

◆ಪುಟ ೭

ಸುದ್ದಿ ಸಮಗ್ರ

ಅಮ್ಮನಿಗಾಗಿ ಒಂದು ಗಿಡ ಕಾರ್ಯಕ್ರಮದಲ್ಲಿ ನಿರ್ಮಲಾ ಮಾತು

ರಾಜ್ಯದಲ್ಲೂ ಮಿಯಾವಾಕಿ ಕಾಡು

◆**ವಿಜಯನಗರ:** ಸಸಿ ನೆಡುವುದು ಕೇವಲ ಒಂದು ದಿನದ ಆಚರಣೆಯಾಗಬಾರದು. ಅದು ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು. ನಮ್ಮ ಸುತ್ತಮುತ್ತಲಿನ ವಾತಾವರಣ, ಪಶು, ಪಕ್ಷಿಗಳು ಮತ್ತು ಗಿಡಮರಗಳು ಸಮೃದ್ಧವಾಗಿದ್ದರೆ ಮಾತ್ರ ಮನುಕುಲದ ಪ್ರಗತಿ ಸಾಧ್ಯ. ಇಲ್ಲದಿದ್ದರೆ ಇಡೀ ಜೀವಸಂಕುಲವೇ ನಾಶವಾಗಿ ಭೂಮಿ ಬರಡಾಗುತ್ತದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಅರಣ್ಯ ಇಲಾಖೆ ವತಿಯಿಂದ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಚಿಕ್ಕಜೋಗಿಹಳ್ಳಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಮ್ಮನಿಗಾಗಿ ಒಂದು ಗಿಡ ಸಸಿ ನೆಡುವ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಶತಮಾನಗಳ ಹಿಂದೆ ವಿಶ್ವದ ಶ್ರೀಮಂತ ಸಾಮ್ರಾಜ್ಯ ಎನಿಸಿದ್ದ ವಿಜಯನಗರ ಎಲ್ಲ ರೀತಿಯಲ್ಲೂ ಸಂಪದ್ಭರಿತವಾಗಿತ್ತು ಎಂಬುದು ಇತಿಹಾಸದಿಂದ ತಿಳಿಯುತ್ತದೆ. ನಂತರ ನಮ್ಮ ಪೂರ್ವಜರು ಮಾಡಿರಬಹುದಾದ ತಪ್ಪಿನಿಂದ ಈ ಭಾಗದಲ್ಲಿ ಅರಣ್ಯ ನಾಶವಾಗಿದೆ. ➡ಪುಟ ೪



ವಿಜಯನಗರ ಜಿಲ್ಲೆ ಬದ್ಧತೆ ಕೊಂಡಾಡಿದ ಸಚಿವೆ ◆ಪುಟ ೪

ಖಾತೆ ಹಂಚಿಕೆ ಅಸಮಾಧಾನ | ರೆಡ್ಡಿ ಮನವೊಲಿಸುವೆ: ಸಿಎಂ

ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ

◆**ಬೆಂಗಳೂರು:** ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡ ಕೇವಲ ಎರಡೇ ದಿನಕ್ಕೆ ಸರ್ಕಾರಕ್ಕೆ ಬಂಡಾಯದ ಬಿಸಿ ತಟ್ಟಿದೆ. ತಮಗೆ ಇಷ್ಟವಿಲ್ಲದ ಜಲಸಂಪನ್ಮೂಲ ಖಾತೆ ಹಂಚಿಕೆ ಮಾಡಿರುವುದಕ್ಕೆ ಹಿರಿಯ ನಾಯಕ ರಾಮಲಿಂಗಾರೆಡ್ಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆದರೆ, ಸಿಎಂ ಅವರು ರಾಮಲಿಂಗಾರೆಡ್ಡಿ ಮನವೊಲಿಸುವ ಭರವಸೆ ನೀಡಿದ್ದಾರೆ.



ತಮ್ಮ ಕೋರಮಂಗಲ ನಿವಾಸದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ರಾಮಲಿಂಗಾರೆಡ್ಡಿ ಅವರು, ಈಗಿನ ಸಿಎಂ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಅವರು 2023ರಲ್ಲಿ ನಮ್ಮ ಮನೆಗೆ ಬಂದಿದ್ದರು. ಮುಂದೆ ನಾನೇ ಸಿಎಂ ಆಗುತ್ತೇನೆ. ನಿಮಗೆ ಬೆಂಗಳೂರು ನಗರಾಭಿವೃದ್ಧಿ ಕೊಡುತ್ತೇನೆ ಎಂದಿದ್ದರು. ಪ್ರಮಾಣ ವಚನಕ್ಕೂ ಮುನ್ನ ಅವರನ್ನು ಭೇಟಿ ಯಾದಾಗಲೂ ಬೆಂಗಳೂರು ನಗರಾಭಿವೃದ್ಧಿ ನಿಮಗೆ ಕೊಡುತ್ತೇನೆ ಎಂದಿದ್ದರು. ➡ಪುಟ ೪

ರಾಜೀನಾಮೆ ಪತ್ರದಲ್ಲೇನಿದೆ?

ಮಾನ್ಯರೇ,

ನನಗೆ ತಮ್ಮ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಿದ್ದಕ್ಕೆ ತಮಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ನನ್ನ ಧನ್ಯವಾದಗಳು. ನಾನು ನನ್ನ ಆತ್ಮಸಾಕ್ಷಿ ವಿರುದ್ಧವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದ ಕಾರಣ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ನನ್ನ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ. ನಾನು ಶಾಸಕನಾಗಿ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿ ಮುಂದುವರಿಯುತ್ತೇನೆ.

ವಂದನೆಗಳೊಂದಿಗೆ,
ರಾಮಲಿಂಗಾರೆಡ್ಡಿ.

ಮುನಿದು ತಣ್ಣಗಾದ ಮುನಿಯಪ್ಪ ◆ಪುಟ ೪

ಖರ್ಗೆ ನಾಮಪತ್ರ ಸಲ್ಲಿಕೆ

ರಾಜ್ಯಸಭಾ ಚುನಾವಣೆ

◆**ಬೆಂಗಳೂರು:** ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ.

ಚುನಾವಣಾಧಿಕಾರಿಯಾಗಿರುವ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ. ಈ ವೇಳೆ ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಜತೆಯಲ್ಲಿದ್ದರು. ನಾಮಪತ್ರ ಸಲ್ಲಿಕೆ ಬಳಿಕ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, ಇವತ್ತು ನಾನು ನಾಮಪತ್ರ ಸಲ್ಲಿಕೆ ಮಾಡಿದ್ದೇನೆ. ರಾಜ್ಯದ ಮತ್ತು ಕೇಂದ್ರದ ನಾಯಕರು ಉಪಸ್ಥಿತರಿದ್ದುದರಿಂದ ಈ ನಾಮಪತ್ರ ಸಲ್ಲಿಕೆ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ದೊರಕಿತು. ➡ಪುಟ ೪

ಅಕ್ರಮ ನುಸುಳುಕೋರರ ವಿರುದ್ಧ ಅಮಿತ್ ಶಾ ಎಚ್ಚರಿಕೆ

ಜನಸಂಖ್ಯಾ ಬದಲಾವಣೆ ಸಹಿಸಲ್ಲ

◆**ಅಗರ್ತಲಾ:** ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಬಿಹಾರದಲ್ಲಿ ಜನಸಂಖ್ಯಾ ವಿನ್ಯಾಸದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಸ್ಪಷ್ಟಪಡಿಸಿದರು.

ತ್ರಿಪುರಾದ ಲಂಕಾಮುರಾ ಗಡಿ ಕಾವಲು ಕೇಂದ್ರದಲ್ಲಿ (ಬಿಎಸ್‌ಎಫ್ ಬಿಒಪಿ) ಯೋಧರನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಅಂತಾರಾಷ್ಟ್ರೀಯ ಗಡಿಗಳ ಭದ್ರತೆಯನ್ನು ಮತ್ತಷ್ಟು ಬಲಪಡಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದು, ಸ್ಮಾರ್ಟ್ ಬಾರ್ಡರ್ ಯೋಜನೆ ಅಂತಿಮ ಹಂತದಲ್ಲಿದೆ ಎಂದು ಹೇಳಿದರು. ದೇಶದ ಏಳು-ಎಂಟು ಗಡಿ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಸ್ಮಾರ್ಟ್ ಬಾರ್ಡರ್ ಯೋಜನೆ ಜಾರಿಗೊಳಿಸಲಾಗುವುದು. ಈ ವ್ಯವಸ್ಥೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ, ಸ್ಥಳೀಯ ಆಡಳಿತ ಮತ್ತು ಗಡಿ ಕಾವಲು ಪಡೆಗಳ ಸಮನ್ವಯ ಇರಲಿದೆ ಎಂದು ಅವರು ತಿಳಿಸಿದರು. ಪ್ರತಿ ಗಡಿಯೂ ತನ್ನದೇ ಆದ ಸವಾಲುಗಳನ್ನು ಹೊಂದಿದೆ. ಮಾನವ ಕಳ್ಳಸಾಗಣೆ, ಶಸ್ತ್ರಾಸ್ತ್ರಗಳ ಸಾಗಣೆ ಹಾಗೂ ಮಾದಕ ವಸ್ತುಗಳ ಕಳ್ಳಸಾಗಣೆ ನಡೆಯುತ್ತಿದ್ದರೂ ಬಿಎಸ್‌ಎಫ್ ಯೋಧರು ಸಮರ್ಥವಾಗಿ ಎದುರಿಸುತ್ತಿದ್ದಾರೆ ಎಂದು ಶಾ ಶ್ಲಾಘಿಸಿದರು.



ಬಿಎಸ್‌ಎಫ್ ಯೋಧರೊಂದಿಗೆ ಅಮಿತ್ ಶಾ.

> **2047ರೊಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸಲು ನಕಲಿ ನೋಟುಗಳ ಹರಿವು, ಮಾನವ ಕಳ್ಳಸಾಗಣೆ ಮತ್ತು ಮಾದಕ ವಸ್ತುಗಳ ಸಾಗಣೆಯನ್ನು ಸಂಪೂರ್ಣವಾಗಿ ತಡೆಯಬೇಕಾಗಿದೆ.**
> ■ **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ದಿಲ್ಲಿ ಡಿಜೆಪಿ ಪತ್ನಿ ಕಾಡಾನೆ ದಾಳಿಗೆ ಬಲಿ

◆**ಮಡಿಕೇರಿ:** ತೋಟದ ಕೆಲಸ ನೋಡಲೆಂದು ತೆರಳಿದ ಮಹಿಳೆ ಮೇಲೆ ಕಾಡಾನೆಯೊಂದು ದಾಳಿ ನಡೆಸಿ ಸಾಯಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಕೋಣನಕಟ್ಟೆಯಲ್ಲಿ ಶುಕ್ರವಾರ ಬೆಳ್ಳಂಬೆಳಗ್ಗೆ ನಡೆದಿದೆ. ದಿಲ್ಲಿ ಡಿಜೆಪಿ ಅಣ್ಣಳಮಾಡ ಸುನಿಲ್ ಅಚ್ಚಯ್ಯ ಎಂಬುವರ ಪತ್ನಿ ಸಂಧ್ಯಾ (50) ಎಂಬುವರೇ ಕಾಡಾನೆ ದಾಳಿಗೆ ಸಾವಿಗೀಡಾದವರಾಗಿದ್ದಾರೆ. ➡ಪುಟ ೪

ಕಿರುಸುದ್ದಿ

ಅಭಿನಂದನೆ ಇಂದು

ಹುಬ್ಬಳ್ಳಿ: ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಲ್ಲಾಗಡ್ಡಿಮಠ ಅವರ ನೇತೃತ್ವದಲ್ಲಿ ಹುಬ್ಬಳ್ಳಿಯ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾದ 540 ಪ್ರತಿಭಾವಂತ ವಿದ್ಯಾರ್ಥಿಗಳನ್ನು ''ಹುಬ್ಬಳ್ಳಿಯ ಹೆಮ್ಮೆ'' ಎಂದು ಅಭಿನಂದಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜೂನ್ 6 ರಂದು ಸಂಜೆ 5 ಗಂಟೆಗೆ ವಿದ್ಯಾನಗರ ವಿಘ್ನೇಶ್ವರ ಶಾಲಾ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ, ಅವರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬುವ ಮಹತ್ತರ ವೇದಿಕೆಯಾಗಲಿದೆ. ಕರ್ನಾಟಕ ಸರ್ಕಾರದ ಬಾಲ ವಿಕಾಸ ಅಕಾಡೆಮಿಯ ಸದಸ್ಯೆ ಮೇಘನಾ ಹಿರೇಮಠ ಅವರು, ಸಾಧನೆಗೈದ ನಮ್ಮ ವಿದ್ಯಾರ್ಥಿಗಳನ್ನು ಸನ್ಮಾನಿಸುವುದು ನಮಗೆ ಹೆಮ್ಮೆಯ ವಿಷಯ ಎಂದಿದ್ದಾರೆ.

ಶತಮಾನದ ಸಂಭ್ರಮ ಆಚರಿಸಿ

ಹುಬ್ಬಳ್ಳಿ: ಮಕ್ಕಳ ಸಾಹಿತ್ಯದಲ್ಲಿ ಮಹತ್ತರ ಸಾಧನೆಗೈದ ವಿಜಯಪುರ ಜಿಲ್ಲೆಯ ಹಿರಿಯ ಕವಿ ದಿ.ಶಂ.ಗು.ಬಿರಾದಾರ ಅವರಿಗೆ ಇದೀಗ ಶತಮಾನದ ಸಂಭ್ರಮ. ಆದರೆ ರಾಜ್ಯ ಸರ್ಕಾರ ಹಾಗೂ ಸಾರಸ್ವತ ಲೋಕಕ್ಕೆ ಅದು ನೆನಪಿಗೆ ಬಾರದೇ ಹೋಗಿದ್ದು ನಿಜಕ್ಕೂ ದುರಂತದ ಸಂಗತಿ ಎಂದು ಚಿಂತನ ವೇದಿಕೆ ಬೇಸರ ವ್ಯಕ್ತಪಡಿಸಿದೆ.ಈ ಕುರಿತು ರಾಜ್ಯ ಸರ್ಕಾರ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಗೆ ಪತ್ರ ಬರೆದರೂ ಯಾವುದೇ ಕ್ರಮವಿಲ್ಲ ಎಂದು ವೇದಿಕೆಯ ಕೃಷ್ಣಮೂರ್ತಿ ಕುಲಕರ್ಣಿ , ಚನ್ನಬಸಪ್ಪ ಧಾರವಾಡಶೆಟ್ರು ಆರೋಪಿಸಿದ್ದಾರೆ.

ಕಳೆದ ತಿಂಗಳು ಮೇ ನಲ್ಲಿಯೇ ಅವರ ಸ್ಮರಣೆಯ ಕಾರ್ಯಕ್ರಮ ನಡೆಯಬೇಕಿತ್ತು. ಮಕ್ಕಳ ಸಾಹಿತ್ಯ ಚಟುವಟಿಕೆಗೆ ಇರುವ ಧಾರವಾಡದ ಬಾಲವಿಕಾಸ ಅಕಾಡೆಮಿಯ ಇಂದಿನ ಆಡಳಿತ ವ್ಯವಸ್ಥೆಗೆ ಶಂ.ಗು. ಬಿರಾದಾರ ಪರಿಚಯವಿಲ್ಲದಂತೆ ತೋರುತ್ತದೆ. ಮಕ್ಕಳ ಸಾಹಿತ್ಯದಲ್ಲಿ ಅಮೂಲ್ಯ ಕೊಡುಗೆ ನೀಡಿದ ಶಂ.ಗು.ಬಿರಾದಾರ ಅವರನ್ನು ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು, ರಾಜ್ಯ ಸರ್ಕಾರ, ಕನ್ನಡ ಸಂಸ್ಕೃತಿ ಇಲಾಖೆ, ಮಕ್ಕಳ ಮಂಟಪ ಕಟ್ಟಿದ ಕರ್ನಾಟಕ ವಿದ್ಯಾವರ್ಧಕ ಸಂಘವಾದರೂ ಇವರನ್ನು ನೆನಪಿಸಿಕೊಂಡು ಅವರ ಶತಮಾನದ ಸಂಭ್ರಮ ಆಚರಿಸಲಿ ಎಂದು ವೇದಿಕೆ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಇಮೇಲ್ ಮೂಲಕ ಮನವಿ ಮಾಡಿದೆ ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಭರತನಾಟ್ಯ ರಂಗಪ್ರವೇಶ ಇಂದು

ಹುಬ್ಬಳ್ಳಿ: ಕಲಾ ಸುಜಯ ಸಂಸ್ಥೆಯ ವತಿಯಿಂದ ಜೂ.6ರಂದು ಸಂಜೆ 4.45 ಕ್ಕೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ವಿದ್ಯಾರ್ಥಿನಿ ಸಂಜೀವಿನಿ ಭಟ್ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ನಡೆಯಲಿದೆ ಎಂದು ಸಂಸ್ಥೆ ವ್ಯವಸ್ಥಾಪಕ ಧರ್ಮದರ್ಶಿ ಸುಜಯ ಶಾನಭಾಗ ತಿಳಿಸಿದರು. ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅತಿಥಿಗಳಾಗಿ ಶಾಸಕ ಮಹೇಶ ಟೆಂಗಿನಕಾಯಿ, ನೃತ್ಯಪಟು ವಿಕ್ರಮ ಗೌಡ, ಅಖಿಲ ಕರ್ನಾಟಕ ದೈವಜ್ಞ ಸಂಘದ ಪದಾಧಿಕಾರಿಗಳಾದ ರವಿ ಗಾಂವಕರ್, ವಿಜಯ ವೆರ್ಣೇಕರ, ಸತೀಶ ಶೇಜವಾಡಕರ, ರಾಜನ್ ಅಣ್ವೇಕರ, ಪ್ರೇಮಾ ಭಟ್ ಪಾಲ್ಗೊಳ್ಳುವರು ಎಂದರು. ಅಂದು ಸಂಜೀವಿನಿ ಭಟ್ ಅವರು ಭರತನಾಟ್ಯ ಮಾರ್ಗ ಪದ್ಧತಿಯಲ್ಲಿ ನೃತ್ಯ ಪ್ರದರ್ಶನ ನೀಡುವರು. ಕಾರ್ಯಕ್ರಮದಲ್ಲಿ ಹನುಮಾನ್ ಚಾಲೀಸಾ ಮತ್ತು ಅಮೃತ ವರ್ಷಿಣಿ ರಾಗದಲ್ಲಿ ವರ್ಣಮ್ ಪ್ರದರ್ಶನವು ನನ್ನ ಮಾರ್ಗದರ್ಶನದಲ್ಲಿ ನಡೆಯಲಿದೆ ಎಂದರು. ಸವಿತಾ ಭಟ್, ರಾಜೇಂದ್ರ ಭಟ್ ಇದ್ದರು.

ಇಂದು ಸಮ್ಮೇಳನ

ಧಾರವಾಡ: ಮರಾಠಾ ವಿದ್ಯಾಪ್ರಸಾರಕ ಮಂಡಳದ ಛತ್ರಪತಿ ಶಿವಾಜಿ ಮಹಾರಾಜ ಪದವಿ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ 2025–26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಬಿಎ, ಬಿಕಾಂ, ಎಂಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ, ಎನ್ನೆಸ್ಸೆಸ್–ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳ ಮುಕ್ತಾಯ ಸಮಾರಂಭ ಜೂ.6ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನ ಸಂಭಾಜಿ ರಾಜೆ ಸಭಾಂಗಣದಲ್ಲಿ ಜರುಗಲಿದೆ. ಧಾರವಾಡ ಐಐಐಟಿಯ ಡೀನ್ ಡಾ. ಕೆ.ಗೋಪಿನಾಥ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಮಂಡಳದ ಅಧ್ಯಕ್ಷ ಎಂ.ಎನ್. ಮೋರೆ ಅಧ್ಯಕ್ಷತೆ ವಹಿಸುವರು. ಸಮಾಜದ ಮುಖಂಡರಾದ ರಾಜು ಬಿರಜೆನವರ, ಸುನೀಲ ಮೋರೆ, ರಾಜು ಕಾಳೆ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಾಚಾರ್ಯ ಎಂ.ಎಸ್. ಗಾಣಿಗೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಸ್ಕಾರ ಶಿಬಿರ ನಾಳೆ

ಹುಬ್ಬಳ್ಳಿ: ಧಾರವಾಡ ಜಿಲ್ಲಾ ದೇವಾಂಗ ಸಂಘದ ವತಿಯಿಂದ ನಗರದ ಸಿದ್ಧಾರೂಢ ಮಠದಲ್ಲಿ ಜೂ.7ರಂದು ದೇವಾಂಗ ಸಮಾಜದ ಗೃಹಿಣಿಯರಿಗಾಗಿ ಸಂಸ್ಕಾರ ಶಿಬಿರ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 9.30ಕ್ಕೆ ದೇವಾಂಗ ಜ.ದಯಾನಂದಪುರಿ ಸ್ವಾಮೀಜಿ ಶಿಬಿರಕ್ಕೆ ಚಾಲನೆ ನೀಡುವರು. ಸಂಘದ ಜಿಲ್ಲಾಧ್ಯಕ್ಷ ಡಾ.ಕೆ.ಜಿ.ಬ್ಯಾಕೋಡಿ ಹಾಗೂ ಪದಾಕಾರಿಗಳು ಉಪಸ್ಥಿತರಿರುವರು. ಶಿಬಿರದಲ್ಲಿ 'ಮನೆಯಲ್ಲಿ ಗೃಹಿಣಿಯರ ಪಾತ್ರ' ಕುರಿತು ಸುಮಂಗಲಾ ಭಟ್ ಹಾಗೂ 'ದೇವಾಂಗ ಕುಲದ ಪರಂಪರೆ ಮತ್ತು ಇತಿಹಾಸ' ಬಗ್ಗೆ ರುದ್ರಮುನಿ ಸ್ವಾಮಿಗಳು ಉಪನ್ಯಾಸ ನೀಡುವರು. ಸಮಾಜದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ. ಮಾಹಿತಿ ಹಾಗೂ ಹೆಸರು ನೋಂದಣಿಗೆ ಮಮತಾ ಪಾಟೀಲ (8762330158) ಅವರನ್ನು ಸಂಪರ್ಕಿಸಲು ಕೋರಲಾಗಿದೆ.



ಹುಬ್ಬಳ್ಳಿ: ದೇಶಪಾಂಡೆ ನಗರದ ಜ್ಞಾನ ಭಾರತಿ ಸಿಬಿಎಸ್‌ಸಿ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಶಾಲೆಯ ನಿರ್ದೇಶಕ ವಸಂತ ನಾಡಜೋಶಿ, ಬಿಜೆಪಿಯ ಮುಖಂಡ ರವಿ ನಾಯಕ, ಶಂಕರ್ ಪಾಟೀಲ, ಶಾಲೆಯ ಪ್ರಾಚಾರ್ಯರಾದ ರಾಜಶ್ರೀ ರವಿಶಂಕರ್, ಗಿರಿಜಾ ನಾಯ್ಕ್ ಇದ್ದರು.

ಹೋರಾಟ ವೇದಿಕೆ ಕಾರ್ಯಕ್ರಮ ನಾಳೆ

ಹುಬ್ಬಳ್ಳಿ: ಲಿಂಗಾಯತ ಒಳಪಂಗಡ ಒಕ್ಕೂಟದಿಂದ ಅಲ್ಪಸಂಖ್ಯಾತ ಲಿಂಗಾಯತ ಮಾನ್ಯತೆ ಹೋರಾಟ ವೇದಿಕೆ ವತಿಯಿಂದ ಅಲ್ಪಸಂಖ್ಯಾತ ಲಿಂಗಾಯತ ಮಾನ್ಯತೆಗಾಗಿ ಹೋರಾಟ ವೇದಿಕೆ ಕಾರ್ಯಕ್ರಮ ಜೂನ್ 7 ರಂದು ಬೆಳಗ್ಗೆ 10.30ಕ್ಕೆ ಲಿಂಗರಾಜನಗರ, ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಅಧ್ಯಕ್ಷ ಚಿಂತಾಮಣಿ ಸಿಂದಗಿ ತಿಳಿಸಿದರು. ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಸರ್ಕಾರದಿಂದ ಮಾನ್ಯತೆ ಪಡೆಯುವ ಜೊತೆಗೆ ಲಿಂಗಾಯತ ಧರ್ಮವನ್ನು ಅಲ್ಪಸಂಖ್ಯಾತರೆಂದು ಮಾನ್ಯತೆಗೆ ಹೋರಾಟ. ಲಿಂಗಾಯತ ಎಲ್ಲ ಒಳಪಂಗಡಗಳನ್ನು ಒಕ್ಕೂಟದಿಂದ ಒಗ್ಗೂಡಿಸುವುದು, ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪನೆಗೆ ಕಾರ್ಯಕ್ರಮದಲ್ಲಿ ಒತ್ತಾಯಿಸಲಾಗುವುದು. ಕಾರ್ಯಕ್ರಮಕ್ಕೆ 2,000ಕ್ಕೂ ಹೆಚ್ಚು ಲಿಂಗಾಯತರು ಸೇರುವ ಸಾಧ್ಯತೆಯಿದೆ ಎಂದರು. ಕಾರ್ಯಕ್ರಮವನ್ನು ಡಂಬಳ-ಗದಗ ಎಡೆಯೂರ ತೋಂಟದಾರ್ಯ ಸಂಸ್ಥಾನ ಮಠದ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಉದ್ಘಾಟಿಸುವರು. ಗುಲ್ಬರ್ಗಾದ ಬಸವತತ್ವ ಚಿಂತಕ ಸಂಜಯಕುಮಾರ ಮಾಕಲ ಹಾಗೂ ವಿಜಯಪುರದ ಬಸವ ತತ್ವ ಚಿಂತಕ ಡಾ. ಜೆ.ಎಸ್. ಪಾಟೀಲ ಉಪನ್ಯಾಸ ನೀಡುವರು. ಅತಿಥಿಗಳಾಗಿ ಮಹಾನಗರ ಪಾಲಿಕೆ ಸದಸ್ಯ ರಾಜಣ್ಣ ಕೊರವಿ, ವಕೀಲ ವಿಜಯಕುಮಾರ ಶೀಲವಂತರ, ಲಿಂಗರಾಜನಗರ ಮಹಿಳಾ ಮಂಡಳದ ಅಧ್ಯಕ್ಷೆ ಲತಾ ಉಮ್ರಾಣಿ ಪಾಲ್ಗೊಳ್ಳುವರು ಎಂದರು. ಡಿ.ಸಿ. ರಂಗರಡ್ಡಿ, ಮಲ್ಲಿಕಾರ್ಜುನ ಕುಂಬಾರ, ಸದಾನಂದ ತೇರದಾಳ, ಪ್ರಭು ಶೆಟ್ಟರ್ ಇದ್ದರು.



ಧಾರವಾಡ: ಇಲ್ಲಿನ ವಿದ್ಯಾಗಿರಿಯ ಜನತಾ ಶಿಕ್ಷಣ ಸಮಿತಿಯ ಪೂರ್ವ ಪ್ರಾಥಮಿಕ ಮತ್ತು ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪುಟಾಣಿ ಮಕ್ಕಳು ಅತ್ಯಂತ ಉತ್ಸಾಹ ಮತ್ತು ಸಡಗರದಿಂದ ನಡೆದ ವಿಶ್ವ ಪರಿಸರ ದಿನಾಚರಣೆ ಸಂಭ್ರಮ.

ಜಿಲ್ಲೆಯಲ್ಲಿ ಹಸಿರು ಕ್ರಾಂತಿಯಾಗಲಿ







ಧಾರವಾಡ: ಪ್ರಕೃತಿಯ ಸಂರಕ್ಷಣೆ ಕೇವಲ ಒಂದು ದಿನದ ಆಚರಣೆಯಾಗಿರದೆ, ಅದು ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು ಎಂಬ ಸಂದೇಶದೊಂದಿಗೆ ನಗರದ ವಿವಿಧೆಡೆ ವಿಶ್ವ ಪರಿಸರ ದಿನಾಚರಣೆ ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾನೂನು ಸೇವಾ ಪ್ರಾಧಿಕಾರ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ ಹಾಗೂ ಜಿಲ್ಲಾ ಅರಣ್ಯ ಇಲಾಖೆ ಜಂಟಿ ಆಶ್ರಯದಲ್ಲಿ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಸಸಿ ನೆಟ್ಟು ವಿಶ್ವ ಪರಿಸರ ದಿನಾಚರಣೆಗೆ ಕಾನೂನು ಪ್ರಾಧಿಕಾರದ ಅಧ್ಯಕ್ಷ ರಾಜಕುಮಾರ್ ಚಾಲನೆ ನೀಡಿದರು. ನಂತರ ಮಾತನಾಡಿದ ಪ್ರಾಧಿಕಾರದ ಅಧ್ಯಕ್ಷ ರಾಜಕುಮಾರ್, ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಸಂವಿಧಾನಬದ್ಧ ಕರ್ತವ್ಯ. ಪರಿಸರ ರಕ್ಷಣೆಗೆ ಕಾನೂನು ಜಾರಿಗಿಂತ ಜನತೆಯಲ್ಲಿ ಸ್ವಯಂ ಜಾಗೃತಿ ಮೂಡಿಸುವುದು ಅಗತ್ಯವಿದೆ ಎಂದರು. ನ್ಯಾಯಾಧೀಶರಾದ ಸುವರ್ಣ ಮಿರ್ಜಿ, ನಾಗರಾಜಪ್ಪ ಎ.ಕೆ., ಪೂರ್ಣಿಮಾ ಎನ್. ಪೈ, ಜರೀನಾ, ವಕೀಲರ ಸಂಘದ ಅಧ್ಯಕ್ಷ ಸಿ.ಎಸ್.ನೇಗಿನಹಾಳ, ಜಿಲ್ಲಾಡಳಿತ, ಅರಣ್ಯ ಇಲಾಖೆ, ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳು ಸೇರಿ ಅನೇಕರು ಇದ್ದರು.

ಎಸ್‌ಡಿಎಂ ವಿಶ್ವವಿದ್ಯಾಲಯ: ಸತ್ತೂರಿನ ಎಸ್‌ಡಿಎಂ ವಿಶ್ವವಿದ್ಯಾಲಯದಲ್ಲಿ ಹವಾಮಾನ ಮತ್ತು ನಮ್ಮ ಭವಿಷ್ಯಕ್ಕೆ ಪ್ರಕೃತಿಯಿಂದ ಪ್ರೇರಣೆ ಎಂಬ ಧ್ಯೇಯದೊಂದಿಗೆ ಆಚರಿಸಿದ ವಿಶ್ವ ಪರಿಸರ ದಿನಾಚರಣೆಗೆ ಪರಿಸರವಾದಿ ಡಾ.ಚಿದಾನಂದ ರಾಮನಗೌಡರ ವಿದ್ಯುಕ್ತ್ ಚಾಲನೆ ನೀಡಿದರು. ಉಕುಲಪತಿ ಡಾ.ನಿರಂಜನಕುಮಾರ್ ಹಾಗೂ ಡಾ.ಚಿದಾನಂದ ರಾಮನಗೌಡರ, ಆರೋಗ್ಯಕರ ಜೀವನಕ್ಕೆ ಶುದ್ಧ ಗಾಳಿ ಮತ್ತು ಹಸಿರು ಪರಿಸರ ಮುಖ್ಯ. ಹೀಗಾಗಿ ವಿದ್ಯಾರ್ಥಿಗಳು ಹಸಿರು ಕ್ಯಾಂಪಸ್ ನಿರ್ಮಾಣಕ್ಕಾಗಿ ಸಂಕಲ್ಪ ಮಾಡುವಂತೆ ಹೇಳಿದರು. ಪದ್ಮಲತಾ ನಿರಂಜನ್, ಸಾಕೇತ್ ಶೆಟ್ಟಿ, ವಿ.ಜೀವಂದಕುಮಾರ್, ಡಾ.ಕಿರಣ ಹೆಗ್ಡೆ, ಡಾ.ವಿಜಯ ಕುಲಕರ್ಣಿ, ಡಾ.ಬಲರಾಮ್ ನಾಯಕ, ಡಾ.ಹರಿಕೇಷ ರಾವ್, ಡಾ. ಮಹಾಂತೇಶ ಎಲಿ, ಡಾ.ಅನಿಲ ತುಮಕೂರ, ಡಾ.ಪ್ರಸನ್ನ ದೇಶಪಾಂಡೆ ಇತರರಿದ್ದರು.

ಎಂಜಿನಿಯರಿಂಗ್ ಕಾಲೇಜು: ಎನ್ನೆಸ್ಸೆಸ್ ಘಟಕ ಮತ್ತು ಪರಿಸರ ಕ್ಲಬ್ ವತಿಯಿಂದ ನಗರದ ದವಳಗಿರಿ ಹತ್ತಿರದ ಎಸ್‌ಡಿಎಂ ಅಭಿಯಾಂತ್ರಿಕ–ತಾಂತ್ರಿಕ ಕಾಲೇಜಿನಲ್ಲಿ ಸಸಿನೆಟ್ಟು ವಿಶ್ವ ಪರಿಸರ ದಿನಾಚರಣೆ ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಜೀವಂದರಕುಮಾರ್, ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪರಿಸರಸ್ನೇಹಿ ತಂತ್ರಜ್ಞಾನ ಮತ್ತು ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಬೇಕಿದೆ. ನೆಟ್ಟ ಸಸಿಗಳು ದತ್ತು ಪಡೆದು, ಪೋಷಿಸುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳಿಗೆ ನೀಡಿದರು. ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಹಾಗೂ ಸಿಬ್ಬಂದಿ ಇದ್ದರು.

ಜನತಾ ಶಿಕ್ಷಣ ಸಮಿತಿ: ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಮಾನವ ಹಕ್ಕುಗಳ ಸಂಘ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ಸಂಸ್ಥೆ ಆವರಣದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಸಸಿನಟ್ಟು ಪರಿಸರ ಪ್ರೇಮ ಮೆರೆದ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಪ್ಲಾಸ್ಟಿಕ್ ಮುಕ್ತ ಧಾರವಾಡ ನಿರ್ಮಾಣಕ್ಕೆ ಸಂಕಲ್ಪ ಮಾಡಲು ತಿಳಿಸಿದ ಅವರು, ಸಸಿಗಳು ಬೆಳೆಸುವ ಉದ್ದೇಶದ ಜೊತೆಗೆ ಅದರ ಲಾಭದ ಕುರಿತಂತೆ ಮಾಹಿತಿ ನೀಡಿದರು. ಡಾ.ರತ್ನಾ ಎಸ್.ಎಂ., ಡಾ. ಆರ್.ವಿ.ಚಿಟಗುಪ್ಪಿ, ಮುರಳೀಧರ ಹೆಗಡೆ, ಬಲಭೀಮ ಹಾವನೂರ, ಫಜಲುನ್ನಿಸಾ ಅನ್ಸಾರಿ, ಭಾರ್ಗವಿ ರತ್ನಾಕರ, ಐಶ್ವರ್ಯ, ಕಾಲೇಜಿನ ಪ್ರಾಧ್ಯಾಪಕರು, ಸಿಬ್ಬಂದಿಗಳು ಸೇರಿದಂತೆ ನೂರಾರು ಸಂಖ್ಯೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶಿವಾಜಿ ಪದವಿ ಕಾಲೇಜು: ನಗರದ ಮರಾಠಾ ವಿದ್ಯಾಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಪದವಿ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆಗೆ ಸಂಸ್ಥೆಯ ಇತಿಹಾಸ ವಿಭಾಗದ ಉಪನ್ಯಾಸಕ ವಿ.ಎಂ.ಪೋಳ ಸಸಿ ನೆಡುವುದರ ಮೂಲಕ ಚಾಲನೆ ನೀಡಿದರು. ಉಪನ್ಯಾಸಕರಾದ ನಂದೀಶ ಕಡಕೋಳ, ಎ.ಎಸ್.ಮೂಲಿಮನಿ, ಮಂಜುನಾಥ ವಾಲ್ಮೀಕಿ, ಪ್ರವೀಣ ಉಳ್ಳಿಗೇರಿ, ಸವಿತಾ ಬೆಂತೂರ, ಸುನಿತಾ ಕುಸುಗಲ್ಲ, ಸುನಿತಾ ಮಾನೆ, ಅರ್ಕಸಾಲಿ, ವಿ.ಜಿ.ಕಾಶಿಮಠ, ಕೆ.ಡಿ.ಯಲಿಗಾರ, ಡಾ.ಆರ್.ಎಂ.ಮೊರಬ ಇದ್ದರು.

ಸಸಿಗೆ ಪುಟಾಣಿಗಳಿಂದ ನೀರು

ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಪ್ರಮುಖ ರಸ್ತೆಗಳಲ್ಲಿ ಪರಿಸರ ಜಾಗೃತಿ ಜಾಥಾ ನಡೆಸಿದ ಪುಟಾಣಿ ಮಕ್ಕಳು, ಪರಿಸರ ಗೀತೆ ಹೇಳುವ ಜೊತೆಗೆ ತಾವೇ ತಂದಿದ್ದ ಸಸಿ ನೆಟ್ಟು ಅವುಗಳಿಗೆ ನೀರುಣಿಸಿ ಸಂಭ್ರಮಿಸಿದರು. ಶಂಕರ ಹಲಗತ್ತಿ ಅನೇಕರು ಇದ್ದರು.

ಪ್ರಾರಂಭೋತ್ಸವ ಸಮಾರಂಭ ನಾಳೆ

ಹುಬ್ಬಳ್ಳಿ: ಬಿವಿಜಿ ಇಂಡಿಯಾ ಲಿಮಿಟೆಡ್‌ನ ವೆಲ್ ನೆಸ್ ಸೆಂಟರ್ ಪ್ರಾರಂಭೋತ್ಸವ ಸಮಾರಂಭ ಜೂ.7ರಂದು ಬೆಳಗ್ಗೆ 11 ಗಂಟೆಗೆ ಗದಗ ಜಿಲ್ಲೆಯ ನರಗುಂದ ತಾಲೂನಿನ ವಾಸನ ಗ್ರಾಮದಲ್ಲಿ ನಡೆಯಲಿದೆ ಎಂದು ಬಿವಿಜಿ ಲೈಫ್ ಸೈನ್ಸಸ್ ಲಿಮಿಟೆಡ್ ನಿರ್ದೇಶಕಿ ಡಾ. ಜಯಶ್ರೀ ದ್ರಾವಿಡ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ, ತೋಟಗಾರಿಕೆ, ವಿಮಾನ ನಿಲ್ದಾಣ ಹೌಸ್ ಕಿಪಿಂಗ್ , ಡ್ಯಾಮಗಳ ದುರಸ್ತಿ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಛಾಪು ಮೂಡಿಸಿದೆ. ದೇಶ ವಿದೇಶದಲ್ಲಿ ಸುಮಾರು 1.18 ಕೋಟಿಗೂ ಹೆಚ್ಚು ಜನ ಉದ್ಯೋಗ ಮಾಡುತ್ತಿದ್ದಾರೆ ಎಂದರು. ವೆಲ್ ನೆಸ್ ಸೆಂಟರ್ ಪ್ರಾರಂಭೋತ್ಸವ ಸಾನ್ನಿಧ್ಯ ಕೊಪ್ಪಳದ ಗವಿಮಠ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಕೇರಳ ಮಹಾಪೀಠಂ ಸಹಸ್ರಾರ ಯೋಗೀಶ್ವರ ಸ್ವಾಮೀಜಿ ವಹಿಸುವರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕ ಎಚ್. ಕೆ. ಪಾಟೀಲ, ದಿನೇಶ ಗುಂಡೂರಾವ್, ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಹಂಚಾಟೆ ಸಂಜೀವಕುಮಾರ, ಶಾಸಕ ಸಿ.ಸಿ. ಪಾಟೀಲ, ಮಾಜಿ ಶಾಸಕ ಬಿ.ಆರ್. ಯಾವಗಲ್, ನಿವೃತ್ತ ಡಿಜಿಪಿ ಶಂಕರ್ ಬಿದರಿ, ಬಿವಿಜಿ ಇಂಡಿಯಾ ಲಿಮಿಟೆಡ್ ಸಿಇಒ ಹಾಗೂ ಎಂಡಿ ಹನುಮಂತರಾವ್ ಗಾಯಕವಾಡ್, ಪಾರಂಪರಿಕ ವೈದ್ಯ ಹನುಮಂತ ಮಳಲಿ ಭಾಗವಹಿಸುವರು ಎಂದು ತಿಳಿಸಿದರು.

ರಾಜ್ಯದಲ್ಲಿ ಇನ್ನೂ 40 ಕಡೆ ಸೆಂಟರ್ ಆರಂಭಿಸಲು ಚಿಂತನೆ ನಡೆಸಿದೆ. ಕ್ಯಾನ್ಸರ್, ಲೀವರ್, ಚರ್ಮರೋಗ ಸೇರಿದಂತೆ ಹಲವಾರ ರೋಗಳಿಗೆ 200ಕ್ಕೂ ಹೆಚ್ಚು ಔಷಧಿಗಳು ಲಭ್ಯವಿವೆ. ಆನ್‌ಲೈನ್‌ನಲ್ಲಿ ಬುಕಿಂಗ್ ಮಾಡಬಹುದು ಎಂದರು.

ಪಾರಂಪರಿಕ ವೈದ್ಯ ಹನುಮಂತ ಮಳಲಿ, ಪಾರಂಪರಿ ವೈದ್ಯ ಪದ್ಧತಿ ಕಳೆದು 33 ವರ್ಷದಿಂದ ಮಾಡಿಕೊಂಡು ಬರಲಾಗುತ್ತಿದೆ. ಕ್ಯಾನ್ಸರ್ ರೋಗಕ್ಕೆ ಔಷಧಿ ನೀಡಲಾಗುತ್ತಿದೆ. ಕಳೆದ ಒಂದು ವರ್ಷದ ಹಿಂದೆ ಜಿವಿಬಿ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇನ್ನೂ ಮೇಲೆ ನನ್ನಲ್ಲಿರುವ ಔಷಧಿ ಈ ಕಂಪನಿಯಿಂದ ದೊರೆಯುತ್ತವೆ ಎಂದು ತಿಳಿಸಿದರು.

ದಕ್ಷಿಣ ಭಾರತ ಸಂಯೋಜಕ ಸಂಜಯ ಡೋಂಗರೆ, ಡಾ. ಅರುಣಕುಮಾರ, ಸ್ವಿಟಿಲಾ, ವಿದ್ಯಾ ಹಾಗೂ ರವಿ ಇದ್ದರು.



ವ್ಯಾಪಾರಿಯಿಂದ ಲಕ್ಷಾಂತರ ರೂ. ವಂಚನೆ: ಆರೋಪ

ಕುಂದಗೋಳ: ದಾವಣಗೆರೆ ಮೂಲದ ವ್ಯಾಪಾರಿಯೊಬ್ಬರು ತಾಲೂಕಿನ ಸಂಶಿ ಗ್ರಾಮದ ರೈತರಿಂದ ಮೆಕ್ಕೆಜೋಳ ಖರೀದಿಸಿ ಲಕ್ಷಾಂತರ ರೂಪಾಯಿ ಹಣ ಪಾವತಿಸದೆ ವಂಚನೆ ನಡೆಸಿರುವ ಆರೋಪ ಕೇಳಿಬಂದಿದ್ದು, ಆರೋಪಿಯನ್ನು ಬಂಧಿಸಲು ಪೊಲೀಸರು ವಿಳಂಬ ಮಾಡುತ್ತಿರುವುದಾಗಿ ರೈತಪರ ಹೋರಾಟಗಾರ ಮಹೇಶ ಬಿ. ಕಲಘಟಗಿ ಆರೋಪಿಸಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದಾವಣಗೆರೆ ಮೂಲದ ಕೆ.ಎಸ್. ಪ್ರಶಾಂತ ಎಂಬ ವ್ಯಾಪಾರಿಯು ಕಳೆದ ಏಪ್ರಿಲ್ 1, 2026ರಂದು ಸಂಶಿ ಗ್ರಾಮದ ರೈತ ಶಿವರಾಜ ಗಂಗಪ್ಪ ಕೊಡಿವಾಡ ಅವರಿಂದ ಪ್ರತಿ ಕ್ವಿಂಟಲ್‌ಗೆ 2,200 ದರದಲ್ಲಿ ಒಟ್ಟು 1,250 ಕ್ವಿಂಟಲ್ ಮೆಕ್ಕೆಜೋಳ ಖರೀದಿಸಿದ್ದಾರೆ. ಈ ವ್ಯವಹಾರದಲ್ಲಿ ಒಟ್ಟು 28 ಲಕ್ಷ ರೂ. ಪಾವತಿಸಬೇಕಾಗಿದ್ದು, ಆರಂಭದಲ್ಲಿ 10 ಲಕ್ಷ ರೂ. ನೀಡಿದ್ದರೂ ಉಳಿದ 18 ಲಕ್ಷ ಹಣ ಪಾವತಿಸದೆ ವಂಚಿಸಿದ್ದಾರೆ ಎಂದು ಆರೋಪಿಸಿದರು.

ಈ ಕುರಿತು ರೈತರು ಮಾರ್ಚ್ 6, 2026ರಂದು ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದ್ದು, ಎಸ್‌ಪಿ ಅವರ ಸೂಚನೆಯ ಮೇರೆಗೆ ಕುಂದಗೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಆರೋಪಿಯನ್ನು ಇದುವರೆಗೆ ಬಂಧಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಠಾಣೆಯಲ್ಲಿ ವಿಚಾರಿಸಿದಾಗ ಸಮರ್ಪಕ ಉತ್ತರ ದೊರೆಯುತ್ತಿಲ್ಲ. ಇದರಿಂದ ಪ್ರಕರಣದ ತನಿಖೆ ಕುರಿತು ಅನುಮಾನಗಳು ಮೂಡುತ್ತಿವೆ ಎಂದು ಆರೋಪಿಸಿದ ಅವರು, ಆರೋಪಿಯು ವಿವಿಧ ಗ್ರಾಮಗಳ ರೈತರಿಗೆ ಇದೇ ರೀತಿಯಲ್ಲಿ ವಂಚನೆ ನಡೆಸಿರುವ ಮಾಹಿತಿಯಿದೆ. ಬೆಳೆ ಬೆಳೆಸಲು ಸಾಲ ಸೂಲ ಮಾಡಿ ಕಷ್ಟಪಟ್ಟ ರೈತರಿಗೆ ಹಣ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ಒಂದು ವಾರದೊಳಗೆ ಆರೋಪಿಯನ್ನು ಬಂಧಿಸಿ ರೈತರಿಗೆ ನ್ಯಾಯ ಒದಗಿಸಬೇಕು. ಇಲ್ಲವಾದರೆ ಕುಂದಗೋಳ ಪೊಲೀಸ್ ಠಾಣೆ ಎದುರು ವಿವಿಧ ರೈತಪರ ಹಾಗೂ ಕನ್ನಡಪರ ಸಂಘಟನೆಗಳ ಸಹಯೋಗದಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಶಿವು ಎಂ. ಕರಡಿ, ಈಶ್ವರಗೌಡ ಪಾಟೀಲ, ಶಿವು ಕೊಡ್ಲಿವಾಡ, ವೆಂಕನಗೌಡ ಶಾನವಾಡ, ಅಡಿವೇಪ್ಪಗೌಡ ಪಾಟೀಲ ಹಾಗೂ ನವೀನ್ ಪಾಟೀಲ ಉಪಸ್ಥಿತರಿದ್ದರು.





ಹುಬ್ಬಳ್ಳಿ: ನೃಪತುಂಗ ಬೆಟ್ಟದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅರಣ್ಯ ಇಲಾಖೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಪ್ರಧಾನ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷ ವೀಣಾ ಮಲ್ಲನಾಯ್ ನಾಯ್ಕರ್ ಅವರು ಸಸಿಗಳಿಗೆ ನೀರು ಎರೆಯುವುದರ ಮುಖಾಂತರ ಉದ್ಘಾಟನೆ ಮಾಡಿದರು. ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ವಿಶ್ವನಾಥ ಯಮಕನಮರಡಿ, ವಕೀಲರ ಸಂಘದ ಅಧ್ಯಕ್ಷರಾದ ರಾಮಚಂದ್ರ ಜಿ. ಮಟ್ಟಿ, ಉಪಾಧ್ಯಕ್ಷ ಎಸ್. ವೈ. ದುಂಡರಡ್ಡಿ, ಪ್ರಾದೇಶಿಕ ಅರಣ್ಯ ವಲಯ ಅಧಿಕಾರಿ ಆರ್.ಎಸ್.ಉಪ್ಪಾರ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕಚೇರಿಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ವ್ಯವಸ್ಥಾಪಕ ನಿರ್ದೇಶಕ ಪ್ರಿಯಾಂಗಾ ಎಂ. ರವರು ಸಸಿಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು.




ಕಲಘಟಗಿ: ತಾಲೂಕಿನ ಮುಕ್ಕಲ್ಲ ಗ್ರಾಮ ಪಂಚಾಯತ್ ಕಾರ್ಯಾಲಯದ ವತಿಯಿಂದ ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯನ್ನು ಮುಕ್ಕಲ್ಲ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು. ಪಿಡಿಒ ಸವಿತಾ ಬಿ.ಎಲ್., ಅರಣ್ಯ ಇಲಾಖೆಯ ಸಿಬ್ಬಂದಿ, ಆರೋಗ್ಯ ಇಲಾಖೆ , ಗ್ರಾಪಂ ಸಿಬ್ಬಂದಿ ಇದ್ದರು.



ಧಾರವಾಡ: ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆಗೆ ಸ್ವಾಭಿಮಾನಿ ಹೋರಾಟ ಸಮಿತಿಯು ಕೈಗೊಂಡ ಸತ್ಯಪ್ರತಿಪಾದನೆ ಸತ್ಯಾಗ್ರಹ 22ನೇ ದಿನಕ್ಕೆ ಕಾಲಿಟ್ಟಿದ್ದು, ಶುಕ್ರವಾರ ರಡ್ಡಿ ಸಮಾಜ ಧರಣಿ ಬೆಂಬಲಿಸಿದ ಪತ್ರ ಬಿ.ಡಿ.ಹಿರೇಮಠ ಅವರಿಗೆ ಹಸ್ತಾಂತರಿಸಿದರು.

ವಿಶ್ವ ಪರಿಸರ ದಿನ: ಸಸಿ ನಾಟಿ



ಹುಬ್ಬಳ್ಳಿ: ವಿಶ್ವ ಪರಿಸರ ದಿನದ ಅಂಗವಾಗಿ ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಅವರು ಶುಕ್ರವಾರ ಹು–ಧಾ. ಮಹಾನಗರ ಪಾಲಿಕೆಯ ವಾರ್ಡ್ ನಂ. 31ರ ಗೋಕುಲ ರಸ್ತೆ ಬಂಜಾರ ಆಶ್ರಯ ಕಾಲೋನಿಯಲ್ಲಿ ಸಸಿನೆಟ್ಟು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಹಾಗೂ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರಧಾನಿ ಕರೆ ಮೇರೆಗೆ ಬಿಜೆಪಿಯು ದೇಶಾದ್ಯಂತ ಪರಿಸರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಗಿಡಗಳನ್ನು ನೆಡುತ್ತಿದೆ. ಅದೇ ರೀತಿ ಹು–ಧಾ. ಪಶ್ಚಿಮ ವಿಧಾನಸಭಾ ಕ್ಷೇತ್ರದ ವಿವಿಧೆಡೆ ಸಾವಿರಾರು ಗಿಡಗಳನ್ನು ನೆಡಲಾಗುತ್ತಿದೆ ಎಂದರು.

ಜಯತೀರ್ಥ ಕಟ್ಟಿ, ಬಸವರಾಜ ಗರಗ, ಕಿರಣ ಉಪ್ಪಾರ, ಡಾ. ರವೀಂದ್ರ ಯಲ್ಲಾನ್, ಅಮೃತ ಕಲ್ಪವೃಕ್ಷ, ರಾಜು ಕೋರ್ಯಾಣಮಠ.ಅಶೋಕ ವಾಲಿಕಾರ, ಶಿವಪ್ರಸಾದ ಅನವೇರಿ ಇತರರಿದ್ದರು.

ಗ್ರೀನ್ ಆ್ಯಂಡ್ ಕ್ಲೀನ್ ಸಿಟಿ ಗುರಿ: ಟೆಂಗಿನಕಾಯಿ

ಹುಬ್ಬಳ್ಳಿ: ಪರಿಸರ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಾವೆಲ್ಲರೂ ಉತ್ತಮ ಪರಿಸರ ನಿರ್ಮಾಣದತ್ತ ಹೆಜ್ಜೆ ಹಾಕೋಣ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು. ಇಲ್ಲಿಯ ಗೋಕುಲ ರಸ್ತೆ ವಾರ್ಡ್ ನಂ. 49ರಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಮಾಜಿ ಮೇಯರ್ ವೀಣಾ ಬರದ್ವಾಡ ನೇತೃತ್ವದಲ್ಲಿ ನಡೆದ ವನಮಹೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿಯವರು ಮಾಕಿ ನಾಮ್ ಏಕ್ ಪೇಡ್ (ತಾಯಿಯ ಹೆಸರಿನಲ್ಲಿ ಒಂದು ಮರ) ಶೀರ್ಷಿಕೆಯಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲು ಕರೆ ನೀಡಿದ್ದಾರೆ. ಅದರ ಪ್ರಯುಕ್ತ ಸಸಿ ನೆಡುವ ಕಾರ್ಯ ಮಾಡಲಾಗುತ್ತಿದೆ ಎಂದರು. ನನ್ನ ಗುರಿ ಸ್ವಚ್ಛತೆ ಹಾಗೂ ಗ್ರೀನ್ ಆ್ಯಂಡ್ ಕ್ಲೀನ್ ಸಿಟಿ ನಿರ್ಮಾಣ ಜೊತೆಗೆ ಹೆಜ್ಜೆ ಹಾಕಲಾಗುತ್ತಿದೆ. ಗಿಡಗಳನ್ನು ನೆಡುವುದರ ಮುಖಾಂತರ ಉತ್ತಮ ಪರಿಸರ ವಾತಾವರಣವನ್ನು ನಿರ್ಮಿಸುವುದಾಗಿದೆ ಎಂದರು. ಪ್ರತಿ ಮನೆಗೆ ಒಂದೊಂದು ಗಿಡವನ್ನು ನೆಡುವುದರಿಂದ ಗಿಡ ಮರಗಳು ಹೆಚ್ಚಾಗುತ್ತವೆ. ಇದರಿಂದ ಉತ್ತಮ ಪರಿಸರ ನಾವೆಲ್ಲರೂ ಪಡೆಯಬಹುದು. ಕೋವಿಡ್ ಸಮಯದಲ್ಲಿ ನಮಗೆ ಪರಿಸರ ಮಹತ್ವ ತಿಳಿದಿದೆ. ಆಗ ಸಾಕಷ್ಟು ನೋವುಗಳ ನಾವು ಅನುಭವಿಸಿದ್ದೇವೆ. ಆದ್ದರಿಂದ ಪರಿಸರ ಬಹಳ ಅವಶ್ಯಕವಾಗಿದೆ ಎಂದರು.



ನೆಟ್ಟ ಸಸಿ ಹೆಮ್ಮರವಾಗಿ ಬೆಳೆಯಲಿ



ಅಳ್ನಾವರ: ಸಸಿ ನೆಡುವದರ ಜೊತೆಗೆ ಅದು ಹೆಮ್ಮರವಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದು ಅಳ್ನಾವರ ವಲಯ ಅರಣ್ಯಾಧಿಕಾರಿ ಬಿ. ಬಸವಲಿಂಗಪ್ಪ ಹೇಳಿದರು.

ಇಲ್ಲಿನ ಸ್ಮಶಾನ, ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿ, ಸಂಘ ಸಂಸ್ಥೆಗಳ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿ, ಆಧುನಿಕತೆಯ ಭರಾಟೆಯಲ್ಲಿ ಬದುಕಿನ ವ್ಯವಸ್ಥೆಯನ್ನೇ ಹಾಳು ಮಾಡಿಕೊಳ್ಳುತ್ತಿದ್ದು ಕಡಿಮೆಯಾಗುತ್ತಿರುವ ಅರಣ್ಯ, ಜೊತೆಗೆ ಅತಿಯಾದ ಪ್ಲಾಸ್ಟಿಕ ಬಳಕೆ ಜೀವನಕ್ಕೆ ಮಾರಕವಾಗಿದೆ. ಮುಂದೊಂದು ದಿನ ಇದರಿಂದ ಜೀವ ಸಂಕುಲವೇ ನಾಶವಾದರೂ ಅಚ್ಚರಿ ಪಡಬೇಕಾಗಿಲ್ಲ, ಹಾಗಾಗಿ ನಾವೆಲ್ಲ ಮರಗಳನ್ನು ಬೆಳೆಸಬೇಕು, ನೀರಿನ ಬಳಕೆ ಮಿತಿಯಾಗಿರಬೇಕು, ಪ್ಲಾಸ್ಟಿಕ್ ಬಳಕೆ ಸಂಪೂರ್ಣ ನಿಲ್ಲಬೇಕು. ಅಂದಾಗ ಮಾತ್ರ ಪರಿಸರ ಉಳಿಯಲು ಸಾಧ್ಯವಿದೆ ಎಂದರು.

ಕೌನ್ ಫಾರೆಸ್ಟರ್ ಯಲ್ಲಾನಾಯ್ಕ ಹಮಾಣಿ, ಮುಖ್ಯ ಶಿಕ್ಷಕ ಸಂಜಯ ಮಾಳಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಪ್ರವೀಣ ಪವಾರ, ಶಿವಾಜಿ ಡೊಳ್ಳಿನ, ಅಜೀತ ಬೆಟದೂರ, ರವಿಂದ್ರ ಪಟ್ಟಣ, ನಾರಾಯಣ ಪಟೇಲ, ಪ್ರೇಮನಾಥಸಾ ಜಿತೂರಿ, ಡಾ.ಅಶೋಕ ಟೆಂಕಪ್ಪನವರ ಇನ್ನಿತರರಿದ್ದರು. ಬೆಣಚಿ ಗ್ರಂಥಾಲಯ ಆವರಣದಲ್ಲಿ ಗ್ರಾಮದ ಹಿರಿಯ ನಾಗೇಂದ್ರ ಕಮ್ಮಾರ ಸಸಿ ನೆಟ್ಟು ಅದನ್ನು ಪೋಷಣೆ ಮಾಡುವ ಜವಾಬ್ದಾರಿಯನ್ನು ತಾವೇ ತೆಗೆದುಕೊಂಡಿರುವುದು ಜನರ ಮೆಚ್ಚುಗೆಗೆ ಕಾರಣವಾಯಿತು.

ಜನಪದ ಸಾಹಿತ್ಯದ ಉಳಿವು ಅಗತ್ಯ

ಧಾರವಾಡ: ಜನಪದ ಹಾಡುಗಳಲ್ಲಿ ಮಹಿಳೆಯರ ಬದುಕಿನ ಚಿತ್ರಣ ಕಾಣಬಹುದು. ತವರು ಮತ್ತು ಗಂಡನ ಮನೆಯಲ್ಲಿ ಹೆಣ್ಣಿನ ಜೀವನದ ಸವಾಲುಗಳು, ಸಮಸ್ಯೆ, ಸಮಾಜದ ನೀತಿ ಉಲ್ಲೇಖಿಸುವುದಾಗಿ ಬಿಇಒ ಸುಜಾತಾ ತಿಮ್ಮಾಪೂರ ಅಭಿಮತ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡ ಲಿಂ. ಗುರಪ್ಪ ಮತ್ತು ಗೌರಮ್ಮ ಬೆಲ್ಲದ, ದಿ.ಪ್ರೇಮಾ ನಾಗೇಶ ದತ್ತಿ ಕಾರ್ಯಕ್ರಮ ಉದ್ಘಾಟಿಸಿದ ಅವರು, ಗರತಿ ಹಾಡು ರಚನೆಗೊಳ್ಳುವ ಸಂದರ್ಭ ಮಾರ್ಮಿಕವಾಗಿ ವಿವರಿಸಿದರು.

ಉಪನ್ಯಾಸಕಿ ಡಾ. ಶರಣಮ್ಮ ಗೋರೆಬಾಳ ಮಾತನಾಡಿ, ಜನಪದ ಸಾಹಿತ್ಯವು ನೈತಿಕತೆ ಬೆಳೆಸುವಲ್ಲಿ ಮುಂಚೂಣಿಯಲ್ಲಿದೆ. ಆದರೆ ಇಂತಹ ಜನಪದ ಸಾಹಿತ್ಯ ಅವನತಿ ಅಂಚಿನಲ್ಲಿದ್ದು, ಯುವ ಜನಾಂಗ ಈ ಸಾಹಿತ್ಯ ಉಳಿಸಬೇಕಿದೆ ಎಂದರು.

ಇದೇ ವೇಳೆ ನಿವೃತ್ತಿ ಹೊಂದಿದ ಎಫ್.ಬಿ.ಕಣವಿ, ಚಂದ್ರಶೇಖರ ಕೆಂಗಾರ ಮತ್ತು ಡಾ.ರಾಜಶೇಖರ ಬಶೆಟ್ಟಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಸನ್ಮಾನಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಎಚ್.ಎಸ್. ಬಡಿಗೇರ, ಎಂ.ಸಿ.ಯಲಿಗಾರ, ಕೆ.ಎಸ್. ಕೌಜಲಗಿ, ಮಹಾದೇವ ಸತ್ತಿಗೇರಿ, ಬಸವರಾಜ ಗೊರವರ, ಮಹಾಂತೇಶ ನರೇಗಲ್ಲ, ಡಾ. ಎಸ್.ಎಸ್.ದೊಮನಿ, ಡಾ.ಚಂದ್ರಶೇಖರ ರೊಟ್ಟಿಗವಾಡ, ಪ್ರಮೀಳಾ ಜಕ್ಕಣ್ಣವರ ಇದ್ದರು.



ಕಿರುಸುದ್ದಿ

ದಿ ಸೂಪರ್ ಟ್ಯಾಲೆಂಟೆಡ್ ಕಿಡ್ ಪ್ರಶಸ್ತಿ

ರಬಕವಿ-ಬನಹಟ್ಟಿ: ಬನಹಟ್ಟಿಯ ಆನಂದ ಮಲ್ಲಪ್ಪ ಜನವಾಡ ಇವರ ಸುಪುತ್ರ, ಜಗಮೋಹನ ಆನಂದ ಜನವಾಡ ಗುರುತಿಸುವಿಕೆಯಲ್ಲಿ ಅಂತಾರಾಷ್ಟ್ರೀಯ ಬುಕ್ ಆಫ್ ರೇಕಾರ್ಡ್ಸ್ ಇವರಿಂದ ದಿ ಸೂಪರ್ ಟ್ಯಾಲೆಂಟೆಡ್ ಕಿಡ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾನೆ. ಒಟ್ಟು 7 ತಿಂಗಳ ಮಗು ಜಗಮೋಹನ ವಿವಿಧ ಚಿತ್ರಗಳನ್ನು ಗುರುತಿಸುವಿಕೆಯಲ್ಲಿ ಸಾಧನೆ ಮಾಡಿದ್ದು, ಇವರ ಸಾಧನೆಗೆ ಅನೇಕ ಸಂಘ ಸಂಸ್ಥೆಗಳು ಹರ್ಷ ವ್ಯಕ್ತಪಡಿಸಿವೆ.



ದೇವಸ್ಥಾನದಲ್ಲಿ ಕಳ್ಳತನ

ಕುರುಗೋಡು: ಸಮೀಪದ ಕುರುಗೋಡು ಠಾಣೆ ವ್ಯಾಪ್ತಿಯಲ್ಲಿ ಬರುವ ಎಮ್ಮಿಗನೂರು ಗ್ರಾಮದ ವಿವಿಧ ದೇವಸ್ಥಾನದಲ್ಲಿ ಕಳ್ಳತ ನಡೆದಿದೆ. ಗ್ರಾಮದ ಅಂಬೇಡ್ಕರ್ ಕಾಲೋನಿಯ ಯಲ್ಲಮ್ಮ ದೇವಿ, ಕೆಂಚಮ್ಮ ಹಾಗೂ ತಳವಾರ ಪೇಟೆಯಲ್ಲಿ ಸುಂಕ್ಲಮ್ಮ ವೆಂಕಬದೇವಿಯ ದೇವಸ್ಥಾನಲ್ಲಿ ಗುರುವಾರ ಮಧ್ಯರಾತ್ರಿ ಕಳ್ಳರು ದೇವಿಯರ ಕೊರಳಿನ ಬಂಗಾರದ ಮಾಂಗಲ್ಯ ಹಾಗೂ ಬೆಳ್ಳಿ ಲಿಂಗದಕಾಯಿ ಸೇರಿದಂತೆ ಬೆಲೆ ಬಾಳುವ ವಸ್ತುಗಳ ಖದೀಮರ ಕೈ ಚಳಕ ತೋರಿಸಿದ್ದಾರೆ. ಇದೇ ಗ್ರಾಮದ ಗ್ರಾಪಂ ಬಳಿ ಕಳೆದ ಎರಡು ಹಿಂದ ಸಣ್ಣ ಮಸೀದಿಯ ಕಾಣಿಕೆಯ ಹುಂಡಿ ಹೊಡೆಲಾಗಿದೆ ಎಂದು ಭಕ್ತರು ತಿಳಿಸಿದ್ದಾರೆ. ಆದರೆ, ಕಳೆದ ಎರಡು ದಿನದಲ್ಲಿ ಕಳ್ಳತನ ಬಗ್ಗೆ ಯಾರು ದೂರು ಕೊಡದೆ. ನಿನ್ನೆಯ ಕಳ್ಳತನ ಮುಂದುವರಿದಿದೆ. ಕುರುಗೋಡು ಠಾಣೆಯ ಮಾಹಿತಿಯನ್ನು ತಿಳಿಸಿದ ತಕ್ಷಣ ಶುಕ್ರವಾರ ಬೆಳಗ್ಗೆ ಖಾಕಿಪಡೆ ತಂಡ ವಿವಿಧ ದೇವಸ್ಥಾನ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಅರಣ್ಯ ಇಲಾಖೆ ಅಧಿಕಾರಿಗಳ ಮೇಲೆ ಹಲ್ಲೆ



ಯಾದಗಿರಿ: ವನ್ಯಜೀವಿಗಳ ಭೇಟಿಯಾಡಿದವರನ್ನ ಬಂಧಿಸಲು ಹೋಗಿದ್ದ ಅರಣ್ಯ ಇಲಾಖೆ ಅಧಿಕಾರಿಗಳ ಮೇಲೆ ಆರೋಪಿಗಳೇ ಥಳಿಸಿದ ಘಟನೆ ಸುರಪುರ ತಾಲೂಕಿನ ಕಕ್ಕೇರಾ ಬಳಿಯ ಕಾಡಂಚಿನಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಮೂರು ದಿನಗಳ ಹಿಂದೆ ನಡೆದ ಘಟನೆ ನಡೆದಿದ್ದು ವನ್ಯಜೀವಿ (ಕಾಡುಹಂದಿ) ಬೇಟೆಯಾಡಿ ಆ ದೃಶ್ಯಾವಳಿಗಳನ್ನು ಆರೋಪಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಟ್ಟಿದ್ದರು. ಬಂಧಿಸಲು ಹೋದ ಅಧಿಕಾರಿಗಳನ್ನ ಜಾಲಿ ಗಿಡಕ್ಕೆ ಕಟ್ಟಿ ದೊಣ್ಣೆಯಿಂದ ಹಲ್ಲೆಗೊಳಿಸಿದ್ದರು. ಆರ್ ಎಫ್ ಒ ಭಾಗಪ್ಪಗೌಡ ಹಾಗೂ ಗಸ್ತುಪಾಲಕರಾದ ಲಾಲ್ ಅಹ್ಮದ್ ಹಾಗೂ ಕಾಶಿನಾಥ್ ರಾಠೋಡ್ ಹಲ್ಲೆಗೊಳಗಾದ ಅಧಿಕಾರಿಗಳು. ಸದ್ಯ ಆರ್‌ಎಫ್ ಒ ಅವರನ್ನು ಚಿಕಿತ್ಸೆಗಾಗಿ ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೊಡೇಕಲ್ ಪೊಲೀಸ್ ಠಾಣೆಯಲ್ಲಿ 11 ಜನರ ವಿರುದ್ಧ ಕೇಸ್ ದಾಖಲಿಸಲಾಗಿದೆ. ನಾಲ್ಕು ಜನರನ್ನ ಬಂಧಿಸಿ ಜೈಲಿಗೆ ಪೊಲಿಸರು ಜೈಲಿಗೆ ಕಳುಹಿಸಿದ್ದಾರೆ.

» ವನ್ಯಜೀವಿಗಳ ಬೇಟೆಯಾಡಿದ ಪ್ರಕರಣ
» ನಾಲ್ವರು ಪೊಲೀಸರ ವಶಕ್ಕೆ

ವಿಷಾಹಾರ ಸೇವಿಸಿ ಅಸ್ವಸ್ಥಗೊಂಡ ಆಕಳಿಗೆ ಚಿಕಿತ್ಸೆ

ಗೋಕರ್ಣ: ಮೇಲಿನಕೇರಿಯ ಎಸ್‌ಸಿ ಕೇರಿಯ ಬಳಿ ವಿಷಾಹಾರ ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡ ಆಕಳಿಗೆ ಚಿಕಿತ್ಸೆ ನೀಡಲಾಯಿತು. ತೀವ್ರವಾಗಿ ಅಸ್ವಸ್ಥಗೊಂಡು ರಸ್ತೆಯಲ್ಲಿ ಬಿದ್ದ ಗೋವನ್ನು ಗಮನಿಸಿದ ಮಹೇಶ ಮೆಹತಾ ಅವರು ಕೂಡಲೇ ಪ್ರಾಣಿ ಪ್ರಿಯ ಹಾಗೂ ಗೋಕರ್ಣ ಗ್ರಾಪಂ ನಿಕಟ ಪೂರ್ವ ಸದಸ್ಯ ಸುಜಯ ಶೆಟ್ಟಿ ಗೋಕರ್ಣ ಅವರಿಗೆ ವಿಷಯ ತಿಳಿಸಿದರು. ಕೂಡಲೇ ಪಶು ವೈದ್ಯರಿಗೆ ವಿಷಯ ತಿಳಿಸಿ ಸ್ಥಳಕ್ಕೆ ಆಗಮಿಸಿದ ಸುಜಯ ಅವರು ಪಶು ವೈದ್ಯರ ಹಾಗೂ ಸ್ಥಳೀಯರ ಸಹಾಯದಿಂದ ತೀವ್ರವಾಗಿ ಅಸ್ವಸ್ಥಗೊಂಡ ಆಕಳಿಗೆ ಚಿಕಿತ್ಸೆ ನೀಡಿ ಮಾನವೀಯತೆ ಮೆರೆದಿದ್ದಾರೆ. ಹಾಗೂ ಆಕಳ ಕಿವಿಯಲ್ಲಿ ಇರುವ ಕಿವಿ ಓಲೆ (ಇಯರ್ ಟ್ಯಾಗ್) ಸಹಾಯದಿಂದ ಆಕಳನ್ನು ಸುರಕ್ಷಿತವಾಗಿ ಮಾಲೀಕರ ಕೊಟ್ಟಿಗೆಗೆ ಸೇರಿಸಲಾಯಿತು. ಸ್ಥಳೀಯರಾದ ವಿನಾಯಕ ಶೆಟ್ಟಿ, ನಾರಾಯಣ ಶೆಟ್ಟಿ, ಸಂಗೀತಾ ಶೆಟ್ಟಿ, ಶಶಿಕಲಾ ಶೆಟ್ಟಿ ಸಹಕಾರ ನೀಡಿದರು.

ಧಾರವಾಡ ಸಕ್ಷಮ್ ಮನವಿಗೆ ಸ್ಪಂದನೆ | ದಿವ್ಯಾಂಗರ ಶೇ.5 ಮೀಸಲಾತಿ ಒಲವು

ರಾಜಕೀಯ ಹಕ್ಕಿಗೆ ದಿವ್ಯಾಂಗರ ಹೆಜ್ಜೆ!

▸ ಮಹಾಂತೇಶ ಕಣವಿ

ಧಾರವಾಡ: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ದಿವ್ಯಾಂಗರಿಗೆ ಪ್ರಾತಿನಿಧ್ಯ ಸಿಗಬೇಕು ಎನ್ನುವ ದಶಕಗಳ ಕನಸು ನನಸಾಗುವತ್ತ ರಾಜ್ಯದ ಪೌರಾಡಳಿತ ನಿರ್ದೇಶನಾಲಯ ಮಹತ್ವದ ಹೆಜ್ಜೆ ಇರಿಸಿದೆ. ಇದು ದಿವ್ಯಾಂಗರ ಖುಷಿಯನ್ನು ಇಮ್ಮಡಿಗೊಳಿಸಿದೆ.

ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳ ಚುನಾವಣೆಯಲ್ಲಿ ದಿವ್ಯಾಂಗರಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸುವಂತೆ 'ಸಕ್ಷಮ್' ಧಾರವಾಡ ಜಿಲ್ಲಾ ಘಟಕದ ಪ್ರಸ್ತಾವನೆಗೆ ರಾಜ್ಯ ಮಟ್ಟದಲ್ಲಿ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ.

ಈ ಕುರಿತು ನಿಯಮಾನುಸಾರ ಪರಿಶೀಲನೆ ನಡೆಸಿ, ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಬೆಂಗಳೂರಿನ ಪೌರಾಡಳಿತ ನಿರ್ದೇಶನಾಲಯವು ಧಾರವಾಡ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಅಧಿಕೃತವಾಗಿ ಸೂಚನೆ ನೀಡಿದೆ.

ಸಕ್ಷಮ್ ಹೋರಾಟದ ಫಲ: ದಿವ್ಯಾಂಗರ ಸಬಲೀಕರಣ ಹಾಗೂ ಅವರ ಹಕ್ಕುಗಳಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ 'ಸಕ್ಷಮ್' ಸಂಸ್ಥೆಯ ಧಾರವಾಡ ಜಿಲ್ಲಾ ಘಟಕವು ಚುನಾವಣಾ ಮೀಸಲಾತಿಗೆ ಕಳೆದ ವರ್ಷ (2025ರಲ್ಲಿ) ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.


ಆದೇಶದಲ್ಲಿ ಏನಿದೆ? ಸಕ್ಷಮ್ ಘಟಕದ ಚುನಾವಣಾ ಮೀಸಲಾತಿ ಮನವಿ ಗಂಭೀರವಾಗಿ ಪರಿಗಣಿಸಿದ ಬೆಂಗಳೂರಿನ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು, ಈಗ ಚೆಂಡನ್ನು ಧಾರವಾಡ ಜಿಲ್ಲಾ ನಗರಾಭಿವೃದ್ಧಿ ಕೋಶದ ಅಂಗಳಕ್ಕೆ ಹಾಕಿ, ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

ನಿಯಮಾನುಸಾರ ಪರಿಶೀಲನೆ: ಪ್ರಸ್ತುತ ಚಾಲ್ತಿಯಲ್ಲಿರುವ ಪೌರಾಡಳಿತ ಕಾಯ್ದೆ ಮತ್ತು ನಿಯಮಾವಳಿಗಳ ಅಡಿಯಲ್ಲಿ ಈ ಶೇ.5 ಮೀಸಲಾತಿಯನ್ನು ಹೇಗೆ ಅಳವಡಿಸಬಹುದು ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸುವಂತೆ ಆದೇಶ ನೀಡಿದೆ.

ಸೂಕ್ತ ಪ್ರಸ್ತಾವನೆ ಸಲ್ಲಿಕೆ: ಕಾನೂನಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಶೀಘ್ರದಲ್ಲೇ ಒಂದು ಸಮಗ್ರ ಹಾಗೂ ಸೂಕ್ತವಾದ ವರದಿಯನ್ನು (ಪ್ರಾಸ್ತಾಪನೆ) ಸಿದ್ಧಪಡಿಸಿ ಕೇಂದ್ರ ಕಚೇರಿಗೆ ಕಳುಹಿಸಲು ಧಾರವಾಡ ಯೋಜನಾ ನಿರ್ದೇಶಕರಿಗೆ ನಿರ್ದೇಶಿಸಿದೆ.

ದಿವ್ಯಾಂಗರಲ್ಲಿ ಆಶಾಕಿರಣ: ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆಗಳು ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ದಿವ್ಯಾಂಗರಿಗೆ ಮೀಸಲಾತಿ ಸಿಕ್ಕರೆ, ವಿಕಲಚೇತನರ ಕಲ್ಯಾಣ ಯೋಜನೆಗಳು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುವ ವಿಶ್ವಾಸವಿದೆ.

ಪೌರಾಡಳಿತ ನಿರ್ದೇಶನಾಲಯದ ಆದೇಶ ಧಾರವಾಡದ ದಿವ್ಯಾಂಗರು ಹಾಗೂ ಪ್ರಗತಿಪರ ಚಿಂತಕರಲ್ಲಿ ಹೊಸ ಭರವಸೆ ಮೂಡಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶ ಸಕಾರಾತ್ಮಕ ವರದಿ ನೀಡಿ, ಸರ್ಕಾರ ಇದನ್ನು ಜಾರಿಗೆ ತರಲಿ ಎಂಬುದು ಸರ್ವರ ಆಶಯ.



ಕರ್ನಾಟಕ ಸರ್ಕಾರ
Govt. of Karnataka
Office of the Deputy Commissioner, Dharwad-580001
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ-580 001
ದೂರವಾಣಿ: 0836-2233840, 2233880 (ಫ್ಯಾಕ್ಸ್) 0836-2747102 e-mail: dco.dharwad@gmail.com
/2026-27 ದಿನಾಂಕ: 05-06-2026
ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಧಾರವಾಡ
ಮಾನ್ಯರೇ,
29-11-2025

> ದಿವ್ಯಾಂಗರು ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ರಾಜಕೀಯ ಪ್ರಾತಿನಿಧ್ಯ ಮುಖ್ಯ. ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ದಿವ್ಯಾಂಗರಿಗೆ ಶೇ.5 ಸೀಟುಗಳನು ಕಾಯ್ದಿರಿಸಿದರೆ, ಅವರ ಏಳಿಗೆಗೆ ಅವರೇ ಧ್ವನಿಯಾಗಲು ಸಾಧ್ಯ.
> ■ ಕೇಶವ ತೆಲಗು, ಅಧ್ಯಕ್ಷರು ಸಕ್ಷಮ್ ಜಿಲ್ಲಾ ಘಟಕ

ದಿಗಂತ ವಿಶೇಷ

ಬಸ್‌ಗಾಗಿ ಟ್ರ್ಯಾಕ್ಟರ್ ಅಡ್ಡ ನಿಲ್ಲಿಸಿ ಪ್ರತಿಭಟಿಸಿದ ವಿದ್ಯಾರ್ಥಿಗಳು

ಚನ್ನಮ್ಮನ ಕಿತ್ತೂರು: ತಾಲೂಕಿನ ಉಗರಖೋಡ ಹಾಗೂ ಬಚ್ಚನಕೇರಿ ಗ್ರಾಮಕ್ಕೆ ಸಮರ್ಪಕವಾಗಿ ಬಸ್ ವ್ಯವಸ್ಥೆ ಕೂಡಲೇ ಕಲ್ಪಿಸಬೇಕೆಂದು ಆಗ್ರಹಿಸಿ ಟ್ರ್ಯಾಕ್ಟರನ್ನು ನಿಲ್ದಾಣದ ಪ್ರವೇಶ ದ್ವಾರಕ್ಕೆ ಅಡ್ಡ ನಿಲ್ಲಿಸಿ ಉಗರಖೋಡ ಗ್ರಾಮಸ್ಥರು, ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಹೆದ್ದಾರಿ ಪಕ್ಕದ ಕೆಂದ್ರ ಬಸ್ ನಿಲ್ದಾಣಕ್ಕೆ ಆಗಮಿಸಿದ ಉಗರಖೋಡ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು, ಸರಿಯಾದ ವೇಳೆಗೆ ಸಾರಿಗೆ ವ್ಯವಸ್ಥೆ ನಮ್ಮ ಗ್ರಾಮಕ್ಕೆ ಇಲ್ಲ, ಧಾರವಾಡದಿಂದ ಬೆಳಗಾವಿಗೆ ತೆರಳುವ ಸ್ಥಳೀಯ ಬಸ್ಸುಗಳಿಗೆ ನಿಲುಗಡೆಗೆ ಅವಕಾಶ ಇದ್ದರೂ ಚಾಲಕ ನಿರ್ವಾಹಕರು ಉಗರಖೋಡ ಗ್ರಾಮಕ್ಕೆ ನಿಲುಗಡೆ ಇಲ್ಲ ಎಂದು ಹೇಳಿ ತೆರಳುತ್ತಿದ್ದಾರೆ ಎಂದು ದೂರಿದರು.

ಕಿತ್ತೂರು ಹಾಗೂ ಬೈಲಹೊಂಗಲ ಘಟಕಗಳಿಂದ ಉಗರಖೋಡ ಗ್ರಾಮಕ್ಕೆ ಗ್ರಾಮೀಣ ಸಾರಿಗೆ ಇದ್ದರೂ ಅವುಗಳು ಸರಿಯಾದ ಸಮಯಕ್ಕೆ ಬರುತ್ತಿಲ್ಲ, ಇದರಿಂದ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಈ ಸಮಸ್ಯೆಯನ್ನು ಬಗೆ ಹರಿಸಬೇಕೆಂದು ಪಟ್ಟು ಹಿಡಿದರು.

ಸ್ಥಳಕ್ಕಾಗಮಿಸಿದ ಘಟಕ ವ್ಯವಸ್ಥಾಪಕ ಮಲ್ಲಪ್ಪ ಕೆಂಚರಾಮನಹಾಳ ಗ್ರಾಮಸ್ಥರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾದಂತೆ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಧಾರವಾಡದಿಂದ ಬೆಳಗಾವಿ ತೆರಳುವ ಬಸ್ಸಗಳನ್ನು ನಿಲುಗಡೆಗೊಳಿಸುವಂತೆ ಚಾಲಕರಿಗೆ ನಿರ್ವಾಹಕರಿಗೂ ಸೂಚಿಸಲಾಗುವುದು, ಅಲ್ಲದೆ ಈ ತೊಂದರೆಯ ಕುರಿತು ಮೇಲಾಧಿಕಾರಿಗಳ ಗಮನಕ್ಕೂ ತರಲಾಗುವುದು ಎಂದು ಹೇಳಿದರು. ಟ್ರ್ಯಾಕ್ಟರ್ ಅಡ್ಡ ನಿಲ್ಲಿಸಿ ದಿಢೀರ್ ಪ್ರತಿಭಟನೆ ನಡೆಸಿದ ಗ್ರಾಮಸ್ಥರ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಮನವೊಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯನ್ನು ಪಿಎಸ್‌ಐ ಭರತ್ ಎಸ್ ನೀಡಿ ಪ್ರತಿಭಟನೆ ಹಿಂಪಡೆಯುವಂತೆ ತಿಳಿಸಿದರು. ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಟ್ಟ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಇಲ್ಲಿಯ ನಿಲ್ದಾಣದ ನಿಯಂತ್ರಕರ ಮೂಲಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ತೆರಳಿದರು.



ವಸತಿ ನಿಲಯಗಳಲ್ಲಿ ರೇಷನ್ ಅಕ್ರಮ ಆರೋಪ

ಎಬಿವಿಪಿಯಿಂದ ಪ್ರತಿಭಟನೆ: ತನಿಖೆಗೆ ಆಗ್ರಹ

ಕಲಬುರಗಿ: ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ಸರ್ಕಾರದಿಂದ ನೀಡಲಾಗುವ ರೇಷನ್ ಸಾಮಗ್ರಿಗಳ ದುರ್ಬಳಕೆ ಹಾಗೂ ಮೂಲಭೂತಸೌಲಭ್ಯಗಳಕೊರತೆಯನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಲಬುರಗಿ ಜಿಲ್ಲಾ ಘಟಕದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿದ ಎಬಿವಿಪಿ ಮುಖಂಡರು, ವಿದ್ಯಾರ್ಥಿನಿಯರಿಗೆ ಮೀಸಲಾದ ಅಕ್ಕಿ, ಬೇಳೆ ಸೇರಿದಂತೆ ಇತರೆ ಆಹಾರ ಸಾಮಗ್ರಿಗಳನ್ನು ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪ ಮಾಡಿದರು. ವಸತಿ ನಿಲಯಗಳಲ್ಲಿ ಸರಿಯಾದ ಸಮಯಕ್ಕೆ ಆಹಾರ ದೊರೆಯುತ್ತಿಲ್ಲ, ಸ್ವಚ್ಛತೆ, ಶುದ್ಧ ಕುಡಿಯುವ ನೀರು, ಶೌಚಾಲಯ ಹಾಗೂ ಸ್ನಾನಗೃಹಗಳಂತಹ ಮೂಲಭೂತ ಸೌಲಭ್ಯಗಳ ಕೊರತೆ ಇದೆ ಎಂದು ದೂರಿದರು.

ವಿದ್ಯಾರ್ಥಿನಿಯರಿಗೆ ಪ್ರತಿ ತಿಂಗಳು ವಿತರಿಸಬೇಕಾದಶುಚಿಕಿಟ್‌ಗಳನ್ನು ನೀಡದೆ ನಿರ್ಲಕ್ಷ್ಯ ವಹಿಸಲಾಗುತ್ತಿದ್ದು, ಈ ಕುರಿತು ಪ್ರಶ್ನಿಸಿದರೆ ತಾವೇ ಖರೀದಿಸಿಕೊಳ್ಳುವಂತೆ ಹೇಳಲಾಗುತ್ತಿದೆ. ವಿದ್ಯಾರ್ಥಿಗಳ ಹೆಸರಿನಲ್ಲಿ ಬರುವ ಅನುದಾನ ಹಾಗೂ ರೇಷನ್ ದುರುಪಯೋಗಪಡಿಸಿಕೊಂಡು ಭ್ರಷ್ಟಾಚಾರ ನಡೆಸುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುವ ಅಧಿಕಾರಿಗಳನ್ನು ಯಾವುದೇ ಕಾರಣಕ್ಕೂ ರಕ್ಷಿಸಬಾರದು. ರೇಷನ್ ಅಕ್ರಮದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ತಕ್ಷಣ ಅಮಾನತುಗೊಳಿಸಬೇಕು. ವಿದ್ಯಾರ್ಥಿನಿಯರಿಗಾಗಿ ಮೀಸಲಾದ ರೇಷನ್ ದುರ್ಬಳಕೆ ಕುರಿತು ಉನ್ನತ ಮಟ್ಟದ ತನಿಖೆ, ಗ್ರಂಥಾಲಯಕ್ಕೆ ಮಾಸಪತ್ರಿಕೆ ಹಾಗೂ ದಿನಪತ್ರಿಕೆಗಳ ಪೂರೈಕೆ ಮತ್ತು ಜಿಲ್ಲೆಯ ಎಲ್ಲಾ ವಸತಿ ನಿಲಯಗಳ ಪರಿಶೀಲನೆಗೆ ವಿಶೇಷ ತಂಡ ನೇಮಕ ಮಾಡುವುದು ಸೇರಿವೆ.

ಪ್ರತಿಭಟನೆಯಲ್ಲಿ ಎಬಿವಿಪಿ ನಗರ ಕಾರ್ಯದರ್ಶಿ ಶರಣು ಪೂಜಾರಿ, ಜಿಲ್ಲಾ ಸಂಚಾಲಕ ಮಂಜುನಾಥ ಕೊನ್ನೂರ, ವಿಭಾಗ ಸಂಘಟನಾ ಕಾರ್ಯದರ್ಶಿ ಹೇಮಂತ್, ಶ್ರವಣ್, ಸಂದೇಶ್, ಮನೋಜ ಪಾಟೀಲ್, ಜಗಲಪ್ಪ ಹಾಗೂ ವಸತಿ ನಿಲಯದ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಕೇಸರಿ ಶಾಲು ಹಂಚಲು ಯತ್ನಿಸಿದ ಶಾಸಕ ಯತ್ನಾಳ

ಬೆಂಬಲಿಗರ ಬಂಧನ-ಬಿಡುಗಡೆ

ವಿಜಯಪುರ: ಹಿಜಾಬ್‌ಗೆ ಅನುಮತಿ ನೀಡಿರುವ ಸರ್ಕಾರದ ಕ್ರಮ ವಿರೋಧಿಸಿ ನಗರದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಕೇಸರಿ ಶಾಲು ಹಂಚಲು ಯತ್ನಿಸಿದ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳರನ್ನು ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದರು.

ನಗರದ ದರಬಾರ ಹೈಸ್ಕೂಲ್ ಕ್ರಾಸ್ ಬಳಿಯ ಸ್ಟೇಶನ್ ರಸ್ತೆಯಲ್ಲಿ ಕೇಸರಿ ಶಾಲು ಹಂಚಲು ಯತ್ನಿಸುತ್ತಿದ್ದ ಯತ್ನಾಳ ಹಾಗೂ ಅವರ ಬೆಂಬಲಿಗರನ್ನು ಪೊಲೀಸರು ತಡೆದಿದ್ದು, ಕೆಲ ಹೊತ್ತು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಬಳಿಕ ಯತ್ನಾಳ ಸೇರಿದಂತೆ ಪ್ರತಿಭಟನಾಕಾರರನ್ನು ಬಂಧಿಸಿ, ಬಿಡುಗಡೆ ಮಾಡಲಾಯಿತು.

ಅನಂತರ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ಶಾಲಾ-ಕಾಲೇಜುಗಳಲ್ಲಿ ಶಿಸ್ತಿನ ಪ್ರತೀಕವಾಗಿ ಸಮವಸ್ತ್ರ ವ್ಯವಸ್ಥೆ ಜಾರಿಯಲ್ಲಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಆಡಳಿತದ ಕೊನೆಯ ಅವಧಿಯಲ್ಲಿ ಮುಸ್ಲಿಂರನ್ನು ಖುಷಿಪಡಿಸಲು, ಈ ವಿಷಯ ನ್ಯಾಯಾಲಯದಲ್ಲಿದ್ದರೂ ರಾಜ್ಯ ಸರ್ಕಾರ ಹಿಜಾಬ್ ಧರಿಸಲು ಅನುಮತಿ ನೀಡಿದೆ. ಆ ನಿಟ್ಟಿನಲ್ಲಿ ಸರ್ಕಾರ ಹಿಜಾಬ್ ಅನುಮತಿ ಆದೇಶ ಹಿಂಪಡೆಯಬೇಕೆಂಬ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಕೇಸರಿ ಶಾಲು ವಿತರಿಸಲು ಮುಂದಾಗಿದ್ದೇವು. ಆದರೆ, ನಾವು ಸ್ಥಳಕ್ಕೆ ತಲುಪುತ್ತಿದ್ದಂತೆಯೇ ಪೊಲೀಸರು ಬಂಧಿಸುವ ಮೂಲಕ ನಮ್ಮನ್ನು ಅಪರಾಧಿಗಳಂತೆ ನಡೆಸಿಕೊಂಡಿದ್ದಾರೆ. ಈ ಮೂಲಕ ರಾಜ್ಯ ಸರ್ಕಾರ ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಇದೇ ರೀತಿ ಹಿಂದೂ ವಿರೋಧಿ ನೀತಿಯನ್ನು ಮುಂದುವರಿಸಿದರೆ ಪಶ್ಚಿಮ ಬಂಗಾಳದಂತೆ 2028ರಲ್ಲಿ ಕರ್ನಾಟಕದಲ್ಲಿಯೂ ಧೂಳಿಪಟ ಆಗುವುದು ನಿಶ್ಚಿತ. ಇಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ನಡೆಯುತ್ತದೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿಯ ಸಂವಿಧಾನ ನಡೆಯಲ್ಲ ಎಂದು ಎಚ್ಚರಿಕೆ ನೀಡಿದರು.

ಮಹಾನಗರ ಪಾಲಿಕೆ ಸದಸ್ಯರಾದ ಪ್ರೇಮಾನಂದ ಬಿರಾದಾರ, ರಾಜಶೇಖರ ಕುರಿಯವರ, ಕಿರಣ ಪಾಟೀಲ, ಜವಾಹರ ಗೋಸಾವಿ, ಕುಮಾರ ಗಡಗಿ, ಗಿರೀಶ ಬಿರಾದಾರ, ಮುಖಂಡರಾದ ಪಾಂಡುಸಾಹುಕಾರ ದೊಡ್ಡಮನಿ, ಶಂಕರ ಹೂಗಾರ, ಅಶೋಕ ಬೆಲ್ಲದ, ವಿಠ್ಠಲ ನಡುವಿನಕೇರಿ, ರಾಜು ಜಾಧವ, ರಾಜಶೇಖರ ಭಜಂತ್ರಿ, ನಾಗರಾಜ ಮುಳವಾಡ, ಪಾರೀಶ ಶಿರಹಟ್ಟಿ, ಸಿದ್ದನಗೌಡ ಬಿರಾದಾರ, ಬಸವರಾಜ ಲವಗಿ, ಭೀಮು ಮಾಶ್ಯಾಳ, ಬಸವರಾಜ ಬಿರಾದಾರ ಇದ್ದರು.



ಸಾಧಕರನ್ನು ಪ್ರಶಸ್ತಿಗಳು ಹುಡುಕಿಕೊಂಡು ಬರಲಿ

ವಿಜಯಪುರ: ಪ್ರಶಸ್ತಿಗಳು ಸಾಧಕರನ್ನು ಹುಡುಕಿಕೊಂಡು ಬರಬೇಕೇ ವಿನಃ ಪ್ರಶಸ್ತಿಗಳ ಬೆನ್ನತ್ತಿ ಅವರು ಹೋಗಬಾರದು ಎಂದು ಬೆಂಗಳೂರಿನ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕಲಬುರಗಿಯ ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ದಲಿತ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡ ಪ್ರೊ.ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ಪ್ರದಾನ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರಶಸ್ತಿಯು ಲೇಖಕರ ಸಾಮಾಜಿ ಜವಾಬ್ದಾರಿಯನ್ನು ಹೆಚ್ಚಿಸುವುದಲ್ಲದೇ ಸಾಧಕರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಈಗಾಗಲೇ ಹಲವು ನಾಡಿನ ಖ್ಯಾತನಾಮ ಹಿರಿಯ ಲೇಖಕರಿಗೆ ಪ್ರಶಸ್ತಿಯನ್ನು ನೀಡಿ, ಅವರನ್ನು ಗೌರವಿಸಿದ್ದು ಕನ್ನಡ ನಾಡು, ನುಡಿಗೆ ಹಿರಿಮೆ ತಂದಂತಾಗಿದೆ ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ವೆಂಕಟೇಶ ಮಾತನಾಡಿ, ಜವತ್ತಿನ ಜನರ ಬದುಕು ಸಂಕೀರ್ಣವಾಗಿದೆ. ಎಐ ತಂತ್ರಜ್ಞಾನವು ಮನುಷ್ಯನನ್ನು ಆಳುತ್ತಿದೆ. ಮನುಷ್ಯ ತಂತ್ರಜ್ಞಾನದ ಅಡಿಯಾಳಾಗಬಾರದು, ತಂತ್ರಜ್ಞಾನವೇ ಮನುಷ್ಯನ ಅಡಿಯಲ್ಲಿರಬೇಕು ಎಂದು ಹೇಳಿದರು. ಕಲಬುರಗಿ ವಿವಿಯ ಪ್ರೊ.ಎಚ್.ಟಿ.ಪೋತೆ ಮಾತನಾಡಿ, ಪ್ರೊ.ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ನಾಡಿನ ಪ್ರತಿಷ್ಠ ಪ್ರಶಸ್ತಿಯಾಗಿದೆ. ನಾಡಿನ ನೈಜಪ್ರತಿಭೆಗಳನ್ನು ಗುರುತಿಸಿ ಗೌರವಿಸುವುದು ವಾಡಿಕೆಯಾಗಿದೆ. ಈ ಹಿಂದೆ ಹಲವಾರು ನಾಡಿನ ಗಣ್ಯ ಸಾಹಿತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸದ್ಯ ಸುಜಾತಾ ಚಲವಾದಿ ಅವರಿಗೆ ಪ್ರಶಸ್ತಿ ನೀಡುತ್ತಿರುವುದು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದಂತಾಗಿದೆ ಎಂದು ಹೇಳಿದರು.

ಧಾರವಾಡ ಕರ್ನಾಟಕ ವಿವಿಯ ಪ್ರಾಧ್ಯಾಪಕ ಡಾ. ನಿಂಗಪ್ಪ ಮುದೇನೂರ ಉಪನ್ಯಾಸ ನೀಡಿ ಮಾತನಾಡಿ, ಡಾ. ಸುಜಾತಾ ಚಲವಾದಿ ಅವರ ಪ್ರಮುಖ ಕೃತಿಗಳಾದ ಲಚಮ್ಮವ್ವ ಮತ್ತು ಇತರೆ ಕಥೆಗಳು, ಕೊರಗು, ನಿರ್ಭಯಲ ಬೆರಗು, ಬುದ್ಧ ಇದ್ದನಲ್ಲಿ ಈ ಕೃತಿಗಳಲ್ಲಿರುವ ಸಾಹಿತ್ಯಿಕ ಮೌಲ್ಯಗಳನ್ನು ವಿಮರ್ಶಾತ್ಮಕವಾಗಿ ವಿವರಿಸಿದರು. ಲೇಖಕಿ ಡಾ.ಸುಜಾತಾ ಚಲವಾದಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಅಧ್ಯಕ್ಷ ಎಂ.ಎಸ್. ಮದಭಾವಿ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಮಲ್ಲೇಪುರಂ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ನಾಗರಾಜ, ಅನಿಲ ಹೊಸಮನಿ, ಅಭಿಷೇಕ ಚಕ್ರವರ್ತಿ, ಡಾ.ಎಂ.ಎಂ.ಪಡಶೆಟ್ಟಿ, ಶ್ರೀಕಾಂತ ಹೊಸಮನಿ, ರವಿ ಕಿತ್ತೂರ ಸೇರಿದಂತೆ ಇತರರು ಇದ್ದರು.



ಕೆಸರುಗದ್ದೆಯಂತಾದ ಕರ್ನಾಟಕ ಪಬ್ಲಿಕ್ ಶಾಲೆ ಆವರಣ

ರಾಯಚೂರು: ನಗರದ ಮನ್ನೂರುವಾಡಿ ಪ್ರದೇಶದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ಮಳೆ ನೀರು ನಿಂತು ಕೆಸರುಗದ್ದೆಯಂತಾಗಿ ವಿದ್ಯಾರ್ಥಿಗಳು ಸಂಚಾರಕ್ಕೆ ಸಂಚಕಾರವನ್ನು ತಂದಿದೆ.

ನಗರದ ಮಧ್ಯಭಾಗದಲ್ಲಿರುವ ಈ ಶಾಲೆ ಅತ್ಯಂತ ಹಳೆಯ ಶಾಲೆ. ಈ ಶಾಲೆಯಲ್ಲಿ ಇತ್ತೀಚೆಗೆ ರಾಜ್ಯ ಸರ್ಕಾರ ಕೆಪಿಎಸ್ ಮಾದರಿ ಶಾಲೆ ಎಂದು ಘೋಷಿಸಿದೆ. ಆದರೆ ಈ ಶಾಲೆಗೆ ಬೇಕಾದ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದಕ್ಕಿಂತ ಅಧಿಕಾರದಲ್ಲಿರುವವರು ಮನಸ್ಸು ಮಾಡದೇ ಇರುವುದು ಕಂಡುಬರುತ್ತದೆ.

ಈ ಶಾಲಾ ಆವರಣದ ಸುತ್ತಲೂ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ ಆದರೆ ಆವರಣದಲ್ಲಿನ ನೀರನ್ನು ಹೊರ ಹಾಕುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡದೇ ಇರುವುದರಿಂದ ಒಂದರಿಂದ ಒಂದುವರೆ ಅಡಿ ನೀರು ನಿಲುವಮೂಲಕ ಅನೇಕ ಸಮಸ್ಯೆಗಳನ್ನುಂಟು ಮಾಡುತ್ತಿದೆ.

ಈ ಸಮಸ್ಯೆ ಇಂದು ನಿನ್ನೆಯದಲ್ಲ ಇದು ಅನೇಕ ವರ್ಷಗಳಿಂದ ಇದೆ ಎನ್ನುತ್ತಾರೆ ಈ ಭಾಗದ ಸಾರ್ವಜನಿಕರು. ಮಳೆ ಬಂದಿತೆಂದರೆ ಆವರಣದಲ್ಲಿ ನೀರು ನಿಲ್ಲುತ್ತದೆ. ಅಧಿಕ ಮಳೆ ಬಂದಿತೆಂದರೆ ವರಗಂಟಲೇ ನೀರು ನಿಲ್ಲುತ್ತದೆ. ಇದರಿಂದ ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂಗನವಾಡಿ ಇಂದ ಪಿಯು ವರೆಗಿನ 1250 ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂಧಿಗಳಿಗೂ ತೊಂದರೆ ತಪ್ಪಿದ್ದಲ್ಲ. ಹಿಂದೆ ಈ ಶಾಲೆಯನ್ನು ಕೆರೆಯ ಅಂಗಳದಲ್ಲಿ ನಿರ್ಮಿಸಲಾಗಿದೆ ಇದರಿಂದ ಈ ಶಾಲೆ ಆವರಣಕ್ಕೆ ಸುತ್ತಲಿನ ಪ್ರದೇಶದ ನೀರು ಹರಿದು ಬರುತ್ತಿದೆ ಹಾಗೂ ಆರಣದಲ್ಲಿನ ಮಧ್ಯ ಬಾಗ ಇಂದಿಗೂ ತಗ್ಗಾಗಿರುವುದರಿಂದ ಆವರಣಕ್ಕೆ ಬಂದ ನೀರು ಶಾಲೆಗೆ ಹೊಂದಿಕೊಂಡಿರುವ ರಾಜ ಕಾಲುವೆ ಸೇರುವುದಕ್ಕೆ ಮಾರ್ಗವಿಲ್ಲದಂತಾಗಿರುವುದು ಮುಖ್ಯಕಾರಣವಾಗಿದೆ.



> ಮಳೆ ನೀರು ನಿಲ್ಲದಂತೆ ಮಾಡುವುದಕ್ಕೆ ಮೊರಂ ಹಾಕುವ ವ್ಯವಸ್ಥೆಯನ್ನು ಮಾಡಬೇಕಿದೆ. ಇದಕ್ಕಾಗಿ ಶಾಲೆಯ ಹಳೇ ವಿದ್ಯಾರ್ಥಿಗಳನ್ನು ಮತ್ತು ದಾನಿಗಳನ್ನು ಹುಡುಕಲಾಗುವುದು.
> ■ ಸೋಮಶೇಖರ ಹೊಕ್ರಾಣಿ, ಪ್ರಾಚಾರ್ಯ

ಜಮೀನು ವಿವಾದ: ಯುವಕನ ಮೇಲೆ ಮಾರಣಾಂತಿಕ ಹಲ್ಲೆ

ಸಿಂಧನೂರು: ತಾಲೂಕಿನ ರಾಗಲಪರ್ವಿ ಗ್ರಾಮದಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಹತ್ತು ಜನರ ಗುಂಪೊಂದು ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ನಡೆದಿದೆ.

ಜೀವ ಭಯದಲ್ಲಿರುವ ಸಂತ್ರಸ್ತ ಶರಣಬಸವ ಬೆಳ್ಳಿಗನೂರು ತಮಗೆ ಮತ್ತು ತಮ್ಮ ಕುಟುಂಬಕ್ಕೆ ಸೂಕ್ತ ರಕ್ಷಣೆ ಒದಗಿಸುವಂತೆ ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದಾರೆ. ಶರಣಬಸವ ಅವರು ಸ.ನಂ:111/★/1, ವಿಸ್ತೀರ್ಣ: 3 ಎಕರೆ 23 ಗುಂಟೆ ಜಮೀನಿಗೆ ಹೋದ ಸಂದರ್ಭದಲ್ಲಿ ಸಂಬಂಧಿಕರಾದ ಯಂಕಪ್ಪ,ಅಮರೇಶ ಮತ್ತು ಇತರರು ಅಕ್ರಮವಾಗಿ ಜಮೀನಿಗೆ ಪ್ರವೇಶಿಸಿ,ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಕಣ್ಣಿಗೆ ಖಾರದ ಪುಡಿ ಎರಚಿ ಕಲ್ಲುಗಳಿಂದ ಹಲ್ಲೆ ನಡೆಸಿದ್ದಾರೆ. ಈ ದಾಳಿಯಲ್ಲಿ ಶರಣಬಸವ ಅವರ ತಲೆಗೆ ಗಂಭೀರ ಗಾಯವಾಗಿದ್ದು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳದಲ್ಲಿದ್ದ ಮಲ್ಲಯ್ಯ ಮತ್ತು ಗಂಗಾಧರ ಎಂಬುವರು ಮಧ್ಯಪ್ರವೇಶಿಸಿ ದೂರುದಾರರನ್ನು ರಕ್ಷಿಸಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ಬಾಕಿಯಿದ್ದರೂ ಎದುರಾಳಿಗಳು ನಿನ್ನ ಹೊಲದಲ್ಲಿ ಬೆಳೆ ಬೆಳೆಯಲು ಬಿಡುವುದಿಲ್ಲ ಮತ್ತೆ ಈ ಕಡೆ ಬಂದರೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂದು ಶರಣಬಸವ ಬೆಳ್ಳಿಗನೂರು ಆರೋಪಿಸಿದ್ದಾರೆ. ಈ ಕುರಿತು ಮಸ್ಕಿ ತಾಲೂಕಿನ ಬಳಗನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ ಸಬ್ ಇನ್‌ಸ್ಪೆಕ್ಟರ್ ಅವರು ಆರೋಪಿಗಳನ್ನು ಇದುವರೆಗೆ ಬಂಧಿಸಿಲ್ಲ ಎಂದು ಶರಣಬಸವ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇನ್ನೂ ಆರೋಪಿಗಳು ನನಗೆ ನಿರಂತರವಾಗಿ ಕೊಲೆ ಬೆದರಿಕೆ ಹಾಕುತ್ತಿದ್ದಾರೆ. ಸದ್ಯ ನಾನು ಭಯದ ನೆರಳಿನಲ್ಲಿ ಜೀವನ ಕಳೆಯುತ್ತಿದ್ದೇನೆ. ಆದ್ದರಿಂದ ಈ ಕೂಡಲೇ ಆರೋಪಿಗಳನ್ನು ಬಂಧಿಸಿ, ನನಗೆ ಹಾಗೂ ನನ್ನ ಕುಟುಂಬಕ್ಕೆ ಪೊಲೀಸ್ ಇಲಾಖೆ ರಕ್ಷಣೆ ನೀಡಬೇಕೆಂದು ಶರಣಬಸವ ಅವರು ಎಸ್ಪಿ ಅರುಣಾಂಗ್ಶು ಗಿರಿ ಅವರಿಗೆ ಮನವಿ ಮಾಡಿದ್ದಾರೆ.




ಕಾಲ್ಪನಿಕ ವಾರ್ಷಿಕ ವೇತನ ಬಡ್ತಿ ಮಂಜೂರಿಗೆ ಆದೇಶ

ಬೆಂಗಳೂರು: ವಾರ್ಷಿಕ ವೇತನ ಬಡ್ತಿಯನ್ನು ಗಳಿಸಿದ ದಿನಾಂಕದಂದು ವಯೋನಿವೃತ್ತಿ ಅಥವಾ ಸ್ವಯಂ ನಿವೃತ್ತಿ ಹೊಂದುವ ರಾಜ್ಯ ಸರ್ಕಾರಿ ನೌಕರರಿಗೆ ಅವರ ಮಾಸಿಕ ಪಿಂಚಣಿ ನಿಗದಿಪಡಿಸುವ ಉದ್ದೇಶಕ್ಕಾಗಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಕಾಲ್ಪನಿಕವಾಗಿ ಮಂಜೂರು ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕಾಲ್ಪನಿಕ ವಾರ್ಷಿಕ ವೇತನ ಬಡ್ತಿಯನ್ನು ನೌಕರರು ಕೊನೆಯದಾಗಿ ಪಡೆದ ವೇತನಕ್ಕೆ ಸೇರಿಸಿ ಕೇವಲ ಮಾಸಿಕ ಪಿಂಚಣಿ ಲೆಕ್ಕಾಚಾರದ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಲಾಗುತ್ತದೆ. ಆದರೆ ನಿವೃತ್ತಿ ಉಪಧನ, ಪರಿವರ್ತಿತ ಪಿಂಚಣಿ, ಗಳಿಕೆ ರಜೆ ನಗದೀಕರಣ ಸೇರಿದಂತೆ ಇತರೆ ಯಾವುದೇ ನಿವೃತ್ತಿ ಅಥವಾ ಸೇವಾಂತ್ಯ ಸೌಲಭ್ಯಗಳ ಲೆಕ್ಕಾಚಾರಕ್ಕೆ ಇದನ್ನು ಪರಿಗಣಿಸುವುದಿಲ್ಲ. ಅಂತಹ ಸೌಲಭ್ಯಗಳನ್ನು ನೌಕರರು ವಾಸ್ತವವಾಗಿ ಪಡೆದ ಅಂತಿಮ ವೇತನದ ಆಧಾರದ ಮೇಲೆಯೇ ಲೆಕ್ಕ ಹಾಕಲಾಗುತ್ತದೆ ಎಂದು ಆರ್ಥಿಕ ಇಲಾಖೆ ಉಪ ಕಾರ್ಯದರ್ಶಿ ಎನ್. ವನಿತಾ ತಿಳಿಸಿದ್ದಾರೆ.

ನೌಕರರ ಸಂಘದಿಂದ ಸ್ವಾಗತ

ರಾಜ್ಯ ಸರ್ಕಾರದ ಈ ನಿರ್ಧಾರವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸ್ವಾಗತಿಸಿದ್ದು, ವಾರ್ಷಿಕ ವೇತನ ಬಡ್ತಿ ಪ್ರಾಪ್ತವಾಗುವ ದಿನಾಂಕದಂದು ನಿವೃತ್ತಿಯಾಗುವ ನೌಕರರಿಗೆ ಕಾಲ್ಪನಿಕ ವೇತನ ಬಡ್ತಿ ಮಂಜೂರು ಮಾಡುವಂತೆ ಸಂಘವು ಸಲ್ಲಿಸಿದ್ದ ಮನವಿಗೆ ಸರ್ಕಾರ ಸ್ಪಂದಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದೆ. ಸಂಘವು ಈ ಸಂಬಂಧ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದು, ವಿಷಯದ ಕುರಿತು ಸಕಾರಾತ್ಮಕ ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದೆ.

ರಾಮ ಬಾಣ



ಸಚಿವರ 2ನೇ ಪಟ್ಟಿಯಲ್ಲಿ ನನ್ನ ಹೆಸರಿರಲಿದೆ: ಹ್ಯಾರಿಸ್

ಬೆಂಗಳೂರು: ನೂತನ ಸರ್ಕಾರದ ಸಚಿವರ ಎರಡನೇ ಪಟ್ಟಿಯಲ್ಲಿ ನನ್ನ ಹೆಸರಿರಲಿದೆ ಎಂದು ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಆಶಯ ವ್ಯಕ್ತಪಡಿಸಿದರು.

ಬಿಡಿಎ ಆವರಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ನಮ್ಮ ಪಕ್ಷದಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ತೀರ್ಮಾನವನ್ನು ಪ್ರತಿಯೊಬ್ಬರೂ ಪಾಲಿಸಲೇಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಥಾನ ಬಿಟ್ಟುಕೊಡುವ ವಿಚಾರ ಸೇರಿದಂತೆ ಯಾವುದೇ ವಿಷಯದಲ್ಲೂ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದರು. ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಮುನಿಯಪ್ಪ ಅವರ ಅಸಮಾಧಾನದ ಕುರಿತು ಪ್ರತಿಕ್ರಿಯಿಸಿ, ರಾಮಲಿಂಗಾರೆಡ್ಡಿ ಹಿರಿಯ ನಾಯಕರು. ಅವರಿಗೆ ನೀರಾವರಿಯಂತಹ ಪ್ರಮುಖ ಖಾತೆಯನ್ನು ನೀಡಲಾಗಿದೆ. ಅವರ ಸೀನಿಯಾರಿಟಿಗೆ ತಕ್ಕಂತೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಆದಾಗ್ಯೂ, ಬೆಂಗಳೂರು ನಗರದ ಅಭಿವೃದ್ಧಿ ಕುರಿತು ಅವರಿಗೆ ಆಸಕ್ತಿ ಇರುವುದು ತಪ್ಪೇನಲ್ಲ. ಆದರೆ, ಇಂತಹ ಆಂತರಿಕ ವಿಷಯಗಳನ್ನು ಮುಚ್ಚಿದ ಬಾಗಿಲ ಹಿಂದೆ ಚರ್ಚಿಸಿ ಮುಗಿಸಿಕೊಳ್ಳಬೇಕು ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಹೋರಾಟದ ಹಿನ್ನೆಲೆಯಿಂದ ಬಂದವರು. ಪಕ್ಷದಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಯನ್ನು ನಿವಾರಿಸುವ ಶಕ್ತಿ ಅವರಿಗಿದೆ. ಎಲ್ಲರನ್ನೂ ಸಮಾಧಾನಪಡಿಸಿ ಒಟ್ಟಿಗೆ ಕರೆದುಕೊಂಡು ಹೋಗುವ ವಿಶ್ವಾಸವಿದೆ ಎಂದರು. ಪಕ್ಷ ನನಗೆ ಇಂದು ಬಿಡಿಎ ಜವಾಬ್ದಾರಿ ನೀಡಿದೆ. ಬೆಂಗಳೂರು ನಗರಕ್ಕೆ 15 ಲಕ್ಷ ಗಿಡ ನೆಡುವಂತಹ ದೊಡ್ಡ ಕಾರ್ಯಕ್ರಮವನ್ನು ರೂಪಿಸಿ, ಅನುಷ್ಠಾನಕ್ಕೆ ತರುತ್ತಿದ್ದೇವೆ. ಬೆಂಗಳೂರಿಗೆ ನಾನೂ ಏನೋ ಕೊಡುಗೆ ನೀಡುತ್ತಿದ್ದೇನೆ ಎಂಬ ಸಂತೋಷ ನನಗಿದೆ. ಇದರ ಮುಂದೆ ಸಚಿವ ಸ್ಥಾನವೆಲ್ಲಾ ಏನೂ ಅಲ್ಲ. ಆದರೂ ಸಚಿವರ ಎರಡನೇ ಪಟ್ಟಿಯಲ್ಲಿ ನನ್ನ ಹೆಸರು ಖಂಡಿತ ಇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕರ್ನಾಟಕದಲ್ಲಿ ನವ ಯುವ ಯುಗ ಆರಂಭವಾಗಲಿದೆ – ಡಿಕೆಶಿ
– ಹಾಗಾಗಲೆಂದು ಹಾರೈಸೋಣ, ಹಾಗಾಗದಿದ್ದಲ್ಲಿ ಹೊಸ ಬಾಟ್ಲೆಯಲ್ಲಿ ಹಳೇ ಮದ್ಯ ಅಂತ ಭಾವಿಸೋಣ!

ದಿನ ಭವಿಷ್ಯ

ಮೇಷ ಆರ್ಥಿಕ ಉನ್ನತಿ. ಮನೆಯಲ್ಲಿ ಶಾಂತ ವಾತಾವರಣ. ವೃತ್ತಿ ಕ್ಷೇತ್ರದಲ್ಲಿ ಕೆಲವರು ನಿಮ್ಮ ವಿರುದ್ಧವಾಗಿ ವರ್ತಿಸುವ ಸಾಧ್ಯತೆಯಿದೆ.

ವೃಷಭ ಹೆಚ್ಚು ಹಣ ತರುವ ಯೋಜನೆಗೆ ಕೈಹಾಕುವ ಮುನ್ನ ಸರಿಯಾಗಿ ವಿವೇಚಿಸಿ. ಆತುರದ ತೀರ್ಮಾನ ಬೇಡ. ಕೌಟುಂಬಿಕ ಬಿಕ್ಕಟ್ಟು ನೆಮ್ಮದಿ ಕೆಡಿಸಬಹುದು.

ಮಿಥುನ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಿ. ಹೊಟ್ಟೆ ಕೆಡುವ ಸಾಧ್ಯತೆ ಕಾಣುತ್ತಿದೆ. ಸಂಗಾತಿ ಜತೆ ಭಿನ್ನಾಭಿಪ್ರಾಯ ಉಂಟಾಗಬಹುದು.

ಕಟಕ ಆಪ್ತರ ನಡುವೆ ಭಿನ್ನಮತ, ವಾಗ್ವಾದ ಉಂಟಾದೀತು. ಸಹನೆಯಿಂದ ವರ್ತಿಸಿ. ಆರ್ಥಿಕ ಒತ್ತಡ ಹೆಚ್ಚಲಿದೆ, ಖರ್ಚು ಅಧಿಕ.

ಸಿಂಹ ಮನೆಯಲ್ಲಿ ಅಶಾಂತಿ ಮೂಡಿದರೂ ನಿಮ್ಮ ಪ್ರಯತ್ನದಿಂದ ಸಹಜ ಸ್ಥಿತಿ ನೆಲೆಸಲಿದೆ. ಮನಸ್ಸು ಕೆಡಿಸುವ ಪ್ರಸಂಗ ಸಂಭವಿಸಬಹುದು.

ಕನ್ಯಾ ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸ ನಿರ್ವಹಿಸುವಿರಿ. ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ಸಾಧ್ಯತೆ. ವೃತ್ತಿಯಲ್ಲಿ ಹೆಚ್ಚುವರಿ ಹೊಣೆಗಾರಿಕೆ.

ತುಲಾ ಸಣ್ಣಪುಟ್ಟ ಜಗಳದಿಂದ ದೂರವಿರಿ. ಹೆಚ್ಚು ಕೆಲಸದಿಂದ ಮಾನಸಿಕ ಒತ್ತಡ. ಆರ್ಥಿಕ ಸಂಪಾದನೆ ಸುಲಭಸಾಧ್ಯ. ಖರ್ಚೂ ಹೆಚ್ಚಲಿದೆ.

ವೃಶ್ಚಿಕ ಆತ್ಮೀಯರ ಜತೆ ಕಾಲ ಕಳೆಯಿರಿ. ಅವರನ್ನು ಕಡೆಗಣಿಸಬೇಡಿ. ವೃತ್ತಿ ಚಿಂತೆಯನ್ನು ಮನೆಗೆ ತರಬೇಡಿ. ಖರ್ಚು ಹೆಚ್ಚಳದ ಚಿಂತೆ.

ಧನು ಮೇಲಧಿಕಾರಿ ಜತೆ ವಾಗ್ವಾದ ನಡೆದೀತು. ಕೋಪದಿಂದ ಪ್ರತಿಕ್ರಿಯೆ ನೀಡಬೇಡಿ. ಹಿತಶತ್ರುಗಳ ಕುರಿತು ಎಚ್ಚರಿಕೆಯಿಂದ ಇರಿ. ಧನವ್ಯಯ.

ಮಕರ ಮನೆಯಲ್ಲಿ ಶಾಂತಿಯ ವಾತಾವರಣ ಇಟ್ಟುಕೊಳ್ಳಿ. ಸಣ್ಣ ವಿಷಯಕ್ಕೆ ದುಡುಕಿ ಪ್ರತಿಕ್ರಿಯಿಸಬೇಡಿ. ವೃತ್ತಿಯಲ್ಲಿ ಒತ್ತಡ ಹೆಚ್ಚು.

ಕುಂಭ ಸರಿಯಾದ ಸಮಯಕ್ಕೆ ಕೆಲಸ ಪೂರೈಸಲು ಸಾಧ್ಯವಾಗದು. ಹಲವಾರು ಅಡ್ಡಿಗಳು. ಆತ್ಮೀಯರಿಂದ ಟೀಕೆ ಕೇಳುವಿರಿ.

ಮೀನ ನಿಮ್ಮ ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಲಿ. ಇಲ್ಲವಾದರೆ ಸಮಸ್ಯೆಗೆ ಸಿಲುಕುವಿರಿ. ನಯವಂಚಕರ ಮಾತು ನಂಬಬೇಡಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 3,0,6,2

ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ

ಪುಟ ೧➡ ಆದರೀಗ ಜಲಸಂಪನ್ಮೂಲ ಖಾತೆ ಕೊಟ್ಟಿದ್ದಾರೆ. ನಮ್ಮ ಆತ್ಮಸಾಕ್ಷಿಯಾಗಿ ಕೆಲಸ ಮಾಡಲು ಆಗಲ್ಲ. ಹೀಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದರು.

ನಾನು 53 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಪಕ್ಷ ಸಾಕಷ್ಟು ಅವಕಾಶ ನೀಡಿದೆ. 9 ಬಾರಿ ಶಾಸಕನಾಗಲು ಅವಕಾಶ ನೀಡಿದೆ. ವೀರಪ್ಪ ಮೊಯ್ಲಿ ಅವರೇ ಕರೆದು ನನಗೆ ಟಿಕೆಟ್ ನೀಡಿದ್ದರು.

ವೀರಪ್ಪ ಮೊಯ್ಲಿ, ಎಸ್.ಎಂ.ಕೃಷ್ಣ, ಧರಂಸಿಂಗ್, ಸಿದ್ದರಾಮಯ್ಯ ಸರ್ಕಾರಗಳಲ್ಲಿ ಸಚಿವನಾಗಿರುವೆ. ನಾನು ಯಾರಲ್ಲೂ ಸಚಿವ ಸ್ಥಾನ ಕೇಳಿರಲಿಲ್ಲ ಎಂದು ಹಳೆಯ ಘಟನೆಗಳನ್ನು ಸ್ಮರಿಸಿದರು.

ಸಿದ್ದರಾಮಯ್ಯ ಸರ್ಕಾರದಲ್ಲಿಯೂ ತಪ್ಪಿತ್ತು: 2023ರಲ್ಲಿ ಸಿದ್ದರಾಮಯ್ಯ ಅವರು ಕಳೆದ ಬಾರಿ ಸಚಿವ ಸ್ಥಾನ ನೀಡಿದ್ದರು. ಆವತ್ತು ಬೈರತಿ ಸುರೇಶ್ ನನಗೆ ಕರೆ ಮಾಡಿ ಕರೆದು ಸಿದ್ದರಾಮಯ್ಯ ನಿಮ್ಮ ಜತೆ ಮಾತನಾಡಬೇಕು ಎಂದು ಕರೆಸಿ ಸಭೆ ಮಾಡಿದ್ದರು. ನಿಮಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡುತ್ತೇವೆ ಎಂದು ಹೇಳಿದ್ದರು.

ನಾನೇನು ಆ ಖಾತೆಯನ್ನು ಆವತ್ತು ಕೇಳಿರಲಿಲ್ಲ. ಆದರೆ, ಬಳಿಕ ಖಾತೆ ಹಂಚಿಕೆ ವೇಳೆ ಸಾರಿಗೆ ಇಲಾಖೆ ಕೊಟ್ಟಿದ್ರು. ಆಗ ಮತ್ತೆ ಬೈರತಿ ಸುರೇಶ್ ಕರೆ ಮಾಡಿ ಸ್ವಲ್ಪ ಬದಲಾವಣೆ ಆಯಿತು ಎಂದಿದ್ದರು ಎಂದು ವಿವರಿಸಿದರು.

ನಾನು ಶಾಸಕನಾಗಿ ಮುಂದುವರಿಯುತ್ತೇನೆ. ಕಾಂಗ್ರೆಸ್ ಪಕ್ಷದಲ್ಲೇ ಇರುತ್ತೇನೆ. ಕೈಯಲ್ಲಿ ಹೋಗಿ ರಾಜೀನಾಮೆ ಕೊಟ್ಟು ಬರಲು ನನಗೆ ಇಷ್ಟ ಇಲ್ಲ. ಸಿಎಂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್‌ಗೆ ನಮ್ಮ ಕಚೇರಿ ಸಿಬ್ಬಂದಿ ರಾಜೀನಾಮೆ ಪತ್ರ ಕೊಟ್ಟು ಬರುತ್ತಾರೆ. ನಾನು ಖಾತೆಗಾಗಿ ರಾಜೀನಾಮೆ ಕೊಡುತ್ತಿಲ್ಲ.

ಯಾಕೆ ರಾಜೀನಾಮೆ ಕೊಡುತ್ತಿದ್ದೇನೆ ಎಂದು ಮಾಧ್ಯಮದ ಮುಂದೆ ಬಂದು ಹೇಳುತ್ತಿರುವೆ. ಎಸ್.ಎಂ ಕೃಷ್ಣ ಅವರು ತಮ್ಮ ಸಂಪುಟದಲ್ಲಿ ಒಂದೇ ವರ್ಷ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡಿದ್ದರು. ನಾನು ಎಲ್ಲಾ ಇಲಾಖೆಗಳಲ್ಲಿ ಚೆನ್ನಾಗಿ ಕೆಲಸ ಮಾಡಿದ್ದೇನೆ ಎಂದರು.

ರಾಮಲಿಂಗಾರೆಡ್ಡಿ ಮನವೊಲಿಸುವೆ: ಸಿಎಂ

ಬೆಂಗಳೂರು: ರಾಮಲಿಂಗಾ ರೆಡ್ಡಿ ಅವರು ಕಾಂಗ್ರೆಸ್‌ನ ಪ್ರಮುಖ ನಾಯಕರು



ಹಾಗೂ ನನಗೆ ಬಹಳ ಆತ್ಮೀಯರಾಗಿದ್ದು, ಅವರೊಂದಿಗೆ ನಾನು ಮಾತನಾಡುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಶುಕ್ರವಾರ ವಿಧಾನಸೌಧದಲ್ಲಿ ಮಾತನಾಡಿದ ಅವರು, ಈ ಹಿಂದೆ ನಾನು ಹಾಗೂ ನನ್ನ ಸಹೋದರ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿದ್ದು ನಿಜ, ನಾನು ಸಿಎಂ ಆದರೆ ನಿಮಗೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡುತ್ತೇವೆ ಎಂದು ಹೇಳಿದ್ದೂ ನಿಜ. ಆದರೆ, ಖಾತೆ ಹಂಚಿಕೆ ನನ್ನ ಕೈಯಲ್ಲಿ ಇಲ್ಲ. ಹೈಕಮಾಂಡ್ ಖಾತೆ ಹಂಚಿಕೆ ಬಗ್ಗೆ ನಿರ್ಧಾರ ಕೈಗೊಂಡಿದೆ. ಆದರೂ ನಾನು ರಾಮಲಿಂಗಾರೆಡ್ಡಿ ಅವರ ಮನವೊಲಿಸುತ್ತೇನೆ ಎಂದರು. ರಾಮಲಿಂಗಾರೆಡ್ಡಿ ಅವರ ಸಂಪರ್ಕಕ್ಕೆ ಪ್ರಯತ್ನಿಸುತ್ತಿದ್ದೇವೆ. ಆದರೆ, ಅವರು ಬೆಂಗಳೂರಿನಲ್ಲಿಲ್ಲ. ಹೀಗಾಗಿ ಬೆಂಗಳೂರಿಗೆ ಆಗಮಿಸಿದ ನಂತರ ಅವರ ಜತೆ ಮಾತನಾಡುತ್ತೇನೆ ಎಂದು ಶಿವಕುಮಾರ್ ತಿಳಿಸಿದರು.

ಮುನಿದು ತಣ್ಣಗಾದ ಸಚಿವ ಕೆ.ಎಚ್.ಮುನಿಯಪ್ಪ

ದೇವನಹಳ್ಳಿ: ಖಾತೆ ಹಂಚಿಕೆ ಕುರಿತು ಹಿರಿಯ ನಾಯಕ, ಸಚಿವ ಕೆ.ಎಚ್. ಮುನಿಯಪ್ಪ ಅವರ ಅಸಮಾಧಾನವನ್ನು ತಣಿಸುವಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಯಶಸ್ವಿಯಾಗಿದ್ದಾರೆ. ದಿಲ್ಲಿಗೆ ವಾಪಸ್ ತೆರಳುವ ಮುಂಚೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಚಿವ ಮುನಿಯಪ್ಪ ಅವರ ಜತೆಗೆ ಚರ್ಚಿಸಿದ ರಾಹುಲ್ ಗಾಂಧಿ ಅವರು, ಮುಂದಿನ ದಿನಗಳಲ್ಲಿ ತಮಗೆ ಖಾತೆ ಹಂಚಿಕೆಯಲ್ಲಿ ಪ್ರಾಧಾನ್ಯತೆ ನೀಡುತ್ತೇವೆ. ಈಗ ನೀಡಿರುವ ಖಾತೆಯನ್ನು ಚೆನ್ನಾಗಿ ನಿಭಾಯಿಸಿದ್ದೀರಿ, ಮುಂದೆಯೂ ಚೆನ್ನಾಗಿ ನಿಭಾಯಿಸುತ್ತೀರಿ ಎನ್ನುವ ಭರವಸೆ ಇದೆ. ಖಾತೆ ಬದಲಾವಣೆ ಕುರಿತಂತೆ ಮುಖ್ಯಮಂತ್ರಿಗಳ ಜತೆಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ ಎಂದು ತಿಳಿಸಿದ್ದು, ಇದಕ್ಕೆ ಮುನಿಯಪ್ಪ ಕೂಡ ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಇದಕ್ಕೂ ಮುಂಚೆ ದೇವನಹಳ್ಳಿಯಲ್ಲಿ ಮಾತನಾಡಿದ್ದ ಅವರು, ಸುಮಾರು 50 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ ನಾನು. ಖಾತೆಗಳ ಹಂಚಿಕೆಯಲ್ಲಿ ಹಿರಿತನ ಕಾಪಾಡಬೇಕು. ಶಾಸಕರಲ್ಲಿ ಆರ್.ವಿ. ದೇಶಪಾಂಡೆ, ರಾಮಲಿಂಗಾರೆಡ್ಡಿ ಹಾಗೂ ನಾನು ಹೆಚ್ಚು ಬಾರಿ ಗೆದ್ದಿದ್ದೇವೆ. ಹಿರಿತನದ ಆಧಾರದ ಮೇಲೆ ಸಮಾಜಕ್ಕೆ ಉಪಯೋಗವಾಗುವ ಖಾತೆಗಳನ್ನು ಹಂಚಿಕೆ ಆಗಬೇಕಿತ್ತು ಎಂದರು.



ರಾಮಲಿಂಗಾರೆಡ್ಡಿ ರಾಜೀನಾಮೆ ವಿಚಾರ ನನಗೆ ಸಂಬಂಧಿಸಿದ್ದಲ್ಲ. ಅದನ್ನು ನೋಡಿಕೊಳ್ಳಲು ಸಿಎಂ ಇದ್ದಾರೆ. ಅವರೇ ರಾಜೀನಾಮೆ ಸಮಸ್ಯೆ ಬಗೆಹರಿಸುತ್ತಾರೆ.
■ **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



ಬೆಂ. ನಗರಾಭಿವೃದ್ಧಿ ನಿಮಗೆ ಕೊಡುತ್ತೇನೆ ಅಂದಿದ್ದರು. ಆದರೀಗ ಜಲಸಂಪನ್ಮೂಲ ಖಾತೆ ಕೊಟ್ಟಿದ್ದಾರೆ. ನಮ್ಮ ಆತ್ಮಸಾಕ್ಷಿಯಾಗಿ ಕೆಲಸ ಮಾಡಲು ಆಗಲ್ಲ. ಹೀಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ.
■ **ರಾಮಲಿಂಗಾರೆಡ್ಡಿ,** ಸಚಿವ

ಖಾತೆ ಹಂಚಿಕೆ ವಿಚಾರವನ್ನು ಹಾಗೂ ಹಂಚಿಕೆಯಲ್ಲಿ ನನಗಾಗಿರುವ ಅನ್ಯಾಯವನ್ನು ರಾಹುಲ್ ಗಾಂಧಿ ಅವರ ಗಮನಕ್ಕೆ ತಂದಿದ್ದೇನೆ. ಸಿಎಂ ಜತೆ ಚರ್ಚಿಸಿ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ. ನನಗೆ ರಾಹುಲ್ ಗಾಂಧಿ ಅವರ ಜತೆಗಿನ ಮಾತುಕತೆ ತೃಪ್ತಿ ತಂದಿದೆ.
■ **ಕೆ.ಎಚ್.ಮುನಿಯಪ್ಪ,** ಸಚಿವ

ಪಕ್ಷದ ಹಿತದೃಷ್ಟಿಯಿಂದ ತಮ್ಮ ರಾಜೀನಾಮೆ ನಿರ್ಧಾರವನ್ನು ಪುನರ್ ಪರಿಶೀಲಿಸಲು ಸ್ನೇಹಿತರಾದ ರಾಮಲಿಂಗಾರೆಡ್ಡಿ ಅವರನ್ನು ವಿನಂತಿಸುತ್ತೇನೆ. ಅವರ ರಾಜೀನಾಮೆಯು ಒಂದು ಎಚ್ಚರಿಕೆ ಗಂಟೆಯಾಗಿದೆ. ಈ ವಿಷಯವನ್ನು ನ್ಯಾಯಯುತ ವಾಗಿ ಬಗೆಹರಿಸಲು ಎಲ್ಲ ಸಂಬಂಧಿತ ನಾಯಕರು ತಕ್ಷಣ ಗಂಭೀರವಾಗಿ ಪರಿಗಣಿಸಬೇಕೆಂದು ಬಯಸುವೆ.
■ **ಎಚ್.ಕೆ.ಪಾಟೀಲ,** ಶಾಸಕ

ದಿಲ್ಲಿ ಡಿಜಿಪಿ ಪತ್ನಿ ಕಾಡಾನೆ ದಾಳಿಗೆ ಬಲಿ

ಪುಟ ೧➡ ಶುಕ್ರವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ನೋಡಲೆಂದು ತೆರಳಿದ್ದ ವೇಳೆ ಕಾಡಾನೆ ಅವರ ಮೇಲೆ ದಾಳಿ ಮಾಡಿದೆ.

ಈ ವೇಳೆ ಗಂಭೀರವಾಗಿ ಗಾಯಗೊಂಡ ಅವರನ್ನು ಗೋಣಿಕೊಪ್ಪದ ಲೋಪಮುದ್ರಾ ಆಸ್ಪತ್ರೆಗೆ ಸಾಗಿಸ ಲಾಯಿತಾದರೂ, ಆ ವೇಳೆಗಾಗಲೇ ಅವರು ಸಾವಿಗೀಡಾಗಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ತೋಟದ ಕೆಲಸದಲ್ಲಿ ನಿರತರಾಗಿದ್ದ ತಿತಿಮತಿಯ ಇಬ್ಬರು ಕಾರ್ಮಿಕರು ಕೂಡ ಕಾಡಾನೆಯಿಂದ ತಪ್ಪಿಸಿಕೊಳ್ಳಲು ಯತ್ನಿಸುವಾಗ ಗಾಯಗೊಂಡಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿರುವುದಾಗಿ ಹೇಳಲಾಗಿದೆ.

ಸಿಎಂ ಸಂತಾಪ

ಬೆಂಗಳೂರು: ಕಾಡಾನೆ ದಾಳಿಗೆ ಬಲಿಯಾಗಿರುವ ಐಪಿಎಸ್ ಅಧಿಕಾರಿ ಪತ್ನಿ ಸಂಧ್ಯಾ ಅಚ್ಚಯ್ಯ ಸಾವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಆನೆ ದಾಳಿಗೆ ಬಲಿಯಾಗಿರುವ ಸಂಧ್ಯಾ ಅಚ್ಚಯ್ಯ ಅವರ ನಿಧನ ತೀವ್ರ ದಿಗ್ಭ್ರಮೆ ಮೂಡಿಸಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬಸ್ಥರಿಗೆ ಹಾಗೂ ಅವರ ಆಪ್ತರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಸಂತಾಪ ಸೂಚಿಸಿದ್ದಾರೆ. ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಅರಣ್ಯ ಇಲಾಖೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ. ಅಲ್ಲದೇ, ಆನೆ ಮತ್ತು ಮಾನವನ ಸಂಘರ್ಷಕ್ಕೆ ತಡೆಹಾಕಲು ಕೂಡಲೇ ಕಾರ್ಯಪ್ರವೃತ್ತರಾಗಬೇಕು, ಅರಣ್ಯ ಇಲಾಖೆಗೆ ಸೂಚಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ನಾಮಪತ್ರ ಸಲ್ಲಿಕೆ

ಪುಟ ೧➡ ಈ ಬಾರಿ ರಾಜ್ಯಸಭಾ ಚುನಾವಣೆಗೆ ತಮ್ಮನ್ನು ಎಲ್ಲಾ ಕಾಂಗ್ರೆಸ್ ಶಾಸಕರು ಹಾಗೂ ನಾಯಕರು ಒಗ್ಗಟ್ಟಿನಿಂದ ಆಯ್ಕೆ ಮಾಡಿದ್ದಾರೆ. ನನ್ನ ಮೇಲಿರುವ ವಿಶ್ವಾಸಕ್ಕೆ ಧನ್ಯವಾದ ತಿಳಿಸುತ್ತೇನೆಂದರು. ಜೂ.18ರಂದು ರಾಜ್ಯಸಭಾ ಚುನಾವಣೆ ಇದೆ. ಅವತ್ತು ಎಲ್ಲರೂ ಒಗ್ಗಟ್ಟಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಾರೆಂಬ ವಿಶ್ವಾಸವಿದೆ. ಪಕ್ಷದ ಶಾಸಕರು ಹಾಗೂ ಬೆಂಬಲಿಗರು ಒಟ್ಟಾಗಿ ಕಾರ್ಯನಿರ್ವಹಿಸಿದರೆ ಗೆಲುವು ಖಚಿತ ಎಂದು ಹೇಳಿದರು.

ರಾಜ್ಯದ ನಾಲ್ಕು ಸ್ಥಾನಗಳಿಗೆ ಚುನಾವಣೆ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಬಿಜೆಪಿಯ ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರ ಅವಧಿ ಜೂ.25ಕ್ಕೆ ಮುಕ್ತಾಯವಾಗಲಿದೆ. ಕರ್ನಾಟಕದಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಡೆಯಲಿದೆ. ವಿಧಾನಸಭೆಯಲ್ಲಿ ಈಗಿರುವ ಸದಸ್ಯರ ಬಲದಲ್ಲಿ ಕಾಂಗ್ರೆಸ್ 3 ಹಾಗೂ ಪ್ರತಿಪಕ್ಷ ಬಿಜೆಪಿ ಒಂದು ಸ್ಥಾನ ಗೆಲ್ಲಬಹುದಾಗಿದೆ. ಕಾಂಗ್ರೆಸ್‌ನಿಂದ ರಾಜ್ಯಸಭೆಯ ಮೂರು ಸ್ಥಾನಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಕ್ತಾರ ಪವನ್ ಖೇರಾ ಮತ್ತು ಮನ್ಸೂರ್ ಅಲಿಖಾನ್ ಅವರ ಹೆಸರುಗಳನ್ನು ಕಾಂಗ್ರೆಸ್ ಅಂತಿಮಗೊಳಿಸಿತ್ತು. ನಾಮಪತ್ರ ಸಲ್ಲಿಸಲು ಜೂ.8 ಕೊನೆ ದಿನವಾಗಿದ್ದು, ನಾಮಪತ್ರಗಳ ಪರಿಶೀಲನೆ ಜೂ.9ರಂದು ನಡೆಯಲಿದೆ. ನಾಮಪತ್ರ ಹಿಂಪಡೆಯಲು ಜೂ.10 ಕೊನೆ ದಿನವಾಗಿದೆ. ಮತದಾನ ನಡೆದ ಜೂ.18 ಹಾಗೂ ಅದೇ ದಿನ ಸಂಜೆ 5 ಗಂಟೆಗೆ ಮತ ಎಣಿಕೆಯೂ ನಡೆಯಲಿದೆ.



ರಾಜ್ಯದಲ್ಲೂ ಮಿಯಾವಾಕಿ ಕಾಡು

ಪುಟ ೧➡ ವಿಜಯನಗರದ ಗತ ವೈಭವವನ್ನು ಮರುಕಳಿಸುವಂತೆ ಮಾಡಲು ಮತ್ತೆ ಈ ಭಾಗದಲ್ಲಿ ಹಸಿರೀಕರಣಕ್ಕೆ ಹಿರಿ-ಕಿರಿಯರೆಲ್ಲರೂ ಕೈಜೋಡಿಸಬೇಕು ಎಂದು ಕರೆನೀಡಿದರು. ಕೂಡ್ಲಿಗಿ ತಾಲೂಕಿನಲ್ಲಿ ಜಲಮೂಲ ವೃದ್ಧಿಸಲು ಮತ್ತು ಅಂತರ್ಜಲ ಮಟ್ಟ ಹೆಚ್ಚಿಸಲು ಕೆರೆಗಳನ್ನು ಅಭಿವೃದ್ಧಿಪಡಿಸುವ ಜಲಸಂರಕ್ಷಣಾ ಕಾರ್ಯ ಕೈಗೊಳ್ಳಲಾಗಿದೆ. ಇದರಿಂದ ಪ್ರೇರಿತರಾದ ಸ್ಥಳೀಯ ರೈತರೊಬ್ಬರು ತಮ್ಮ ಸ್ವಂತ ಜಮೀನನ್ನು ಈ ಹಸಿರು ಯೋಜನೆಯೊಂದಿಗೆ ಜೋಡಿಸಲು ಮುಂದೆ ಬಂದಿರುವುದು ಶ್ಲಾಘನೀಯ.

ಹಿಂದೆ ಗುಜರಾತ್‌ನ ಕಚ್ ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ಭೂಕಂಪದ ದುರಂತದಲ್ಲಿ ಮಡಿದ ಅಮಾಯಕ ಮಕ್ಕಳ ನೆನಪಿಗಾಗಿ ಡಾ.ನಾಯರ್ ಅವರು ಭಾರತದ ಕಚ್ ಪ್ರದೇಶದಲ್ಲಿ ಅತ್ಯಂತ ದೊಡ್ಡದಾದ ಮಿಯಾವಾಕಿ ಮಾದರಿಯ ದಟ್ಟ ಅರಣ್ಯ ನಿರ್ಮಿಸಿರುವುದು ಶ್ಲಾಘನೀಯ. ಅದೇ ಮಾದರಿಯಲ್ಲಿ ಚಿಕ್ಕಜೋಗಿಹಳ್ಳಿಯಲ್ಲೂ ಸ್ಥಳೀಯ ಹವಾಮಾನಕ್ಕೆ ಹೊಂದುವ ವೈವಿಧ್ಯಮಯ ಸಸಿಗಳನ್ನು ವೈಜ್ಞಾನಿಕ ಪದ್ಧತಿಯಲ್ಲಿ ನೆಡಲಾಗುತ್ತಿದೆ. ಇದು ಅತ್ಯಂತ ಕಡಿಮೆ ಅವಧಿಯಲ್ಲಿ ದಟ್ಟ ಅರಣ್ಯವಾಗಿ ಪರಿವರ್ತನೆಗೊಳ್ಳಲಿದ್ದು, ಮುಂದಿನ 50 ವರ್ಷಗಳ ಕಾಲ ಈ ಭಾಗದ ತಾಯಂದಿರ ನೆನಪನ್ನು ಜೀವಂತವಾಗಿರಿಸಲಿದೆ. ಆದ್ದರಿಂದ ಗಿಡ ನೆಟ್ಟ ಪ್ರತಿ ಮಗುವಿನ ಹೆಸರನ್ನು ಕಲ್ಲಿನ ಫಲಕದ ಮೇಲೆ ಕೆತ್ತಿ ಆಯಾ ಗಿಡದ ಪಕ್ಕದಲ್ಲಿ ಅಳವಡಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದರು.

ಪರಸರ ಪ್ರೇಮಿ ಆರ್.ಕೆ.ನಾಯರ್ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದ ಅಮ್ಮನಿಗಾಗಿ ಒಂದು ಗಿಡ ಯೋಜನೆ ಅಡಿಯಲ್ಲಿ ಭಾರತ ವನದ ವರ್ಟಿಕಲ್ ಆರ್ಗಾನಿಕ್ ಹಾರ್ಟಿಕಲ್ಚರ್ (ಸಾವಯವ ತೋಟಗಾರಿಕೆ) ಯೋಜನೆಯ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಯೋಜನೆಯ ಮೊದಲ ಹಂತದಲ್ಲಿ 40 ಎಕರೆ ಜಾಗದಲ್ಲಿ ಈ ವರ್ಷ 50 ಸಾವಿರ ಹಾಗೂ ಮುಂದಿನ ವರ್ಷ 50 ಸಾವಿರ ಸೇರಿದಂತೆ ಒಟ್ಟು 1 ಲಕ್ಷ ಸಸಿ ನೆಡಲಾಗುವುದು. ಯೋಜನೆಗೆ ಸಿಎಸ್‌ಆರ್ ನಿಧಿಯಿಂದ ಸುಮಾರು 3 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದ್ದು, 5 ವರ್ಷಗಳ ನಿರ್ವಹಣೆಯ ವೆಚ್ಚವೂ ಸೇರಿದೆ. ಇದಕ್ಕೆ ರೈತರು, ಸರ್ಕಾರ ಹಾಗೂ ಇತರೆ ಸಂಸ್ಥೆಗಳಿಂದ ಒಂದೇ ಒಂದು ರೂಪಾಯಿ ಕೂಡ ಪಡೆಯುತ್ತಿಲ್ಲ. ರೈತರು ತಮ್ಮ ಜಮೀನನ್ನು ತೋಟಗಾರಿಕೆ ಇಲಾಖೆಯ ಮೂಲಕ ಯೋಜನೆಗೆ ಒಳಪಡಿಸಿ, ತನು-ಮನದಿಂದ ಗಿಡಗಳನ್ನು ಪೋಷಿಸಬೇಕು. 3ನೇ ವರ್ಷದಿಂದಲೇ ರೈತರಿಗೆ ಆದಾಯ ಬರಲಿದೆ ಎಂದು ಯೋಜನೆಯನ್ನು ವಿವರಿಸಿದರು.

ವಿಜಯನಗರ ಜಿಲ್ಲೆ ಬದ್ಧತೆ ಕೊಂಡಾಡಿದ ಸಚಿವೆ

ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ಅನಿರುದ್ಧ ಶ್ರವಣ್ ಅವರ ವಿಜಯನಗರದ ಅಭಿವೃದ್ಧಿ ಪರ ಬದ್ಧತೆಯನ್ನು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮುಕ್ತ ಕಂಠದಿಂದ ಕೊಂಡಾಡಿದರು. ಅನಿರುದ್ಧ ಶ್ರವಣ್ ಅವರ ಒತ್ತಾಸೆಯಿಂದಲೇ ಜಿಲ್ಲೆಯಲ್ಲಿ ಹುಣಸೆ ಸಂಸ್ಕರಣಾ ಘಟಕ ಸ್ಥಾಪನೆ, ಕೆರೆಗಳ ಪುನಶ್ಚೇತನ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಅದಕ್ಕೆ ಈಗಿನ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಅವರ ಸಹಕಾರವಿದೆ. ಜಿಲ್ಲಾಡಳಿತ ಮತ್ತು ಸರ್ಕಾರ ಒಟ್ಟಾಗಿ ಪ್ರಯತ್ನಿಸಿದರೆ, ಈ ಭಾಗ ನಿಶ್ಚಿತವಾಗಿ ಮತ್ತೆ ಸಮೃದ್ಧ ನಾಡು ಆಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಹಸಿರು ಅಭಿವೃದ್ಧಿಯತ್ತ ಹೆಜ್ಜೆ

ಪುಟ ೧➡ ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಗುಜರಾತ್ ಪ್ರಮುಖ ಪಾತ್ರ ವಹಿಸುತ್ತಿದ್ದು, ದೇಶದ ಒಟ್ಟು 250 ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಸುಮಾರು 50 ಗಿಗಾವ್ಯಾಟ್ ಗುಜರಾತ್‌ನ ಕೊಡುಗೆಯಾಗಿದೆ ಎಂದರು. ಸೂರತ್ ನಗರವು ಕೈಗಾರಿಕಾ ಅಭಿವೃದ್ಧಿ, ಪರಿಸರ ಸಂರಕ್ಷಣೆ ಸಮತೋಲನಗೊಳಿಸಿರುವ ಉತ್ತಮ ಉದಾಹರಣೆಯಾಗಿದೆ ಎಂದು ಶ್ಲಾಘಿಸಿದರು.

ಭಾರತದಲ್ಲಿ ₹3 ಲಕ್ಷ ಕೋಟಿ ಹೂಡಿಕೆ: ಏರ್‌ಟ್ರಂಕ್ ಘೋಷಣೆ

ಪುಟ ೧➡ ಭಾರತದ ಡಿಜಿಟಲ್ ಮೂಲಸೌಕರ್ಯ ಕ್ಷೇತ್ರದಲ್ಲಿ ಇದು ಅತಿದೊಡ್ಡ ಹೂಡಿಕೆಗಳಲ್ಲಿ ಒಂದಾಗಿದ್ದು, ದೇಶವನ್ನು ಕ್ಲೌಡ್ ಕಂಪ್ಯೂಟಿಂಗ್ ಹಾಗೂ ಎಐ ಕ್ಷೇತ್ರದ ಜಾಗತಿಕ ಕೇಂದ್ರವನ್ನಾಗಿ ರೂಪಿಸಲು ನೆರವಾಗಲಿದೆ ಎಂದು ಮೋದಿ ಹೇಳಿದರು.

ಜನಾಕ್ರೋಶ ಹಿನ್ನೆಲೆ ಕರ್ನಾಟಕದಲ್ಲಿ ಸಿಎಂ ಬದಲಾವಣೆ: ಕಾಂಗ್ರೆಸ್ ಅಧಿಕಾರದಲ್ಲಿರುವ ಎಲ್ಲೆಡೆ ಜನರು ಅಸಂತುಷ್ಟರಾಗಿದ್ದಾರೆ. ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರದ ವಿರುದ್ಧವೂ ಅಪಾರ ಜನಾಕ್ರೋಶವಿದೆ, ಅದಕ್ಕಾಗಿಯೇ ಪಕ್ಷವು ತನ್ನ ಮುಖ್ಯಮಂತ್ರಿಯನ್ನು ಬದಲಾಯಿಸಬೇಕಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ದೇಶದಲ್ಲಿ ಅರಾಜಕತೆ, ಅನಿಶ್ಚಿತತೆ ಮತ್ತು ನಿರಾಶೆಯ ರಾಜಕಾರಣಕ್ಕೆ ಜನರು ಬೆಂಬಲ ನೀಡುವುದಿಲ್ಲ ಎಂದ ಪ್ರಧಾನಿ ಮೋದಿ, ಕಳೆದ 12 ವರ್ಷಗಳಿಂದ ಕಾಂಗ್ರೆಸ್ ಗೊಂದಲ ಸೃಷ್ಟಿಸುವ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಜನರು ನಿರಂತರ ಬೆಂಬಲ ನೀಡುತ್ತಿದ್ದಾರೆ ಎಂದು ಹೇಳಿದ ಮೋದಿ, ವಿವಿಧ ರಾಜ್ಯಗಳು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶಗಳು ಇದಕ್ಕೆ ಸಾಕ್ಷಿಯಾಗಿದೆ ಎಂದರು.

ಉಗ್ರರ ಜತೆ ಸಂಪರ್ಕ: ರಾಜ್ಯದ ಇಬ್ಬರ ಸೆರೆ

ಪುಟ ೧➡ ಮುಂಬೈ ಮೂಲದ ಉದ್ಯಮಿಯೊಬ್ಬರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಕುರಿತು ಆರೋಪಿಗಳಿಗೆ ಸೂಚನೆ ನೀಡಲಾಗಿತ್ತು ಎಂಬ ಮಾಹಿತಿಯನ್ನೂ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಭಾರತದಲ್ಲಿ ವಿಧ್ವಂಸಕ ಕೃತ್ಯ ನಡೆಸುವ ಸಂಚು ರೂಪಿಸಿರುವ ಶಂಕೆಯ ಮೇರೆಗೆ ಈ ಕಾರ್ಯಾಚರಣೆ ನಡೆಸಿದ್ದು, ಅಂತಹ ಕೃತ್ಯ ನಡೆಯುವ ಮುನ್ನವೇ ಇಬ್ಬರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಪ್ರಕರಣ ಕುರಿತು ಹೆಚ್ಚಿನ ವಿಚಾರಣೆ ಪ್ರಗತಿಯಲ್ಲಿದ್ದು, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಕೇಂದ್ರ ತನಿಖಾ ಸಂಸ್ಥೆಗಳ ನಿಗಾ

ಪುಟ ೧➡ ಅಲ್ಲಾಭಕ್ಷ್ ಜತೆ ನಿಕಟ ಸಂಪರ್ಕದಲ್ಲಿದ್ದ ದಾವಣಗೆರೆ ಮೂಲದ ಜಮೀರ್ ಖಾನ್‌ನನ್ನೂ ತುಮಕೂರು ನಗರ ಪೊಲೀಸರು ಬಂಧಿಸಿದ್ದಾರೆ. ಈ ಕುರಿತು ತುಮಕೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ನೈಸರ್ಗಿಕ ಅನಿಲ ಭಂಡಾರ ಪತ್ತೆ

ಹೊಸದಿಲ್ಲಿ: ಅಂಡಮಾನ್ ಸಮುದ್ರದ ಆಳಸಮುದ್ರ ಪ್ರದೇಶದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮತ್ತು ಅನಿಲ ಸಂಸ್ಥೆ ಆಯಿಲ್ ಇಂಡಿಯಾ ಲಿಮಿಟೆಡ್ ಮತ್ತೊಂದು ನೈಸರ್ಗಿಕ ಅನಿಲ ಭಂಡಾರವನ್ನು ಪತ್ತೆಹಚ್ಚಿದ್ದು, ದೇಶದ ಇಂಧನ ಭದ್ರತೆ ಹಾಗೂ ಸ್ವಾವಲಂಬನೆಯ ಪ್ರಯತ್ನಗಳಿಗೆ ಮಹತ್ವದ ಉತ್ತೇಜನ ಸಿಕ್ಕಿದೆ.

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಈ ಕುರಿತು ಮಾಹಿತಿ ನೀಡಿದ್ದು, ಅಂಡಮಾನ್ ಸಮುದ್ರವು ಇಂಧನ ಅವಕಾಶಗಳ ಮಹಾಸಾಗರ ಎಂಬುದನ್ನು ಈ ಹೊಸ ಅನಿಲ ಪತ್ತೆ ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಹೇಳಿದ್ದಾರೆ. ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯ ಸಮೀಪದ ಸಮುದ್ರ ಪ್ರದೇಶದಲ್ಲಿ ಕೊರೆಯಲಾದ ಶ್ರೀ ವಿಜಯಪುರಂ3 ಪರಿಶೋಧನಾ ಬಾವಿಯಲ್ಲಿ ನೈಸರ್ಗಿಕ ಅನಿಲದ ಅಸ್ತಿತ್ವ ದೃಢಪಟ್ಟಿದೆ. ಸುಮಾರು 355 ಮೀಟರ್ ಆಳದ ಸಮುದ್ರದಲ್ಲಿ ಕೊರೆಯಲಾದ ಈ ಬಾವಿಯಲ್ಲಿ 1,900 ಮೀಟರ್‌ಗಿಂತ ಹೆಚ್ಚಿನ ಆಳದಲ್ಲಿ ಅನಿಲದ ಸುಳಿವು ದೊರೆತಿದ್ದು, ಪರೀಕ್ಷಾ ಹಂತದಲ್ಲಿ ನಿರಂತರವಾಗಿ ಅನಿಲ ಹೊರಹೊಮ್ಮಿರುವುದು ದೃಢಪಟ್ಟಿದೆ.

ಈಗ ಅನಿಲದ ಗುಣಮಟ್ಟ, ಉಷ್ಣಮೌಲ್ಯ ಮತ್ತು ವಾಣಿಜ್ಯ ಉತ್ಪಾದನೆಯ ಸಾಧ್ಯತೆಗಳ ಕುರಿತು ಹೆಚ್ಚಿನ ಪರೀಕ್ಷೆಗಳು ನಡೆಯುತ್ತಿವೆ. ಅಂಡಮಾನ್ ಕಣಿವೆಯಲ್ಲಿ ಆಯಿಲ್ ಇಂಡಿಯಾ ಇದುವರೆಗೆ ತೋಡಿರುವ ಮೂರು ಪರಿಶೋಧನಾ ಬಾವಿಗಳ ಪೈಕಿ ಎರಡರಲ್ಲಿ ಹೈಡ್ರೋಕಾರ್ಬನ್‌ಗಳ ಅಸ್ತಿತ್ವ ಪತ್ತೆಯಾಗಿರುವುದು ವಿಶೇಷವಾಗಿದೆ. ಈ ಹೊಸ ಪತ್ತೆಯು ದೇಶೀಯ ನೈಸರ್ಗಿಕ ಅನಿಲ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ, ವಿದೇಶಿ ಇಂಧನ ಆಮದು ಮೇಲಿನ ಅವಲಂಬನೆಯನ್ನು ತಗ್ಗಿಸಲು ಸಹಕಾರಿಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸುಸ್ಥಿರ ಅಭಿವೃದ್ಧಿ ಹೊಣೆ: ನ್ಯಾ.ವಿಭು ಬಕ್ರು

ಬೆಂಗಳೂರು: ಹವಾಮಾನ ಬದಲಾವಣೆಯ ಪರಿಣಾಮಗಳು ಇಂದು ಜಾಗತಿಕ ಮಟ್ಟದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದು, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಹೈಕೋರ್ಟ್ ಮುಖ್ಯ ನ್ಯಾ.ವಿಭು ಬಕ್ರು ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಅರಣ್ಯ ಇಲಾಖೆ, ಕರ್ನಾಟಕ ಪಶುವೈದ್ಯ ಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಪಶುವೈದ್ಯಕೀಯ ಮಂಡಳಿ ಹಾಗೂ ಧರೆ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಹೆಬ್ಬಾಳದ ಕರ್ನಾಟಕ ಪಶುವೈದ್ಯಕೀಯ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ವಿಶ್ವಪರಿಸರ ದಿನಾಚರಣೆ-2026ನ್ನು ಉದ್ಘಾಟಿಸಿ ಮಾತನಾಡಿದರು. ಅನಿಯಮಿತ ಮಳೆ, ಹೆಚ್ಚುತ್ತಿರುವ ಉಷ್ಣಾಂಶ, ಜಲಕ್ಷಾಮ, ಅರಣ್ಯ ನಾಶ ಹಾಗೂ ಜೀವ ವೈವಿಧ್ಯದ ಕುಸಿತವು ಮಾನವ ಸಮುದಾಯದ ಮುಂದಿರುವ ಗಂಭೀರ ಸವಾಲುಗಳಾಗಿದ್ದು, ಇವುಗಳನ್ನು ಎದುರಿಸಲು ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ ಎಂದರು.



ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ನ್ಯಾ.ಅನು ಶಿವರಾಮನ್, ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆವಿಜ್ಞಾನಗಳವಿಶ್ವವಿದ್ಯಾಲಯದಕುಲಪತಿಡಾ.ಕೆ.ಸಿ. ವೀರಣ್ಣ, ಕರ್ನಾಟಕ ಅರಣ್ಯ ಪಡೆಯ ಮುಖ್ಯಸ್ಥರು ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್ ಎಂ. ಚಂದ್ರಶೇಖರ್ ರೆಡ್ಡಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ, ಧರೆ ಫೌಂಡೇಶನ್ ನಿರ್ದೇಶಕ ಡಿ.ಎಂ. ಪೂರ್ಣೇಶ್ ಇದ್ದರು.

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ರಾಜ್ಯ ಸರ್ಕಾರ ಶುಕ್ರವಾರ ಮತ್ತೆ ನಾಲ್ವರು ಐಎಎಸ್ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಯಾಗುವಂತೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿಯಾಗಿದ್ದ ಡಾ. ಮಂಜುಳಾ ಎನ್. ಅವರನ್ನು ವರ್ಗಾವಣೆ ಮಾಡಿ ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರಾಗಿ ನಿಯುಕ್ತಿ ಮಾಡಲಾಗಿದೆ. ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರಾಗಿದ್ದ ಡಾ. ರಾಮ್ ಪ್ರಸಾತ್ ಮನೋಹರ್ ಅವರನ್ನು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ನಿಯುಕ್ತಿಗೊಳಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಯಾಗಿದ್ದ ಜಗದೀಶ ಜಿ. ಅವರನ್ನು ವರ್ಗಾವಣೆ ಮಾಡಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರನ್ನಾಗಿ ನೇಮಿಸಲಾಗಿದೆ. ಸಹಕಾರ ಸಂಘಗಳ ಉಪ ನಿಬಂಧಕರಾಗಿದ್ದ ಆಗಿದ್ದ ಕಾಂತರಾಜು ಪಿ.ಎಸ್. ಅವರನ್ನು ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಯಾಗಿ ನಿಯುಕ್ತಿ ಮಾಡಲಾಗಿದೆ.

ಪಕ್ಷ ಸಂಘಟನೆಗಾಗಿ ಜಿಲ್ಲೆಗಳಿಗೆ ನೂತನ ಸಂಯೋಜಕರ ನಿಯುಕ್ತಿ

ಬೆಂಗಳೂರು: ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ಗಮನಿಸಲು ರಾಜ್ಯ ಕೋರ್ ಸಮಿತಿ ಸದಸ್ಯರನ್ನು ವಿಭಾಗಗಳಿಗೆ ಹಾಗೂ ರಾಜ್ಯ ಪದಾಧಿಕಾರಿಗಳನ್ನು ಸಂಘಟನಾ ಜಿಲ್ಲೆಗಳಿಗೆ ಸಂಯೋಜಕರನ್ನಾಗಿ ನಿಯುಕ್ತಿ ಮಾಡಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶುಕ್ರವಾರ ಆದೇಶಿಸಿದ್ದಾರೆ.



ಮೈಸೂರು ವಿಭಾಗಕ್ಕೆ ಆರ್.ಅಶೋಕ, ಮಂಗಳೂರು ವಿಭಾಗಕ್ಕೆ ನಿರ್ಮಲ್ ಕುಮಾರ್ ಸುರಾಣಾ, ಶಿವಮೊಗ್ಗ ವಿಭಾಗಕ್ಕೆ ನಳಿನ್ ಕುಮಾರ್ ಕಟೀಲು, ಧಾರವಾಡ ವಿಭಾಗಕ್ಕೆ ಪ್ರಲ್ಹಾದ ಜೋಶಿ, ಬೆಳಗಾವಿ ವಿಭಾಗಕ್ಕೆ ಸಿ.ಟಿ. ರವಿ ಅವರನ್ನು ಸಂಯೋಜಕರನ್ನಾಗಿ ನಿಯುಕ್ತಿಗೊಳಿಸಲಾಗಿದೆ. ಕಲಬುರಗಿ ವಿಭಾಗಕ್ಕೆ ಗೋವಿಂದ ಕಾರಜೋಳ, ಬಳ್ಳಾರಿ ವಿಭಾಗಕ್ಕೆ ಬಸವರಾಜ ಬೊಮ್ಮಾಯಿ, ದಾವಣಗೆರೆ ವಿಭಾಗಕ್ಕೆ ಬಿ. ಶ್ರೀರಾಮುಲು, ಬೆಂಗಳೂರು ಗ್ರಾಮಾಂತರ ವಿಭಾಗಕ್ಕೆ ಡಾ. ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಬೆಂಗಳೂರು ವಿಭಾಗಕ್ಕೆ ಡಿ.ವಿ. ಸದಾನಂದ ಗೌಡ ಅವರನ್ನು ನಿಯುಕ್ತಿ ಮಾಡಲಾಗಿದೆ.

ಹಾಸನ ಮತ್ತು ಹಾವೇರಿ ಜಿಲ್ಲೆಗಳಿಗೆ ಎಸ್. ದತ್ತಾತ್ರಿ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ರೂಪಾಲಿ ನಾಯಕ್, ಕೊಡಗು ಮತ್ತು ಉಡುಪಿ ಜಿಲ್ಲೆಗಳಿಗೆ ಕ್ಯಾ. ಬ್ರಿಜೇಶ್ ಚೌಟ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡಕ್ಕೆ ಹರತಾಳು ಹಾಲಪ್ಪ, ಮೈಸೂರು ನಗರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಡಾ. ಲಕ್ಷ್ಮೀ ಅಶ್ವಿನ್ ಗೌಡ ಅವರನ್ನು ನಿಯೋಜಿಸಲಾಗಿದೆ. ಮೈಸೂರು ಗ್ರಾಮಾಂತರಕ್ಕೆ ಶರಣು ತಳ್ಳಿಕೇರಿ, ಮಂಡ್ಯ ಜಿಲ್ಲೆಗೆ ಎನ್. ಮಹೇಶ್, ಹುಬ್ಬಳ್ಳಿ-ಧಾರವಾಡ ಮತ್ತು ಧಾರವಾಡ ಗ್ರಾಮಾಂತರ ಜಿಲ್ಲೆಗಳಿಗೆ ಅನಿಲ್ ಬೆನಕೆ, ಗದಗ ಮತ್ತು ಚಿಕ್ಕೋಡಿ ಜಿಲ್ಲೆಗಳಿಗೆ ಮುರುಗೇಶ್ ನಿರಾಣಿ, ಬೆಳಗಾವಿ ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಬೈರತಿ ಬಸವರಾಜ್, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಿಗೆ ರಾಜುಗೌಡ ನಾಯಕ್ (ನರಸಿಂಹನಾಯಕ್) ಅವರನ್ನು ನಿಯುಕ್ತಿಗೊಳಿಸಲಾಗಿದೆ. ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಿಗೆ ಬಸವರಾಜ ಮತ್ತೀಮೋಡ್, ಕಲಬುರಗಿ ನಗರ ಮತ್ತು ಕಲಬುರಗಿ ಗ್ರಾಮಾಂತರ ಜಿಲ್ಲೆಗಳಿಗೆ ಡಾ. ಶೈಲೇಂದ್ರ ಬೆಲ್ದಾಳೆ ಅವರನ್ನು ನೇಮಿಸಲಾಗಿದೆ.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಸಾಕ್ಷಿಯಾಗಲು ಹೊಸದಿಲ್ಲಿಯಿಂದ ಶುಕ್ರವಾರ ಆಗಮಿಸಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಧಾನಸಭೆ ಸಭಾಂಗಣವನ್ನು ತೋರಿಸಿದರು. ಸಚಿವ ಯು.ಟಿ. ಖಾದರ್ ಜತೆಗಿದ್ದರು.

ಜನರ ಸಮಸ್ಯೆ ಬಗ್ಗೆ ಕಾಳಜಿ ಇಲ್ಲ: ಛಲವಾದಿ ನಾರಾಯಣಸ್ವಾಮಿ

ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರ ನೇಮಕವು ಕೆಟ್ಟು ನಿಂತ ಬಸ್ಸಿಗೆ ಹೊಸ ಚಾಲಕನ ನೇಮಕ ಆದಂತಿದೆ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿಶ್ಲೇಷಿಸಿದ್ದಾರೆ.



ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೆಟ್ಟು ನಿಂತ ಬಸ್ಸಿಗೆ ಹೊಸ ಚಾಲಕ ನೇಮಕ ಆದ ತಕ್ಷಣ ಕೆಟ್ಟ ಬಸ್ಸು ಸರಿ ಆಗುವುದಿಲ್ಲ. ಬಸ್ಸನ್ನೇ ಬದಲಿಸಬೇಕಿತ್ತು. ಆದರೆ, ಅದರ ಸಮಯ ಬಂದಿಲ್ಲ ಎಂದು ಮುಖ್ಯ ಮಂತ್ರಿ ನೇಮಕ ಕುರಿತಂತೆ ವಿವರಿಸಿದರು. ಅದೇ ಕಾರಣಕ್ಕೆ ಚಾಲಕನನ್ನು ಬದಲಿಸಲಾಗಿದೆ. ಇದರಿಂದ ಅಷ್ಟೊಂದು ಪ್ರಯೋಜನ ಆಗುವುದೆಂದು ನನಗೆ ಅನಿಸುತ್ತಿಲ್ಲ ಎಂದರು. ವಿಪರ್ಯಾಸವೆಂದರೆ, ಗೃಹ ಪ್ರವೇಶದ 2ನೇ ದಿನವೇ ಛಾವಣಿ ಕುಸಿದು ಬಿದ್ದಿದೆ. ಇನ್ನೂ 48 ತಾಸು ಕಳೆದಿಲ್ಲ, ಆ ಮನೆಯಲ್ಲಿ ವಾಸ ಮಾಡಲು ಸಾಧ್ಯವೇ ಎಂಬುದರ ಪರೀಕ್ಷೆ ಆಗಬೇಕಿದೆ. ರಾಮಲಿಂಗಾರೆಡ್ಡಿ ಅವರು ರಾಜೀನಾಮೆ ನೀಡಿದ್ದಾರೆ. ಅದರೊಂದಿಗೆ ಕೆ.ಎಚ್. ಮುನಿಯಪ್ಪ ಅವರೂ ನನ್ನ ಹಿರಿತನಕ್ಕೆ ಗೌರವ ಸಿಕ್ಕಿಲ್ಲ. ಈ ಆಹಾರ ಇಲಾಖೆ ನನಗೆ ಬೇಕಾಗಿಲ್ಲ ಎಂದಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಇಲಾಖೆಗಳು ಮುಖ್ಯಮಂತ್ರಿ ಕೈಯಲ್ಲೇ ಇದೆ. ಇಷ್ಟಿದ್ದರೂ ಇಂಧನ ಇಲಾಖೆಯಲ್ಲಿ ಅಧಿಕಾರಿಗಳನ್ನು ಬದಲಾಯಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ ಎಂದರು.

ಜನರು ಏನೂ ನಿರೀಕ್ಷಿಸುವಂತಿಲ್ಲ: ಇದು ಜಾರ್ಜ್ ಅವರಿಗೂ ಇಷ್ಟವಾಗಿಲ್ಲ; ಇಂಥದ್ದು ಇನ್ನು ಮುಂದೆಯೂ ನಡೆಯಲಿದೆ. ಕಾಂಗ್ರೆಸ್ ಪಕ್ಷ ಲಂಬವಾಗಿ ಒಡೆದಿದೆ. ಡಿಕೆ ಕಾಂಗ್ರೆಸ್, ಬಿಕೆ ಕಾಂಗ್ರೆಸ್, ಎಂಕೆ ಕಾಂಗ್ರೆಸ್ ಎಂದು ಅದು ಒಡೆದುಹೋಗಿದೆ. ಬಿಕೆ ಕಾಂಗ್ರೆಸ್ ಪಕ್ಷ; ಡಿಕೆ ಕಾಂಗ್ರೆಸ್ ವಿಧಾನಸೌಧದಲ್ಲಿ ಕುಳಿತಿದೆ. ಎಂಕೆ ಕಾಂಗ್ರೆಸ್ ಕೇಂದ್ರದ್ದು. ಮೂರು ಪವರ್ ಸೆಂಟರ್‌ಗಳಾಗಿದ್ದು, ಇವರಿಂದ ಜನರು ಏನೂ ನಿರೀಕ್ಷಿಸುವಂತಿಲ್ಲ ಎಂದರು. ನಾಯಕತ್ವ, ಸಿಎಂ, ಅಧ್ಯಕ್ಷತೆ, ಖಾತೆಗಳ ಬದಲಾವಣೆಯಲ್ಲೇ ಕಾಂಗ್ರೆಸ್ಸಿಗರು ಕುಳಿತಿದ್ದಾರೆ. ಜನರ ಸಮಸ್ಯೆಗಳ ಬಗ್ಗೆ ಇವರಿಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿದರು.

ಕಿರುಸುದ್ದಿ

ಈ ಸರ್ಕಾರ 2 ವರ್ಷ ಇರುವ ವಿಶ್ವಾಸ ನನಗಿಲ್ಲ: ಈಶ್ವರಪ್ಪ

ಶಿವಮೊಗ್ಗ: ಈ ಸರ್ಕಾರ ಎರಡು ವರ್ಷ ಅಧಿಕಾರದಲ್ಲಿರುತ್ತದೆ ಎಂಬ ವಿಶ್ವಾಸ ನನಗಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಂಪುಟ ಘೋಷಣೆಯಾದ ಬಳಿಕ ಈಗಾಗಲೇ ಅಸಮಾಧಾನ ಭುಗಿಲೆದ್ದಿದೆ. ಮೊದಲ ವಿಕೆಟ್ ಪತನವಾಗಿದೆ ಎಂದು ನಾನು ಹೇಳುವುದಿಲ್ಲ. ರಾಮಲಿಂಗಾರೆಡ್ಡಿ ರಾಜೀನಾಮೆ ಅವರ ವೈಯಕ್ತಿಕ ನಿರ್ಧಾರ ಇರಬಹುದು. ಆದರೆ ಕಾಂಗ್ರೆಸ್‌ನಲ್ಲಿ ಅತೃಪ್ತ ಆತ್ಮಗಳೇ ತುಂಬಿದ್ದು ಅವರನ್ನು ತೃಪ್ತಿಪಡಿಸಲು ಆಗುವುದಿಲ್ಲ ಎಂದರು. ಕಾಂಗ್ರೆಸ್‌ನಲ್ಲಿ ಎಲ್ಲರೂ ಮಂತ್ರಿ ಪದವಿಯ ಆಕಾಂಕ್ಷಿಗಳೇ ಇದ್ದಾರೆ. ಅಭಿವೃದ್ಧಿ ಮರೀಚಿಕೆ ಆಗಿದೆ. ರಾಜ್ಯದಲ್ಲಿ ಹಲವಾರು ಗಂಭೀರ ಸಮಸ್ಯೆಗಳಿವೆ. ಈ ಸಂದರ್ಭದಲ್ಲಿ ಮಂತ್ರಿ ಪದವಿಯ ಕಿತ್ತಾಟ ಈ ಸರ್ಕಾರವನ್ನು ಉಳಿಸುವುದಿಲ್ಲ ಎಂದರು. ನೀವು ಯಾವಾಗ ಬಿಜೆಪಿ ಸೇರುತ್ತೀರಿ ಎಂಬ ಪ್ರಶ್ನೆಗೆ ಕಾಲ ಬರಲಿ ನೋಡೋಣ. ನಾನು ಕಾಯುತ್ತಾ ಇದ್ದೇನೆ ಎಂದರು.

ಮಹಿಳೆಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ: ಹೆಬ್ಬಾಳ್ಕರ್ ವಿಶ್ವಾಸ

ಬೆಂಗಳೂರು: ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಮಹಿಳೆಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎನ್ನುವ ವಿಶ್ವಾಸ ಇದೆ. ಪಕ್ಷದ ಹೈಕಮಾಂಡ್ ಏನು ನಿರ್ಧಾರ ತೆಗೆದುಕೊಳ್ಳುತ್ತೋ ಅದಕ್ಕೆ ಬದ್ಧರಾಗಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.



ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಸರ್ಕಾರದಲ್ಲಿ ಯಾವುದೇ ಗೊಂದಲಗಳಿಲ್ಲ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಿರಿಯರಿದ್ದಾರೆ ಮತ್ತು ಸಮರ್ಥರಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಡೆಸಲಿದ್ದಾರೆ ಎಂದು ಹೇಳಿದರು. ರಾಮಲಿಂಗಾರೆಡ್ಡಿ ರಾಜೀನಾಮೆ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಗಳಿಗೆ ಬೆಲೆ ಇರುತ್ತದೆ. ಪಕ್ಷದ ಹಿರಿಯರು ಇದರ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರು. ಬೆಳಗಾವಿ ಮೂರು ಜಿಲ್ಲೆಗಳಿಗೆ ಸಮನಾಗುವಷ್ಟು ದೊಡ್ಡದಿದೆ. ಹಾಗಾಗಿ ನಾವು ಹೆಚ್ಚುವರಿ ಸಚಿವ ಸ್ಥಾನ ಕೇಳಿದ್ದೇವೆ ಎಂದರು.

ಗ್ರಾಮೀಣ ಕುಡಿಯುವ ನೀರಿಗೆ ಆದ್ಯತೆ: ಈಶ್ವರ ಖಂಡ್ರೆ

ಬೆಂಗಳೂರು: ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವುದು ತಮ್ಮ ಪ್ರಥಮ ಆದ್ಯತೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಂದಿನ 25 ವರ್ಷಗಳ ದೀರ್ಘಾವಧಿಗೆ ಭೂಮೇಲ್ಮೈ ನೀರು ಬಳಸಿ ಗ್ರಾಮೀಣ ಭಾಗಕ್ಕೆ ಪೂರೈಕೆ ಮಾಡುವುದು ಸರ್ಕಾರದ ಸಂಕಲ್ಪವಾಗಿದ್ದು, ಇದರ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಗಾಂಧೀ ಅವರು ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದು ಹೇಳಿದ್ದಾರೆ. ಗ್ರಾಮಗಳ ಅಭಿವೃದ್ಧಿಗಾಗಿ ಮತ್ತು ಅಧಿಕಾರ ವಿಕೇಂದ್ರೀಕರಣಕ್ಕಾಗಿ ಮಾಜಿ ಪ್ರಧಾನಿ ರಾಜೀವ್ ಗಾಂಧೀ ಅವರು ಸಾಂವಿಧಾನಿಕ ತಿದ್ದುಪಡಿ ತಂದಿದ್ದರು. ಆ ಮಹತ್ವದ ಚಿಂತನೆಯ ಸಾಕಾರ ತಮ್ಮ ಗುರಿಯಾಗಿದೆ ಎಂದರು. ಗ್ರಾಮೀಣ ಭಾಗದ ಸ್ವಚ್ಛತೆ ಕಾಪಾಡಲು ಮತ್ತು ಹಳ್ಳಿಗಳಲ್ಲಿ ಗುಣಮಟ್ಟದ ಆಸ್ತಿಗಳ ಸೃಜನೆಗೆ ಆದ್ಯತೆ ನೀಡಿ ಕಾರ್ಯನಿರ್ವಹಿಸಲಾಗುವುದು ಎಂದರು.

60 ಸಾವಿರ ರೂ. ವೇತನ | ವಾರದೊಳಗೆ ನೇಮಕ ಪ್ರಕ್ರಿಯೆ: ಸಚಿವ ಖಾದರ್

ಯುವ ವೈದ್ಯರ ನೇರ ನೇಮಕ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಇಚ್ಛಿಸುವ ಎಂಬಿಬಿಎಸ್ ಪದವೀಧರರು ನೇರವಾಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಅನುಮತಿ ಪತ್ರ ರವಾನಿಸಿ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಒಂದು ವಾರದೊಳಗೆ ಅವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಹೊಸದಾಗಿ ನೇಮಕಾತಿ ಆಗುವ ವೈದ್ಯರಿಗೆ ತಿಂಗಳಿಗೆ 60,000 ರೂ. ವೇತನ ನಿಗದಿಪಡಿಸಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.



ಸಚಿವರಾಗಿ ಅಧಿಕಾರವಹಿಸಿಕೊಂಡ ಬಳಿಕ ಶುಕ್ರವಾರ ಆರೋಗ್ಯಸೌಧದಲ್ಲಿ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬಳಿಕ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿಮಾಡಲು ತುರ್ತು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಲ್ಲದೇ, ಎಂಬಿಬಿಎಸ್ ಪದವಿ ಮುಗಿಸಿ ಬರುವ ಯುವ ವೈದ್ಯರನ್ನು ಸರ್ಕಾರಿ ಆಸ್ಪತ್ರೆಗೆ ನೇರ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಆರೋಗ್ಯ ಇಲಾಖೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಸಾರ್ವಜನಿಕರಿಂದ ಮತ್ತು ವೈದ್ಯರಿಂದ ಸಲಹೆಗಳನ್ನು ಆಹ್ವಾನಿಸುವುದಾಗಿಯೂ. ರಾಜ್ಯದಲ್ಲಿ ಆರೋಗ್ಯ ಇಲಾಖೆ ಬೃಹತ್ ವ್ಯಾಪ್ತಿಯನ್ನು ಹೊಂದಿದ್ದು, ವೈದ್ಯರ ನೇಮಕಾತಿಯಿಂದ ಹಿಡಿದು ಆರೋಗ್ಯ ಸೇವೆ ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ವಿಶೇಷ ಆದ್ಯತೆ ನೀಡುವುದಾಗಿ ತಿಳಿಸಿದರು.

ಸಭೆಯಲ್ಲಿ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತ್ವಿಕ್‌ರಂಜನ್ ಪಾಂಡೆ, ಆಯುಕ್ತ ಗುರುದತ್ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕ ಅವಿನಾಶ್ ಮೆನನ್ ರಾಜೇಂದ್ರನ್, ಔಷಧ ಹಾಗೂ ಆಹಾರ ಗುಣಮಟ್ಟದ ಆಯುಕ್ತ ಶ್ರೀನಿವಾಸನ್, ಆಯುಷ್ ಇಲಾಖೆಯ ಆಯುಕ್ತರಾದ ವಿಪಿನ್ ಸಿಂಗ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಹೆಚ್ಚುವರಿ ಶುಲ್ಕ ವಸೂಲಿ ಮಾಡುವಂತಿಲ್ಲ

ಆಯುಷ್ಮಾನ್ ಕರ್ನಾಟಕ ಯೋಜನೆಯ ಅನುಷ್ಠಾನದ ಬಗ್ಗೆ ವಿಮರ್ಶೆ ನಡೆಸಿದ್ದು, ಈ ಯೋಜನೆ ವ್ಯಾಪ್ತಿಯಲ್ಲಿರುವ ಯಾವುದೇ ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವಂತಿಲ್ಲ. ಇದರ ಬಗ್ಗೆ ಆರೋಗ್ಯ ಇಲಾಖೆಯಿಂದ ನಿಗಾ ಇಡಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಆಯುಷ್ಮಾನ್ ಕರ್ನಾಟಕ ಯೋಜನೆಯಲ್ಲಿ ನಿಗದಿಪಡಿಸಿದ್ದಕ್ಕಿಂದ ಹೆಚ್ಚು ಹಣ ಪಡೆಯಲು ಅವಕಾಶ ಇಲ್ಲ. ಒಂದು ವೇಳೆ ಖಾಸಗಿ ಆಸ್ಪತ್ರೆಗಳು ಹೆಚ್ಚುವರಿ ಹಣ ಪಡೆದರೆ, ಜಿಲ್ಲಾ ಮಟ್ಟದ ಆರೋಗ್ಯ ಮಿತ್ರರ ಮೂಲಕ ಸಾರ್ವಜನಿಕರು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ದೂರು ನೀಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

- ವೈದ್ಯರ ಹುದ್ದೆ ಭರ್ತಿ ಮಾಡಲು ತುರ್ತು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸಚಿವ ಯು.ಟಿ. ಖಾದರ್ ಸೂಚನೆ
- ಆರೋಗ್ಯ ಸೇವೆ ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ವಿಶೇಷ ಆದ್ಯತೆ

ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ: ಬಿವೈವಿ

ಬೆಂಗಳೂರು: ರಾಜ್ಯದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡಲು ಸರ್ಕಾರಕ್ಕೆ ಸಾಧ್ಯವಿಲ್ಲ ಎಂದಾದರೆ ಸ್ಥಳೀಯಾಡಳಿತ ಸಂಸ್ಥೆ ಚುನಾವಣೆ ಜತೆಗೆ ವಿಧಾನಸಭೆ ವಿಸರ್ಜನೆ ಮಾಡಿ ಚುನಾವಣೆ ಎದುರಿಸಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಸವಾಲು ಎಸೆದಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದರು. 2 ವರ್ಷದಿಂದ ಮುಖ್ಯಮಂತ್ರಿ ಕುರ್ಚಿಗೆ ಹಗ್ಗಜಗ್ಗಾಟ ನಡೆಯುತ್ತಿತ್ತು. ಸಿಎಂ ಆಗಿ ಶಿವಕುಮಾರ್ ಪ್ರಮಾಣವಚನ ಸ್ವೀಕರಿಸಿದ 48 ತಾಸಿನೊಳಗೆ ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ಏನೇನೂ ಅಭಿವೃದ್ಧಿ ಕಾರ್ಯ ಮಾಡದ ಕಾಂಗ್ರೆಸ್ ಸರ್ಕಾರ ಇನ್ನೂ ಕಚ್ಚಾಟದಿಂದ ಹೊರಗೆ ಬಂದಿಲ್ಲ. ಈ ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ. ರೈತರು ಬೀದಿದಿಳಿದು ಹೋರಾಟ ಮಾಡುತ್ತಿದ್ದಾರೆ. ಎಲ್ಲರನ್ನೂ ಸರಿದೂಗಿಸಿಕೊಂಡು ಹೋಗುವಲ್ಲಿ ಮುಖ್ಯಮಂತ್ರಿ ಶಿವಕುಮಾರ್ ವಿಫಲರಾಗಿದ್ದಾರೆ. ಡಿ.ಕೆ. ಶಿವಕುಮಾರ್, ಬಿ.ಕೆ. ಹರಿಪ್ರಸಾದ್, ಮಲ್ಲಿಕಾರ್ಜುನ ಖರ್ಗೆ ಮತ್ತು ಸಿದ್ದರಾಮಯ್ಯ ಹೀಗೆ ನಾಲ್ಕು ಪವರ್ ಸೆಂಟರ್ ನಡುವೆ ಕಾಂಗ್ರೆಸ್ ಒದ್ದಾಡುತ್ತಿದೆ. ಈ ಪವರ್ ಸೆಂಟರ್‌ಗಳು ಶಿವಕುಮಾರ್ ಅವರ ನಿದ್ದೆಗೆಡಿಸುತ್ತವೆ ಎಂದು ಟೀಕಿಸಿದರು.

ಸಿಎಂ ಶಿವಕುಮಾರ್ ಅವರಿಗೆ ಸಾಕಷ್ಟು ಅನುಭವವಿದೆ. ಕಸದಿಂದ ರಸ ತೆಗೆಯುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಹಿರಿಯ ಸಚಿವರನ್ನು ಕಡೆಗಣಿಸಿದ್ದಾರೆ ಎಂಬ ಚರ್ಚೆ ಆರಂಭವಾಗಿದೆ. ಇದು ಸರ್ಕಾರಕ್ಕೆ ಗೌರವ ತರುವುದಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ತೊಲಗಲಿ

ಇಂದು ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದಾರೆ. ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್ ಸಹ ತಮ್ಮ ಖಾತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಭಿವೃದ್ಧಿಗಿಂತ ಇವರಿಗೆ ಅಧಿಕಾರದ ಹಪಾಹಪಿ ಹೆಚ್ಚಾಗಿದೆ. ಇದರಿಂದ ಬೇಸತ್ತ ಜನ ವಿಧಾನ ಸಭಾ ಚುನಾವಣೆ ಆಗಿ ದರಿದ್ರ ಕಾಂಗ್ರೆಸ್ ಸರ್ಕಾರ ತೊಲಗಬೇಕು ಎಂದು ಬಯಸಿದ್ದಾರೆ. ಕಾಂಗ್ರೆಸ್‌ನವರಿಗೆ ಮಾನ ಮರ್ಯಾದೆ ಇಲ್ಲ ಎಂದು ರಾಜ್ಯದ ಜನ ಮಾತನಾಡುತ್ತಿದ್ದಾರೆ ಎಂದರು.

ನಕಲಿ ಛಾಪಾ ಕಾಗದ ಸೃಷ್ಟಿಸಿ ಸರ್ಕಾರಕ್ಕೆ ವಂಚನೆ: ಎಫ್ಐಆರ್

ಚಿಕ್ಕಮಗಳೂರು: ನಕಲಿ ಛಾಪಾ ಕಾಗದ ಸೃಷ್ಟಿಸಿ ಸರ್ಕಾರದ ಬೊಕ್ಕಸಕ್ಕೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಆರ್‌ಪುರ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಜಲ್ ಜೀವನ್ ಮಿಷನ್ ಯೋಜನೆಯ ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದಂತೆ ನಕಲಿ ಛಾಪಾ ಕಾಗದಗಳನ್ನು ನೀಡಿ ಕರಾರು ಮಾಡಿಕೊಂಡ ಆರೋಪದ ಮೇಲೆ ಎನ್‌ಆರ್‌ಪುರದ ಎಸ್‌ಕೆಪಿ ಕನ್ಸ್ಟ್ರಕ್ಷನ್ಸ್ ಅಂಡ್ ಬೋರ್‌ವೆಲ್ಸ್ ಸಂಸ್ಥೆಯ ಗುತ್ತಿಗೆದಾರ ಹಾಗೂ ನಕಲಿ ಛಾಪಾಕಾಗದಗಳನ್ನು ಸೃಷ್ಟಿಸಿ ವಿತರಣೆ ಮಾಡಿದ ಆರೋಪದ ಮೇಲೆ ಎನ್‌ಆರ್‌ಪುರದ ಎಎಐಆರ್‌ಎ ಡಿಜಿಟಲ್‌ನ ದಸ್ತಗೀರ್ ಎಂಬಾತನ ವಿರುದ್ಧ ವಂಚನೆ ಪ್ರಕರಣ ದಾಖಲಿಸಲಾಗಿದೆ.

ಶೃಂಗೇರಿ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಜೆಎಂಎಂ ಯೋಜನೆಯಲ್ಲಿ ಗುತ್ತಿಗೆದಾರರು ಕೊರೆದಿರುವ ಕೊಳವೆಬಾವಿಗಳಿಗೆ ನಕಲಿ ಛಾಪಾ ಕಾಗದಗಳನ್ನು ನೀಡಿ ಕರಾರು ಒಪ್ಪಂದ ಮಾಡಿಕೊಂಡಿದ್ದ ಅಕ್ರಮವನ್ನು ಮೊದಲ ಬಾರಿಗೆ ಮಾಜಿ ಶಾಸಕ ಡಿ.ಎನ್.ಜೀವರಾಜ್ ಅವರು ಬಯಲಿಗೆಳೆದಿದ್ದರು. ಇದೊಂದು ಗಂಭೀರ ಪ್ರಕರಣವಾಗಿದ್ದು, ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನಲ್ಲೂ ಸುದ್ದಿಗೋಷ್ಠಿ ನಡೆಸಿ ಒತ್ತಾಯಿಸಿದ್ದರು.

ಕರಾವಳಿಗೆ ಬಂತು ಮುಂಗಾರು: ಮಳೆಯಾರ್ಭಟ

ಮಂಗಳೂರು: ಕರಾವಳಿಗೆ ಮುಂಗಾರು ಪ್ರವೇಶವಾಗಿದ್ದು, ಮೊದಲ ದಿನವೇ ಭಾರೀ ಮಳೆಯಾಗಿದೆ. ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡಿನಲ್ಲಿ ಎಡೆಬಿಡದ ಮಳೆ ಸುರಿದಿದೆ. ಕೊಡಗಿನಲ್ಲಿ ಸಾಧಾರಣ ಮಳೆಯಾಗಿದೆ. ಹಲವೆಡೆ ಗುಡುಗು ಸಿಡಿಲಿನ ಸಹಿತ ಮಳೆಯಾಗಿದ್ದು, ಮನೆಗಳಿಗೆ ಹಾನಿ ಉಂಟಾಗಿದೆ.

ಭಾರೀ ಮಳೆಯ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಇಂದು (ಜೂ.6) ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಮಂಗಳೂರಿನಲ್ಲಿ ಮೊದಲ ಮಳೆಗೆ ನಗರ ವಾಸಿಗಳು ತತ್ತರಿಸಿಹೋಗಿದ್ದಾರೆ. ರಸ್ತೆಗಳು ಜಲಾವೃತಗೊಂಡು ವಾಹನ ಮತ್ತು ಸಾರ್ವಜನಿಕರ ಸಂಚಾರ ಕಷ್ಟಕರವಾಗಿತ್ತು. ಸತತ ಮಳೆ ಪರಿಣಾಮವಾಗಿ ಮಂಗಳೂರಿನ ಕೊಡಿಯಾಲ್‌ಬೈಲ್, ಪಂಪ್‌ವೆಲ್, ಜಪ್ಪಿನಮೊಗರು, ಕೊಟ್ಟಾರ, ಮಾಲೆಮಾರ್ ಮುಂತಾದ ಪ್ರದೇಶಗಳು ಜಲಾವೃತಗೊಂಡಿತ್ತು. ಉಡುಪಿ ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ.

ಕ್ರಿಯಾಶಕ್ತಿ ಸ್ವರೂಪಿಣಿ ಮಾ.ಕೃ.ರುಕ್ಮಿಣಿ: ವಿ.ಶಾಂತಾ

ಬೆಂಗಳೂರು: ಮಾ.ಕೃ.ರುಕ್ಮಿಣಿ ಅವರು ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಯ ಸ್ವರೂಪಿಣಿಯಾಗಿದ್ದರು. ಯಾವುದೇ ಸತ್ಕಾರ್ಯ ಅಥವಾ ಜವಾಬ್ದಾರಿಯನ್ನು ವಹಿಸಿಕೊಂಡಾಗ, ಅದರಲ್ಲಿ ಸಕಾರಾತ್ಮಕ ಪರಿವರ್ತನೆ ತರಬೇಕು ಮತ್ತು ಅಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಬೇಕು ಎಂಬುದು ಅವರ ಆಶಯವಾಗಿತ್ತು ಎಂದು ರಾಷ್ಟ್ರ ಸೇವಿಕಾ ಸಮಿತಿಯ ಪ್ರಮುಖ ಸಂಚಾಲಿಕಾ ವಿ.ಶಾಂತಾಕುಮಾರಿ ಹೇಳಿದರು.



ನಗರದ ಕೇಶವ ಶಿಲ್ಪ ಸಭಾಂಗಣದಲ್ಲಿ ನಡೆದ ರಾಷ್ಟ್ರ ಸೇವಿಕಾ ಸಮಿತಿಯ ಪೂರ್ವ ಅಖಿಲ ಭಾರತೀಯ ಸಹಕಾರ್ಯವಾಹಿಕಾ ಆಗಿದ್ದ ಮಾ. ಕೃ.ರುಕ್ಮಿಣಿಯವರಿಗೆ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ಸಮಿತಿಯಲ್ಲಿ ಪ್ರಚಾರಿಕಾ ಪದ್ಧತಿ ಆರಂಭವಾದಾಗ, ಅದರ ಮೊದಲ ಪ್ರಚಾರಿಕಾ ಪ್ರಮುಖರಾಗಿ ರುಕ್ಮಿಣಿ ಅವರು ಜವಾಬ್ದಾರಿ ವಹಿಸಿಕೊಂಡಿದ್ದರು. ಇಡೀ ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರಚಾರಿಕಾ ಅಭ್ಯಾಸ ವರ್ಗವನ್ನು ಆಯೋಜಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕೇವಲ ಭಾಷಣಕ್ಕೆ ಸೀಮಿತವಾಗದೆ, ತಮ್ಮ ಕೃತಿಯ ಮೂಲಕವೇ ವಸುಧೈವ ಕುಟುಂಬಕಂ ತತ್ವವನ್ನು ಬದುಕಿ ತೋರಿಸಿದ ಹೆಗ್ಗಳಿಕೆ ಅವರದ್ದಾಗಿದೆ. ಅತ್ಯಂತ ಪ್ರೀತಿಯಿಂದ ಮಾರ್ಗದರ್ಶನ ನೀಡುವ ವಿಶಿಷ್ಟ ಕಲೆ ಅವರಿಗೆ ಸಿದ್ಧಿಸಿತ್ತು. ಕಾರ್ಯಕ್ರಮದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಹೊಯ್ಸಳ ಪ್ರಾಂತದ ಕಾರ್ಯವಾಹಿಕ ವಸಂತಾ ಸ್ವಾಮಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಪರ್ಕ ಪ್ರಮುಖ್ ಟಿ.ಎಸ್.ವೆಂಕಟೇಶ್, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ, ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್ ಇದ್ದರು.

> ಮೊದಲ ಬಾರಿಗೆ ಬೆಂಗಳೂರಿಗೆ ಬಂದು ಪೂರ್ಣಾವಧಿ ಕಾರ್ಯಕರ್ತೆಯಾಗಿ ಜವಾಬ್ದಾರಿ ವಹಿಸಿಕೊಂಡಾಗ ತಮಗೆ ಆಶ್ರಯ ನೀಡಿದ್ದು ರುಕ್ಮಿಣಿ ಅವರ ಸುಕೃಪಾ ಮನೆ. ಹೆಣ್ಣುಮಕ್ಕಳು ಮಾನಸಿಕವಾಗಿ ಗಟ್ಟಿಯಾಗಬೇಕು. ಮನೆಯಿಂದ ಹೊರಬಂದ ತಕ್ಷಣ ಮನಸ್ಸನ್ನು ಗಟ್ಟಿ ಮಾಡಿಕೊಳ್ಳದಿದ್ದರೆ ಯಶಸ್ಸು ಸಿಗುವುದಿಲ್ಲ ಎಂದು ಪ್ರೇರೇಪಿಸುತ್ತಿದ್ದರು.
> ■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಚೈತನ್ಯದ ತವರೂರು ರುಕ್ಮಿಣಿ ಅವರ ಮನೆ

ರುಕ್ಮಿಣಿ ಅವರ ಇಡೀ ಕುಟುಂಬವೇ ದೇಶಸೇವೆ ಮತ್ತು ಸಂಘ ಕಾರ್ಯಕ್ಕೆ ಹೆಸರಾದದ್ದು. ನರಹರಿ ಹಾಗೂ ರುಕ್ಮಿಣಿ ಅವರನ್ನೊಳಗೊಂಡ ಇಡೀ ಕುಟುಂಬ, ಸಮಾಜದ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿತ್ತು. ಅವರ ಮನೆಗೆ ದೇಶದ ಯಾವುದೇ ಭಾಗದಿಂದ ಪರಿವಾರದ ಕಾರ್ಯಕರ್ತರು ಬಂದರೂ ಅವರಿಗೆ ಸದಾ ಆಶ್ರಯ ಸಿಗುತ್ತಿತ್ತು. ಬೆಂಗಳೂರಿನಲ್ಲಿ ಸಮಿತಿಯ ಮೊದಲ ಶಾಖೆ ಪ್ರಾರಂಭವಾದಾಗ ಇವರ ಇಡೀ ಕುಟುಂಬವೇ ಅದಕ್ಕೆ ಆಧಾರಸ್ತಂಭವಾಗಿ ನಿಂತಿತ್ತು. ಆ ಕಾಲದಲ್ಲಿ ಮಹಿಳೆಯರು ಮನೆಯಿಂದ ಹೊರಬಂದು ಸಾಮಾಜಿಕ ಕಾರ್ಯ ಮಾಡುವುದು ಸುಲಭವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ರುಕ್ಮಿಣಿ ಅವರು ಇಡೀ ಕರ್ನಾಟಕದ ಮೂಲೆ ಮೂಲೆಗಳಿಗೂ, ಹಳ್ಳಿ-ಜಿಲ್ಲೆಗಳಿಗೂ ಪ್ರವಾಸ ಮಾಡಿ ರಾಷ್ಟ್ರಸೇವಿಕಾ ಸಮಿತಿಯ ಕಾರ್ಯವನ್ನು ಕಟ್ಟಿ ಬೆಳೆಸಿದರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರ ಕಾರ್ಯಕಾರಿಣಿ ಸದಸ್ಯ ವಿ.ನಾಗರಾಜ್ ಸ್ಮರಿಸಿಕೊಂಡರು.

ಬಿಜಿಎಸ್ ಎಂಸಿಎಚ್ ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಸೇವೆಗಳ ಆರಂಭ

ಜಾಗತಿಕ ನಾಯಕತ್ವಕ್ಕೆ ಮನ್ನಣೆ: ಗಜೇಂದ್ರಸಿಂಗ್

ನೆಲಮಂಗಲ: 20ನೇ ಶತಮಾನವು ಭಾರತದ ರಾಜಕೀಯ ಸ್ವಾತಂತ್ರ್ಯದ ಹೋರಾಟಕ್ಕೆ ಸಾಕ್ಷಿಯಾಗಿದ್ದರೆ, 21ನೇ ಶತಮಾನವು ದೇಶದ ಅಭಿವೃದ್ಧಿ ಮತ್ತು ಜಾಗತಿಕ ನಾಯಕತ್ವವನ್ನು ನಿರ್ಧರಿಸುತ್ತದೆ ಎಂದು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ತಿಳಿಸಿದರು.

ನಗರದ ಅರಿಶಿನಕುಂಟೆ ಸಮೀಪದ ನಗರೂರಿನ ಬಿಜಿಎಸ್ ಎಂಸಿಎಚ್ ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಸೇವೆಗಳ ಆರಂಭ ಹಾಗೂ ಸಂಭ್ರಮ 2026ರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು. ಭೂಪ್ರದೇಶ, ಮಿಲಿಟರಿ ಪ್ರಾಬಲ್ಯ ಅಥವಾ ಕೈಗಾರಿಕಾ ಸಾಮರ್ಥ್ಯದ ಹಳೆಯ ಕಾಲ ಈಗ ಮುಗಿದಿದೆ. ದೇಶದ ಅಭಿವೃದ್ಧಿಗೆ ಯುವಪೀಳಿಗೆ ಶಕ್ತಿಯಾಗಿದ್ದು ಚಟಗಳಿಗೆ, ಆಮಿಷಗಳಿಗೆ ಬಲಿಯಾಗಬಾರದು. 2047ರ ವೇಳೆಗೆ ಭಾರತವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಗೆ ಯುವಪೀಳಿಗೆಯೇ ಪ್ರಮುಖ ಶಿಲ್ಪಿಗಳಾಗಿದ್ದಾರೆ ಎಂದರು.



ವಿದ್ಯಾರ್ಥಿಗಳ ಜತೆ ಸಂವಾದ: ವಿದ್ಯಾರ್ಥಿಗಳೊಂದಿಗಿನ ಪ್ರಶ್ನೋತ್ತರ ಸಂವಾದದಲ್ಲಿ ಶೇಖಾವತ್ ಅವರು ತಮ್ಮ ವೈಯಕ್ತಿಕ ಜೀವನದ ಅನುಭವಗಳನ್ನು ಹಂಚಿಕೊಂಡರು.

ಬಿಜಿಎಸ್ ಶಾಖಾ ಮಠದ ಶ್ರೀಸೌಮ್ಯನಾಥ ಸ್ವಾಮೀಜಿ, ಎಂಎಲ್‌ಸಿ ಗೋವಿಂದರಾಜು, ಸೈಬರ್ ವಿಭಾಗ ಡಿಜಿಪಿ ಡಾ.ಪ್ರಣಬ್ ಮಹಂತಿ ಐಪಿಎಸ್, ಮೆಡಿಕಲ್ ಇಲಾಖೆ ನಿರ್ದೇಶಕ ಡಾ.ಸುಜಾತ ರಾಥೋಡ್, ಟ್ರಸ್ಟಿ ದೇವರಾಜ್, ಉಪಕುಲಪತಿ ಡಾ.ಎಸ್.ಎನ್ ಶ್ರೀಧರ್, ಬಿಜಿಎಸ್ ಎಂಸಿಎಚ್ ಪ್ರಾಂಶುಪಾಲ ಡಾ.ಕೆ.ಎಸ್‌ಗಂಗಾಧರ್, ಮುಖ್ಯಸ್ಥರಾದ ಕೃಷ್ಣಮೂರ್ತಿ ಇದ್ದರು.

> ಗ್ರಾಮೀಣ ಜನರಿಗೆ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು ಆರಂಭಿಸಿದ್ದು, ಕೇಂದ್ರ ಸಚಿವರು ಉದ್ಘಾಟನೆ ಮಾಡಿದ್ದಾರೆ. ಬಹಳಷ್ಟು ಕಡಿಮೆ ಬೆಲೆಯಲ್ಲಿ ಸೇವೆಯನ್ನು ನೀಡಲಾಗುತ್ತಿದ್ದು, ಜನರು ಇದರ ಉಪಯೋಗ ಪಡೆದುಕೊಳ್ಳಬಹುದು. ಮುಂದಿನ ಯುವ ಪೀಳಿಗೆಯ ಮಹತ್ವವನ್ನು ತಿಳಿಸುವ ಮೂಲಕ ವಿಕಸಿತ ಭಾರತದ ಪರಿಕಲ್ಪನೆಯನ್ನು ಸಚಿವರು ತಿಳಿಸಿದ್ದಾರೆ. ಮುಂದಿನ ಅನೇಕ ಯೋಜನೆಗಳಿಗೆ ಸಚಿವರ ಸಹಕಾರ ಮುಖ್ಯವಾಗಿದೆ.
> ■ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸರ್ಕಾರಕ್ಕೆ ಮನವಿ

ಭೋವಿ ಸಮಾಜ ಶಾಸಕರಿಗೆ ಸಚಿವ ಸ್ಥಾನ ನೀಡಲಿ

ಬೆಂಗಳೂರು: ಭೋವಿ ಸಮುದಾಯದ ಶಾಸಕ ಶಿವರಾಜ್ ತಂಗಡಗಿ, ಎ.ಸಿ.ಶ್ರೀನಿವಾಸ್, ಪಾವಗಡದ ವೆಂಕಟೇಶ್ ಅವರು ಪಕ್ಷದ ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ನೀಡುವಂತೆ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.



ಈ ಕುರಿತು ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಮುದಾಯದಿಂದ ಶಾಸಕರಾದ ಶಿವರಾಜ್ ತಂಗಡಗಿ, ಎ.ಸಿ. ಶ್ರೀನಿವಾಸ್, ವೆಂಕಟೇಶ್ ಅವರು ಪಕ್ಷದ ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯದ ಸಂದೇಶ ಸಾರಬೇಕು. ಇನ್ನು ಭೋವಿ ಸಮುದಾಯವು ರಾಜ್ಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು, ವಿಧಾನಸೌಧ ನಿರ್ಮಾಣದಿಂದ ಹಿಡಿದು ವಿವಿಧ ನೀರಾವರಿ ಯೋಜನೆಗಳ ಅಭಿವೃದ್ಧಿಯವರೆಗೆ ಸಮುದಾಯದ ಪಾತ್ರ ಗಮನಾರ್ಹವಾಗಿದೆ ಎಂದರು.

ವಿಧಾನ ಪರಿಷತ್ ನಾಮನಿರ್ದೇಶನ ಹಾಗೂ ನಿಗಮ-ಮಂಡಳಿಗಳ ನೇಮಕಾತಿಗಳಲ್ಲಿಯೂ ಭೋವಿ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮುದಾಯಕ್ಕೆ ಸಚಿವ ಸ್ಥಾನ ನೀಡುವ ಕುರಿತು ಮನವಿ ಸಲ್ಲಿಸಲಾಗಿದೆ. ಇಬ್ಬರು ನಾಯಕರು ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದರೆ ಮೊದಲ ಹಂತದ ಸಂಪುಟ ರಚನೆಯಲ್ಲಿ ಭೋವಿ ಸಮುದಾಯಕ್ಕೆ ಅವಕಾಶ ದೊರೆಯದಿರುವುದು ಸಮುದಾಯದಲ್ಲಿ ಬೇಸರ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ. ಪರಿಶಿಷ್ಟ ಜಾತಿಗಳಲ್ಲಿನ ಪ್ರಮುಖ ಸಮುದಾಯಗಳಲ್ಲಿ ಒಂದಾದ ಭೋವಿ ಸಮುದಾಯವನ್ನು ಅವಕಾಶ ವಂಚಿತಗೊಳಿಸಬಾರದು. ಸರ್ಕಾರ ಸಮುದಾಯದ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಮುಂದಿನ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕು ಎಂದರು.

ಸಂಪಾದಕೀಯ

ಸ್ವತಂತ್ರ ಹಾದಿ ತುಳಿದ ಅಣ್ಣಾಮಲೈ

ತಮಿಳ್ನಾಡು ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಪಕ್ಷಕ್ಕೆ ರಾಜೀನಾಮೆ ನೀಡಿರುವುದು ಬಿಜೆಪಿ ಪಾಲಿಗೆ ಆ ರಾಜ್ಯದಲ್ಲಿ ತುಸು ಹಿನ್ನಡೆಯೆಂದರೆ ತಪ್ಪಾಗದು. ಇತ್ತೀಚಿನ ತಮಿಳ್ನಾಡು ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಅಣ್ಣಾಮಲೈ ಬಿಜೆಪಿ ತ್ಯಜಿಸುವ ಕುರಿತಂತೆ ಮಾತುಗಳು ಕೇಳಿಬರುತ್ತಿದ್ದವಾದರೂ ಅದು ಅಧಿಕೃತ ರೂಪು ತಳೆದಿರಲಿಲ್ಲ. ಆದರೆ ಶುಕ್ರವಾರ ಅವರು ಅಧಿಕೃತವಾಗಿ ಪಕ್ಷವನ್ನು ತ್ಯಜಿಸಿದ್ದು ತಮ್ಮ ರಾಜೀನಾಮೆ ಪತ್ರವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ನೀಡಿದ್ದಾರೆ. ಆದರೆ ಅಣ್ಣಾಮಲೈಯವರು ಬಿಜೆಪಿಯೊಂದಿಗೆ ಸೈದ್ಧಾಂತಿಕ ಭಿನ್ನಮತದಿಂದ ಪಕ್ಷ ಬಿಟ್ಟಿರುವುದಲ್ಲ. ಅವರು ವ್ಯೂಹಾತ್ಮಕ



ಭಿನ್ನಾಭಿಪ್ರಾಯದ ಕಾರಣಕ್ಕಾಗಿಯಷ್ಟೇ ಪಕ್ಷ ತ್ಯಜಿಸಿರುವುದು. ಅವರು ಬಿಜೆಪಿಯ ಹಿರಿಯ ನಾಯಕರೊಂದಿಗೆ ಮಾತುಕತೆ ನಡೆಸಿ, ಬಳಿಕ ಸೌಹಾರ್ದ ಯುತವಾಗಿಯೇ ಪಕ್ಷ ತ್ಯಜಿಸಿದ್ದಾರೆ.

ತಮಿಳ್ನಾಡು ಬಿಜೆಪಿ ಪಾಲಿಗೆ ಅಣ್ಣಾಮಲೈ ಅತ್ಯಂತ ಪ್ರಮುಖ ಮುಖವಾಗಿದ್ದರೆಂಬುದು ನಿರ್ವಿವಾದ. ತಮಿಳ್ನಾಡಿನ ದ್ರಾವಿಡ ರಾಜಕೀಯದ ಮಧ್ಯೆ ರಾಷ್ಟ್ರೀಯತೆಯ ರಾಜಕೀಯವನ್ನು ಬೆಳೆಸಲು ಅವರು ಪ್ರಯತ್ನಪಟ್ಟರು. ಅವರು ಆರಂಭಿಸಿದ 'ಎನ್ ಮಣ್ಣ್ ಎನ್ ಮಕ್ಕಳ್' ಪಾದಯಾತ್ರೆಯು ಬಿಜೆಪಿಯನ್ನು ತಳಮಟ್ಟದಲ್ಲಿ ಬೆಳೆಸಲು ಸಹಕಾರಿಯಾಗಿತ್ತು. ಈ ಪಾದಯಾತ್ರೆಯಲ್ಲಿ ಅವರು 1700 ಕಿ.ಮೀ. ಕ್ರಮಿಸಿ 39 ಲೋಕಸಭಾ ಕ್ಷೇತ್ರಗಳಿಗೂ ಭೇಟಿ ನೀಡಿದ್ದರು. ಅದರ ಬೆನ್ನಿಗೇ ನಡೆದ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ ಗಳಿಕೆ ಪ್ರಮಾಣವು ಮೊದಲಿದ್ದ ಶೇ. 3ರಿಂದ ಶೇ.11.2ಕ್ಕೆ ಏರಿತ್ತು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಅಣ್ಣಾ ಎಡಿಎಂಕೆ ಜತೆಗೆ ಮೈತ್ರಿ ಸಾಧಿಸುವುದಕ್ಕೆ ಅಣ್ಣಾಮಲೈ ವಿರೋಧವಿತ್ತು. ದ್ರಾವಿಡ ರಾಜಕೀಯಕ್ಕೆ ಬೆಂಬಲ ನೀಡಬಾರದೆಂಬುದು ಅವರ ನಿಲುವಾಗಿತ್ತು. ಆದರೆ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಂಡ ಬಿಜೆಪಿ ಮತಗಳಿಕೆಯು ಮತ್ತೆ ಶೇ.3ಕ್ಕಿಳಿದುದು ಅಣ್ಣಾಮಲೈ ತಳೆದ ನಿಲುವನ್ನು ಸಮರ್ಥಿಸುವಂತಿತ್ತು.

ಅಣ್ಣಾಮಲೈ ಹೊಸ ರಾಜಕೀಯ ಜನಾಂದೋಲನವನ್ನು ಆರಂಭಿಸುವ ಸಂಕೇತವನ್ನು ನೀಡಿದ್ದಾರೆ. ಅಣ್ಣಾಮಲೈಯವರು ಈಗಾಗಲೆ ರಾಜ್ಯದ ಜನರ ಮನ ಗೆದ್ದಿರುವುದರಿಂದ, ವೈಯಕ್ತಿಕ ನೆಲೆಯಲ್ಲೂ ದಕ್ಷ ಹಾಗೂ ಸಜ್ಜನರಾಗಿರುವುದರಿಂದ ಮತ್ತು ತಮಿಳ್ನಾಡಿನ ಜನತೆ 'ಹೀರೋ ಆರಾಧನೆ'ಯ ಸ್ವಭಾವ ಹೊಂದಿರುವುದರಿಂದ ಅಣ್ಣಾಮಲೈಯವರ ನೂತನ ರಾಜಕೀಯ ಆಂದೋಲನವು ಯಶಸ್ಸು ಕಾಣುವುದೇನೂ ಕಷ್ಟವಲ್ಲ. ವ್ಯಕ್ತಿ ಕೇಂದ್ರಿತ ಪಕ್ಷಗಳೇ ತಮಿಳ್ನಾಡಿನಲ್ಲಿ ಹೆಚ್ಚು ಯಶಸ್ಸು ಕಾಣುತ್ತಿರುವುದರಿಂದ ಅಣ್ಣಾಮಲೈ ಕೂಡಾ ಅದೇ ಯಶೋಪಥ ಹಿಡಿಯಬಲ್ಲರು. ಅಣ್ಣಾಮಲೈಯವರ ನೂತನ ರಾಜಕೀಯ ಆಂದೋಲನವು ಜನಪ್ರಿಯತೆ ಗಳಿಸಿದರೆ ಅದು ಸ್ವಾಗತಾರ್ಹವೆ. ಏನಿದ್ದರೂ ಅಣ್ಣಾಮಲೈಯವರು ರಾಷ್ಟ್ರೀಯತೆಯನ್ನು ಪ್ರತಿಪಾದಿಸುವವರೇ ಹೊರತು ದ್ರಾವಿಡ ಪಕ್ಷಗಳಂತೆ ಪ್ರಾದೇಶಿಕ ಸಂಕುಚಿತತೆಯನ್ನು ಪ್ರತಿಪಾದಿಸುವವರಲ್ಲ.

ಸೂರ್ಯ ರೇಖೆಯ ಕುರಿತಾದ ಪ್ರಶ್ನೆಗಳು



ಹಿಂದಿನ ಅಂಕಣಗಳಲ್ಲಿ ವಿವರಿಸಿದ ಸೂರ್ಯ ರೇಖೆಯ ಕುರಿತಂತೆ ಓದುಗರಲ್ಲಿ ಮೂಡಿದ ಕೆಲವು ಅನುಮಾನಗಳಿಗೆ ಉತ್ತರಗಳು ಇಲ್ಲಿವೆ.

• ಹಿಂದೆ ಒಮ್ಮೆ ಜಾತಕ ಕಳುಹಿಸಿದ್ದೆ, ನೀವು ಹೇಳಿದಂತೆ ಎಲ್ಲವನ್ನೂ ಮಾಡಿದ್ದೆವು. ನನಗೀಗ ಮದುವೆ ಆಗಿದೆ. ನಾವೇನಾದರೂ ಹಸ್ತದ ಫೋಟೋ ಕಳಿಸಿದರೆ ನೀವು ನೋಡಿ ಮುಂದಿನ ನನ್ನ ಭವಿಷ್ಯದ ಕುರಿತು ಹೇಳುವಿರಾ?

– ಸತೀಶ್, ಪೂಜಾ, ಸಿರಸಿ

ನೀವೀಗ ಮದುವೆಯಾಗಿ ಸುಖವಾಗಿ ಇದ್ದೀರಿ ಅಂದರೆ ಶುಭವಾಗಲಿ. ನಾನು ಹಿಂದೆಯೇ ಹೇಳಿದ್ದೆ; ಜಾತಕ, ನಾಡಿ, ಹಸ್ತ, ಮುಖ,ನಡೆ, ನುಡಿ, ಕುಂಡಲಿನಿ ಹೀಗೆ ಇವೆಲ್ಲವೂ ನಿಮ್ಮ ಕುರಿತಾಗಿ ಎಲ್ಲಾ ಮಾಹಿತಿಗಳನ್ನು ನೀಡುತ್ತವೆ. ಅದನ್ನು ಆಳವಾಗಿ ಅಭ್ಯಾಸ ಮಾಡಬೇಕು. ಈಗಾಗಲೇ ನಿಮಗೆ ಒಳಿತು ಆಗಿದೆ. ನೀವು ನಿಮ್ಮ ಮನೆ ದೇವರಿಗೆ ಅನುಷ್ಠಾನ ಮಾಡುವುದನ್ನು ಬಿಡಬೇಡಿ. ನಿಮ್ಮ ಪುರೋಹಿತರ ಮಾರ್ಗದರ್ಶನವನ್ನೂ ಸಹಾ ಪಡೆದುಕೊಳ್ಳಿ. ಮತ್ತು ನೀವು ಅಷ್ಟಕ್ಕೂ ತೃಪ್ತರಾಗದಿದ್ದರೆ ನನ್ನ ವಾಟ್ಸ್‌ಪ್ ನಂಬರ್‌ಗೆ ನಿಮ್ಮ ಮತ್ತು ನಿಮ್ಮ ಪತ್ನಿಯ ಜಾತಕ, ಹಸ್ತದ ಫೋಟೋಗಳನ್ನು ಕಳಿಸಿಕೊಡಿ. ಎಲ್ಲವನ್ನೂ ಹೋಲಿಕೆ ಮಾಡಿ ನೋಡಬೇಕಾಗುತ್ತದೆ.

• ನನ್ನ ಕೈಯಲ್ಲಿ ಸೂರ್ಯ ರೇಖೆಯು ನದಿ ಹರಿದಂತೆ ಓರೆಕೋರೆಯಾಗಿದೆ. ಇದರ ಅರ್ಥ ಏನು?

-ಪ್ರಶಾಂತ್, ಹುಬ್ಬಳ್ಳಿ


ನಿಮ್ಮ ಕೈಯಲ್ಲಿರುವ ಸೂರ್ಯ ರೇಖೆಯನ್ನು ವೇವಿ ಸನ್‌ಲೈನ್ ಅಥವಾ ಸರ್ಪೆಂಟೈನ್ ಸನ್‌ಲೈನ್ ಎನ್ನುತ್ತಾರೆ. ಇದರ ಅರ್ಥ ನಿಮ್ಮ ಬದುಕು ಯಾವಾಗಲೂ ಅಸ್ಥಿರತೆಯಿಂದ ಕೂಡಿರುತ್ತದೆ. ಒಮ್ಮೆ ಹಣ ಬರುತ್ತದೆ, ಹಾಗೇ ತಕ್ಷಣ ಹೋಗುತ್ತದೆ. ಇಂದು ಅರಸ ನಾಳೆ ಆಳು ಆಗಿರುತ್ತೀರಿ. ಮನಸ್ಸು ತುಂಬಾ ಚಂಚಲ. ಒಂದು ಕೆಲಸದಲ್ಲಿ ನಿಲ್ಲುವುದಿಲ್ಲ. ನಿಮ್ಮಲ್ಲಿ ಪ್ರತಿಭೆ ಇರುತ್ತದೆ, ಆದರೆ ನಿಮ್ಮ ಸ್ವಾಭಿಮಾನ ನಿಮ್ಮನ್ನು ನಿಲ್ಲದಂತೆ ಓಡಿಸುತ್ತದೆ. ಇದರಿಂದಾಗಿ ನೀವು ಎಲ್ಲಿಯೂ ಯಶಸ್ಸನ್ನು ಪಡೆಯದೇ ಕೊನೆಯಲ್ಲಿ ಮನೆಯಲ್ಲೇ ಉಳಿಯುವಂತೆ ಆಗುತ್ತದೆ.

ನಿಮಗೆ ಗುಪ್ತ ಶತ್ರುಗಳು ಜಾಸ್ತಿ. ನೀವು ಮಾಡುವ ಕೆಲಸಕ್ಕೆ ಸದಾ ಇವರೇ ಅಡ್ಡಿ. ಆದರೆ ಅವರು ನಿಮಗೆ ಶತ್ರುಗಳು ಎಂದು ಅನಿಸುವುದೇ ಇಲ್ಲ. ಕಾರಣ ಅವರು ನಿಮ್ಮೊಂದಿಗೆ ಚಂದದ ಮಾತುಗಳನ್ನು ಆಡುತ್ತಾ ನಿಮ್ಮನ್ನು ಹಾದಿ ತಪ್ಪಿಸುತ್ತಾ ಇರುತ್ತಾರೆ. ಅವರೇ ಚಾಡಿ ಹೇಳುವುದು, ಅಪವಾದ ಹೊರಿಸುವುದೂ ಸಹಾ ಮಾಡುತ್ತಾರೆ.

ನರದೌರ್ಬಲ್ಯ, ಮಾನಸಿಕ ಒತ್ತಡ, ನಿದ್ರಾಹೀನತೆ ಹೀಗೆ ಎಲ್ಲಾ ಕಾಯಿಲೆಗಳು ಒಂದೊಂದಾಗಿ ನಿಮ್ಮನ್ನು ಕಾಡುತ್ತವೆ. ಸಾಲ ಹೆಚ್ಚುತ್ತಾ ಹೋಗುತ್ತದೆ. ದುಂದುವೆಚ್ಚ ಸಹಾ ಹೆಚ್ಚುತ್ತದೆ. ಕೂಡಿಟ್ಟ ಹಣ, ಆಸ್ತಿ ಎಲ್ಲವೂ ನಿಮ್ಮ ಸಾಲಕ್ಕೆ ವ್ಯಯವಾಗುತ್ತದೆ.

ಓರೆಕೋರೆಯು ಸ್ವಲ್ಪ ಇದ್ದರೆ: ಸಣ್ಣಪುಟ್ಟ ಅಡ್ಡಿಗಳು ಸದಾ ಕಾಡುತ್ತವೆ. ಆದರೂ ನೀವು ಗುರಿ ಮುಟ್ಟುತ್ತೀರಿ. ಅದೇ ತುಂಬಾ ಇದ್ದರೆ ಜೀವನ ಪೂರ್ತಿ ಹೋರಾಟ ಮಾಡುವುದೇ ಆಗುತ್ತದೆ. ಒಂದರ ಬಳಿಕ ಮತ್ತೊಂದು ಸಮಸ್ಯೆಗಳು ಕಾಡುತ್ತಲೇ ಇರುತ್ತವೆ. ತಲೆ ರೋಸಿ ಹೋಗುವಷ್ಟು ತೊಂದರೆಗಳು ಪದೇ ಪದೇ ಕಾಡುತ್ತವೆ.

ನದಿ ಹರಿದಂತೆ ಸೂರ್ಯ ರೇಖೆ ಇದ್ದರೂ ಅದರ ಮೇಲೆ ಚೌಕಗಳು ಇದ್ದರೆ, ಅಥವಾ ಪಕ್ಕದಲ್ಲಿ ಮತ್ತೊಂದು ರೇಖೆ ಇದ್ದರೆ ಆಗ ನಿಮ್ಮ ಕಷ್ಟಗಳು ದೂರವಾಗುತ್ತವೆ. ದೊಡ್ಡ ನಷ್ಟದಿಂದ ಪಾರಾಗುತ್ತೀರಿ.



ಪರಿಹಾರ: ಯಾವುದೇ ಕೆಲಸವನ್ನೂ ಮಾಡಿ. ಎಷ್ಟೇ ಚಂಚಲತೆ ಕಾಡಿದರೂ ದೃಢವಾದ ಮನಸ್ಸಿನಿಂದ ಮಾಡುತ್ತಿರುವ ಕೆಲಸವನ್ನು ಬಿಡಬೇಡಿ. ದಿನಾಲೂ ಸೂರ್ಯ ನಮಸ್ಕಾರ ಮಾಡುವುದರಿಂದ ನಿಮ್ಮ ಸೂರ್ಯ ರೇಖೆಯು ನೇರವಾಗುತ್ತದೆ ಮತ್ತು ನಿಮ್ಮಲ್ಲೂ ಸ್ಥಿರತೆ ಬರುತ್ತದೆ. ಪ್ರಾಣಾಯಾಮ ಮಾಡಲೇಬೇಕು. ಅದರಿಂದ ನಿಮ್ಮ ನಾಡಿಗಳು ಸಮತೋಲನಗೊಳ್ಳುತ್ತವೆ. ಉಪ್ಪು ತಿನ್ನುವುದನ್ನು ಬಿಡಬೇಕು. ಪದಾರ್ಥಗಳಿಗೆ ಹಾಕುವ ಉಪ್ಪು ಬಿಟ್ಟು ಮೇಲಿನಿಂದ ಯಾವ ಕಾರಣಕ್ಕೂ ಉಪ್ಪನ್ನು ತಿನ್ನಬಾರದು. ಮೈಮೇಲೆ ಯಾವುದೇ ಹರಳುಗಳನ್ನು ಧರಿಸಬೇಡಿ. ಬಂಗಾರವನ್ನೂ ಹಾಕಿಕೊಳ್ಳಬೇಡಿ.

ನಿಮ್ಮ ಸೂರ್ಯ ರೇಖೆ ಹಾವು ಹರಿದಂತೆ (ನಿಮ್ಮ ಪ್ರಕಾರ ನದಿ ಹರಿದಂತೆ) ಇದ್ದರೂ ಪಕ್ಕದ ಹೃದಯ ರೇಖೆ ಮತ್ತು ಬುದ್ಧಿ ರೇಖೆ ಆಳವಾಗಿ ಚೆನ್ನಾಗಿ ಇದ್ದರೆ, ಗುರು ಪರ್ವತ ಉಬ್ಬಿ, ಗುಲಾಬಿ ಬಣ್ಣವಾಗಿದ್ದರೆ, ನೀವು ನಿಮ್ಮ ದುರದೃಷ್ಟವನ್ನು, ಅಸ್ಥಿರತೆಯನ್ನು ಬುದ್ಧಿಯಿಂದ ಗೆಲ್ಲಬಹುದು.

• ನನ್ನ ಸೂರ್ಯ ರೇಖೆಯ ಮೇಲೆ ಗುಣಿಸು ಚಿಹ್ನೆಗಳಿವೆ. ನೀವು ಅದರ ಬಗ್ಗೆ ಹೇಳಿಲ್ಲ. ದಯವಿಟ್ಟು ತಿಳಿಸಿ.

– ಶೃಂಗೇರಿ ಮೋಹನ್

ಮೊದಲೇ ಹೇಳಿದಂತೆ ಇದು ನಿಮ್ಮ ಎಲ್ಲಾ ಕೆಲಸಗಳಿಗೂ ಅಡೆತಡೆ ನೀಡುವ ಚಿಹ್ನೆ. ಇದೊಂದು ಎಚ್ಚರಿಕೆಯನ್ನು ನೀಡುವ ಕೆಂಪುದೀಪ!! ನಿಮ್ಮ ಪ್ರಯತ್ನವನ್ನೆಲ್ಲಾ ಕತ್ತರಿಸುವ ಕೆಲಸವನ್ನು ಇದು ಮಾಡುತ್ತದೆ. ಮಾಡುತ್ತಿರುವ ಕೆಲಸ ದಿಢೀರನೆ ನಿಂತು ಹೋಗುತ್ತದೆ. ಪ್ರಾಜೆಕ್ಟ್ ನಿಮ್ಮಿಂದ ಹೊರಟು ಹೋಗುತ್ತದೆ. ಉದ್ಯೋಗ ಸಹಾ ಕಳೆದುಕೊಳ್ಳಬಹುದು. ಹಣ ಬರುವುದು ನಿಂತು ಹೋಗುತ್ತದೆ.

ಮಾಡದ ಕೆಲಸಕ್ಕೆ ಅಪವಾದ ಬರುತ್ತದೆ. ನೀವು ಕೋರ್ಟ್, ಪೋಲೀಸ್ ಸ್ಟೇಶನ್ ಎಂದೆಲ್ಲಾ ಅಲೆಯಬೇಕಾಗಬಹುದು. ನಿಮ್ಮ ಬಗ್ಗೆ ಪತ್ರಿಕೆಗಳಲ್ಲಿ, ಟೀವಿಗಳಲ್ಲಿ ಅವಹೇಳನದ ಸುದ್ದಿಗಳು ಬರುತ್ತವೆ. ಜನ ನಿಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ. ದೈಹಿಕವಾಗಿ ಅಪಾಯ ಉಂಟಾಗಬಹುದು. ಆಸ್ಪತ್ರೆ ಸೇರುವಂತೆ ಆಗಬಹುದು.

ಆರಂಭದಲ್ಲಿಯೇ ಅಂದರೆ ಮಣಿಕಟ್ಟಿನ ಬಳಿ ಇದ್ದರೆ: ಬರುವ ಆಸ್ತಿಯನ್ನೂ ಸಹಾ ಕೋರ್ಟ್ ಅಲೆದು ಪಡೆಯುವಂತೆ ಆಗುತ್ತದೆ. ವೃತ್ತಿಯಲ್ಲಿ ಅವಮಾನ ಮತ್ತು ಕೆಲಸದಿಂದ ತೆಗೆದುಹಾಕಲಾಗುತ್ತದೆ. ಮಧ್ಯದಲ್ಲಿ ಇದ್ದರೆ ಮಧ್ಯ ವಯಸ್ಸಿನಲ್ಲಿ ನಿಮ್ಮ ವ್ಯಾಪಾರ ಬಿದ್ದು ಹೋಗುತ್ತದೆ. ಸಸ್ಪೆಂಡ್ ಆಗಿ ಮನೆಯಲ್ಲಿ ಕೂರುವಂತೆ ಆಗುತ್ತದೆ. ಬೆರಳುಗಳ ಸನಿಹ ಗುಣಿಸುವ ಚಿಹ್ನೆ ಇದ್ದರೆ; ನಿಮ್ಮನ್ನು ವೃದ್ಧಾಶ್ರಮಕ್ಕೆ ಸೇರಿಸುವುದು ಗ್ಯಾರಂಟಿ. ನಿಮ್ಮ ಸೋಲಿನ ಕುರಿತು ನಿಮಗೆ ನಿಮ್ಮ ಕುಟುಂಬದವರೇ ಅವಮಾನ ಮಾಡುತ್ತಾರೆ. ಸಮಾಜ ಸಹಾ ನಿಮ್ಮನ್ನು ಬಹಿಷ್ಕಾರ ಹಾಕುತ್ತದೆ.

ಗುಣಿಸುವ ಚಿಹ್ನೆಯ ಬಳಿಕ ಸೂರ್ಯ ರೇಖೆಯು ನೇರವಾಗಿ ಇದ್ದರೆ: ಪ್ರತಿ ಸಾರಿಯೂ ನೀವು ಸೋಲಿನಿಂದ ಚೇತರಿಸಿಕೊಳ್ಳುತ್ತೀರಿ. ಅದೇ ಚಿಹ್ನೆಯ ಬಳಿಕ ರೇಖೆಯು ಕತ್ತರಿಸಿ ಹೋಗಿದ್ದರೆ ನಿಮ್ಮ ದುರದೃಷ್ಟವನ್ನು ಸರಿಪಡಿಸಲು ತುಂಬಾ ಕಷ್ಟ ಪಡಬೇಕಾಗುತ್ತದೆ. ಗುಣಿಸುವ ಚಿಹ್ನೆಯ ಮೇಲೆ ಚೌಕ ಇದ್ದರೆ ಸೋಲು ತಪ್ಪುತ್ತದೆ. ತ್ರಿಕೋನ ಇದ್ದರೆ ಎಲ್ಲಾ ಕೇಸ್‌ಗಳಿಂದಲೂ ಮುಕ್ತರಾಗುತ್ತೀರಿ ಮತ್ತು ಆಸ್ತಿ, ಅಪವಾದಗಳನ್ನೂ ಸಹಾ ಜಯಿಸುತ್ತೀರಿ.

ಪರಿಹಾರ: ನೀವು ಯಾವ ಕೆಲಸವನ್ನು ಮಾಡುವಾಗಲೂ ಬುದ್ಧಿ ಪೂರ್ವಕವಾಗಿ ಮಾಡಿ. ಪೂರ್ವ ತಯಾರಿ ಇಲ್ಲದೇ ಮಾಡಬೇಡಿ. ಯಾರೊಂದಿಗಾದರೂ ಚರ್ಚಿಸಿ ತೀರ್ಮಾನವನ್ನು ಮಾಡಿ. ಯಾವುದೇ ಕೆಲಸವಾದರೂ ನೀವು ಸಾಕ್ಷಿ ಹಾಕುವುದು, ಅವರಿಗೆ ಜಾಮೀನು ನೀಡುವುದು. ಪರ ವಹಿಸಿಕೊಂಡು ಜವಾಬ್ದಾರಿ ವಹಿಸಿಕೊಳ್ಳುವುದು ಮಾಡಲೇ ಬೇಡಿ. ದಿನಾಲೂ ಸೂರ್ಯ ನಮಸ್ಕಾರ ಮಾಡಿ. ಆದಿತ್ಯ ಹೃದಯ ಪಾರಾಯಣ ಮಂತ್ರವನ್ನು ನೀವೇ ಕಲಿತು ನಿತ್ಯವೂ ಮಾಡಿ. ತಂದೆ ಅಥವಾ ಗುರುಗಳ ಸೇವೆ ಮಾಡಿ ಮತ್ತು ಗೋಧಿ ಹಾಗೂ ಬೆಲ್ಲವನ್ನೂ ಪ್ರತಿ ಭಾನುವಾರ ದಾನ ಮಾಡಿ.

• ನನ್ನ ಸೂರ್ಯ ರೇಖೆ ಕತ್ತರಿಸಿ ಹೋಗಿದೆ ಮತ್ತು ಅಲ್ಲಲ್ಲಿ ಕೂಡುವ ಚಿಹ್ನೆ ಇದೆ. ನೀವು ಹಸ್ತದ ಚಿತ್ರವನ್ನು ಕಳಿಸು ಎಂದರೆ ಕಳಿಸುತ್ತೇನೆ. ದಯವಿಟ್ಟು ತಿಳಿಸಿ. ನನ್ನ ಭವಿಷ್ಯವು ಹೇಗಿದೆ ಹೇಳಿ.

– ಚಂದ್ರಶೇಖರ್, ಕಳಸ

ಕೂಡುವ ಚಿಹ್ನೆ ಇದೆ ಎಂದಾದರೆ ನೀವು ಸದಾ ತ್ಯಾಗವನ್ನು ಮಾಡುತ್ತಾ ಇರುತ್ತೀರಿ ಅಥವಾ ಮಾಡುವುದು ಅನಿವಾರ್ಯವಾಗಿರುತ್ತದೆ. ಸೇವೆ, ಧರ್ಮ, ದಾನ, ಕೊಡುಗೈ ಹೀಗೆ ನೀವು ಧರ್ಮದರ್ಶಿಗಳು ಆಗಬಹುದು. ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಮಯ ಬಂದಾಗಲೆಲ್ಲಾ ಎಲ್ಲರೂ ನಿಮ್ಮ ಕಡೆ ತೋರಿಸುತ್ತಾರೆ. ಕಾರಣ ಎಷ್ಟೆಲ್ಲಾ ಖರ್ಚು ಬಂದರೂ ನೀವು ಕೈಯಿಂದ ಹಾಕಿಯಾದರೂ ಆ ಕೆಲಸವನ್ನು ಪೂರೈಸುತ್ತೀರಿ. ನೀವು ಡಾಕ್ಟರ್, ನರ್ಸ್, ಸಮಾಜಸೇವಕ, ಪ್ರತಿಫಲ ಬಯಸದ ಕೆಲಸಗಳು ಯಾವುದೇ ಇದ್ದರೂ ಅದು ನಿಮ್ಮ ಪಾಲಿಗೆ ಬರುತ್ತದೆ. ಹೆಸರು ಬಂದರೂ ಹಣ ಹರಿದು ಹೋಗುತ್ತಿರುತ್ತದೆ.

ನಿಮ್ಮಲ್ಲಿ ಧರ್ಮ–ಅಧರ್ಮ, ಕುಟುಂಬ–ಸಮಾಜ, ಮನೆ–ಆಫೀಸ್, ಆಸೆ–ನೀತಿ, ಸೇವೆ–ಹಣ ಹೀಗೆ ದ್ವಂದ್ವ ಮತ್ತು ಜಗಳ ಎರಡೂ ನಡೆಯುತ್ತಿರುತ್ತವೆ. ಪರಿಣಾಮ ನಿಮ್ಮ ಕುಟುಂಬದವರು ನಿಮ್ಮಿಂದ ದೂರವಾಗುತ್ತಾರೆ. ಸ್ನೇಹಿತರು ಶತ್ರುಗಳಾಗುತ್ತಾರೆ. ಹಿಂಬಾಲಕರು ಕೈತುಂಬಾ ಗಳಿಸುತ್ತಾರೆ. ನೀವು ಮಾತ್ರ ಕೊನೆಗೂ ಯಾರಿಗೂ ಸಲ್ಲದವರಾಗುತ್ತೀರಿ.

ಸೂರ್ಯ ರೇಖೆಯ ತುದಿಯಾದ ಬೆರಳುಗಳ ಸನಿಹ ಇದ್ದರೆ, ನೀವು ನಿಮ್ಮದಾದ ಎಲ್ಲವನ್ನೂ ದಾನ ಮಾಡಿ ಸಂನ್ಯಾಸಿಗಳೋ, ಜಗದ್ಗುರುಗಳೋ, ಮಹಾನ್ ನೇತಾರರೋ ಆಗುತ್ತೀರಿ. ನಿಮ್ಮ ಯಶಸ್ಸು ಯಾವಾಗಲೂ ಲೋಕಕ್ಕೆ ಮೀಸಲಾಗಿರುತ್ತದೆ. ಇನ್ನು ಸೂರ್ಯ ರೇಖೆ ಕತ್ತರಿಸಿ ಹೋಗಿದ್ದರೆ ಯಾವುದೇ ಫಲ ಇರುವುದಿಲ್ಲ.

ಎಂತಹ ವೈದ್ಯರನ್ನು ಬಿಡಬೇಕು

ಅಜ್ಞಾತ ಶಾಸ್ತ್ರಸದ್ಭಾವಾನ್ ಶಸ್ತ್ರಮಾತ್ರ ಪರಾಯಣಾನ್।
ತ್ಯಜೇದ್ ದುರಾದ್‌ಭಿಷಕ್‌ಪಾಶಾನ್ ವೈವಸ್ವತಾನಿವ -ಸುಭಾಷಿತ ರತ್ನಭಾಂಡಾಗಾರ

ಶಾಸ್ತ್ರವನ್ನು ವ್ಯಾವಹಾರಿಕವಾಗಿ ತಿಳಿಯದೆ ಶಸ್ತ್ರಗಳನ್ನು ಬಳಸುವುದರಲ್ಲಿ ಮಾತ್ರ ಆಸಕ್ತರಾದ ನೀಚ ವೈದ್ಯರುಗಳನ್ನು ಯಮಪಾಶವೆಂಬಂತೆ ದೂರದಿಂದಲೇ ಬಿಟ್ಟುಬಿಡಬೇಕು – ಎಂಬುದು ಶ್ಲೋಕಾರ್ಥ.

ಸಮಾಜದಲ್ಲಿ ಸಾಕಷ್ಟು ಒಳ್ಳೆಯ ವೈದ್ಯರಿದ್ದಾರೆ. ಅತ್ಯಂತ ಕಡಿಮೆ ಹಣವನ್ನು ಪಡೆದುಕೊಂಡು ಚಿಕಿತ್ಸೆ ನೀಡುವವರಿದ್ದಾರೆ. ಹಳ್ಳಿಗಳಿಗೆ ಭೇಟಿಯಿತ್ತು ಚಿಕಿತ್ಸೆ ಕೊಡುವ, ಉಚಿತ ಸೇವೆಮಾಡುವ ವೈದ್ಯರೂ ಇದ್ದಾರೆ. ಸಮೀಪಕ್ಕೆ ಬಂದ ರೋಗಿಗಳಿಗೆ ಭರವಸೆಯ ಮಾತುಗಳನ್ನು ಹೇಳಿ ಔಷಧವಿಲ್ಲದೇ ರೋಗಮುಕ್ತರನ್ನಾಗಿಸುವ ವೈದ್ಯರೂ ಇದ್ದಾರೆ.



ಕೇವಲ ನಾಡಿ ಹಿಡಿದು ರೋಗವನ್ನು ಪತ್ತೆ ಹಚ್ಚಿ ಔಷಧ ನೀಡಿ ರೋಗಗಳನ್ನು ಗುಣಪಡಿಸಿದವರೂ ಇದ್ದಾರೆ.

ಹಿಂದೆ ಇಂಥವರ ಸಂಖ್ಯೆ ಜಾಸ್ತಿಯಿತ್ತು. ಇಂದು ಇಲ್ಲವೆನ್ನುವಂತಿಲ್ಲ. ಅಂಥವರ ಸಂಖ್ಯೆ ತೀರಾ ಕಡಿಮೆ. ಇಂದು ಸರಿಯಾಗಿ ಪರೀಕ್ಷಿಸದೆ ಮದ್ದು ಕೊಡುವವರಿದ್ದಾರೆ. ತಮಗೆ ನೀಡಿದ ಔಷಧದ ಸ್ಯಾಂಪಲ್‌ಗಳನ್ನೇ ರೋಗಿಗೆ ನೀಡಿ ಹಣ ಮಾಡುವವರಿದ್ದಾರೆ. ಶಸ್ತ್ರಚಿಕಿತ್ಸೆಯ ಅಗತ್ಯ ಇಲ್ಲದಿದ್ದರೂ ಹೆದರಿಸಿ ಶಸ್ತ್ರಚಿಕಿತ್ಸೆಗೆ ಒಳಪಡಿಸುವವರೂ ಇದ್ದಾರೆ. ಒಂದಕ್ಕೆ ಎರಡು ಪಟ್ಟು ಹಣವನ್ನು ಅಪೇಕ್ಷಿಸುವವರೂ ಇದ್ದಾರೆ. ಶಾಸ್ತ್ರಜ್ಞಾನವಿಲ್ಲದಿದ್ದರೂ, ವ್ಯಾವಹಾರಿಕವಾಗಿ ಹಣ ವಸೂಲಿ ಮಾಡುವ ಕಲೆಯನ್ನು ಕರತಲಾಮಲಕ ಮಾಡಿಕೊಂಡ ವೈದ್ಯರಿದ್ದಾರೆ. ಇವರಿಗೆ ಹಣವೇ ಮುಖ್ಯ ವಿನಾ ಜೀವವಲ್ಲ. ಆದ್ದರಿಂದಲೇ ಇಂಥವರ ನಡೆ ನೋಡಿ ಕವಿಯು 'ಯಮೋ ಹರಿತಿ ಪ್ರಾಣಾನ್ ವೈದ್ಯೋ ಪ್ರಾಣಾನ್ ಧನಾನಿ ಚ' ಎಂದು ಟೀಕಿಸಿದ್ದಾನೆ. ಯಮನು ಪ್ರಾಣವನ್ನು ಮಾತ್ರ ಒಯ್ದರೆ ಕೆಟ್ಟ ವೈದ್ಯನು ಪ್ರಾಣಗಳನ್ನೂ, ಸಂಪತ್ತನ್ನೂ, ನೆಮ್ಮದಿಯನ್ನೂ ಒಯ್ಯುತ್ತಾನೆ. ಒಟ್ಟಿನಲ್ಲಿ ಹಣಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ವೈದ್ಯರಿದ್ದಾರೆ ಎಂಬುದು ಸತ್ಯ.

ಯಾವುದೇ ಶಾಸ್ತ್ರವನ್ನಾಗಲಿ ಶಾಸ್ತ್ರದೃಷ್ಟಿಯಿಂದ ನೋಡದೆ ವ್ಯಾವಹಾರಿಕವಾಗಿ ನೋಡಬೇಕು. ಶಾಸ್ತ್ರವು ಒಂದಿಷ್ಟು ವಿಧಿ–ವಿಧಾನಗಳನ್ನು ಹೇಳುತ್ತದೆ. ನಿಯಮವನ್ನು ವಿಧಿಸುತ್ತದೆ. ಹೀಗೆಂದ ಮಾತ್ರಕ್ಕೆ ಶಾಸ್ತ್ರ ನಿರ್ದೇಶನವೆಂದು ಹೇಳಿ ವ್ಯವಹಾರ ಪಥಕ್ಕೆ ಇಳಿಸಬಾರದು. ಹಾಗೆ ಇಳಿಸಿದರೆ ಪ್ರಮಾದವಾಗುತ್ತದೆ. 'ಸರ್ವೇ ನಿಯಮಾಃ ಪಾಪವಾದಾಃ' ಎಂಬ ಅನುಭವದ ಉಕ್ತಿಯಿದೆ. ಎಲ್ಲ ವಿಧಿ–ನಿಯಮಗಳು ದೇಶ–ಕಾಲ, ಸಂದರ್ಭ, ವ್ಯಕ್ತಿ... ಇವುಗಳನ್ನು ಅವಲಂಬಿಸುತ್ತ ತಜ್ಞನಾದವನು ಇವೆಲ್ಲವನ್ನೂ ಅರ್ಥೈಸಿಕೊಂಡು ವ್ಯವಹರಿಸಬೇಕು. ರೋಗ ಒಂದೇ ಆಗಿದ್ದರೂ, ನೀಡುವ ಔಷಧ ಒಂದೇ ಬಗೆಯಾಗಿದ್ದರೂ ರೋಗಿಯನ್ನು ಗಮನಿಸಿ, ಅವನ ಶರೀರ ಪ್ರಕೃತಿಯನ್ನು ಅನುಲಕ್ಷಿಸಿ ಔಷಧೋಪಚಾರವನ್ನು ನಡೆಸಬೇಕಾಗುತ್ತದೆ. ಇದನ್ನು ಅರಿತವನೇ ಸರಿಯಾದ ವೈದ್ಯ. ಶಾಸ್ತ್ರದ ಹಿನ್ನೆಲೆ, ಚಿಕಿತ್ಸಾ ನೈಪುಣ್ಯತೆ... ಇತ್ಯಾದಿ ತಿಳಿಯದೇ ಔಷಧ ನೀಡಲು ಮುಂದಾದ ವೈದ್ಯರನ್ನು ನೀಚರೆಂದೇ ಹೇಳಬೇಕು. ಇಂಥವರನ್ನು ದೂರ ಇಡುವುದೇ ವಾಸಿ. ಯಮ ಪಾಶದಿಂದ ದೂರ ಇರಲು ಬಯಸುವಂತೆ ಇಂಥಹ ವೈದ್ಯರಿಂದ ದೂರವಿರಬೇಕಾದುದು ಎಲ್ಲರ ಕರ್ತವ್ಯ. ಅದಿಲ್ಲದಿದ್ದರೆ ಯಮನ ಮನೆಯ ಅತಿಥಿಯಾಗಬೇಕಾದೀತು. ಒಟ್ಟಿನಲ್ಲಿ ಹೇಳುವುದಿಷ್ಟೆ! ಶಾಸ್ತ್ರಜ್ಞಾನಕ್ಕಿಂತಲೂ ಅನುಭವ ಮುಖ್ಯ. ವ್ಯವಹಾರ ಜ್ಞಾನ ಅತೀ ಮುಖ್ಯ.

ಜನ್ಮ, ಕರ್ಮ, ಪುನರ್ಜನ್ಮ

ದೃಷ್ಟಿಗೋಚರವಾದ ಈ ಭೌತಿಕ ಜಗತ್ತನ್ನು ನಡೆಸುವುದು ಇದರ ಹಿಂದಿರುವ ಅಗೋಚರವಾದಿ ಒಂದು ಸೂಕ್ಷ್ಮ ಶಕ್ತಿ. ಅದನ್ನೇ ಪರಮಾತ್ಮ, ಬ್ರಹ್ಮ, ದೇವರು ಎಂದೆಲ್ಲ ಕರೆದಿದ್ದಾರೆ.



ಮನುಷ್ಯನ ಹುಟ್ಟು, ಸಾವು, ಪುನರ್ಜನ್ಮಗಳ ಬಗ್ಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಈ ರೀತಿಯಲ್ಲಿ ಬೋಧಿಸುತ್ತಾನೆ :-

ವಾಸಾಂಸಿ ಜೀರ್ಣಾನಿಯಥಾವಿಹಾಯ
ನವಾನಿಗೃಹ್ಣಾತಿ ನರೋಽಪರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾನ್
ಅನ್ಯಾನಿ ಸಂಯಾತಿ ನವಾನಿ ದೇಹಿ ।। ಅ2 ಶ್ಲೋ:22।।

''ಹೇಗೆ ಮನುಷ್ಯನು ಹಳೆಯದಾದ ವಸ್ತ್ರಗಳನ್ನು ಬಿಚ್ಚಿ ಹಾಕಿ ಬೇರೆಯ, ಹೊಸದಾದ ಬಟ್ಟೆಗಳನ್ನು ಧರಿಸುತ್ತಾನೋ ಹಾಗೆಯೇ ಜೀವಾತ್ಮನು ಹಳೆಯದಾದ ಶರೀರವನ್ನು ಕಳಚಿಟ್ಟು ಬೇರೆ ಹೊಸ ಶರೀರವನ್ನು ಪಡೆಯುತ್ತಾನೆ''

ಜಾತಸ್ಯ ಹಿ ಧ್ರುವೋಮೃತ್ಯುರ್ಧ್ರುವಂ ಜನ್ಮಮೃತಸ್ಯ ಚ।
ತಸ್ಮಾದ ಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ।।

''ಹುಟ್ಟಿದವನ ಮರಣವು ನಿಶ್ಚಿತವಾಗಿದೆ ಮತ್ತು ಸತ್ತವನ ಮರುಹುಟ್ಟು ಕೂಡ ನಿಶ್ಚಿತವಾಗಿದೆ. ಆದ್ದರಿಂದ ಈ ಪರಿಹಾರೋಪಾಯವಿಲ್ಲದ ವಿಷಯದಲ್ಲಿ ನೀನು ಶೋಕಿಸುವ ಅಗತ್ಯವಿಲ್ಲ.''

ಹಿಂದು ಎನ್ನುವಾಗ ಅವನಲ್ಲಿ ಕೆಲವು ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು ಇರಬೇಕಾಗುತ್ತದೆ. ಅವೇ ಓರ್ವ ಹಿಂದುವಿನ ಅಸ್ಮಿತೆ ಅಥವಾ ಗುರುತು–ಪರಿಚಯ (Identity) ಎನಿಸಿಕೊಳ್ಳುತ್ತವೆ. ಹಿಂದುವಿನ ಅಥವಾ ಹಿಂದು ಧರ್ಮದ ವಿಶೇಷತೆಗಳೇನು ಎಂದು ವಿದೇಶಿಯರು, ಅನ್ಯಮತೀಯರು ಕೇಳಿದರೆ ಇಂದು ಅನೇಕ ಹಿಂದುಗಳೇ ಉತ್ತರಿಸುವ ಸ್ಥಿತಿಯಲ್ಲಿಲ್ಲ. ಆತ್ಮ ಶಾಶ್ವತ, ಅದಕ್ಕೆ ಅಳಿವಿಲ್ಲ, ಶರೀರಕ್ಕೆ ಅಳಿವಿದೆ. ಸಾವಿನ ನಂತರ ಜೀವಾತ್ಮ ತಾನು ಮಾಡಿರುವ ಪಾಪ–ಪುಣ್ಯಗಳ ಫಲವನ್ನನುಭವಿಸಲು ಬೇರೊಂದು ಶರೀರವನ್ನು ಧಾರಣೆ ಮಾಡುತ್ತದೆ. ಅಲ್ಲವಾದರೆ ಈ ಭೌತಿಕ ಜಗತ್ತಿನಲ್ಲಿ ಅನೇಕರು ಭೌತಿಕ ಸುಖವನ್ನನುಭವಿಸುವುದು, ಇನ್ನು ಕೆಲವರು ಭೌತಿಕ ಜೀವನದಲ್ಲಿ ಬಹಳ ಕಷ್ಟಗಳಲ್ಲಿ, ಬಡತನದಲ್ಲಿ ತೊಳಲಾಡುತ್ತಿರುವುದಕ್ಕೆ ಉತ್ತರ ಸಿಗುವುದಿಲ್ಲ. ತಾನು ಮಾಡಿದ ಪಾಪಕರ್ಮ–ಪುಣ್ಯಕರ್ಮಗಳನ್ನು ಭೋಗಿಸಲೆಂದೇ ಜೀವಾತ್ಮವು ಬೇರೆ ಬೇರೆ ಜನ್ಮಗಳನ್ನು ಪಡೆಯುತ್ತದೆ. ಬಸವಣ್ಣನವರು ಹೇಳುತ್ತಾರೆ ''ಸ್ಥಾವರಕ್ಕಳಿವುಂಟು ಜಂಗಮಕೆ ಅಳಿವಿಲ್ಲ'' ಹುಟ್ಟು ಸಾವು ಎಂಬುದು ಕೇವಲ ಮನುಷ್ಯ ಜೀವಿಗಳಿಗೆ ಮಾತ್ರ ಸೀಮಿತವಲ್ಲ, ಎಲ್ಲ ಮೃಗ, ಪಕ್ಷಿ, ಜಂತು, ಕೀಟ, ಸಸ್ಯವರ್ಗಗಳಿಗೂ ಅನ್ವಯಿಸುತ್ತದೆ. ಅದರೊಂದಿಗೆ ಕರ್ಮಸಿದ್ಧಾಂತವೂ ಅನ್ವಯಿಸುತ್ತದೆ. ಪ್ರತಿಯೊಂದು ಕ್ರಿಯೆಗೂ ಪ್ರತಿಕ್ರಿಯೆ ಎಂಬುದಿದೆ. ಇದು ನ್ಯೂಟನ್ ಹೇಳಿದ ವೈಜ್ಞಾನಿಕ ಸೂತ್ರ. ಇದು ಭೌತಿಕ ಲೋಕಕ್ಕೆ ಹೇಗೆ ಅನ್ವಯವಾಗುತ್ತದೋ ಹಾಗೆ ಆಧ್ಯಾತ್ಮಿಕ ಲೋಕಕ್ಕೂ ಅನ್ವಯವಾಗುತ್ತದೆ. ಕೆಟ್ಟ ಕರ್ಮಕ್ಕೆ ಕೆಟ್ಟ ಫಲ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ. ಬಿತ್ತಿದಂತೆ ಬೆಳೆ.

ದೃಷ್ಟಿಗೋಚರವಾದ ಈ ಭೌತಿಕ ಜಗತ್ತನ್ನು ನಡೆಸುವುದು ಇದರ ಹಿಂದಿರುವ ಅಗೋಚರವಾದಿ ಒಂದು ಸೂಕ್ಷ್ಮ ಶಕ್ತಿ. ಅದನ್ನೇ ಪರಮಾತ್ಮ, ಬ್ರಹ್ಮ, ದೇವರು ಎಂದೆಲ್ಲ ಕರೆದಿದ್ದಾರೆ. ಆ ಮೂಲಶಕ್ತಿ ಸ್ವತಃ ಏನು ಮಾಡುವುದಿಲ್ಲ. ಈ ಸೃಷ್ಟಿಯನ್ನು ಪಾಲಿಸಲು ಅನೇಕ ಅಗೋಚರ ಶಕ್ತಿಗಳನ್ನು ರಚಿಸಿಟ್ಟಿದ್ದಾನೆ. ಗುರುತ್ವಾಕರ್ಷಣ ಶಕ್ತಿ, ಅಣುಶಕ್ತಿ, ವಿದ್ಯುತ್ ಶಕ್ತಿ, ವಿಕಿರಣ, ಬೆಳಕು, ಉಷ್ಣ ಇತ್ಯಾದಿ. ಭೌತಿಕ ಜೀವನದಲ್ಲಿ ಇವುಗಳು ಅಗೋಚರವಾಗಿದ್ದರೂ ಅವುಗಳ ಅನುಭವ ಆಗುತ್ತದೆ. ಅದೇ ರೀತಿ ಜೀವಾತ್ಮದ ನಿಯಂತ್ರಣಕ್ಕಾಗಿ ಮನಸ್ಸು, ಬುದ್ಧಿ, ಪ್ರಾಣ ಎಂಬ ಶಕ್ತಿಗಳನ್ನು ದೇವರು ನೀಡಿದ್ದಾನೆ. ಇನ್ನು ಮಾನವನು ಮಾಡಿದ ಕರ್ಮಗಳಿಗೆ – ಅವುಗಳ ಫಲಗಳ ನಿಯಂತ್ರಣಕ್ಕಾಗಿ ವಿಧಿ ಎಂಬ ಶಕ್ತಿಯನ್ನು ಇಟ್ಟಿದ್ದಾನೆ. ಜೀವಿ ಮಾಡಿದ ಪ್ರತಿಯೊಂದು ಕರ್ಮವೂ ಆತನ ಒಳಮನಸ್ಸು ಅಥವಾ ಚಿಪ್ಸ್–ಹಾರ್ಡ್‌ಡಿಸ್ಕ್‌ನಲ್ಲಿ ದಾಖಲಾಗುತ್ತದೆ. ಒಳ್ಳೆ ಕರ್ಮಗಳ ಫೈಲ್ ಬೇರೆ, ಕೆಟ್ಟ ಕರ್ಮಗಳ ಫೈಲ್ ಬೇರೆ. ಇದನ್ನು ನಿಯಂತ್ರಿಸುವ ಶಕ್ತಿಗೆ ಚಿತ್ರಗುಪ್ತ ಎಂಬ ಹೆಸರು. ಪಾಪ–ಪುಣ್ಯಗಳ ಫಲಾಫಲಗಳನ್ನು ನೀಡುವ ಅಂದರೆ ನ್ಯಾಯ ದಾನ ಮಾಡುವ ಶಕ್ತಿಗೆ ಯಮಧರ್ಮ ಎಂದು ಹೆಸರು.



ಈ ಭೌತಿಕ ಜಗತ್ತಿನ ನ್ಯಾಯಾಲಯಗಳಲ್ಲಿ ನ್ಯಾಯ ಸಿಗದೇ ಹೋಗಬಹುದು. ನಿರಪರಾಧಿಗೆ ಶಿಕ್ಷೆ ಆಗಬಹುದು. ಅಪರಾಧಿಗೆ ನಿರಪರಾಧಿ ಎಂದು ಬಿಡುಗಡೆಯಾಗಬಹುದು. ಆದರೆ ಮೇಲಿನ ನ್ಯಾಯಾಲಯದಲ್ಲಿ ಕರ್ಮಗಳಿಗನುಗುಣವಾದ ಶಿಕ್ಷೆ–ರಕ್ಷೆ ಕರಾರುವಾಕ್ಕಾಗಿ ಲಭಿಸುತ್ತದೆ.

ಕೆಲವರು ಕೆಟ್ಟವರು, ಪಾಪಿಗಳು ತುಂಬ ಶ್ರೀಮಂತರಾಗಿ, ಶಾಸಕರು, ಸಚಿವರು, ಉದ್ಯಮಿಗಳು, ಅಧಿಕಾರಿಗಳು ಆಗಿ ಮೆರೆಯುವುದನ್ನು ಕಾಣುತ್ತೇವೆ. ಇನ್ನು ಕೆಲವರು ಹುಟ್ಟಿದಾರಭ್ಯ ಯಾವುದೇ ಕೆಟ್ಟ ಕರ್ಮಗಳನ್ನು ಮಾಡದೇ ಸಜ್ಜನರಾಗಿದ್ದರೂ ತುಂಬ ಕಷ್ಟ, ಬಡತನಗಳಿಂದ ತೊಳಲಾಡುತ್ತಿರುವುದನ್ನೂ ನೋಡುತ್ತೇವೆ. ಕೆಲವರು ನಿರಂತರ ಸಿಗರೇಟ್–ಬೀಡಿ ಸೇದುತ್ತಿರುವವರಿಗೆ ಕ್ಯಾನ್ಸರ್ ಬರದೆ ಹಾಯಾಗಿರುವುದನ್ನು, ಯಾವುದೇ ಬೀಡಿ, ಸಿಗರೇಟು, ತಂಬಾಕು ಸೇದದವರಿಗೆ ಕ್ಯಾನ್ಸರ್ ಬರುವುದನ್ನು ನೋಡುತ್ತೇವೆ. ನಾವು ಅವರ ಈ ಪ್ರಸಕ್ತ ಜನ್ಮದ ಕರ್ಮಗಳನ್ನು ಮಾತ್ರ ಗಮನಿಸುವುದರಿಂದ ಈ ಅನುಮಾನ ಮೂಡುವುದು ಸಹಜ. ಆದರೆ ಆತನ ಹಿಂದಿನ ಜನ್ಮಗಳಲ್ಲಿ ಆತ ತುಂಬ ಸಿಗರೇಟ್ ಸೇದಿರಬಹುದು. ಅದೇರೀತಿ ಶ್ರೀಮಂತ ಹಿಂದಿನ ಜನ್ಮಗಳ ಪುಣ್ಯಕಾರ್ಯಗಳ ಫಲವನ್ನು ಈ ಜನ್ಮದಲ್ಲಿ ಕೆಟ್ಟವನಾದರೂ ಅನುಭವಿಸುತ್ತಾನೆ. ಆದರೆ ಈ ಜನ್ಮದಲ್ಲಿ ಆತ ಮಾಡಿದ ಕುಕರ್ಮಗಳು, ಸಿಗರೇಟ್ ಸೇವನೆ ಆತನ ಈ ಜನ್ಮದ ಅಂತ್ಯದೊಳಗೇ ಫಲ ನೀಡಬಹುದು ಅಥವಾ ಮುಂದಿನ ಜನ್ಮದಲ್ಲಿ ಖಂಡಿತ ಫಲ ನೀಡಿ ಆತ ಪಡಬಾರದ ಕಷ್ಟಗಳನ್ನು ಪಡುತ್ತಾನೆ. ಕ್ಯಾನ್ಸರ್‌ಗೆ ತುತ್ತಾಗುತ್ತಾನೆ. ಅನೇಕ ಪ್ರಜ್ಞಾವಂತ ವೈದ್ಯರು ಹೇಳುವುದುಂಟು ''ನಮ್ಮ ಬಳಿ ಬರುವ ರೋಗಿಗಳ ಎಲ್ಲ ಖಾಯಿಲೆಗಳನ್ನು ನಾವು ಔಷಧಿ, ಚಿಕಿತ್ಸೆಗಳ ಮೂಲಕ ಗುಣಪಡಿಸಲಾಗುವುದಿಲ್ಲ. ಆತನ ಹಿಂದಿನ ಜನ್ಮದ ಪುಣ್ಯ– ಅದೃಷ್ಟವಿದ್ದರೆ ಆತನಿಗೆ ಯೋಗ್ಯ ಡಾಕ್ಟರ್, ಔಷಧಿ, ಚಿಕಿತ್ಸೆ, ಆಸ್ಪತ್ರೆ ಲಭ್ಯವಾಗುತ್ತದೆ. ಹಾಗೂ ಆತ ಆ ಪುಣ್ಯಬಲದಿಂದ ಗುಣಮುಖನಾಗುತ್ತಾನೆ. ಆದರೆ ಆತನ ಹಿಂದಿನ ಜನ್ಮದ ಪಾಪಕರ್ಮಗಳನ್ನು ಹೊತ್ತುಕೊಂಡು ಬಂದಿದ್ದರೆ ಆತನನ್ನು ಯಾವ ಔಷಧಿ, ವೈದ್ಯ, ಆಸ್ಪತ್ರೆ ಗುಣಪಡಿಸಲಾರದು. ಆತ ಸಾಯಲೂಬಹುದು. ಗುಣವಾದಾಗ ಎಲ್ಲರೂ ಹೊಗಳುತ್ತಾರೆ. ಗುಣವಾಗದೇ ಸತ್ತರೆ ಆ ವೈದ್ಯನ ಮೇಲೆ ಆಸ್ಪತ್ರೆ ಮೇಲೆ ಸಂಬಂಧಿಕರು ಹಲ್ಲೆ ಮಾಡುತ್ತಾರೆ. ನಾವು ವೈದ್ಯರು ಕೇವಲ ಆ ವಿಧಿಯ ಕೈಯಲ್ಲಿನ ಉಪಕರಣಗಳು ಮಾತ್ರ. ಅಂತಿಮವಾಗಿ ರೋಗಿಯ ಸಾವು–ಬದುಕು, ಗುಣ–ಅವಗುಣ ಎಲ್ಲವೂ ಅವನದೇ. ಅದೃಷ್ಟದಂತೆ ಆಗುತ್ತದೆ. ಈ ಸತ್ಯವನ್ನು ಅರಿಯದವರು ವೈದ್ಯರನ್ನು ದೂರುತ್ತಾರೆ''.

ಗರುಡ ಪುರಾಣ ಎಂಬುದಿದೆ. ಅದರಲ್ಲಿ ಯಾವ್ಯಾವ ಪಾಪಕರ್ಮಗಳಿಗೆ ಯಾವ್ಯಾವ ಶಿಕ್ಷೆಗಳು ಎಂಬ ವಿವರಣೆ ಇದೆ. ಅದನ್ನು ಓದಿದರೆ ಭಯವಾಗುತ್ತದೆ. ಯಮಲೋಕ, ಅಲ್ಲಿನ ಕುಂಭೀಪಾಕ ನರಕ, ಬಿಸಿ ಕುದಿಯುವ ಎಣ್ಣೆಯಲ್ಲಿ ಮುಳುಗಿಸಿ ತೆಗೆಯುವುದು, ಯಮದೂತರು ಕಷ್ಟಕೊಡುವುದು ಎಲ್ಲವನ್ನೂ ಓದಿದಾಗ ಕೆಲವರಿಗೆ ಭಯವಾದರೆ, ಕೆಲವರು ಅದೆಲ್ಲ ಕಟ್ಟುಕಥೆ ಎಂದು ನಂಬದಿರುವವರೂ ಇದ್ದಾರೆ. ಗರುಡ ಪುರಾಣ ಇಂದಿನ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಂತೆ. ಯಾವ್ಯಾವ ಅಪರಾಧಕ್ಕೆ ಯಾವ್ಯಾವ ಶಿಕ್ಷೆ ಎಂದು ಬರೆಯಲಾಗಿದೆ. ಕೆಲವು ಅಪರಾಧಗಳಿಗೆ ಕಠಿಣ, ಸಶ್ರಮ ಶಿಕ್ಷೆ, ಕೆಲವು ಅಪರಾಧಿಗಳಿಗೆ ಮರಣದಂಡನೆ ಅಥವಾ ಗಲ್ಲು ಶಿಕ್ಷೆ. ಕೆಲವಕ್ಕೆ ಜೀವಾವಧಿ ಶಿಕ್ಷೆ ಇತ್ಯಾದಿ ಶಿಕ್ಷೆಗಳು. ಆದರಿಂದ ಕೆಲವರು ಭಯಪಟ್ಟು ಅಪರಾಧ ಮಾಡಲು ಹೆದರಿ ಅಪರಾಧಗಳಿಂದ ದೂರವಿರುತ್ತಾರೆ. ಯಾವುದೇ ಅಪರಾಧ ಮಾಡದ ಸಾತ್ವಿಕ –ಸಜ್ಜನರಿಗೆ ಇದರಿಂದ ಯಾವ ಭಯವೂ ಇರುವುದಿಲ್ಲ. ಪ್ರಾಯಶಃ ಗರುಡ ಪುರಾಣ ಮನುಷ್ಯರಲ್ಲಿ ಪಾಪಕರ್ಮಗಳನ್ನು ಮಾಡದಂತೆ ಭಯ ಹುಟ್ಟಿಸಲು ಬರೆದಿರುವ ಪುರಾಣ ಗ್ರಂಥವಾಗಿರಬಹುದು. ಅವರಲ್ಲಿರುವ ಘೋರ ಶಿಕ್ಷೆಗಳ ಬಗ್ಗೆ ಹೇಳಬೇಕೆಂದರೆ ಅದು ಅವರವರ ನಂಬಿಕೆಗೆ ಬಿಟ್ಟ ವಿಚಾರ. ಸತ್ತವರ್‍ಯಾರೂ ವಾಪಸ್ ಬಂದು ಹೇಳಿದವರಿಲ್ಲ.

ವಿಶ್ವಕಪ್ ಫುಟ್ಬಾಲ್ ಮೇಲೆ ಹಲವು ಬಿಕ್ಕಟ್ಟುಗಳ ಕಾರ್ಮೋಡ

▸ ಕೆ.ಆರ್. ಕಾಮತ್

ವಿಶ್ವದಾದ್ಯಂತ ಕೋಟ್ಯಂತರ ಫುಟ್ಬಾಲ್ ಕ್ರೀಡಾಪ್ರೇಮಿಗಳು ಅತ್ಯಂತ ಕಾತರದಿಂದ ಎದುರು ನೋಡುತ್ತಿರುವ 'ವಿಶ್ವಕಪ್ ಫುಟ್ಬಾಲ್–2026'ಗೆ ಕ್ಷಣಗಣನೆ ಆರಂಭಗೊಂಡಿದೆ. ಜೂನ್ 11ರಂದು ಪಂದ್ಯಾವಳಿಗೆ ಚಾಲನೆ ದೊರಕಲಿದೆ. ಪಂದ್ಯಕೂಟಗಳ ಆಯೋಜಕರು ದಾಖಲೆಮಟ್ಟದಲ್ಲಿ ಭಾರೀ ಆದಾಯ ನಿರೀಕ್ಷಿಸುತ್ತಿರುವ ಹೊತ್ತಲ್ಲಿ ಪಂದ್ಯಕೂಟದ ಸಿದ್ಧತೆಗಳ ಮೇಲೆ ರಾಜಕೀಯ ಆತಂಕ ಮತ್ತು ಪಶ್ಚಿಮ ಏಷ್ಯಾದ ಯುದ್ಧದ ಕಾರ್ಮೋಡಗಳು ಕವಿದಿರುವುದು ಮಾತ್ರ ವಿಪರ್ಯಾಸ.

ಈ ಬಾರಿಯ ವಿಶ್ವಕಪ್ ಪಂದ್ಯಕೂಟಗಳನ್ನು ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋ ದೇಶಗಳು ಜಂಟಿಯಾಗಿ ಆಯೋಜಿಸುತ್ತಿವೆ. ಆಡಲಿರುವ ಒಟ್ಟು ಪಂದ್ಯಗಳು 104. ಈ ಪೈಕಿ 78 ಪಂದ್ಯಗಳು ಅಮೆರಿಕದಲ್ಲಿ ನಡೆದರೆ, ಇನ್ನುಳಿದ 26 ಪಂದ್ಯಗಳು ಕೆನಡಾ ಮತ್ತು ಮೆಕ್ಸಿಕೋ ದೇಶಗಳಲ್ಲಿ ನಡೆಯಲಿವೆ. ಎಲ್ಲಾ ಪಂದ್ಯಗಳು ಮೂರು ದೇಶಗಳಲ್ಲಿನ 16 ಕ್ರೀಡಾಂಗಣಗಳಲ್ಲಿ ಆಡಲಾಗುತ್ತದೆ. ಮೊದಲ ಪಂದ್ಯವು ಜೂನ್ 11ರಂದು ಮೆಕ್ಸಿಕೋ ರಾಜಧಾನಿಯಲ್ಲಿ ಆತಿಥೇಯ ಮೆಕ್ಸಿಕೋ ಮತ್ತು ದಕ್ಷಿಣ ಆಫ್ರಿಕಾ ಮಧ್ಯೆ ನಡೆಯಲಿದೆ. ಫೈನಲ್ ಪಂದ್ಯವು ಜುಲೈ 19ರಂದು ಅಮೆರಿಕದ ಮೆಟ್‌ಲೈಫ್ ಸ್ಟೇಡಿಯಂನಲ್ಲಿ ಸಂಪನ್ನಗೊಳ್ಳಲಿದೆ.



ವಿಶ್ವಕಪ್ ಆರಂಭಕ್ಕೆ ಕೆಲವೇ ದಿನಗಳು ಉಳಿದಿರುವಂತೆಯೆ ಮೆಕ್ಸಿಕೋ ಆಂತರಿಕ ಬಿಕ್ಕಟ್ಟು ಎದುರಿಸುತ್ತಿದೆ. ಅಲ್ಲಿ ಟೀಚರ್‌ಗಳು ಮತ್ತು ಇನ್ನಿತರ ಕೆಲವು ಸಂಘಟನೆಗಳು ಕೆಲದಿನಗಳಿಂದ ಭಾರೀ ಪ್ರತಿಭಟನೆ ನಡೆಸುತ್ತಿವೆ. ತಮ್ಮ ಬೇಡಿಕೆ ಈಡೇರಿಸದಿದ್ದರೆ ವಿಶ್ವಕಪ್ ಆರಂಭದ ದಿನದಂದು ಭಾರೀ ಪ್ರಮಾಣದ ಪ್ರತಿಭಟನೆ ನಡೆಸುವುದಾಗಿ ಅವು ಸರಕಾರಕ್ಕೆ ಎಚ್ಚರಿಕೆ ನೀಡಿವೆ. ಬುಧವಾರ ನಡೆದ ಪ್ರತಿಭಟನೆಯ ವೇಳೆ ನಗರದಲ್ಲಿ ನಿಲ್ಲಿಸಿದ್ದ ಫುಟ್ಬಾಲ್ ಆಟಗಾರರ ಪ್ರತಿಕೃತಿಗಳನ್ನೆಲ್ಲ ಪ್ರತಿಭಟನೆಕಾರರು ನೆಲಕ್ಕುರುಳಿಸಿದ್ದಾರೆ.

ಇತ್ತೀಚೆಗೆ ಮೆಕ್ಸಿಕೋದಲ್ಲಿ ಮಾದಕಜಾಲ ವಿರೋಧಿ ಕಾರ್ಯಾಚರಣೆ ಸಂದರ್ಭದಲ್ಲಿ ಸುಮಾರು 24 ಮಂದಿ ಜೀವ ಕಳಕೊಂಡಿರುವ ಘಟನೆ ಕೂಡಾ ಮೆಕ್ಸಿಕೋದಲ್ಲಿ ಭದ್ರತೆಯ ಆತಂಕವನ್ನು ಹುಟ್ಟು ಹಾಕಿದೆ.

ಇದರ ಜತೆಗೇ ಇರಾನ್ ಸಮರ ನಡೆಯುತ್ತಿರುವುದು ಕೂಡಾ ವಿಶ್ವಕಪ್ ಫುಟ್ಬಾಲ್ ಮೇಲೆ ಕರಿನೆರಳು ಬೀರಿದೆ. ಇರಾನ್ ಕೂಡಾ ವಿಶ್ವಕಪ್‌ಗೆ ತೇರ್ಗಡೆ ಪಡೆದಿದೆಯಾದರೂ, ಅಮೆರಿಕವು ಆತಿಥೇಯ ರಾಷ್ಟವಾಗಿರುವುದರಿಂದ ವಿಶ್ವಕಪ್‌ನಲ್ಲಿ ಭಾಗವಹಿಸುವಲ್ಲಿ ಸಂಕಷ್ಟ ಎದುರಿಸುತ್ತಿದೆ.

ಇರಾನ್ ತಂಡವು ಅಮೆರಿಕದಲ್ಲಿ ಕೆಲವು ಪಂದ್ಯಗಳನ್ನು ಆಡಬೇಕಿದೆ. ತಂಡವು ಮೆಕ್ಸಿಕೋದಲ್ಲಿ ತಂಗಲಿದ್ದು ಅಲ್ಲಿಂದಲೇ ಅಮೆರಿಕಕ್ಕೆ ತೆರಳಿ ಆಟ ಮುಗಿದ ಕೂಡಲೇ ಮೆಕ್ಸಿಕೋಗೆ ಮರಳಲಿದೆ. ಆದರೆ ಇರಾನ್ ತಂಡದ ಸಹಸಿಬ್ಬಂದಿಗಳನ್ನು ಸಂಪೂರ್ಣ ತಪಾಸಣೆ ನಡೆಸಲಾಗುವುದು, ಇರಾನಿನ ಐಆರ್‌ಜಿಸಿ ಜತೆಗೆ ಸಂಪರ್ಕ ಇರುವ ಯಾರನ್ನೂ ಅಮೆರಿಕದೊಳಕ್ಕೆ ಬಿಟ್ಟುಕೊಡುವುದಿಲ್ಲ ಎಂದು ಅಮೆರಿಕ ತಿಳಿಸಿದೆ.

ಇದೇವೇಳೆ, ವಿಶ್ವಕಪ್–26ರ ಸಹ ಆಯೋಜಕ ದೇಶಗಳಾದ ಕೆನಡಾ ಮತ್ತು ಮೆಕ್ಸಿಕೋಗಳಿಗೆ ಕೂಡಾ ಅಮೆರಿಕದೊಂದಿಗೆ ಸಂಬಂಧ ಚೆನ್ನಾಗಿಲ್ಲ. ಟ್ರಂಪ್ ಈ ಎರಡು ದೇಶಗಳ ಮೇಲೆ ತೆರಿಗೆ ದಂಡ ವಿಧಿಸಿರುವುದು ಸಂಬಂಧವನ್ನು ಹದಗೆಡಿಸಿದೆ.

ಅಮೆರಿಕದಲ್ಲಿ ವಿದೇಶಗಳಿಂದ ಬರುವವರ ಮೇಲೆ ಹೆಚ್ಚಿನ ನಿಗಾ ಇಡುತ್ತಿರುವುದು, ವಿಮಾನನಿಲ್ದಾಣದಿಂದಲೇ ಕೆಲವರನ್ನು ವಾಪಸ್ ಕಳಿಸುತ್ತಿರುವುದು ನಡೆಯುತ್ತಿರುವುದರಿಂದ ಫುಟ್ಬಾಲ್ ವೀಕ್ಷಿಸಲೆಂದು ವಿದೇಶಗಳಿಂದ ಬರುವವರ ಸಂಖ್ಯೆ ಕಡಿಮೆಯಾಗುವುದು ಖಂಡಿತ. ವಿದೇಶಿ ಫುಟ್ಬಾಲ್ ಪ್ರೇಮಿಗಳಿಗೆ ಅಮೆರಿಕದ ವೀಸಾ ಸಿಗುವ ಕುರಿತಂತೆಯೂ ಅನಿಶ್ಚಿತತೆ ಉಂಟಾಗಿದೆ.

48 ರಾಷ್ಟ್ರಗಳು, 104 ಪಂದ್ಯಗಳು

ಇದೇ ಮೊದಲ ಬಾರಿಯಾಗಿ ವಿಶ್ವದ 48 ದೇಶಗಳ ತಂಡಗಳು ವಿಶ್ವಕಪ್ ಪಂದ್ಯಕೂಟಗಳಲ್ಲಿ ಸ್ಪರ್ಧಿಸುತ್ತಿವೆ. ಕಳೆದ ಬಾರಿ ಕತಾರ್‌ನಲ್ಲಿ ಜರುಗಿದ್ದ ವಿಶ್ವಕಪ್‌ನಲ್ಲಿ ವಿಶ್ವದ 32 ತಂಡಗಳು ಸ್ಪರ್ಧಿಸಿದ್ದವು. ಒಟ್ಟು ಪಂದ್ಯಗಳು 64ರಿಂದ 104ಕ್ಕೆ ಏರಿಕೆಯಾಗಿವೆ. ತಲಾ 4 ತಂಡಗಳ 12 ಗುಂಪುಗಳನ್ನು ಮಾಡಿ ಆರಂಭಿಕ ಪಂದ್ಯಗಳನ್ನು ಆಡಿಸಲಾಗುವುದು. ಏಷ್ಯಾದಿಂದ ಆಸ್ಟ್ರೇಲಿಯಾ, ಇರಾನ್, ಜಪಾನ್, ಜೋರ್ಡಾನ್, ಕತಾರ್, ಸೌದಿ ಅರೇಬಿಯಾ, ದಕ್ಷಿಣ ಕೊರಿಯಾ ಮತ್ತು ಉಜ್ಬೇಕಿಸ್ತಾನ ಮುಂತಾದ ಎಂಟು ದೇಶಗಳು 2026ರ ವಿಶ್ವಕಪ್‌ನಲ್ಲಿ ಆಡಲು ನೇರ ಅರ್ಹತೆ ಪಡೆದುಕೊಂಡಿವೆ. ಈ ಪೈಕಿ ಜೋರ್ಡಾನ್ ಮತ್ತು ಉಜ್ಬೇಕಿಸ್ತಾನ್ ಮೊದಲ ಬಾರಿ ಫಿಫಾದಲ್ಲಿ ಪದಾರ್ಪಣೆ ಮಾಡುತ್ತಿವೆ.

2022ರಲ್ಲಿ ಕತಾರ್‌ನಲ್ಲಿ ಜರುಗಿದ್ದ ವಿಶ್ವಕಪ್ ಪಂದ್ಯಕೂಟಗಳ ಸಮಯದಲ್ಲಿ ಫಿಫಾ 7 ಬಿಲಿಯ ಡಾಲರ್ ಆದಾಯ ಗಳಿಸಿದ್ದರೆ, ಅದು ಈ ಬಾರಿ 11 ಬಿಲಿಯ ಡಾಲರ್ ಆದಾಯ ನಿರೀಕ್ಷಿಸುತ್ತಿದೆ. ಆದರೆ ಟಿಕೆಟ್ ಬೆಲೆಗಳನ್ನು ಹತ್ತಾರು ಪಟ್ಟು ಹೆಚ್ಚಿಸಿರುವುದು ಫುಟ್ಬಾಲ್ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಜುಲೈ 19ರಂದು ಮೆಟ್‌ಲೈಫ್ ಸ್ಟೇಡಿಯಂನಲ್ಲಿ ಜರಗಲಿರುವ ಫೈನಲ್ ಪಂದ್ಯದ ಟಿಕೆಟ್ ದರಗಳು 2,030 ಡಾಲರ್‌ನಿಂದ 6,370 ಡಾಲರ್‌ಗಳಷ್ಟಿವೆ. 2022ರಲ್ಲಿ ಕತಾರ್‌ನಲ್ಲಿ ಜರುಗಿದ ಫೈನಲ್ ಪಂದ್ಯದ ಟಿಕೆಟಿನ ದರ ಕೇವಲ 206 ಡಾಲರ್‌ನಿಂದ 1067 ಡಾಲರ್ ತನಕ ಇದ್ದವು. ಮೆಕ್ಸಿಕೊದಲ್ಲಿ ಜರಗಲಿರುವ ಆರಂಭಿಕ ಪಂದ್ಯದ ಟಿಕೆಟ್‌ನ ದರ 1,500 ಡಾಲರ್‌ನಿಂದ 2,735 ಡಾಲರ್. ಇನ್ನು ಗ್ರೂಪ್ ಸ್ಟೇಜ್ ಪಂದ್ಯಗಳಿಗೆ 100 ಡಾಲರ್‌ನಿಂದ 575 ಡಾಲರ್ ತನಕದ ಟಿಕೆಟ್‌ಗಳು ಲಭ್ಯ ಇವೆ. ಸೆಮಿಫೈನಲ್ಸ್ ಟಿಕೆಟಿನ ದರ 2780 ಡಾಲರ್! ಫಿಫಾದ ಟಿಕೆಟ್ ದರ ನೀತಿಯನ್ನು ಅನೇಕ ಫುಟ್ಬಾಲ್ ಅಭಿಮಾನಿ ಸಂಘಟನೆಗಳು ಟೀಕಿಸಿವೆ. ಇಂತಹ ಫುಟ್ಬಾಲ್ ಬೆಂಬಲ ಗುಂಪುಗಳಿಗೆ ಸೀಮಿತ ಸಂಖ್ಯೆಯಲ್ಲಿ 60 ಡಾಲರ್ ದರದ ಟಿಕೆಟ್ ನೀಡಲು ಫಿಫಾ ನಿರ್ಧರಿಸಿದೆ.

ಇರಾನ್ ಸಮರ, ಇಂಧನ ಬಿಕ್ಕಟ್ಟು ಮೊದಲಾದವು ವಿಶ್ವಕಪ್ ಫುಟ್ಬಾಲ್ ಮೇಲೆ ಪರಿಣಾಮ ಬೀರುವುದೆ ಎಂದು ಕಾದು ನೋಡಬೇಕು.

ಮಮತಾ ಸಭೆಗೆ ಕೇವಲ 8 ಶಾಸಕರ ಹಾಜರಿ

ತೃಣಮೂಲದಲ್ಲಿ ನಿಲ್ಲದ ಬಂಡಾಯದ ಬಿರುಗಾಳಿ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸೋಲಿನ ಬಳಿಕ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದೊಳಗೆ ಉಂಟಾಗಿರುವ ಬಂಡಾಯದ ಬಿರುಗಾಳಿ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿರುವ ಲಕ್ಷಣಗಳು ಗೋಚರಿಸುತ್ತಿವೆ. ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಕಲಿಘಾಟ್ ನಿವಾಸದಲ್ಲಿ ಶುಕ್ರವಾರ ನಡೆದ ಮಹತ್ವದ ಸಭೆಗೆ ಕೇವಲ 8 ಶಾಸಕರು, 6 ಸಂಸದರು ಮಾತ್ರ ಹಾಜರಾಗಿದ್ದು, ಪಕ್ಷದೊಳಗಿನ ಅಸಮಾಧಾನ ಬಹಿರಂಗವಾಗಿದೆ.

ಈ ಹಿಂದೆ ನಡೆದ ಮಹತ್ವದ ಸಭೆಗೆ 80 ಶಾಸಕರ ಪೈಕಿ 60 ಮಂದಿ ಗೈರಾಗಿದ್ದರು. ಇದೀಗ ನಡೆದ ಸಭೆಯಲ್ಲಿಯೂ ಅತ್ಯಲ್ಪ ಸಂಖ್ಯೆಯ ಶಾಸಕರು ಭಾಗವಹಿಸಿರುವುದು ಮಮತಾ ನಾಯಕತ್ವದ ವಿರುದ್ಧದ ಅಸಮಾಧಾನ ಇನ್ನಷ್ಟು ಗಾಢವಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.



ಇದಕ್ಕಿಂತಲೂ ಹೆಚ್ಚು ಆತಂಕಕಾರಿ ಸಂಗತಿಯೆಂದರೆ, ಟಿಎಂಸಿಯ ಸಂಸದರೂ ಸಭೆಯಿಂದ ದೂರ ಉಳಿದಿದ್ದಾರೆ. ಲೋಕಸಭೆಯಲ್ಲಿ ಪಕ್ಷದ 28 ಸಂಸದರಲ್ಲಿ ಕೇವಲ ನಾಲ್ವರು ಮಾತ್ರ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ರಾಜ್ಯಸಭೆಯ 13 ಸದಸ್ಯರಲ್ಲಿ ಕೇವಲ ಇಬ್ಬರು ಮಾತ್ರ ಹಾಜರಾಗಿ, ಉಳಿದ 11 ಮಂದಿ ಗೈರಾಗಿದ್ದಾರೆ. ಮಮತಾ ಬ್ಯಾನರ್ಜಿ ಅವರ ಸೋದರಳಿಯ ಹಾಗೂ ಪಕ್ಷದ ಪ್ರಮುಖ ನಾಯಕ ಅಭಿಷೇಕ್ ಬ್ಯಾನರ್ಜಿ ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯಸಭಾ ಸದಸ್ಯರಾದ ಡೆರೆಕ್ ಓ'ಬ್ರಿಯನ್ ಮತ್ತು ಡೋಲಾ ಸೇನ್ ಮಾತ್ರ ಹಾಜರಾಗಿದ್ದರು.

ಶಾಸಕರ ಪೈಕಿ ಮದನ್ ಮಿತ್ರಾ, ಬೀನಾ ಮಂಡಲ್, ಅಶಿಮಾ ಪಾತ್ರಾ, ಫಿರ್ಹಾದ್ ಹಕೀಂ, ಕುನಾಲ್ ಘೋಷ್, ಸೋವಂದೇಬ್ ಚಟರ್ಜಿ, ಬಿಮಾನ್ ಬ್ಯಾನರ್ಜಿ ಮತ್ತು ಅಶೋಕ್ ದೇಬ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಬಂಡಾಯಗಾರರ ಸಂಖ್ಯೆ ಹೆಚ್ಚಳ: ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕನಾಗಿ ಹೊರಹೊಮ್ಮಿರುವ ಬಂಡಾಯ ನಾಯಕ ರಿತಬ್ರತ ಬ್ಯಾನರ್ಜಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಸಕರು ತಮ್ಮ ಬಣಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದ್ದಾರೆ.

ಬಿಜೆಪಿ ಸಂಪರ್ಕದಲ್ಲಿರುವ 20-22 ಸಂಸದರು?

ಬಂಡಾಯದ ಮುಂದಿನ ಹಂತವಾಗಿ ಹಲವರು ಪಕ್ಷ ತೊರೆಯುವ ಸಾಧ್ಯತೆಗಳಿವೆ ಎನ್ನಲಾಗಿದೆ. ಕನಿಷ್ಠ 20ರಿಂದ 22 ಟಿಎಂಸಿ ಸಂಸದರು ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಎಂಬ ಮಾಹಿತಿ ಮೂಲಗಳಿಂದ ಹೊರಬಿದ್ದಿದೆ. ಆದರೆ, ಈ ಕುರಿತು ಪ್ರತಿಕ್ರಿಯಿಸಿದ ರಿತಬ್ರತ ಬ್ಯಾನರ್ಜಿ, ಕಳೆದ ಏಳು ದಿನಗಳಿಂದ ಯಾವುದೇ ಸಂಸದರೊಂದಿಗೆ ಮಾತನಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಮ್ಮ ಬೆಂಬಲಿಗರ ಸಂಖ್ಯೆ ನಿರಂತರವಾಗಿ ಹೆಚ್ಚಾಗಲಿದೆ. ಈಗಾಗಲೇ ಮೂರನೇ ಎರಡರಷ್ಟು ಸಂಖ್ಯೆಯನ್ನು ನಾವು ತೋರಿಸಿದ್ದೇವೆ. ವಿಧಾನಸಭೆ ಅಧಿವೇಶನದ ವೇಳೆ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುವುದನ್ನು ನೀವು ಕಾಣುತ್ತೀರಿ ಎಂದು ಅವರು ಹೇಳಿದ್ದಾರೆ. ನಮ್ಮನ್ನು ಬೆಂಬಲಿಸುವ ಶಾಸಕರ ಸಂಖ್ಯೆ ಕಡಿಮೆಯಾಗುವುದಿಲ್ಲ, ಮುಂದಿನ ಬೆಳವಣಿಗೆಗಳನ್ನು ಗಮನಿಸಿ, ಇನ್ನಷ್ಟು ಮಂದಿ ನಮ್ಮೊಂದಿಗೆ ಬರಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸೋಲಿನ ಬಳಿಕ ಭಿನ್ನಮತ ತೀವ್ರ: ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಟಿಎಂಸಿ ಹೀನಾಯ ಸೋಲು ಅನುಭವಿಸಿದ ಬಳಿಕ ಪಕ್ಷದೊಳಗಿನ ಅಸಮಾಧಾನ ತೀವ್ರಗೊಂಡಿದೆ. ಭವನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ಸೋಲು ಕಂಡ ನಂತರ ಹಲವು ನಾಯಕರು ಅವರ ನಾಯಕತ್ವ ಶೈಲಿಯನ್ನೇ ಪ್ರಶ್ನಿಸಲು ಆರಂಭಿಸಿದ್ದರು. ಪಕ್ಷದ ಇತಿಹಾಸದಲ್ಲೇ ಅತ್ಯಂತ ಗಂಭೀರ ರಾಜಕೀಯ ಬಿಕ್ಕಟ್ಟನ್ನು ಎದುರಿಸುತ್ತಿರುವ ಮಮತಾ ಬ್ಯಾನರ್ಜಿ, ಈಗಾಗಲೇ 80 ಶಾಸಕರ ಪೈಕಿ ಇಬ್ಬರನ್ನು ಪಕ್ಷದಿಂದ ಉಚ್ಚಾಟಿಸಿದ್ದಾರೆ. ಆದರೆ ಅದರಿಂದ ಬಂಡಾಯದ ಅಲೆ ತಗ್ಗುವ ಲಕ್ಷಣಗಳು ಕಾಣುತ್ತಿಲ್ಲ, ಮುಂದಿನ ದಿನಗಳಲ್ಲಿ ಟಿಎಂಸಿಯೊಳಗಿನ ಬೆಳವಣಿಗೆಗಳು ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಮಹತ್ವದ ತಿರುವು ನೀಡುವ ಸಾಧ್ಯತೆ ಇದೆ.

» **ಬಹುತೇಕ ಸಂಸದರು ಗೈರು!**

ಶೀಘ್ರ ಬರಲಿದೆ ಪ್ಲಾಸ್ಟಿಕ್ ಕರೆನ್ಸಿ?

» **ನಕಲಿ ನೋಟು ತಡೆ, ದೀರ್ಘಾವಧಿ ಬಳಕೆ ಪ್ರಮುಖ ಉದ್ದೇಶ**

» **ಪಾಲಿಮರ್ ನೋಟುಗಳ ಜಾರಿಗೆ ಆರ್‌ಬಿಐ ಚಿಂತನೆ**

• **ಮುಂಬೈ:** ದೇಶದಲ್ಲಿ ಶೀಘ್ರದಲ್ಲೇ ಪ್ಲಾಸ್ಟಿಕ್ ಆಧಾರಿತ ಪಾಲಿಮರ್ ಕರೆನ್ಸಿ ನೋಟುಗಳು ಚಲಾವಣೆಗೆ ಬರಬಹುದಾದ ಸಾಧ್ಯತೆ ಕಾಣಿಸಿಕೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದೇಶದಲ್ಲಿ ಪಾಲಿಮರ್ ಕರೆನ್ಸಿ ನೋಟುಗಳನ್ನು ಪರಿಚಯಿಸುವ ಪ್ರಸ್ತಾವನೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದು, ಈ ಕುರಿತು ಪ್ರಾಥಮಿಕ ಹಂತದ ಚರ್ಚೆಗಳು ನಡೆಯುತ್ತಿವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಶುಕ್ರವಾರ ನಡೆದ ಹಣಕಾಸು ನೀತಿ ಸಮಿತಿ(ಎಂಪಿಸಿ) ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಲಿಮರ್ ನೋಟುಗಳ ಜಾರಿಗೆ ಸಂಬಂಧಿಸಿದ ಪ್ರಸ್ತಾವನೆ ಇನ್ನೂ ಆರಂಭಿಕ ಹಂತದಲ್ಲಿದ್ದು, ಅಂತಿಮ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ವಿಶೇಷತೆ ಏನು?: ಪಾಲಿಮರ್ ನೋಟುಗಳು ಸಾಮಾನ್ಯ ಕಾಗದದ ನೋಟುಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ. ತೇವಾಂಶ, ಮಡಚುವಿಕೆ ಹಾಗೂ ದೈನಂದಿನ ಬಳಕೆಯಿಂದ ಉಂಟಾಗುವ ಹಾನಿಯನ್ನು ಇವು ಹೆಚ್ಚು ಪರಿಣಾಮಕಾರಿಯಾಗಿ ತಡೆದುಕೊಳ್ಳುತ್ತವೆ. ಇದರಿಂದ ನೋಟುಗಳ ಆಯುಷ್ಯ ಹೆಚ್ಚಾಗುವುದರ ಜೊತೆಗೆ ಮರುಮುದ್ರಣ ವೆಚ್ಚವೂ ಕಡಿಮೆಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದರ ಜತೆಗೆ, ಸುಧಾರಿತ ಭದ್ರತಾ ವೈಶಿಷ್ಟ್ಯಗಳನ್ನು ಅಳವಡಿಸಲು ಸಾಧ್ಯವಾಗುವುದರಿಂದ ನಕಲಿ ನೋಟುಗಳ ಹಾವಳಿಯನ್ನು ನಿಯಂತ್ರಿಸಲು ಸಹ ಪಾಲಿಮರ್ ನೋಟುಗಳು ನೆರವಾಗಲಿವೆ.



ದೇಶದ ಭದ್ರತೆಗೆ ಮತ್ತಷ್ಟು ಬಲ

ಭಾರತ- ಪಾಕಿಸ್ತಾನ ಗಡಿಯಲ್ಲಿ ಭದ್ರತೆ ಮತ್ತು ಕಣ್ಗಾವಲು ಬಲಪಡಿಸಲು ಗುಜರಾತ್ ಸರ್ಕಾರವು ಗಡಿ ಪ್ರದೇಶಗಳನ್ನು ವಿಭಜಿಸಿ ಹೊಸ ಬನಸ್ಕಾಂತ ಪೊಲೀಸ್ ವಲಯವನ್ನು ರಚಿಸಲು ಅನುಮೋದನೆ ನೀಡಿದೆ. ಹೊಸದಾಗಿ ರೂಪುಗೊಂಡ ಪೊಲೀಸ್ ವಲಯದ ಪ್ರಧಾನ ಕಚೇರಿ ಪಾಲನ್ಪುರದಲ್ಲಿರುತ್ತದೆ. ಗುಜರಾತ್‌ನ ಪೊಲೀಸ್ ಮಹಾ ನಿರ್ದೇಶಕರ(ಡಿಜಿಪಿ) ಕಚೇರಿಯು ಸಲ್ಲಿಸಿದ ಪ್ರಸ್ತಾವನೆ ಅನುಸರಿಸಿ, ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಸ್ತಿತ್ವದಲ್ಲಿರುವ ಗಡಿ ವ್ಯಾಪ್ತಿಯು ಸುಮಾರು 550 ಕಿಮೀ ವಿಶಾಲವಾದ ಭೌಗೋಳಿಕ ಪ್ರದೇಶ ಒಳಗೊಂಡಿದೆ. ಪಶ್ಚಿಮ ಕಚ್, ಪೂರ್ವ ಕಚ್, ಪಟಾನ್ ಮತ್ತು ಬನಸ್ಕಾಂತ ಜಿಲ್ಲೆಗಳನ್ನು ಒಳಗೊಂಡಿದೆ, ಇವೆಲ್ಲವೂ ಪಾಕಿಸ್ತಾನದೊಂದಿಗೆ ಅಂತಾರಾಷ್ಟ್ರೀಯ ಭೂ ಗಡಿ ಹಂಚಿಕೊಳ್ಳುತ್ತವೆ. ಇದು ದೇಶದ ಆಂತರಿಕ ಭದ್ರತೆ ಹೇಗೆ ಸಹಕಾರಿಯಾಗಲಿದೆ ಎಂಬುದರ ಮಾಹಿತಿ ಇಲ್ಲಿದೆ.

ಪಾಕಿಸ್ತಾನ ಗಡಿಯಲ್ಲಿ ಗುಜರಾತ್‌ನ ಹೊಸ ಪೊಲೀಸ್ ವಲಯ ರಚನೆ

ಪ್ರಮುಖ ಗಡಿ ವಿಭಜನೆ

ಗುಜರಾತ್ ತನ್ನ ಪಾಕಿಸ್ತಾನದ ಗಡಿ ಪೋಲೀಸಿಂಗ್ ಅನ್ನು ಎರಡು ವಲಯಗಳನ್ನಾಗಿ ವಿಂಗಡಿಸಿದೆ. ಇದು ಗಡಿ ವ್ಯಾಪ್ತಿ ವಿಶಾಲ ಜವಾಬ್ದಾರಿಗಳನ್ನು ಸರಾಗಗೊಳಿಸುವ ಸಲುವಾಗಿ ಬನಸ್ಕಾಂತ ವಲಯ ಸೃಷ್ಟಿಸಿದೆ.

ಕಾರ್ಯಾಚರಣೆಯ ದಕ್ಷತೆ: ಪುನಾರಚನೆಯು 645 ಕಿಮೀ. ಉದ್ದದ ಗಡಿ ಮತ್ತು ಕರಾವಳಿಯಲ್ಲಿ ಮೇಲ್ವಿಚಾರಣಾ ಸವಾಲುಗಳನ್ನು ಪರಿಹರಿಸುತ್ತದೆ. ತ್ವರಿತ ಪ್ರತಿಕ್ರಿಯೆ ಮತ್ತು ನಿಕಟ ಮೇಲ್ವಿಚಾರಣೆಗೆ ಅನುವು ಮಾಡಿಕೊಡುತ್ತದೆ.

ಕಾರ್ಯತಂತ್ರದ ಸಮನ್ವಯ: ಹೊಸ ವ್ಯಾಪ್ತಿ ಬಿಎಸ್‌ಎಫ್, ಐಸಿಜಿ ಮತ್ತು ಐಎಎಫ್‌ನೊಂದಿಗಿನ ಸಹಯೋಗವನ್ನು ಬಲಪಡಿಸುತ್ತದೆ. ವಲಸೆ, ಮಾದಕವಸ್ತು ಕಳ್ಳಸಾಗಣೆ ಮತ್ತು ಇಂಧನ ವಲಯದ ಭದ್ರತೆಯಂತಹ ಸಮಸ್ಯೆಗಳನ್ನು ನಿಭಾಯಿಸುತ್ತದೆ.

ಗುಪ್ತಚರ, ಭದ್ರತಾ ಸಂಸ್ಥೆ ಜತೆ ಸಮನ್ವಯಕ್ಕೆ ಅನುಕೂಲ

ಇಲ್ಲಿನ ಕೆಲವು ಪ್ರಮುಖ ಸವಾಲುಗಳೆಂದರೇ ಗಡಿಗೆ ಹತ್ತಿರವಿರುವ ಇಂಧನ ಮತ್ತು ಸೌರ ಉದ್ಯಾನವನಗಳಲ್ಲಿ ಕೆಲಸ ಮಾಡುವ ಹೆಚ್ಚಿನ ಸಂಖ್ಯೆ ಕಾರ್ಮಿಕರ ಸುರಕ್ಷತೆಯಾಗಿದೆ. ಅಲ್ಲಿನ ಪೊಲೀಸರು ಗಡಿ ಗ್ರಾಮಗಳನ್ನು, ದೇಶದೊಳಗಿನ ಮತ್ತು ಹೊರಗಿನ ವಲಸೆ ನಿರ್ವಹಿಸಬೇಕು, ಅಂತಾರಾಷ್ಟ್ರೀಯ ಗಡಿಯಲ್ಲಿ ಗಸ್ತು ತಿರುಗಬೇಕು ಮತ್ತು ಮಾದಕವಸ್ತು ಕಳ್ಳಸಾಗಣೆಯ ಭೀತಿ ನಿಭಾಯಿಸಬೇಕು. ಈ ಮರುಸಂಘಟನೆಯು ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಭಾರತೀಯ ಕರಾವಳಿ ಕಾವಲು ಪಡೆ(ಐಸಿಜಿ) ಮತ್ತು ಭಾರತೀಯ ವಾಯುಪಡೆ(ಐಎಎಫ್) ಗುಪ್ತಚರ ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯಕ್ಕೆ ಸಹಾಯ ಮಾಡುತ್ತದ

ಹೊಸ ಜಿಲ್ಲೆ ರಚನೆ

2025ರ ಮೇನಲ್ಲಿ ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರ್ ನಂತರ, ಆ ವರ್ಷ ಅಕ್ಟೋಬರ್‌ನಲ್ಲಿ ವಾವ್-ತರಾದ್ ಅನ್ನು ಬನಸ್ಕಾಂತದಿಂದ ಹೊಸ ಜಿಲ್ಲೆಯಾಗಿ ರಚಿಸಲಾಯಿತು. ಈ ನಿರ್ಧಾರವು ಆಡಳಿತವನ್ನು ಸರಾಗಗೊಳಿಸುವ ಗುರಿ ಹೊಂದಿದೆ ಎಂದು ಸರ್ಕಾರ ಹೇಳಿತ್ತು. ಬನಸ್ಕಾಂತವು ಪ್ರದೇಶದ ದೃಷ್ಟಿಯಿಂದ ರಾಜ್ಯದ ಎರಡನೇ ಅತಿದೊಡ್ಡ ಜಿಲ್ಲೆಯಾಗಿದೆ.

ಶಾ ಘೋಷಣೆ ಬೆನ್ನಲ್ಲೆ ನಿರ್ಧಾರ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೇ ತಿಂಗಳ ಕೊನೆಯಲ್ಲಿ ರಾಜಸ್ಥಾನಕ್ಕೆ ಭೇಟಿ ನೀಡಿ, ದೇಶದ ಗಡಿಯ 15 ಕಿಮೀ ವ್ಯಾಪ್ತಿಯೊಳಗೆ ಅಕ್ರಮ ನಿರ್ಮಾಣಗಳ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಮತ್ತು ಅಂತಹ ಎಲ್ಲಾ ಕಟ್ಟಡಗಳನ್ನು ಕೆಡವಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ರಾಜ್‌ಕೋಟ್ ಶ್ರೇಣಿ ವಿಭಜನೆ

1995 ಮೇ 20ರಂದು, ರಾಜ್‌ಕೋಟ್ ವ್ಯಾಪ್ತಿ ವಿಭಜಿಸಿ ಗಡಿ ವಲಯ ರಚಿಸಲಾಯಿತು. ಎರಡನೆಯದು ಕಚ್(ಪಶ್ಚಿಮ), ಕಚ್(ಪೂರ್ವ), ಪಟಾನ್ ಮತ್ತು ಬನಸ್ಕಾಂತ ಜಿಲ್ಲೆಗಳ (ಪಾಕಿಸ್ತಾನದೊಂದಿಗಿನ ಸಂಪೂರ್ಣ ಅಂತಾರಾಷ್ಟ್ರೀಯ ಗಡಿಯನ್ನು ಒಳಗೊಂಡ) ಮೇಲೆ ಅಧಿಕಾರ ವ್ಯಾಪ್ತಿ ಹೊಂದಿತ್ತು. ಇದರಲ್ಲಿ 406.87 ಕಿಮೀ. ಭೂ ಗಡಿ ಮತ್ತು 238 ಕಿಮೀ. ಸಮುದ್ರ ಗಡಿ, ಒಟ್ಟು 645 ಕಿಮೀ ಸೇರಿವೆ.

310 ಚದರ ಕಿಮೀ ಪ್ರದೇಶದ ವ್ಯಾಪ್ತಿ: 310 ಚದರ ಕಿಮೀ. ಪ್ರದೇಶದಲ್ಲಿ ಹರಡಿರುವ ಮತ್ತು ಎರಡು ಪೊಲೀಸ್ ವ್ಯಾಪ್ತಿಗಳನ್ನು (ಪೂರ್ವ ಮತ್ತು ಪಶ್ಚಿಮ) ಒಳಗೊಂಡಿರುವ ಕಚ್ ಜಿಲ್ಲೆ ಗಡಿ ವ್ಯಾಪ್ತಿಯಲ್ಲಿ ಮುಂದುವರಿಯುತ್ತದೆ. ಇದಲ್ಲದೆ, 1995ರ ಅಧಿಸೂಚನೆಯ ಪ್ರಕಾರ ರಾಜ್‌ಕೋಟ್ ವ್ಯಾಪ್ತಿಯಲ್ಲಿದ್ದ ಮೊರ್ಬಿ ಜಿಲ್ಲೆಯನ್ನು ಈಗ ಗಡಿ ವ್ಯಾಪ್ತಿಯೊಳಗೆ ಸೇರಿಸಲಾಗಿದೆ. ಗಮನಾರ್ಹವಾಗಿ, ಮೊರ್ಬಿ ಯಾವುದೇ ಭೂ ಅಥವಾ ಸಮುದ್ರ ಗಡಿಯೊಂದಿಗೆ ಸಂಪರ್ಕ ಹೊಂದಿಲ್ಲ. ಆದರೆ, ಮೇಲ್ಭಾಗದ ಸೌರಾಷ್ಟ್ರದಲ್ಲಿರುವ ಲಿಟಲ್ ರಾನ್ ಆಫ್ ಕಚ್‌ನ ಪ್ರವೇಶದ್ವಾರವಾಗಿದೆ.

ಗಡಿ ಭದ್ರತಾ ಮೇಲ್ವಿಚಾರಣೆಗೆ ಬಲ

ಪಾಲನ್ಪುರದಲ್ಲಿ ಪ್ರಧಾನ ಕಚೇರಿ ಹೊಂದಿರುವ ಹೊಸದಾಗಿ ರಚಿಸಲಾದ ಬನಸ್ಕಾಂತ ವ್ಯಾಪ್ತಿಯು ಬನಸ್ಕಾಂತ(ಪಾಲನ್ಪುರ), ಪಟಾನ್ ಮತ್ತು ವಾವ್-ತರಾದ್ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಹೊಸ ವ್ಯವಸ್ಥೆ ಆಡಳಿತಾತ್ಮಕ ದಕ್ಷತೆ ಸುಧಾರಿಸುತ್ತದೆ. ಗಡಿ ಭದ್ರತಾ ಮೇಲ್ವಿಚಾರಣೆ ಬಲಪಡಿಸುತ್ತದೆ. ಉತ್ತರ ಗುಜರಾತ್ ಮತ್ತು ಕಚ್‌ನ ಗಡಿ ಜಿಲ್ಲೆಗಳಲ್ಲಿ ಉತ್ತಮ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ.

ಮೂರು ಜಿಲ್ಲೆ ಒಳಗೊಂಡ ವಲಯ

ಯಾವುದೇ ಪೊಲೀಸ್ ವ್ಯಾಪ್ತಿ ಸಾಮಾನ್ಯವಾಗಿ ಮೂರು ಪೊಲೀಸ್ ಜಿಲ್ಲೆಗಳನ್ನು ಹೊಂದಿರುತ್ತದೆ ಅಹಮದಾಬಾದ್, ವಡೋದರಾ, ಗಾಂಧಿನಗರ, ಸೂರತ್, ರಾಜ್‌ಕೋಟ್, ಜುನಾಗಢ, ಭಾವನಗರ, ದಾಹೋದ್ ಪಂಚಮಹಲ್ ಮತ್ತು ಬಾರ್ಡರ್ ರೇಂಜ್ ನಂತರ ಬನಸ್ಕಾಂತ ಗುಜರಾತಿನ 10ನೇ ಪೊಲೀಸ್ ವಲಯವಾಗಿರುತ್ತದೆ.



ಕಿರುಸುದ್ದಿ

ತ.ನಾಡಲ್ಲಿ ಅಣ್ಣಾಮಲೈ ರಾಜಕೀಯ ಚಳವಳಿ

• **ಚೆನ್ನೈ:** ಬಿಜೆಪಿಯಿಂದ ನಿರ್ಗಮಿಸಿದ್ದೇನೆ ಎಂದು ಪಕ್ಷದ ತಮಿಳುನಾಡು ಮಾಜಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಶುಕ್ರವಾರ ಔಪಚಾರಿಕವಾಗಿ ಘೋಷಿಸಿದ್ದಾರೆ. ಅದೇ ರೀತಿ 2031ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಹೊಸ ರಾಜಕೀಯ ಚಳವಳಿ ಪ್ರಾರಂಭಿಸುವ ನಿರ್ಧಾರವನ್ನೂ ಘೋಷಿಸಿದರು. ಈ ಚಳವಳಿ ಮೂಲಕ ರಾಜ್ಯದಲ್ಲಿ ರಾಜಕೀಯ ಸಂಸ್ಕೃತಿಗೆ ಹೊಸ ರೂಪ ನೀಡುತ್ತೇನೆ. ವ್ಯಕ್ತಿ ಪೂಜೆ ಹಾಗೂ ಕುಟುಂಬ ರಾಜಕಾರಣಕ್ಕೆ ಪರ್ಯಾಯವಾಗಿ ರಾಜ್ಯದಲ್ಲಿ ಸಾಮರ್ಥ್ಯ ಹಾಗೂ ಮನೋಭಾವ ಆಧಾರಿತ ನಾಯಕತ್ವ ಬೆಳೆಸುವ ಕನಸನ್ನು ಈ ವೇಳೆ ಅವರು ಹಂಚಿಕೊಂಡಿದ್ದಾರೆ. ಈ ಚಳವಳಿಯನ್ನು ಭವಿಷ್ಯದಲ್ಲಿ ಕಾರ್ಯಕರ್ತರ ಬಲವನ್ನು ನಿರ್ಮಿಸಿ, ನಾಯಕತ್ವ ತರಬೇತಿ ನೀಡಿದ ಬಳಿಕ ರಾಜಕೀಯ ಪಕ್ಷವಾಗಿ ಪರಿವರ್ತಿಸಲಾಗುವುದು ಎಂದು ಹೇಳಿದ್ದಾರೆ. ಅಲ್ಲದೆ ತಮಿಳುನಾಡಿನ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸ್ಪರ್ಧಿಸಲಿದೆ ಎಂದೂ ತಿಳಿಸಿದ್ದಾರೆ. ಚಳವಳಿಯನ್ನು ಬೆಂಬಲಿಸಲು ಆಸಕ್ತಿ ಹೊಂದಿರುವವರು ನೋಂದಾಯಿಸಿಕೊಳ್ಳುವಂತೆ ಅಣ್ಣಾಮಲೈ ವಿಡಿಯೋ ಮೂಲಕ ಜನತೆಗೆ ಆಹ್ವಾನ ನೀಡಿದ್ದಾರೆ. ಜತೆಗೆ, ಚುನಾವಣಾ ರಾಜಕೀಯಕ್ಕೆ ಆಸಕ್ತಿ ಹೊಂದಿರುವ ನಾಯಕರಿಗೆ ತರಬೇತಿ ನೀಡಲು ಎಪಿಜೆ ಅಬ್ದುಲ್ ಕಲಾಂ ನೈತಿಕ ಮತ್ತು ರಾಜಕೀಯ ಕೇಂದ್ರವನ್ನು ಸ್ಥಾಪಿಸಿರುವುದಾಗಿ ಘೋಷಿಸಿದ್ದಾರೆ.

ಒತ್ತಡಕ್ಕೆ ಬಗ್ಗುವವರಲ್ಲ ಪಿಎಂ ಮೋದಿ: ಪುಟಿನ್

• **ಸೈಂಟ್ ಪೀಟರ್ಸ್‌ಬರ್ಗ್:** ಭಾರತದೊಂದಿಗಿನ ರಷ್ಯಾದ ಬಂಧ ಕಾಲನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವಂಥದ್ದು ಎಂದು ಶ್ಲಾಘಿಸಿರುವ ಅಧ್ಯಕ್ಷ ವ್ಲಾಡಿಮೀರ್ ಪುಟಿನ್, ರಷ್ಯಾದೊಂದಿಗಿನ ನಂಟನ್ನು ತಗ್ಗಿಸುವಂತೆ ಪಾಶ್ಚಾತ್ಯರು ಪ್ರಧಾನಿ ನರೇಂದ್ರ ಮೋದಿಯವರ ಮೇಲೆ ಒತ್ತಡ ಹೇರುತ್ತಿರುವುದರಿಂದ ಜಾಗತಿಕ ಸ್ಥಿರತೆಗೆ ಹಾನಿ ಉಂಟಾಗಲಿದೆ ಎಂದು ಎಚ್ಚರಿಸಿದ್ದಾರೆ. ಭಾರತದ ಬೆಳವಣಿಗೆ ದಿಢೀರ್ ಉಂಟಾಗಿರುವಂಥದ್ದಲ್ಲ, ಬದಲಿಗೆ ಇದು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಕಠಿಣ ಪರಿಶ್ರಮದಿಂದ ಆಗಿರುವಂಥದ್ದು ಎಂದು ಅವರು ಒತ್ತಿ ಹೇಳಿದ್ದಾರೆ. ಪಿಟಿಐ ಸೇರಿದಂತೆ ಜಾಗತಿಕ ಸುದ್ದಿ ಸಂಸ್ಥೆಗಳ ಮುಖ್ಯಸ್ಥರ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಶ್ಲಾಘಿಸಿದರು. ರಷ್ಯಾ ಭಾರತದೊಂದಿಗಿನ ಸಮಗ್ರ ಬಾಂಧವ್ಯವನ್ನು ವಿಸ್ತರಿಸಲು ರಷ್ಯಾ ದೃಢ ನಿಶ್ಚಯ ಮಾಡಿದೆ. ಈಗಿರುವ 60 ಬಿ.ಡಾ.ಗಳ ದ್ವಿಪಕ್ಷೀಯ ವ್ಯಾಪಾರವು 100 ಬಿ.ಡಾ.ಗೇರುವ ನಿರೀಕ್ಷೆಯಿದೆ ಎಂದರು. ಸಂವಾದದಲ್ಲಿ ಪಾಲ್ಗೊಂಡಿದ್ದ ಭಾರತದ ಏಕೈಕ ಪತ್ರಕರ್ತರಾದ ಪಿಟಿಐಯ ಸಿಇಒ ಮತ್ತು ಪ್ರಧಾನ ಸಂಪಾದಕ ವಿಜಯ್ ಜೋಷಿ ಅವರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಪುಟಿನ್, ಭಾರತವು ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ. ವಿಶ್ವದಲ್ಲೇ ಅತ್ಯಧಿಕ ಆರ್ಥಿಕ ಬೆಳವಣಿಗೆ ದರವನ್ನು ಹೊಂದಿರುವ ಭಾರತದ ಬೆಳವಣಿಗೆ ಹಠಾತ್ ಆಗಿ ಉಂಟಾಗಿರುವಂಥದ್ದಲ್ಲ. ಇದು ಪ್ರಧಾನಿ ಮೋದಿ ನಾಯಕತ್ವದಲ್ಲಿ ಸರಕಾರದ ಕಠಿಣ ಪರಿಶ್ರಮದಿಂದ ಆಗಿರುವಂಥದ್ದು ಎಂದರು.

ಕೇರಳದಲ್ಲಿ ಭಾರೀ ಮಳೆ 5 ಜಿಲ್ಲೆಗೆ ರೆಡ್ ಅಲರ್ಟ್

• **ಹೊಸದಿಲ್ಲಿ / ತಿರುವನಂತಪುರಂ:** ನೈಋತ್ಯ ಮುಂಗಾರು ಕೇರಳದ ಕೆಲವು ಭಾಗಗಳಲ್ಲಿ ತನ್ನ ಪ್ರಕೋಪವನ್ನು ಉಂಟುಮಾಡುತ್ತಿದೆ. ಕಳೆದ ಎರಡು ದಿನಗಳಿಂದ ಮಧ್ಯ ಮತ್ತು ಉತ್ತರ ಕೇರಳದ ಹಲವಾರು ಜಿಲ್ಲೆಗಳಲ್ಲಿ ತೀವ್ರ ಮಳೆಯಾಗುತ್ತಿದೆ. ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಕಾಸರಗೋಡು, ಕಣ್ಣೂರು, ಕೋಝಿಕ್ಕೋಡ್, ವಯನಾಡು ಮತ್ತು ಮಲಪ್ಪುರಂ ಜಿಲ್ಲೆಗಳಿಗೆ ಶನಿವಾರ ರೆಡ್ ಅಲರ್ಟ್ ನೀಡಿದೆ. ಮುಂದಿನ 24 ಗಂಟೆಗಳಲ್ಲಿ 204 ಮಿಮೀಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ. ಜತೆಗೆ ಮುಂದಿನ ಏಳು ದಿನಗಳಲ್ಲಿ ಅಂದರೆ ಗುರುವಾರದವರೆಗೆ ಕೇರಳ ಮತ್ತು ಕರ್ನಾಟಕದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿದೆ. ತಮಿಳುನಾಡಿನಲ್ಲೂ ಭಾರೀ ಮಳೆಯ ಮುನ್ಸೂಚನೆ ಇದೆ. ಮುಂದಿನ ವಾರದಲ್ಲಿ ಈಶಾನ್ಯ ಭಾರತದಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ಹೇಳಿದೆ. ರೆಡ್ ಅಲರ್ಟ್ ಹಿನ್ನಲ್ಲೆ ವಯನಾಡು, ಕೋಝಿಕ್ಕೋಡ್ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಪ್ರವಾಸಿ ಚಾರಣ ಸ್ಥಳಗಳಿಗೆ ಪ್ರವೇಶ ಮತ್ತು ಗುಡ್ಡಗಾಡು ರಸ್ತೆಗಳಲ್ಲಿ ರಾತ್ರಿ ಪ್ರಯಾಣ ಮತ್ತು ಗಣಿಗಾರಿಕೆ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ವಯನಾಡು ಮತ್ತು ಕಾಸರಗೋಡು ಜಿಲ್ಲೆಗಳ ಶೈಕ್ಷಣಿಕ ಸಂಸ್ಥೆಗಳಿಗೆ ಶನಿವಾರ ರಜೆ ಘೋಷಿಸಲಾಗಿದೆ. ಈ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಗುಡುಗು ಸಹಿತ ಭಾರೀ ಮಳೆ ಮತ್ತು ಗಂಟೆಗೆ 40 ಕಿಮೀ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ.

» **ಕರ್ನಾಟಕದಲ್ಲಿ ಮುಂದಿನ 7 ದಿನ ಭಾರೀ ಮಳೆ ಸಾಧ್ಯತೆ: ಐಎಂಡಿ**

ಸಿಬಿಎಸ್‌ಇ ಫಲಿತಾಂಶ ಪೊಲೀಸರಿಗೆ ದೂರು

• **ಹೊಸದಿಲ್ಲಿ:** ಸಿಬಿಎಸ್‌ಇ 12ನೇ ತರಗತಿ ಫಲಿತಾಂಶಾನಂತರದ ಸೇವೆಗಳ ಪೋರ್ಟಲ್ ಮೇಲೆ ಕಳೆದ ಮೂರು ದಿನಗಳಿಂದ ನಿರಂತರ ಸೈಬರ್ ದಾಳಿಗಳು ನಡೆದಿರುವ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರಿಗೆ ಅಧಿಕೃತ ದೂರು ನೀಡಿದೆ. ಆದರೆ ಯಾವುದೇ ವಿದ್ಯಾರ್ಥಿಯ ವೈಯಕ್ತಿಕ ಮಾಹಿತಿ ಸೋರಿಕೆಯಾಗಿಲ್ಲ ಹಾಗೂ ಡೇಟಾ ಸಂಪೂರ್ಣ ಸುರಕ್ಷಿತವಾಗಿದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ. ಮಾರ್ಕ್ಸ್ ಪರಿಶೀಲನೆ, ಮೌಲ್ಯಮಾಪನಗೊಂಡ ಉತ್ತರಪತ್ರಿಕೆಗಳ ಪ್ರತಿಗಳನ್ನು ಪಡೆಯುವುದು ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಬಳಸುವ ಪೋಸ್ಟ್-ರಿಸಲ್ಟ್ ಸರ್ವಿಸಸ್ ಪೋರ್ಟಲ್ ಗುರಿಯಾಗಿಸಿಕೊಂಡು ಸಂಯೋಜಿತ ಸೈಬರ್ ದಾಳಿಗಳು ನಡೆದಿವೆ ಎಂದು ಸಿಬಿಎಸ್‌ಇ ತಿಳಿಸಿದೆ. ಈ ಕುರಿತು ದೆಹಲಿ ಪೊಲೀಸರ ಇಂಟೆಲಿಜೆನ್ಸ್ ಫ್ಯೂಷನ್ ಆ್ಯಂಡ್ ಸ್ಟ್ರಾಟೆಜಿಕ್ ಆಪರೇಷನ್ಸ್ ಘಟಕಕ್ಕೆ ದೂರು ಸಲ್ಲಿಸಲಾಗಿದೆ. 24 ಗಂಟೆಗಳ ನಿಗಾ ವ್ಯವಸ್ಥೆಯ ಮೂಲಕ ಎಲ್ಲ ದಾಳಿಗಳನ್ನು ಯಶಸ್ವಿಯಾಗಿ ತಡೆಗಟ್ಟಲಾಗಿದೆ. ಪೋರ್ಟಲ್‌ನ ಕಾರ್ಯಾಚರಣೆಗೆ ಯಾವುದೇ ಧಕ್ಕೆಯಾಗಿಲ್ಲ ಮತ್ತು ವಿದ್ಯಾರ್ಥಿಗಳ ಸೂಕ್ಷ್ಮ ಮಾಹಿತಿಯೂ ಸುರಕ್ಷಿತವಾಗಿದೆ ಎಂದು ಮಂಡಳಿ ಹೇಳಿದೆ. ಇದಕ್ಕೂ ಮುನ್ನ ಮರುಮೌಲ್ಯಮಾಪನ ಪೋರ್ಟಲ್ ಮೇಲೆ ನಡೆದ ದಾಳಿಯಲ್ಲಿ ಕೇವಲ ಎರಡು ನಿಮಿಷಗಳಲ್ಲಿ ಸುಮಾರು 15 ಲಕ್ಷ ಹಿಟ್‌ಗಳು ದಾಖಲಾಗಿದ್ದವು. ಆದಾಗ್ಯೂ ಪೋರ್ಟಲ್ ಕಾರ್ಯನಿರ್ವಹಣೆಯನ್ನು ಮುಂದುವರಿಸಿ ಸಾವಿರಾರು ವಿದ್ಯಾರ್ಥಿಗಳ ಅರ್ಜಿಗಳನ್ನು ಯಶಸ್ವಿಯಾಗಿ ಸ್ವೀಕರಿಸಿತ್ತು. ಸೈಬರ್ ದಾಳಿಗಳ ಮೂಲವನ್ನು ಪತ್ತೆಹಚ್ಚಲು ಹಾಗೂ ಹೊಣೆಗಾರರ ವಿರುದ್ಧ ಕ್ರಮ ಕೈಗೊಳ್ಳಲು ದೆಹಲಿ ಪೊಲೀಸರು ತನಿಖೆ ಆರಂಭಿಸುವ ಸಾಧ್ಯತೆ ಇದೆ.

ದೇಶದಲ್ಲಿ ಇ-85 ಇಂಧನಕ್ಕೆ ಚಾಲನೆ

• **ಹೊಸದಿಲ್ಲಿ:** ಫ್ಲೆಕ್ಸ್-ಫ್ಯುಯೆಲ್ ವಾಹನಗಳಿಗಾಗಿ ರೂಪಿಸಲಾದ ಹೆಚ್ಚಿನ ಎಥೆನಾಲ್ ಮಿಶ್ರಿತ ಇ-85 ಇಂಧನಕ್ಕೆ ಕೇಂದ್ರ ಸರ್ಕಾರ ಶುಕ್ರವಾರ ಚಾಲನೆ ನೀಡಿದೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ದಿಲ್ಲಿಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಇಂಧನವನ್ನು ಅನಾವರಣಗೊಳಿಸಿದರು. ಇ-85 ಇಂಧನವು ಶೇ.80-85 ಎಥೆನಾಲ್ ಹಾಗೂ ಶೇ.14-19 ಪೆಟ್ರೋಲ್ ಮಿಶ್ರಣ ಹೊಂದಿದ್ದು, ಫ್ಲೆಕ್ಸ್-ಫ್ಯುಯೆಲ್ ವಾಹನಗಳಲ್ಲಿ ಮಾತ್ರ ಬಳಸಬಹುದು. ಇದರ ದರ ಸಾಮಾನ್ಯ ಪೆಟ್ರೋಲ್‌ಗಿಂತ ಲೀಟರ್‌ಗೆ ಸುಮಾರು 20 ರೂ. ಕಡಿಮೆಯಾಗಿದೆ. ಪ್ರಾರಂಭಿಕ ಹಂತದಲ್ಲಿ ದೇಶದ 48 ಪೆಟ್ರೋಲ್ ಬಂಕ್‌ಗಳಲ್ಲಿ ಲಭ್ಯವಾಗಲಿರುವ ಈ ಇಂಧನವನ್ನು 2026ರ ಅಂತ್ಯದೊಳಗೆ 500 ಹಾಗೂ 2027ರೊಳಗೆ 5,000 ಕೇಂದ್ರಗಳಿಗೆ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆ. ಎಥೆನಾಲ್ ಬಳಕೆಯಿಂದ ವಿದೇಶಿ ವಿನಿಮಯ ಉಳಿತಾಯ, ಕಚ್ಚಾ ತೈಲ ಆಮದು ಕಡಿತ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ನೆರವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ. ಎಥೆನಾಲ್‌ನ ಪ್ರತಿಯೊಂದು ಲೀಟರ್ ಆಮದು ಇಂಧನಕ್ಕೆ ಪರ್ಯಾಯ ಎಂದು ಅವರು ಹೇಳಿದರು.

ಜಾಗತಿಕ ಬಿಕ್ಕಟ್ಟು, ಯುದ್ಧಾತಂಕ ಹೊರತಾಗಿಯೂ ಜಿಡಿಪಿ ಜಿಗಿತ

ಭಾರತದ ಆರ್ಥಿಕ ಬೆಳವಣಿಗೆ ಶೇ.7.7ಕ್ಕೆ

• **ಹೊಸದಿಲ್ಲಿ:** ಜಾಗತಿಕ ಅನಿಶ್ಚಿತತೆ ಮತ್ತು ಭೌಗೋಳಿಕ ರಾಜಕೀಯ ಉದ್ವಿಗ್ನತೆ ಮತ್ತು ಹೆಚ್ಚಿದ ಇಂಧನ ಬೆಲೆಗಳ ಹೊರತಾಗಿಯೂ 2025-26ನೇ ಹಣಕಾಸು ವರ್ಷದಲ್ಲಿ ಭಾರತದ ನೈಜ ಆರ್ಥಿಕ ಬೆಳವಣಿಗೆಯು ಹಿಂದಿನ ವರ್ಷದಲ್ಲಿನ ಶೇ.7.1ರಿಂದ ಶೇ.7.7ಕ್ಕೇರಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಅಂಕಿ-ಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ(ಎಂಎಸ್‌ಪಿಐ) ಸಚಿವಾಲಯವು ಶುಕ್ರವಾರ ಬಿಡುಗಡೆಗೊಳಿಸಿದ ಅಂಕಿ-ಅಂಶಗಳ ಪ್ರಕಾರ ಜನವರಿಯಿಂದ-ಮಾರ್ಚ್ ನಡುವಣ 4ನೇ ತ್ರೈಮಾಸಿಕದಲ್ಲಿ ಶೇ.7.8ರ ಆರ್ಥಿಕ ಬೆಳವಣಿಗೆ ತೋರಿಸಿದೆ. ಇದು ಈ ಹಣಕಾಸು ವರ್ಷದ ಅಂತ್ಯವರೆಗೂ ಬೆಳವಣಿಗೆ ದೃಢವಾಗಿ ಮುಂದುವರಿದಿರುವುದನ್ನು ತೋರಿಸಿದೆ.

2022-23ರ ಸ್ಥಿರ ಬೆಲೆಗಳಲ್ಲಿ ಅಳೆಯಲಾದ ನೈಜ ಜಿಡಿಪಿಯು 2026ನೇ ಹಣಕಾಸು ವರ್ಷದಲ್ಲಿ 323.12 ಲಕ್ಷ ಕೋಟಿ ರೂ.ಗಳನ್ನು ತಲುಪಿದೆ. ಇದು 2025ನೇ ಹಣಕಾಸು ವರ್ಷದಲ್ಲಿ 299.89 ಕೋಟಿ ರೂ.ಗಳಾಗಿತ್ತು. ಹಣದುಬ್ಬರದ ಪರಿಣಾಮವನ್ನು ಒಳಗೊಂಡ ಪ್ರಸ್ತುತ ವರ್ಷದ ಜಿಡಿಪಿ ಹಿಂದಿನ ವರ್ಷದಲ್ಲಿದ್ದ 318.07 ಲಕ್ಷ ಕೋಟಿ ರೂ.ಗಳಿಂದ 346ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ಶೇ.8.9ರ ಬೆಳವಣಿಗೆ ದರವನ್ನು ದಾಖಲಿಸಿದೆ. ಇತ್ತೀಚಿನ ಅಂದಾಜುಗಳಂತೆ, ಭಾರತದ ಹಣಕಾಸು ಚಟುವಟಿಕೆಗಳು 2026-27ನೇ ಸಾಲಿನ ಹಣಕಾಸು ವರ್ಷದಲ್ಲಿ ಚೇತರಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಜಿಡಿಪಿ ಮತ್ತು ಒಟ್ಟು ಮೌಲ್ಯವರ್ಧನೆ(ಜಿವಿಎ) ಗಳೆರಡರಲ್ಲೂ ಬೆಳವಣಿಗೆಯ ಸುಧಾರಣೆ ತೋರಿಸಿದೆ. ತೆರಿಗೆಗಳು ಮತ್ತು ಸಬ್ಸಿಡಿಗಳನ್ನು ಹೊರತುಪಡಿಸಿದ ಆರ್ಥಿಕ ಉತ್ಪಾದನೆಯನ್ನು ಅಳೆಯುವ ನೈಜ ಜಿವಿಎ 2026ನೇ ಸಾಲಿನಲ್ಲಿ ಶೇ.7.9ರ ಬೆಳವಣಿಗೆಯನ್ನು ದಾಖಲಿಸಿದೆ. ಇದು ಕಳೆದ ವರ್ಷದಲ್ಲಿ ಶೇ.7.3ಆಗಿತ್ತು. ಪ್ರಚಲಿತ ಬೆಲೆಗಳು, ಪ್ರಸಕ್ತ ಜಿವಿಎ ಹಿಂದಿನ ವರ್ಷದಲ್ಲಿದ್ದ 288.54 ಲಕ್ಷ ಕೋಟಿ ರೂ.ಗಳಿಂದ 314.87 ಲಕ್ಷ ಕೋಟಿ ರೂ.ಗಳಿಗೆ ಅಂದರೆ ಶೇ.9.1ರ ಹೆಚ್ಚಳ ಕಂಡಿದೆ.

ಆರ್ಥಿಕತೆಯು ಎಲ್ಲ ನೆಲೆಗಳಲ್ಲೂ ವಿಶಾಲ ನೆಲೆಯ ಬೆಳವಣಿಗೆಯಾಗಿರುವುದನ್ನು ಅಂಕಿ-ಅಂಶಗಳು ಎತ್ತಿತೋರಿದ್ದು, ಸೇವಾ ಕ್ಷೇತ್ರವು ಆರ್ಥಿಕ ಚಟುವಟಿಕೆಗಳ ಅತಿದೊಡ್ಡ ಪಾಲಿನೊಂದಿಗೆ ಮುನ್ನಡೆಯನ್ನು ಕಾಯ್ದುಕೊಂಡಿದೆ. ಉತ್ಪಾದನೆ , ನಿರ್ಮಾಣ ಮತ್ತು ಇತರ ಕೈಗಾರಿಕಾ ಕ್ಷೇತ್ರಗಳು ಕೂಡ ಈ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಿದೆ.

> **ಭಾರತದ ಆರ್ಥಿಕತೆ ಕುಸಿತದತ್ತ ಸಾಗುತ್ತಿದೆ ಎಂಬ ರಾಹುಲ್ ಗಾಂಧಿ ಹೇಳಿಕೆಗೆ ಇತ್ತೀಚಿನ ಜಿಡಿಪಿ ಅಂಕಿ-ಅಂಶಗಳೇ ತಕ್ಕ ಉತ್ತರ ನೀಡಿವೆ. ಮೋದಿ ಅವರ ನೇತೃತ್ವದಲ್ಲಿ ದೇಶದ ಆರ್ಥಿಕತೆ ನಿರಂತರ ಪ್ರಗತಿ ಸಾಧಿಸುತ್ತಿದೆ.**
> ■ **ನಿತಿನ್ ನವೀನ್, ಬಿಜೆಪಿ ರಾಷ್ಟ್ರಾಧ್ಯಕ್ಷ**

> **ಜಾಗತಿಕ ಪರಿಸ್ಥಿತಿಗಳು ಸುಧಾರಿಸಿದರೆ 2027-28ನೇ ಹಣಕಾಸು ವರ್ಷದಲ್ಲಿ ಭಾರತ ಮತ್ತೆ ಶೇ.7ಕ್ಕಿಂತ ಹೆಚ್ಚಿನ ಬೆಳವಣಿಗೆ ದರ ಸಾಧಿಸಲಿದೆ.**
> ■ **ವಿ. ಅನಂತ ನಾಗೇಶ್ವರನ್, ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ**

5ನೇ ತಲೆಮಾರಿನ ಯುದ್ಧ ವಿಮಾನ | ರಷ್ಯಾ ಅಧ್ಯಕ್ಷ ಪುಟಿನ್ ಪ್ರಸ್ತಾಪ

ಭಾರತದಲ್ಲೇ ಫೈಟರ್ ಜೆಟ್ ಉತ್ಪಾದನೆ

• **ಹೊಸದಿಲ್ಲಿ:** 5ನೇ ತಲೆಮಾರಿನ ಫೈಟರ್ ಜೆಟ್ ಹುಡುಕಾಟದಲ್ಲಿರುವ ಭಾರತಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪ್ರಸ್ತಾವನೆ ಮುಂದಿಟ್ಟಿದ್ದಾರೆ. ಎಸ್ ಯು-57 ಸ್ಟೆಲ್ತ್ ಯುದ್ಧ ವಿಮಾನ ಜಂಟಿ ಉತ್ಪಾದನೆಗೆ ಪುಟಿನ್ ಆಸಕ್ತಿ ತೋರಿದ್ದಾರೆ. ಪ್ರಮುಖ ರಕ್ಷಣಾ ವೇದಿಕೆಗಳು ಮತ್ತು ಶಸ್ತ್ರಾಸ್ತ್ರಗಳಿಗಾಗಿ ನಿರ್ಣಾಯಕ ತಂತ್ರಜ್ಞಾನಗಳನ್ನು ಭಾರತಕ್ಕೆ ಒದಗಿಸಲು ರಷ್ಯಾ ಸಿದ್ಧವಾಗಿದೆ ಎಂದು ಪುಟಿನ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಸ್ಥಳೀಯ 5ನೇ ತಲೆಮಾರಿನ ಜೆಟ್ (ಅಡ್ವಾನ್ಸ್ಡ ಮೀಡಿಯಂ ಕಾಂಬ್ಯಾಟ್ ಏರ್‌ಕ್ರಾಫ್ಟ್) ಅನ್ನು ಅಭಿವೃದ್ಧಿಪಡಿಸುವ ಭಾರತದ ಯೋಜನೆಯೂ ಸದ್ಯ ಅಭಿವೃದ್ಧಿ ಹಂತದಲ್ಲಿದೆ. ಇದು 2030ರ ವೇಳೆಗೆ ಸೇವೆಗೆ ಬರುವ ಸಾಧ್ಯತೆಯಿದೆ.

ಈ ಬಗ್ಗೆ ಮಾತನಾಡಿದ ಪುಟಿನ್, 2018ರಲ್ಲಿ ಭಾರತ ಈ ಉದ್ಯಮದಿಂದ ಹೊರನಡೆಯುವ ಮುನ್ನ ರಷ್ಯಾ ತನ್ನ ಐದನೇ ತಲೆಮಾರಿನ ಫೈಟರ್ ಏರ್‌ಕ್ರಾಫ್ಟ್(ಎಫ್‌ಜಿಎಫ್‌ಎ) ಕಾರ್ಯಕ್ರಮದಲ್ಲಿ



ಸಹ-ಅಭಿವೃದ್ಧಿಗೆ ಭಾರತವ ಆಹ್ವಾನಿಸಿತ್ತು ಎಂಬುದನ್ನು ಉಲ್ಲೇಖಿಸಿದ್ದಾರೆ. ವೆಚ್ಚ ಹಂಚಿಕೆ ಯೋಜನೆಗಳು, ತಂತ್ರಜ್ಞಾನ ವರ್ಗಾವಣೆ ಮತ್ತು ತಾಂತ್ರಿಕ ಸಾಮರ್ಥ್ಯಗಳ ಬಗ್ಗೆ ಭಿನ್ನಾಭಿಪ್ರಾಯಗಳ ಬಗ್ಗೆ ಪ್ರಾಥಮಿಕ ವಿನ್ಯಾಸಗಳಲ್ಲಿ ಸುಮಾರು 300 ಮಿಲಿಯನ್ ಹೂಡಿಕೆ ಮಾಡಿದ ನಂತರ ಸ್ಟೆಲ್ತ್ ಫೈಟರ್ ಜೆಟ್ ಅನ್ನು ಅಭಿವೃದ್ಧಿಪಡಿಸುವ 11 ವರ್ಷಗಳ ಸಹಯೋಗದ ಕಾರ್ಯಕ್ರಮದಿಂದ ಭಾರತವು ಹಿಂದೆ ಸರಿದಿತ್ತು.

ಸ್ವಾವಲಂಬನೆಗಾಗಿ ಕೆಲ ಬದಲಾವಣೆ : ಆದಾಗ್ಯೂ, ಅಂದಿನಿಂದ ರಷ್ಯಾದ ಸರ್ಕಾರಿ ಸ್ವಾಮ್ಯದ ರಕ್ಷಣಾ ರಫ್ತುದಾರ ರೊಸೊಬೊರೊನೆಕ್ಸ್ಪೋರ್ಟ್, ಭಾರತದ ಮೇಕ್ ಇನ್ ಇಂಡಿಯಾ ಯೋಜನೆಯೊಂದಿಗೆ ಹೆಚ್ಚು ಹೊಂದಾಣಿಕೆ ಮಾಡಿಕೊಳ್ಳಲು ತನ್ನ ನಿಯಮಗಳನ್ನು ಬದಲಾಯಿಸಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದರು. ಆದರೆ ಅಮೆರಿಕದ ಐದನೇ ತಲೆಮಾರಿನ ಯುದ್ಧವಿಮಾನಗಳು ನಿಗದಿಪಡಿಸಿದ ಸ್ಟೆಲ್ತ್ ಮಾನದಂಡಗಳಿಗೆ ಇದು ನಿಜವಾಗಿಯೂ ಹೊಂದಿಕೆಯಾಗುತ್ತದೆಯೇ ಎಂಬುದು ಭಾರತದ ಅತಿದೊಡ್ಡ ಕಾಳಜಿಯಾಗಿತ್ತು. ಈ ಹಿನ್ನೆಲೆ ಈ ಮಾತುಕತೆಗಳು ನಿಂತು ಹೋಗಿತ್ತು. ಕೆಲವು ರಕ್ಷಣಾ ವಿಶ್ಲೇಷಕರ, ಸು-57 ಗರಿಷ್ಠ ರಹಸ್ಯಕ್ಕಿಂತ ಕುಶಲತೆ ಮತ್ತು ವಾಯುಬಲ ವೈಜ್ಞಾನಿಕ ಕಾರ್ಯಕ್ಷಮತೆಗೆ ಆದ್ಯತೆ ನೀಡುತ್ತದೆ ಎಂದು ವಿಶ್ಲೇಷಿಸಿದ್ದಾರೆ.

ಜಿಲ್ಲಾಧಿಕಾರಿ ಸ್ನೇಹಲ್ ಮಾಹಿತಿ | ಜು.29ರವರೆಗೆ ಮ್ಯಾಪಿಂಗ್ ಕಾರ್ಯ

ಪರಿಷ್ಕರಣೆ ಶೇ.93ರಷ್ಟು ಪ್ರಗತಿ

ಧಾರವಾಡ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಕಾರ್ಯ ಲಘುಬಗೆಯಿಂದ ಸಾಗಿದ್ದು, ಈವರೆಗೂ ಶೇ.93.35ರಷ್ಟು ಮ್ಯಾಪಿಂಗ್ ಕಾರ್ಯ ಮುಗಿದಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಆರು ತಿಂಗಳಿಂದ ಮ್ಯಾಪಿಂಗ್ (ತಾಳೆ) ಕಾರ್ಯ ನಡೆದಿದೆ. ಈ ತಾಳೆ ಕಾರ್ಯವು ಜು.29ರವರೆಗೆ ನಡೆಯಲಿದೆ. ಗ್ರಾಮೀಣ ಭಾಗದಲ್ಲಿ ಶೇ.99ರಷ್ಟು ಸಾಧನೆ ಮಾಡಿದ್ದಾಗಿ ಮಾಹಿತಿ ನೀಡಿದರು.

ಈವರೆಗೂ ಜಿಲ್ಲೆಯಲ್ಲಿ 16,22,294 ಮತದಾರರ ಪೈಕಿಯಲ್ಲಿ 15,14,392 ಮತಪಟ್ಟಿ ಮ್ಯಾಪಿಂಗ್ ಮಾಡಿದೆ. ಆದರೆ ಹು-ಧಾ ಅವಳಿನಗರಗಳ ಪಟ್ಟಿಯಲ್ಲಿದ್ದ ಹಲವರು ಬೇರೆಡೆ ಹೋಗಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಸಾಧಿಸಿಲ್ಲ ಎಂದರು.

ಜಿಲ್ಲೆಯಲ್ಲಿ 2025ರ ಮತಪಟ್ಟಿಗೆ ನೋಂದಾಯಿಸಿದ ಮತದಾರರನ್ನು 2002ರ ಮತಪಟ್ಟಿಗೆ ತಾಳೆ ಮಾಡುವ ಕಾರ್ಯ ಲಘು ಬಗೆಯಿಂದ ಸಾಗಿದೆ. ಇದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. 1665 ಬೂತ್‌ಗಳಲ್ಲಿ ಮತಗಟ್ಟೆ ಅಧಿಕಾರಿ ನೇಮಿಸಿದೆ ಎಂದರು.

ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಬೂತ್ ಲೇವಲ್ ಏಜೆಂಟರ್ ನೇಮಿಸಿದೆ. ಎಲ್ಲರಿಗೆ ತರಬೇತಿ ನೀಡಿದ್ದು, ಬಿಎಲ್‌ಒ (ಜೂ.30ರಿಂದ ಜು.29ರವರೆಗೂ ಮನೆ ಭೇಟಿ ನೀಡಿ, ಮ್ಯಾಪಿಂಗ್ ಕಾರ್ಯ ಮಾಡುವುದಾಗಿ ತಿಳಿಸಿದರು.



ನೋಡಲ್ ಅಧಿಕಾರಿಗಳು

ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಗೆ ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬರುವ ವರದಿಗಳು ಅವಲೋಕಿಸಿ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಮಾಧ್ಯಮ ಮೇಲ್ವಿಚಾರಣಾ ಕೇಂದ್ರ ತೆರೆದಿದೆ ಎಂದು ಡಿಸಿ ಸ್ನೇಹಲ್, ಕುಶಾಲ ಚೌಗಲಾ ಜಿಲ್ಲಾಮಟ್ಟ ನೋಡಲ್ ಅಧಿಕಾರಿ, ಎಸ್ಐಆರ್ ಮೇಲ್ವಿಚಾರಣೆಗಾಗಿ ಎಸ್.ಎನ್.ರುದ್ರೇಶ ಜಿಲ್ಲಾ ನೋಡಲ್ ಅಧಿಕಾರಿಯಾಗಿ ನೇಮಿಸಿದ್ದಾಗಿ ತಿಳಿಸಿದರು.

ಜಿಲ್ಲೆಯಲ್ಲಿ 452 ಮತದಾರರ ಸೌಲಭ್ಯ ಕೇಂದ್ರಗಳು ಸ್ಥಾಪಿಸಿದೆ. ಆ.5ಕ್ಕೆ ಕರಡು ಮತದಾರರ ಪಟ್ಟಿ ಪ್ರಕಟಿಸಿ, ಸೆ.4ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಿದೆ. ಅ.7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> **ಮತಪಟ್ಟಿ ಮ್ಯಾಪಿಂಗ್ ಶೇ.93ರಷ್ಟು ಮುಗಿದಿದೆ. ಈವರೆಗೆ ಹೊರದೇಶ ಅಥವಾ ಹೊರರಾಜ್ಯದವರು ಅಕ್ರಮವಾಗಿ ಮತಪಟ್ಟಿಯಲ್ಲಿ ಸೇರಿದ ಪ್ರಕರಣಗಳಿಲ್ಲ, ಆದರೆ, ಕೆಲವರು ನಿಧನರಾಗಿದ್ದಾರೆ. ಹೊರರಾಜ್ಯ, ದೇಶ, ಜಿಲ್ಲೆಗಳಿಗೂ ಶಿಫ್ಟ್ ಆಗಿದ್ದಾರೆ. ಅವರನ್ನು ಗುರುತಿಸಿ, ಅರ್ಜಿ ನೀಡದ ನಂತರವೇ ಮಪಟ್ಟಿಯಿಂದ ತೆಗೆಯಲಿದೆ.**
> **■ ಸ್ನೇಹಲ್ ಆರ್., ಜಿಲ್ಲಾಧಿಕಾರಿ**

ಮತದಾರರಿಂದ ಸ್ವೀಕರಿಸಿದ ನಮೂನೆ ಹಾಗೂ ಅಗತ್ಯ ದಾಖಲೆ ಅಪ್‌ಲೋಡ್ ಮಾಡಲು ಹಾಗೂ ಅಧಿಕಾರಿಗಳಿಗೆ ತಾಂತ್ರಿಕ ನೆರವು ಒದಗಿಸಲು 509 ಬಿಎಲ್‌ಒ ಸೌಲಭ್ಯ ಕೇಂದ್ರ ತೆರೆದಿದೆ. ಏಜೆಂಟರ್‌ಗಳಿಗೆ ಕಾರ್ಯಾಗಾರವೂ ಏರ್ಪಡಿಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಇದ್ದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಹುಬ್ಬಳ್ಳಿ: ನವಲಗುಂದ ಹಾಗೂ ಅಣ್ಣಿಗೇರಿಯ 110 ಕೆ.ವಿ ವಿದ್ಯುತ್ ಉಪಕೇಂದ್ರಗಳಲ್ಲಿ ಒಂದನೇ ತ್ರೈಮಾಸಿಕ ನಿರ್ವಹಣಾ ಕಾರ್ಯದ ನಿಮಿತ್ತ ಜೂ.6ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಅಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ನವಲಗುಂದ ವ್ಯಾಪ್ತಿಯ 11ಕೆ.ವಿ ಮಾರ್ಗಗಳಾದ ನವಲಗುಂದ, ಅಳಗವಾಡಿ, ಯಮನೂರ, ಶಾನವಾಡ, ಕುಮಾರಕೊಪ್ಪ, ಇಬ್ರಾಹೀಂಪುರ, ಕಡದಳ್ಳಿ, ಅಮರಗೋಳ,ಸೊಟಕನಾಳ, ಶಲವಡಿ, ಬಳ್ಳೂರು , ಚೆನ್ನಮ್ಮ, ಅಣ್ಣಿಗೇರಿ ವ್ಯಾಪ್ತಿಯ 11 ಕೆ.ವಿ ಮಾರ್ಗಗಳಾದ ನಲವಡಿ, ಭದ್ರಾಪುರ, ಕೋಳಿವಾಡ, ಅಣ್ಣಿಗೇರಿ, ಹಳ್ಳಿಕೇರಿ, ಮಜ್ಜಿಗುಡ್ಡ, ಕೊಂಡಿಕೊಪ್ಪಯಲ್ಲಿ ಬರುವ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ಕೋರಿದೆ.

ತರಬೇತಿ ಕಾರ್ಯಾಗಾರ

ಹುಬ್ಬಳ್ಳಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಯಾರ್) ಕುರಿತು ಬಿಎಲ್‌ಒ(ಮತಗಟ್ಟೆ ಮಟ್ಟದ ಅಧಿಕಾರಿ) ಹಾಗೂ ಬಿಎಲ್‌ಎ(ಮತಗಟ್ಟೆ ಮಟ್ಟದ ಏಜೆಂಟ್) ಗಳಿಗೆ ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ಶುಕ್ರವಾರ ತರಬೇತಿ ಕಾರ್ಯಾಗಾರ ನಡೆಯಿತು.

ಹು-ಧಾ ಪೂರ್ವ ಹಾಗೂ ಹು-ಧಾ ಕೇಂದ್ರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರು ಹಾಗೂ ರಾಜಕೀಯ ಪಕ್ಷಗಳ ಏಜೆಂಟರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಪಾಲಿಕೆ ಆಯುಕ್ತ ರುದ್ರೇಶ ಘಾಳಿ ಮಾಹಿತಿ ನೀಡಿದರು. ಎಸ್‌ಐಆರ್ ಉದ್ದೇಶ, ಮತದಾರರ ಗಣತಿ ನಮೂನೆ ವಿತರಣೆ, ಭರ್ತಿ ಮಾಡಿದ ನಮೂನೆಗಳ ಸಂಗ್ರಹ, ಮತಗಟ್ಟೆಗಳ ವಿಂಗಡಣೆ, ಕರಡು ಮತದಾರರ ಪಟ್ಟಿ ಪ್ರಕಟಣೆ, ಹಕ್ಕು ಮತ್ತು ಆಕ್ಷೇಪಣೆಗಳ ಪ್ರಕ್ರಿಯೆ, ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಸೇರಿದಂತೆ ಸಂಪೂರ್ಣ ಕಾರ್ಯವಿಧಾನ ಹಾಗೂ ವೇಳಾಪಟ್ಟಿಯ ಕುರಿತು ಮಾಹಿತಿ ನೀಡಲಾಯಿತು. ಮತದಾರರ ಪಟ್ಟಿಯ ನಿಖರತೆ ಕಾಪಾಡುವುದು, ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಅಗತ್ಯ ಸಹಕಾರ ನೀಡುವ ಕುರಿತು ಸೂಚಿಸಲಾಯಿತು.

ಕರಾಳ ದಿನಾಚರಣೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ತ್ಯಾಜ್ಯ ಹೆಚ್ಚಾಗಿದ್ದು, ದಿನಗಳು ಕಳೆದಂತೆ ಮಾಲಿನ್ಯ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಕ್ಕ ಫೌಂಡೇಶನ್ ವತಿಯಿಂದ ಪರಿಸರ ದಿನಾಚರಣೆ ದಿನವನ್ನು ಕರಾಳ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ಫೌಂಡೇಶನ್ ಅಧ್ಯಕ್ಷ ವೀರಪ್ಪ ಅರಕೇರಿ ಹೇಳಿದರು. ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪವಿತ್ರ ಮತ್ತು ಪುರಾತನ ತುಳಜಾಭವಾನಿ ದೇವಸ್ಥಾನದ ಒಳಗೆ ಕೊಳಚೆ ನೀರು ಹೋಗದಂತೆ ತಡೆಯಲು ಮಹಾನಗರ ಪಾಲಿಕೆಯವರು ಕ್ರಮ ಕೈಗೊಳ್ಳಬೇಕು ಎಂದರು. ಪರಿಸರ ನೀತಿಯಲ್ಲಿ (ಇಆರ್‌ಪಿ) ವಿಸ್ತ್ರತ ಉತ್ಪಾದಕರ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತಾಗಬೇಕು. ಏಕ ಬಳಕೆ ಪ್ಲಾಸ್ಟಿಕ್ ನಿಷೇಧವಿದ್ದರೂ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕಾದ ಅಧಿಕಾರಿ ವರ್ಗದವರು ಕಣ್ಮುಚ್ಚಿ ಕುಳಿತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಪರಿಸರ ದಿನವನ್ನು ಕರಾಳ ದಿನವೆಂದು ಕರೆಯುತ್ತಿದ್ದೇವೆ ಎಂದರು. ಮೃತ್ಯುಂಜಯ ಸಾಲಿ, ಕಾವೇರಿ ಹಿರೇಮಠ, ವೀರೇಶ ಪಟ್ಟಣಶೆಟ್ಟಿ ಇದ್ದರು.

ವಿದ್ಯುತ್ ವ್ಯತ್ಯಯ ನಾಳೆ

ಧಾರವಾಡ: ಗ್ರಾಮೀಣ ಉಪವಿಭಾಗದ ಬೇಲೂರಿನ 110/33/11ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1ನೇ ತ್ರೈಮಾಸಿಕ ಕಾರ್ಯದ ನಿಮಿತ್ತ ಜೂ.7 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಅಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ 110 ಕೆ.ವಿ ಮಾರ್ಗಗಳಾದ ಟಾಟಾ ಹಾಗೂ ಹೈಟೆಕ್, 33 ಕೆವಿ ಮಾರ್ಗಗಳಾದ ಯುಎಎಸ್, ಸದರಣ ಪೇರೋ, ಟಾಟಾ ಎಂಎಂಎಲ್ 1, 2ಹಾಗೂ ಯುನೆಡೆರಿಟೆಂಡ್, 11 ಕೆ.ವಿ ಮಾರ್ಗಗಳಾದ ತೇಗೂರು, ಇಂಡಸ್ಟ್ರೀಯಲ್, ಟೆಲ್ಕೋ, ಮಂಡಿಹಾಳ, ಹೊಸೆಟ್ಟಿ, ಗಣೇಶನುಗ್ರಹ, ದುರ್ಗದಕೇರಿ, ಮಾಡೆಲ್ ಟಕೆಟ್, ಪ್ರಜಾವಾಣಿ, ಹೈಕೋರ್ಟ್, ಗರಗ, ಕೆಡಿಸಿ, ಮಾದನಭಾವಿ, ತಡಕೋಡ, ವಾಲ್ಮಿ, ಮುಮ್ಮಿಗಟ್ಟಿ ಕೆಐಎಡಿಬಿ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕುಡಿಯುವ ನೀರಿನ ಸುರಕ್ಷತೆ ಅವಶ್ಯ

ನವಲಗುಂದ: ತಾಲೂಕಿನ ತಡಹಾಳ, ತಿರ್ಲಾಪುರ, ಗೊಬ್ಬರಗುಂಪಿ ಸೇರಿದಂತೆ ವಿವಿಧ ಗ್ರಾಮಗಳ ಕುಡಿಯುವ ನೀರಿನ ಕೆರೆಗಳ ನೀರು ಕಲುಷಿತಗೊಂಡಿದ್ದು ತಕ್ಷಣ ತಾಲೂಕು ಆಡಳಿತ ಕಲುಷಿತಗೊಂಡ ಕುಡಿಯುವ ನೀರಿನ ಕೆರೆಗಳ ನೀರನ್ನು ಪ್ರಯೋಗಾಲಯಕ್ಕೆ ಕಳಿಸಿ ಕುಡಿಯಲಿಕ್ಕೆ ಯೋಗ್ಯ ಇದೆಯೋ ಅಥವಾ ಇಲ್ಲ ಎಂಬುದನ್ನು ದೃಢೀಕರಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಧಾರವಾಡ ಜಿಲ್ಲಾ ಬಿಜೆಪಿ (ಗ್ರಾಮೀಣ) ಕಾರ್ಯದರ್ಶಿ ದೇವರಾಜ ಬ. ದಾಡಿಬಾವಿ ಅವರು ಜಿಲ್ಲಾಧಿಕಾರಿಗಳಿಗೆ ಹಾಗೂ ತಾಲೂಕು ಆಡಳಿತಕ್ಕೆ ಆಗ್ರಹಿಸಿದ್ದಾರೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದು, ಆರೋಗ್ಯ ಇಲಾಖೆ ಹಾಗೂ ತಾಲೂಕು ಆಡಳಿತ ತಕ್ಷಣ ಎಚ್ಚೆತ್ತುಕೊಳ್ಳಬೇಕು. ಈ ಹಿಂದೆ ಗೊಬ್ಬರಗುಂಪಿ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಕುಡಿಯುವ ನೀರಿನ ಕೆರೆಗೆ ಗ್ರಾಮಸ್ಥರೊಂದಿಗೆ ಭೇಟಿ ನೀಡಿ ಕುಡಿಯುವ ನೀರಿನ ಆದ್ಯತೆಗೆ ಕ್ರಮ ಕೈಗೊಳ್ಳಲು ವಿನಂತಿಸಿಕೊಂಡರೂ ತಾಲೂಕು ಆಡಳಿತ ಸುರಕ್ಷಿತ ಕ್ರಮ ಕೈಗೊಳ್ಳಲು ವಿಫಲವಾಗಿದೆ. ತಾಲೂಕು ಆಡಳಿತ ತಕ್ಷಣ ಕುಡಿಯುವ ನೀರಿನ ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಪುಷ್ಪವಾಟಿಕಾ ಉದ್ಯಾನವನದ ಉದ್ಘಾಟನೆ



ಧಾರವಾಡ: ಪರಿಸರ ಸಂರಕ್ಷಣೆ ಹಾಗೂ ಸಮುದಾಯದ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಮಹತ್ವದ ಕಾರ್ಯಕ್ರಮವಾಗಿ ರೋಟರಿ ಕ್ಲಬ್ ಧಾರವಾಡ ಹೆರಿಟೇಜ್, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಡಾ.ವೈ. ಎನ್. ಇರಕಲ್ ಶೈಕ್ಷಣಿಕ ಮತ್ತು ದತ್ತಿ ಟ್ರಸ್ಟ್ ಹಾಗೂ ಶ್ರೀಯಾ ನರ್ಸಿಂಗ್ ಕಾಲೇಜು, ಧಾರವಾಡ ಇವರ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ-2026 ಹಾಗೂ ನೂತನವಾಗಿ ಅಭಿವೃದ್ಧಿಪಡಿಸಲಾದ ಪುಷ್ಪವಾಟಿಕಾ ಉದ್ಯಾನವನದ ಉದ್ಘಾಟನಾ ಸಮಾರಂಭವನ್ನು ಶುಕ್ರವಾರ ಇಲ್ಲಿನ ಲಕಮನಹಳ್ಳಿ ಪ್ರದೇಶದ ಚಂದ್ರಿಕಾ ಲೇಔಟ್‌ನಲ್ಲಿ ಅರ್ಥಪೂರ್ಣವಾಗಿ ಆಯೋಜಿಸಲಾಯಿತು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಲಯ ಸಹಾಯಕ ಆಯುಕ್ತ ಶಂಕರ ಪಾಟೀಲ ಉದ್ಘಾಟಿಸಿದರು. ಇರಕಲ್ ಶೈಕ್ಷಣಿಕ ಮತ್ತು ದತ್ತಿ ಟ್ರಸ್ಟ್ ಅಧ್ಯಕ್ಷ ಡಾ. ವೈ.ಎನ್. ಇರಕಲ್ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನೆರವೇರಿತು. ಡಾ. ಸತೀಶ ಇರಕಲ್, ಶ್ರೀಯಾ ಕಾಲೇಜು, ಧಾರವಾಡದ ಕಾರ್ಯದರ್ಶಿ ಅಕಾಡೆಮಿಕ್ ನಿರ್ದೇಶಕಿ ಡಾ. ವಾಣಿ ಇರಕಲ್, ಶ್ರೇಯಾ ನರ್ಸಿಂಗ್ ಕಾಲೇಜು, ಧಾರವಾಡದ ಪ್ರಾಂಶುಪಾಲ ಡಾ. ರೋಡಾ ಜೆಸುರಾಜ್, ರೋಟೇರಿಯನ್ ಶಿವಾಜಿ ಸೂರ್ಯವಂಶಿ, ಅಧ್ಯಕ್ಷರು, ರೋಟರಿ ಕ್ಲಬ್ ಧಾರವಾಡ ಹೆರಿಟೇಜ್; ರೋಟೇರಿಯನ್ ಅಮೋಲ್ ದೇಶಪಾಂಡೆ, ಸಮುದಾಯ ಸೇವಾ ನಿರ್ದೇಶಕರು; ನಾಗರಾಜ, ವಲಯ ಮೇಲ್ವಿಚಾರಕರು ಇತರರಿದ್ದರು. ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕ ಸೇವೆ ಹಾಗೂ ಪರಿಸರ ನಿರ್ವಹಣೆಯಲ್ಲಿ ಗಣನೀಯ ಕೊಡುಗೆ ನೀಡಿದ ವಲಯ ಸಹಾಯಕ ಆಯುಕ್ತ ಶಂಕರ ಪಾಟೀಲ, ಆರೋಗ್ಯ ನಿರೀಕ್ಷಣಾಧಿಕಾರಿ ಸಿದ್ದರಾಜು ಹಾಗೂ ವಲಯ ಮೇಲ್ವಿಚಾರಕ ನಾಗರಾಜ ಅವರನ್ನು ಸನ್ಮಾನಿಸಲಾಯಿತು. ರೋಟೇರಿಯನ್ ಅಮೋಲ್ ದೇಶಪಾಂಡೆ ವಂದಿಸಿದರು.

ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಲಿ

ಹುಬ್ಬಳ್ಳಿ: ನೈರುತ್ಯ ರೈಲ್ವೆ ಹುಬ್ಬಳ್ಳಿ ರೈಲ್ವೆ ವಿಭಾಗದ ವತಿಯಿಂದ ವಿಶ್ವ ಪರಿಸರ ದಿನ ಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣದ ಆವರಣದಲ್ಲಿ ಆಚರಿಸಲಾಯಿತು. ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಬೇಲಾ ಮೀನಾ ಅವರು ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಕೇವಲ ಘೋಷಣೆ ಅಥವಾ ಆಚರಣೆಗೆ ಸೀಮಿತವಾಗದೆ ಪ್ರತಿಯೊಬ್ಬರ ಜೀವನದಲ್ಲಿ ಕಾರ್ಯರೂಪಕ್ಕೆ ಬರಬೇಕಾಗಿದೆ. ಹಸಿರು ಮತ್ತು ಸ್ವಚ್ಛ ಪರಿಸರ ನಿರ್ಮಾಣವು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದರು.

ಇದೆ ಸಂದರ್ಭದಲ್ಲಿ ರೈಲ್ವೆ ವರ್ಕ್‌ಶಾಪ್ ಕಾರ್ಮಿಕರಿಂದ ಪರಿಸರದ ಮಹತ್ವವನ್ನು ಸಾರುವ ಬೀದಿ ನಾಟಕವು ಎಲ್ಲರ ಗಮನ ಸೆಳೆಯಿತು. ಶಾಲಾ ವಿದ್ಯಾರ್ಥಿಗಳು ಪರಿಸರ ಗೀತೆ ಹಾಗೂ ಆಕರ್ಷಕ ನೃತ್ಯ ಕಲಾ ಪ್ರದರ್ಶನವನ್ನು ನೀಡಿದರು. ಜೊತೆಗೆ ಪರಿಸರ ವಿಷಯದ ಕುರಿತು ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಟಿ.ವಿ. ಭೂಷಣ, ಪ್ರೇಮ ಚಂದ್ರ ಹರಿಜನ, ಹಿರಿಯ ವಿಭಾಗೀಯ ಪರಿಸರ ಮತ್ತು ಹೌಸ್ ಕೀಪಿಂಗ್ ವ್ಯವಸ್ಥಾಪಕ ಮೃಣಾಲ ಠಾಕೂರ್ ಇದ್ದರು.





ಮುಂಡರಗಿ: ಇಲ್ಲಿನ ಕೋರ್ಟ್ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಅರಣ್ಯ ಇಲಾಖೆಯ ಸಹಕಾರದಲ್ಲಿ ಅನೇಕ ಸಸಿಗಳನ್ನು ದಿವಾಣಿ ನ್ಯಾಯಾಧೀಶ ಬಸವರಾಜ ನೆಟ್ಟು ನೀರುಣ್ಣಿಸಿದರು. ಈ ವೇಳೆ ಮಹಾಂತೇಶ ಮೇಗಲಮನಿ, ಸುನಿತಾ ಪೂಜಾರ, ಶಂಕರ ಹುಲ್ಲಮ್ಮನವರ, ಕೆ.ವಿ.ಹಂಚಿನಾಳ ಮುಂತಾದವರಿದ್ದರು.

ಸುತ್ತಮುತ್ತಲಿನ ಸ್ವಚ್ಛತೆಗೆ ಕಾಳಜಿ ವಹಿಸಿ



ಗದಗ: ನಾವು ನಮ್ಮ ಮನೆಯಷ್ಟೇ ಸ್ವಚ್ಛವಾಗಿಟ್ಟುಕೊಳ್ಳದೇ ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಗೂ ಕಾಳಜಿ ವಹಿಸಬೇಕು ಎಂದು ಸಂಪನ್ಮೂಲ ವ್ಯಕ್ತಿ ಕವಿತಾ ದಂಡಿನ ಹೇಳಿದರು.

ಗದಗ-ಬೆಟಗೇರಿ ನಗರಸಭೆಯಿಂದ ಆಯ್ದ ಶಾಲೆಗಳಾದ ಸಿದ್ದಲಿಂಗ ನಗರದ 15ನೇ ನಂಬರ್ ಶಾಲೆಯ ಹೊರಗಿನ ಗೋಡೆಗಳಿಗೆ ಚಿತ್ರಗಳನ್ನು ಬಿಡಿಸಿ ಮಕ್ಕಳಿಗೆ ಸ್ವಚ್ಛತೆಯ ಅರಿವು, ಹೊಸ ಘನತ್ಯಾಜ್ಯ ನಿರ್ವಹಣಾ ನಿಯಮ-2026 ಕುರಿತು ಮಾಹಿತಿ ನೀಡುತ್ತಿರುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮನೆಕಸ ಸಂಗ್ರಹಣೆಯಲ್ಲಿ ಕಸವನ್ನು ಬೇರೆ ಮಾಡಿ ಕಂಪೋಸ್ಟ್ ಮಾಡುವ ವಿಧಾನದೊಂದಿಗೆ ನಾವು ಕಸದಿಂದ ರಸವನ್ನು ಕಂಡುಕೊಳ್ಳಬಹುದು ಎಂದರು.

ಶಿಕ್ಷಣ ಸಂಯೋಜಕ ಮುರಳಿ ಸೋಲ್ಲಾಪೂರ ಮಾತನಾಡಿ, ಕಸ ವಿಲೇವಾರಿ, ಸ್ವಚ್ಛತೆ, ವಿಂಗಡನೆ, ಕಸದಿಂದ ಸಂಪನ್ಮೂಲ ಸೃಷ್ಟಿಯಾಗಿ ತೊಂದರೆ ಆಗಲಿದೆ. ಅದಕ್ಕಾಗಿ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಕಸವನ್ನು ವಿಂಗಡನೆ ಮಾಡಿ ಪೌರ ಕಾರ್ಮಿಕರಿಗೆ ನೀಡಿ ಅವರ ಶ್ರಮಕ್ಕೆ ನಾವು ಕೈಜೋಡಿಸೋಣ ಎಂದರು.

ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿ

ಗದಗ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಜ್ಞಾನ ವಿಕಾಸ ಕೇಂದ್ರದ ಮೂಲಕ ಮಹಿಳೆಯರು ಅಭಿವೃದ್ಧಿ ಹೊಂದುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದು ಜಿಲ್ಲಾ ರೈತ ಸಂಘದ ಕಾರ್ಯಾಧ್ಯಕ್ಷ ಮಹಾದೇವಗೌಡ ಪಾಟೀಲ ಹೇಳಿದರು.

ಜಿಲ್ಲೆಯ ರೋಣ ತಾಲೂಕಿನ ಸಂದಿಗವಾಡ ಗ್ರಾಮದ ಬೆಂಕಿ ಸ್ವಾಮಿ ಮಠದಲ್ಲಿ ನಡೆದ ಕಲ್ಮೇಶ್ವರ ಜ್ಞಾನವಿಕಾಸ ಕೇಂದ್ರದ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ಆರ್ಥಿಕ, ಬೌದ್ಧಿಕ, ಸಾಮಾಜಿಕ ಬಡತನಗಳನ್ನು ದೂರ ಮಾಡುವ ದೃಷ್ಟಿಯಿಂದ ಜ್ಞಾನ ವಿಕಾಸ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಮಹಿಳೆಯರಿಗೆ ಶಿಕ್ಷಣ, ಆರ್ಥಿಕ ನೆರವು ನೀಡಿ ನಿರಂತರ ಬದಲಾವಣೆಗೆ ಪ್ರಯತ್ನಿಸಲಾಗುತ್ತಿದೆ ಎಂದರು. ಶಿಕ್ಷಕ ಎಸ್.ಎಚ್. ಭಜಂತ್ರಿ ಮಾತನಾಡಿ, ಸ್ವ-ಸಹಾಯ ಸಂಘದ ಸದಸ್ಯರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಬೇಕು. ಮನೆಯೇ ಮೊದಲ ಪಾಠಶಾಲೆಯಾಗಿ ಅವರನ್ನು ಸಂಸ್ಕಾರವಂತರನ್ನಾಗಿಸಬೇಕು ಎಂದರು. ಎಂ.ಟಿ. ವಾಲ್ಮೀಕಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹತ್ತು ಹಲವಾರು ಯೋಜನೆ ಜಾರಿಗೆ ತರುವ ಮೂಲಕ ಆರ್ಥಿಕವಾಗಿ ಮಹಿಳೆಯರು ಸಬಲರಾಗುವಂತೆ ಮಾಡಿದೆ. ಸರ್ಕಾರ ಮಾಡುವ ಕೆಲಸವನ್ನು ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಮಾಡುತ್ತಿದ್ದಾರೆ ಎಂದರು. ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಪ್ರತಿಯೊಬ್ಬರೂ ಸದುಪಯೋಗ ಪಡೆಯಬೇಕು ಎಂದರು. ವಲಯದ ಮೇಲ್ವಿಚಾರಕ ಬಡಿಗೇರ, ಕ್ಷೇತ್ರ ಯೋಜನಾಧಿಕಾರಿ ಮಹಾಬಲೇಶ್ವರ ಪಟಗಾರ, ಶಿವನಗೌಡ ಪಾಟೀಲ, ತಾಲೂಕಿನ ಸಮನ್ವಯಾಧಿಕಾರಿ ಲಕ್ಷ್ಮೀ, ಸ್ಥಳೀಯ ಸೇವಾ ಪ್ರತಿನಿಧಿ ಸುಮಾ, ಪ್ರಗತಿ ಬಂಧು ಸಂಘದ ಸದಸ್ಯ ಲೋಕಪ್ಪ ಜಾಲಿಹಾಳ ಸೇರಿದಂತೆ ಗ್ರಾಮಸ್ಥರು ಇದ್ದರು.



ಪ್ರಕೃತಿ ರಕ್ಷಣೆ ಒಂದು ದಿನಕ್ಕೆ ಸೀಮಿತವಾಗದಿರಲಿ



ನವಲಗುಂದ: ಪ್ರಕೃತಿಯನ್ನು ರಕ್ಷಿಸುವುದು ಕೇವಲ ಒಂದು ದಿನದ ಆಚರಣೆಯಾಗಬಾರದು, ಅದು ಪ್ರತಿಯೊಬ್ಬರನಿತ್ಯದಕರ್ತವ್ಯವಾಗಬೇಕು. ದೇಶದ ಪ್ರತಿಯೊಬ್ಬ ನಾಗರಿಕನೂ ಕನಿಷ್ಠ ಒಂದು ಗಿಡವನ್ನು ನೆಟ್ಟು, ಅದನ್ನು ಹೆಮ್ಮರವಾಗಿಸುವ ಮೂಲಕ ಪರಿಸರ ಸಮತೋಲನ ಕಾಯ್ದುಕೊಳ್ಳಲು ಕೈಜೋಡಿಸಬೇಕೆಂದು ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಹೇಳಿದರು.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-3 ರಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ಆಧುನಿಕ ಯುಗದಲ್ಲಿ ಮನುಷ್ಯನ ಸ್ವಾರ್ಥಕ್ಕಾಗಿ ಕಾಡುಗಳು ನಾಶವಾಗುತ್ತಿದ್ದು, ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ. ಈ ಅಪಾಯದಿಂದ ಭೂಮಿಯನ್ನು ಬದುಕಿಸಲು ವಿದ್ಯಾರ್ಥಿ ದೆಸೆಯಿಂದಲೇ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಎಸ್.ಡಿ.ಎಂ.ಸಿ ಅಧ್ಯಕ್ಷಕಾಶೀಮಸಾಬ ಮಚಲಿಬಂದರ ಮಾತನಾಡಿ, ಮನೆಗೊಂದು ಮರ, ಊರಿಗೊಂದು ವನ ಎಂಬಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಮನೆಯ ಅಂಗಳದಲ್ಲಿ ಹಾಗೂ ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು. ಮಕ್ಕಳಲ್ಲಿ ಮೂಡುವ ಪರಿಸರ ಪ್ರೇಮವೇ ಮುಂದಿನ ದಿನಗಳಲ್ಲಿ ದೊಡ್ಡ ಪರಿಸರ ಕ್ರಾಂತಿಗೆ ನಾಂದಿ ಹಾಡಲಿದೆ ಎಂದರು.

ಪ್ರಧಾನ ಗುರು ಮಾತೆ ಎಂ.ಸಿ ಚನ್ನಪ್ಪಗೌಡ್ರ ಮಾತನಾಡಿ, ಕೇವಲ ಗಿಡಗಳನ್ನು ನೆಡುವುದಷ್ಟೇ ನಮ್ಮ ಜವಾಬ್ದಾರಿಯಲ್ಲ, ನೆಟ್ಟ ಗಿಡಗಳಿಗೆ ದಿನನಿತ್ಯ ನೀರು ಹಾಕಿ, ಅವುಗಳನ್ನು ಸ್ವಂತ ಮಕ್ಕಳಂತೆ ಪ್ರೀತಿಯಿಂದ ಸಾಕಿ ಬೆಳೆಸಬೇಕು ಎಂದರು.

ಎಸ್.ಡಿ.ಎಂ.ಸಿ ಮಾಜಿ ಅಧ್ಯಕ್ಷ ಅಡಿವೆಪ್ಪ ಶಿರಸಂಗಿ, ರೈತ ಮುಖಂಡ ಮಲ್ಲಿಕಾರ್ಜುನಸ್ವಾಮಿ ಮಠಪತಿ, ಶಿವಲಿಂಗಯ್ಯ ಹಿರೇಮಠ, ಬಸವರಾಜ ಮಲ್ಲದಾಸರ, ಸಹ ಶಿಕ್ಷಕರಾದ ಎಂ.ಎಚ್. ಚಿಕನಾಳ, ಆರ್.ಬಿ ಹಳ್ಳಿಕೇರಿ, ಸುರೇಶ ಭಜಂತ್ರಿ, ಕೆ.ಎಫ್. ಬಂತಿ, ಕುಮಾರಿ ಎಂ.ಎನ್ ವಗ್ಗರ, ಎಸ್.ಎ ಶಿರಸಂಗಿ ಸೇರಿದಂತೆ ಇನ್ನಿತರರಿದ್ದರು.



ಹುಬ್ಬಳ್ಳಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡು 12ನೇ ವರ್ಷ ಪೂರೈಸಿದ್ದರಿಂದ ನಗರದ ಹೊಸ ಗಬ್ಬೂರಿನಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನ ಆಚರಿಸಲಾಯಿತು.

ಪರಿಸರ ಸಂರಕ್ಷಣೆ ಅಗತ್ಯ: ಕಾಟವೆ



ಹುಬ್ಬಳ್ಳಿ: ಸರ್ಕಾರಿ ಮಾದರಿ ಹಾಗೂ ಕನ್ನಡ ಆಂಗ್ಲ ಮಾಧ್ಯಮ ಶಾಲೆ ನಂ.1 ರಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಸಸಿಗಳನ್ನು ವಿತರಿಸಲಾಗಿದ್ದು, ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಯುವ ಮುಖಂಡ ವೆಂಕಟೇಶ್ ಕಾಟವೆ ಅವರು, ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು ಅದನ್ನು ಬೆಳೆಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಹಸಿರು ಪರಿಸರವೇ ಆರೋಗ್ಯಕರ ಭವಿಷ್ಯದ ಮೂಲ. ಗಿಡಗಳು ನಮ್ಮ ಜೀವನದ ಉಸಿರಾಗಿವೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೀಡಿರುವ ಏಕ್ ಪೇಡ್ ಮಾ ಕೆ ನಾಮ್ ಎಂಬ ಮಹತ್ವದ ಅಭಿಯಾನವು ಪರಿಸರ ಜಾಗೃತಿಗೆ ಹೊಸ ದಿಕ್ಕು ನೀಡಿದೆ. ತಾಯಿ ಹೆಸರಿನಲ್ಲಿ ಒಂದು ಗಿಡ ನೆಡುವ ಈ ಅಭಿಯಾನವು ಭಾವನಾತ್ಮಕ ಹಾಗೂ ಪರಿಸರಪರವಾದ ಅತ್ಯಂತ ಶಕ್ತಿಯುತ ಸಂದೇಶವನ್ನು ಸಮಾಜಕ್ಕೆ ನೀಡುತ್ತಿದೆ ಎಂದರು.

ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಗಿದ್ದು, ಮುಂದಿನ ಪೀಳಿಗೆ ಹಸಿರು ಭಾರತ ನಿರ್ಮಾಣದ ದಿಸೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂಬ ಸಂದೇಶವನ್ನು ನೀಡಲಾಯಿತು. ಬಿಜೆಪಿ ಧಾರವಾಡ ವಿಭಾಗೀಯ ಪ್ರಭಾರಿ ಜಯತೀರ್ಥ ಕಟ್ಟಿ, ಎಂಎಸ್‌ಐಎಲ್ ಮಾಜಿ ನಿರ್ದೇಶಕ ತೋಟಪ್ಪ ನಿಡಗುಂದಿ, ಪ್ರಧಾನ ಗುರು ವಿ.ಡಿ. ಕಾನಡೆ , ಎಸ್‌ಡಿಎಂಸಿ ಅಧ್ಯಕ್ಷೆ ರಶ್ಮಿ ಭಾವಿಕಟ್ಟಿ, ಮೇಘರಾಜಕೆರೂರ, ವಿಜಯ ಜಂಗಾಡೆ, ಶಕೀಲಾ ಗ್ಲೇಡಿಸ್, ಎಲ್.ಬಿ. ಚೂಳೆರ, ಆರ್.ಬಿ. ಬಿದರಿ ಸೇರಿದಂತೆ ಶಾಲೆ ಆಡಳಿತ ಮಂಡಳಿಯ ಸದ್ಸ್ಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಸಿ ನೆಟ್ಟು ಪರಿಸರ ಜಾಗೃತಿ



ಕುಂದಗೋಳ: ವಿಶ್ವ ಪರಿಸರ ದಿನದ ಅಂಗವಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಶಾಸಕ ಎಂ.ಆರ್. ಪಾಟೀಲ ಅವರಿಂದ ಶುಕ್ರವಾರ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಎಂ.ಆರ್. ಪಾಟೀಲ, ಪರಿಸರ ಸಂರಕ್ಷಣೆಗಾಗಿ ಪ್ರತಿಯೊಬ್ಬರೂ ತಮ್ಮ ಮನೆ, ಶಾಲೆ, ಕಚೇರಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಸಿ ನೆಟ್ಟು ಅವುಗಳ ಪೋಷಣೆ ಮಾಡುವ ಸಂಕಲ್ಪ ಕೈಗೊಳ್ಳಬೇಕು. ಪರಿಸರ ಸಮತೋಲನ ಕಾಪಾಡಲು ಮರಗಳ ಪಾತ್ರ ಮಹತ್ವದ್ದಾಗಿದೆ ಎಂದರು.

ಬಿಜೆಪಿ ತಾಲೂಕಾಧ್ಯಕ್ಷ ನಾಗನಗೌಡ ಸಾತ್ಮರ, ಬಸವರಾಜ ಕೊಪ್ಪದ, ಬಸವರಾಜ ನಾವಳ್ಳಿ, ನಾಗರಾಜ ದೇಶಪಾಂಡೆ, ಬಿ ಟಿ. ಗಾಂಗಯಿ, ವಾಗೇಶಗಂಗಾಯಿ, ಗಣೇಶಕೊಕಾಟೆ, ಪೃಥ್ವಿರಾಜ ಕಾಳೆ, ಸಹದೇವ ಮಾಳಗಿ ,ನಿಂಗಪ್ಪ ನಲವಾಲ, ಸತೀಶ ಪಾಟೀಲ ಸೇರಿದಂತೆ ಪದಾಧಿಕಾರಿಗಳು, ಕಾರ್ಯಕರ್ತರು, ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ತಿಮ್ಮಯ್ಯ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ವನ ಮಹೋತ್ಸವ: ಸಸಿ ನಾಟಿ

ಲಕ್ಷ್ಮೇಶ್ವರ: ವಿಶ್ವ ಪರಿಸರ ದಿನದ ಅಂಗವಾಗಿ ವನ ಮಹೋತ್ಸವವನ್ನು ಶಿಗ್ಲಿ ಗ್ರಾಮದ ಜಿ ಎಂಪಿ ಎಸ್ ಶಾಲೆ ಹಾಗೂ ಹಿಂದೂ ಸೇವಾ ಪ್ರತಿಷ್ಠಾನ ಸಹಯೋಗದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಪ್ರಧಾನ ಶಿಕ್ಷಕ ಬಿ.ಕೆ. ಹತ್ತಿಕಾಳ ಮಾತನಾಡಿ, ಪರಿಸರ ರಕ್ಷಣೆಗೆ ಪ್ರತಿಯೊಬ್ಬರೂ ಶ್ರಮ ವಹಿಸಬೇಕು. ಸಸಿ ನೆಡುವ ಮೂಲಕ ಪರಿಸರ ಬೆಳೆಸಬೇಕು ಎಂದರು. ಹಿಂದೂ ಸೇವಾ ಪ್ರತಿಷ್ಠಾನದ ಚೇತನ್ ಯಲಿಗಾರ ಗ್ರಾಮದ ಎಲ್ಲಾ ಶಾಲೆಗಳಿಗೂ ಉಚಿತವಾಗಿ 50 ಸಸಿಗಳನ್ನು ವಿತರಿಸಿದರು. ಶಿಕ್ಷಕರಾದ ಎಸ್.ಬಿ. ಅಣ್ಣಿಗೇರಿ, ಎಲ್. ತಿಪ್ಪನಾಯಕ, ಆರ್.ಡಿ. ಕಲೆಯಗಾರ, ದೀಪಾ ಭಸ್ಮೆ, ಯುವ ಮಿತ್ರ ಯೋಗೇಶ ಅಣ್ಣಿಗೇರಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಸರ್ವರೂ ಹಸಿರು ಹೊದಿಕೆ ಹೆಚ್ಚಿಸಲಿ



ಗಜೇಂದ್ರಗಡ: ನಗರದ ಬಿಜೆಪಿ ರೋಣ ಮಂಡಲದ ವತಿಯಿಂದ ಮಾಜಿ ಸಚಿವ ಕಳಕಪ್ಪ ಬಂಡಿ ಅವರ ಗೃಹ ಕಚೇರಿಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಒಂದು ಮರ ತಾಯಿಯ ಹೆಸರಿನಲ್ಲಿ ಎಂಬ ಧ್ಯೇಯವಾಕ್ಯದೊಂದಿಗೆ ಮಾಜಿ ಸಚಿವರು ಮಹಾಗಣಿ ಸಸಿಯನ್ನು ನೆಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿ ಅವರು, ಪ್ರತಿಯೊಬ್ಬ ನಾಗರಿಕನೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದನ್ನು ಪೋಷಿಸುವ ಮೂಲಕ ಹಸಿರು ಹೊದಿಕೆಯನ್ನು ಹೆಚ್ಚಿಸಬೇಕು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು ಮತ್ತು ವಾಯು, ಜಲ ಮಾಲಿನ್ಯವನ್ನು ತಡೆಗಟ್ಟುವುದು ನಮ್ಮ ಆದ್ಯತೆಯಾಗಬೇಕು. ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸಿ ಮುಂದಿನ ಪೀಳಿಗೆಗೆ ಸುರಕ್ಷಿತ ಪರಿಸರವನ್ನು ಕೊಡುಗೆಯಾಗಿ ನೀಡಬೇಕು ಎಂದರು.

ಗಜೇಂದ್ರಗಡ ನಗರ ಘಟಕದ ಅಧ್ಯಕ್ಷ ರಾಜೇಂದ್ರ ಘೋರ್ಪಡೆ, ಮಂಡಲ ಉಪಾಧ್ಯಕ್ಷ ಮಹಾಂತೇಶ ಪೂಜಾರ, ಮಂಡಲ ಪ್ರಧಾನ ಕಾರ್ಯದರ್ಶಿ ಬಾಲಾಜಿರಾವ್ ಭೋಸ್ಲೆ, ಪ್ರಮುಖರಾದ ರೂಪ್ಲೇಶ ರಾಠೋಡ, ರವಿ ಕಲಾಲ, ಶಿವಕುಮಾರ ಜಾದವ, ನಾಗರಾಜ ತಳವಾರ, ಮಾರುತಿ ಕಂಠಿ, ವಿರೂಪಾಕ್ಷಪ್ಪ ನಿಟಾಲಿ, ಶಿವು ಅರಳಿ, ವಿಜಯ ಬೂದಿಹಾಳ, ಚಂದ್ರಗೌಡ ಪಾಟೀಲ್, ಮಾರುತಿ ರಾಠೋಡ, ಶಿವಪ್ಪ ಚಲವಾದಿ, ಲಕ್ಷ್ಮಣ ಕಲ್ಗುಡಿ, ನಾರಾಯಣ ಬಾಕಳೆ ಇತರರಿದ್ದರು.

300ಕ್ಕೂ ಹೆಚ್ಚು ಗಿಡಗಳ ವಿತರಣೆ

ನರಗುಂದ: ಶುಕ್ರವಾರ ಪಟ್ಟಣದ ಮುಗಳಖೋಡಮಠದ ಆವರಣದಲ್ಲಿ ಕರ್ನಾಟಕ ಉತ್ತರ ಪ್ರಾಂತ ಭಾರತೀಯ ಕಿಸಾನ ಸಂಘದಿಂದ ಆಚರಿಸಲಾದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಹಲವಾರು ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವ ಆಚರಿಸಲಾಯಿತು.

ಭಾರತೀಯ ಕಿಸಾನ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟಸ್ವಾಮಿ ಮಾತನಾಡಿ, ಮಠದ ಆವರಣದಲ್ಲಿ ಒಟ್ಟು 25 ಗಿಡಗಳನ್ನು ನೆಡಲಾಯಿತು ಮತ್ತು ತಾಲೂಕಿನ ವಿವಿಧ ಗ್ರಾಮಗಳ ರೈತರಿಗೆ 300ಕ್ಕೂ ಹೆಚ್ಚುಗಿಡಗಳನ್ನು ಹೊಲದಬದುಗಳಲ್ಲಿ ಹಚ್ಚುವಂತೆ ವಿತರಿಸಲಾಯಿತು. ಪರಿಸರ ಇರುವುದೇ ನಮಗಾಗಿ, ಪರಿಸರ ಇಲ್ಲದಿದ್ದರೆ ನಾವು ಶೂನ್ಯ. ನಮ್ಮಗಳ ಬದುಕು ಪರಿಸರದೊಂದಿಗೆ ಇದೆ. ಹೀಗಾಗಿ ಪರಿಸರವನ್ನು ಕಾಳಜಿ ಮಾಡಬೇಕೆಂದು ಹೇಳಿದರು.

ಜಿಲ್ಲಾಧ್ಯಕ್ಷ ಎಸ್ ಎಸ್ ಪಾಟೀಲ, ತಾಲೂಕಾಧ್ಯಕ್ಷ ನಾಗೇಶ ಅಪ್ಪೋಜಿ, ಕಾರ್ಯದರ್ಶಿ ಮುತ್ತು ಯಲಿಗಾರ, ಯೋಗೇಶ ಗುಡಾರದ, ಸಂಜು ನಲವಡಿ, ವಿಠ್ಠಲ ಮುಧೋಳೆ, ಹಾಗೂ ತಾಲೂಕಿನ ರೈತರಿದ್ದರು.



ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ವಿವಿಧ ಲೆಕ್ಕ ಶೀರ್ಷಿಕೆಗಳು/2026-27/685 ದಿನಾಂಕ:04.06.2026

ಗುತ್ತಿಗೆ ಆಹ್ವಾನ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ-1&2 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 06 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ 2 ಕಾಮಗಾರಿಗಳು ಪರಿಶಿಷ್ಟ ಜಾತಿ, 2 ಕಾಮಗಾರಿಗಳು ಪರಿಶಿಷ್ಟ ಪಂಗಡ, 2 ಕಾಮಗಾರಿಗಳು ಪ್ರವರ್ಗ 2ಎ. ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 49.99 ಲಕ್ಷಗಳು ಹಾಗೂ ರೂ. 7.12 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 50,000.00/- ರೂಗಳು ಹಾಗೂ 8,900.00/- ರೂಗಳು. ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:- 19.06.2026 ರ ಸಂಜೆ 4:30 ಗಂಟೆಯವರೆಗೆ, ಟೆಂಡರಗಳನ್ನು ತೆರೆಯುವ ದಿನಾಂಕ: 20.06.2026 ರ ಸಂಜೆ 4.31 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/128/ಕೆಎಸ್‌ಎಂಸಿಎ/2026-27

ಕರ್ನಾಟಕ ಅರಣ್ಯ ಇಲಾಖೆ

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಸಾಮಾಜಿಕ ಅರಣ್ಯ ಉಪ-ವಿಭಾಗ, ಗದಗ

dcfsf.gadag@gmail.com

ಕಡತ ಸಂಖ್ಯೆ: ಎ2/ಬಿಜಿಟಿ/Work Tender/ಸಿಆರ್-/2026-27 ದಿನಾಂಕ: 03-06-2026

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2026-27 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ, ಮುಂಗಡ ಕಾಮಗಾರಿ, ಸಸಿಗಳನ್ನು ಬೆಳೆಸುವುದು, ಸಸಿಗಳ ನಿರ್ವಹಣೆ ಮತ್ತು ಇತರೆ ಕಾಮಗಾರಿಗಳ ಸಂಬಂಧ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ,

ಆದ್ದರಿಂದ ಇ-ಟೆಂಡರ್‌ನ್ನು ಪಾರದರ್ಶಕತೆ ನಿಯಮ ಹಾಗೂ ಅಧಿನಿಯಮಗಳನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದ ಪ್ರಕಾರ ಈ ಕೆಳಗಿನ ವೇಳಾಪಟ್ಟಿಗಳನ್ವಯ **ದಿನಾಂಕ: 03-06-2026** ರಂದು ಟೆಂಡರ್ ಆಹ್ವಾನಿಸಲಾಗಿದೆ. ಆದ್ದರಿಂದ ಸದರಿ ಪ್ರಕಟಣೆಯನ್ನು ಸ್ಥಳೀಯ ಕನ್ನಡ ದಿನಪತ್ರಿಕೆಗಳಲ್ಲಿ ಈ ಕೆಳಗಿನಂತೆ ಪ್ರಕಟಿಸಲು ಮತ್ತು ಪ್ರಕಟಣೆಗೊಂಡ ಪ್ರತಿಯನ್ನು ಪೂರೈಸಲು ಕೋರಲಾಗಿದೆ.

ಟೇಬಲ್-1

ಕ್ರ.ಸಂ	ವಿವರ	ದಿನಾಂಕ
1	ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ.	10-06-2026 ಬೆಳಿಗ್ಗೆ 11.00 ಗಂಟೆವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	11-06-2026 ಮಧ್ಯಾಹ್ನ 12.00 ಗಂಟೆಗೆ
3	ಆರ್ಥಿಕ ಬಿಡ್ ಟೆಂಡರ್ ಪರಿಶೀಲನೆ ದಿನಾಂಕ & ಸಮಯ	12-06-2026 ಮಧ್ಯಾಹ್ನ 01.00 ಗಂಟೆಗೆ

ಮೇಲಿನ ದಿನಾಂಕಗಳಂದು ಸಾರ್ವತ್ರಿಕೆ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು

ಇ-ಟೆಂಡರ್ ಶರತ್ತು ಹಾಗೂ ಹೆಚ್ಚಿನ ವಿವರಗಳನ್ನು ಸಾರ್ವಜನಿಕರ ತಿಳುವಳಿಕೆಗೋಸ್ಕರ ಇ-ಪೋರ್ಟಲ್ ವೆಬ್‌ಸೈಟ್‌ದಲ್ಲಿ ಇಡಲಾಗಿದೆ.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ-ವಿಭಾಗ, ಗದಗ.

ವಾ.ಸಾ.ಸಂ.ಇ/ಗದಗ/103/ದೇಶಪಾಂಡೆಪಬ್ಲಿಸಿಟಿ/2026-27

:ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ:

ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ವಿಭಾಗ ನಂ: 01, ಬಾಗಲಕೋಟೆ-587102.
ದೂರವಾಣಿ ಸಂಖ್ಯೆ: 08354-295372 E-mail: btdadn1@gmail.com

ಸಂಖ್ಯೆ:ಕಾನಿಇಂ/ಬಾ.ಪ.ಅ.ಪ್ರಾ/ವಿ-1/ಯೋಶಾ-02/ಟೆ.ಪ್ರಸಂಖ್ಯೆ-02/2026-27/417 ದಿನಾಂಕ:04 Jun 2026

ಟೆಂಡರ್ ಪ್ರಕಟಣೆ ಸಂಖ್ಯೆ-02 (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಮಾನವ ಸೇವೆ ಹೊರಗುತ್ತಿಗೆ ಏಜನ್ಸಿ ಮೂಲಕ ಒದಗಿಸುವ ಸೇವೆಯ ಇಂಡೆಂಟ್ ನಂ: ಎಸ್.ಇ.0013 ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತವು ರೂ. 78.59 ಲಕ್ಷಗಳು ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಯ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: 22.06.2026 ಸಂಜೆ 05.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 24.06.2026 ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 25.06.2026 ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354-295372 ಸಂಪರ್ಕಿಸಬಹುದಾಗಿದೆ.

ಸೂಚನೆಗಳು:1)ಟೆಂಡರ್‌ಗೆ ಸಂಬಂಧಿಸಿದಂತೆ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವ ದಿನಾಂಕಗಳು ಅಂತಿಮವಾಗಿರುವುದು. 2)ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು/ ಮಾರ್ಪಾಡುಗಳನ್ನು "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ: 01, ಬಾಗಲಕೋಟೆ.

DIPR/BGK/RO-NO-/79/KSMCA/2026-27

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಅಲ್ಪಾವಧಿ/ಟೆಂಡರ್ ಪ್ರಕಟಣೆ ಸಂ. 03/2026-27 ದಿನಾಂಕ : 05-06-2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	2ಕೆ ಪಿಯು ಪೇಂಟ್ಸ್ ಮತ್ತು ಪೂರಕ ಸಾಮಗ್ರಿಗಳು.	ರೂ. 550.00 ಲಕ್ಷ
2	ಈಟಿಎಂ ಗಳಲ್ಲಿ ಬಳಸುವ ಥರ್ಮಲ್ ಪೇಪರ್ ರೋಲ್‌ಗಳು.	ರೂ. 133.00 ಲಕ್ಷ
3	ಲೀಕ್ ಆಫ್ ಪೈಪಗಳು	ರೂ. 102.00 ಲಕ್ಷ
4	ಕೋಲ್ಡ್ ಅಪ್ಲೈಡ್ ಸೇಲ್ಫ್ ಅಡೆಸಿವ ಪೋಲಿಮರ್ ಮೋಡಿಫೈಡ್ ಬಿಟುಮಿನಿಯಸ್ ಕಂಪೋಸಿಟ್ ಮೇಮಬ್ರೇನ್ ವಿತ್ ಅಲ್ಯೂಮಿನಿಯಂ ಫಾಯಿಲ್	ರೂ. 80.00 ಲಕ್ಷ
5	ಜಿಪಿ ಕಾಯಿಲ್‌ಗಳು	ರೂ. 45.00 ಲಕ್ಷ
6	ಪ್ರಾದೇಶಿಕ ಕಾರ್ಯಾಗಾರ, ಹುಬ್ಬಳ್ಳಿಯಲ್ಲಿ ವಿವಿಧ ಪ್ಲಾಂಟ್ ಮತ್ತು ಮಶೀನರಿಗಳನ್ನು ಸರಬರಾಜು ಮಾಡಿ ಕಾರ್ಯಾರಂಭಗೊಳಿಸುವ ಕುರಿತು.	ರೂ. 40.00 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : **22-06-2026** ಘಂಟೆ: 17:30 ವರೆಗೆ.

ವಿವರಗಳಿಗಾಗಿ ವೆಬ್ ಸೈಟ್ : **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂ. **7022009113** ಗೆ ಸಂಪರ್ಕಿಸಿ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಕರೆಯುವ ಪ್ರಾಧಿಕಾರ)

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/262/2026-27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ವಿಜಯನಗರ ವಿಭಾಗ: ಹೊಸಪೇಟೆ

(ಇ-ಪ್ರೊಕ್ಯೂರ್‌ಮೆಂಟ್/ಸಂಧಾನದ ಮೂಲಕ)

ವಿಷಯ:-1)ವಾಣಿಜ್ಯ ಮಳಿಗೆಳಿಗೆ ಇ-ಟೆಂಡರ್ ಪ್ರಕಟಣೆ ಸಂಖ್ಯೆ:08/2026 ದಿನಾಂಕ04/06/2026
2)ತನಿಖಾ ಕಾರ್ಯಕ್ಕೆ ಲಘು ವಾಹನಗಳು ಮ್ಯಾನುವಲ್ ಸಂಧಾನ ಪ್ರಕಟಣೆ ಸಂಖ್ಯೆ09/2026 ದಿ04/06/2026
3)ಚಾಲಕರ ತರಬೇತಿ ಕೇಂದ್ರ ಮಾಲವಿ(ಹಗರಿಬೊಮ್ಮನಹಳ್ಳಿ)ಇ-ಟೆಂಡರ್ ಪ್ರಕಟಣೆ ಸಂಖ್ಯೆ10/2026ದಿ:04/06/2026
4)ಹರಪನಹಳ್ಳಿ ಬಸ್ ನಿಲ್ದಾಣದಲ್ಲಿನ ಶೌಚಾಲಯ/ಮೂತ್ರಾಲಯ ಇ-ಟೆಂಡರ್ ಪ್ರಕಟಣೆ ಸಂಖ್ಯೆ11/2026ದಿ04/06/26

ಕ.ಕ.ರ.ಸಾ.ನಿಗಮ; ವಿಜಯನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ 50 ವಾಣಿಜ್ಯ ಮಳಿಗೆಗಳಿಗೆ ಮತ್ತು ಚಾಲಕರ ತರಬೇತಿ ಕೇಂದ್ರದಲ್ಲಿನ ಉಪಹಾರ ಗೃಹ ಮಳಿಗೆಗೆ 2 ವರ್ಷ ಅವಧಿಗೆ ಮಾಸಿಕ ಶುಲ್ಕ ರಹಿತವಾಗಿ ಮತ್ತು ಹರಪನಹಳ್ಳಿ ಘಟಕದ ವ್ಯಾಪ್ತಿಗೆ ಒಳಪಡುವ 05 ಬಸ್ ನಿಲ್ದಾಣಗಳ ಶೌಚಾಲಯ/ಮೂತ್ರಾಲಯ ಹಾಗೂ ಬಸ್ ಆವರಣ ಸ್ವಚ್ಛತಾ ಕಾರ್ಯಕ್ಕೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

02 ಲಘು ವಾಹನಗಳನ್ನು ಮೂರು ತಿಂಗಳಿಗೆ ಬಾಡಿಗೆ ಆಧಾರದಲ್ಲಿ ಪಡೆಯಲು ಮ್ಯಾನುವಲ್ ಸಂಧಾನ ಮಾತುಕತೆಗೆ ಆಸಕ್ತದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಮಳಿಗೆಗಳ ವಿವರ ಈ ಕೆಳಗಿನಂತೆ ಇರುತ್ತದೆ.

1)ಖಾಲಿಯಿರುವ ಮಳಿಗೆಗಳು ವಿವರ:-ಹಗರಿಬೊಮ್ಮನಹಳ್ಳಿ ಬಸ್ ನಿಲ್ದಾಣದ 03.ಕಟ್ಟಿದ ಮಳಿಗೆಗಳು, ಹಡಗಲಿ ಬಸ್ ನಿಲ್ದಾಣದಲ್ಲಿ 01 ಮಳಿಗೆಗಳು, ,ಮತ್ತು ಚಿಗಟೇರಿ 02 ಮಳಿಗೆಗಳು,
2)ಹೊಸದಾಗಿ ಗುರುತಿಸಿರುವ ತೆರೆದ ವಾಣಿಜ್ಯ ಮಳಿಗೆಗಳು:- ಮರಿಯಮ್ಮನಹಳ್ಳಿ ಬಸ್ ನಿಲ್ದಾಣದಲ್ಲಿ 03 ಮಳಿಗೆಗಳು, ಖಾನಾಹೊಸಹಳ್ಳಿ ಬಸ್ ನಿಲ್ದಾಣದಲ್ಲಿ 23 ಮಳಿಗೆ, ಮೈಲಾರ ಬಸ್ ನಿಲ್ದಾಣದಲ್ಲಿ 07 ಮಳಿಗೆಗಳು ಮತ್ತು ಕೂಡ್ಲಿಗಿ ಬಸ್ ನಿಲ್ದಾಣದಲ್ಲಿ 01 ಮಳಿಗೆ
3)ಖಾಲಿಯಿರುವ ಉಪಹಾರ ಗೃಹ ಮಳಿಗೆಗಳು:-ತೆಲಗಿ, ಇಟ್ಟಿಗಿ, ಮೋರಗೇರಿ & ಹಲವಾಗಲು ಬಸ್ ನಿಲ್ದಾಣಗಳಲ್ಲಿ ಉಪಹಾರ ಗೃಹ ಮಳಿಗೆಗಳು
4)3 ತಿಂಗಳಿಗೆ ಬಾಡಿಗೆ ಆಧಾರದ ಮೇಲೆ ಲಘು ವಾಹನಗಳನ್ನು ಒದಗಿಸಲು (ಮ್ಯಾನುವಲ್ ಸಂಧಾನ)
5)ಹೊಸಪೇಟೆ ಕೇಂದ್ರ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ-ಚಕ್ರ ವಾಹನಗಳ ನಿಲುಗಡೆ ಸ್ಥಳ,-02
6)ಹಡಗಲಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ-ಚಕ್ರ ವಾಹನ ನಿಲುಗಡೆ ಸ್ಥಳ,-01
7)ಹಗರಿಬೊಮ್ಮನಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ-ಚಕ್ರ ವಾಹನ ನಿಲುಗಡೆ ಸ್ಥಳ,-01
8)ಖಾನಾಹೊಸಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ-ಚಕ್ರ ವಾಹನ ನಿಲುಗಡೆ ಸ್ಥಳ,-01
9)ಮರಿಯಮ್ಮನಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿಯಾಗಲಿರುವ ದ್ವಿ-ಚಕ್ರ ವಾಹನ ನಿಲುಗಡೆ ಸ್ಥಳ,-01
10)05 ಬಸ್ ನಿಲ್ದಾಣಗಳ ಶೌಚಾಲಯ/ಮೂತ್ರಾಲಯ ಮತ್ತು ಬಸ್ ಆವರಣ ಸ್ವಚ್ಛತಾ ಕಾರ್ಯಕ್ಕೆ 01
11)ಚಾಲಕರ ತರಬೇತಿ ಕೇಂದ್ರ (ಮಾಲವಿ) ಉಪಹಾರ ಗೃಹ (ಮಾಸಿಕ ಶುಲ್ಕ ರಹಿತ 2 ವರ್ಷಗಳ ಅವಧಿಗೆ)

ಅರ್ಜಿ ಸಲ್ಲಿಸುವ ಆಸಕ್ತದಾರರು ಟೆಂಡರ್ ದಸ್ತಾವೇಜುಗಳನ್ನು/ಷರತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "www.kppp.karnataka.gov.in" ಮೂಲಕ ಡೌನ್ ಲೋಡ್ ಮಾಡಿಕೊಳ್ಳಬಹುದು. ಇ-ಪ್ರೊಕ್ಯೂರ್‌ಮೆಂಟ್ ಸೆಲ್‌ನಿಂದ DSC (Digital Signature Certificate) ಪಡೆದವರು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
(50 ವಾಣಿಜ್ಯ ಮಳಿಗೆಗಳು, 05 ಬಸ್ ನಿಲ್ದಾಣಗಳ ಸ್ವಚ್ಛತಾ ಕಾರ್ಯಕ್ಕೆ ಮತ್ತು ಚಾಲಕರ ತರಬೇತಿ ಕೇಂದ್ರ (ಉಪಹಾರ ಗೃಹ) ಹಾಗೂ 02 ಲಘು ವಾಹನ ಟೆಂಡರ್/ಸಂಧಾನ ತೆರೆಯುವ ದಿನಾಂಕ ಮಾತ್ರ)

ಸಂಧಾನದ/ಇ-ಟೆಂಡರ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ/ಸಮಯ	ಸಂಧಾನದ/ಇ- ಟೆಂಡರ್ ತೆರೆಯುವ ದಿನಾಂಕ/ ಸಮಯ	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ದಿನಾಂಕ: 22.06.2026 ಸಮಯ :17.00	ದಿನಾಂಕ 24.06.2026 ಸಮಯ 10.30 (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ)	ವಿಭಾಗೀಯ ಕಛೇರಿ, ಕಕರಸಾನಿಗಮ ಹೊಸಪೇಟೆ 7760992302/9513300999

ಮೇಲಿನಂತೆ ಆಹ್ವಾನಿಸಲಾದ ಇ-ಟೆಂಡರ್/ಸಂಧಾನದಲ್ಲಿ ಭಾಗವಹಿಸಿ ಬೇಡಿಕೆ ಸಲ್ಲಿಸಿದ ಬಿಡ್ಡುದಾರರನ್ನು ಆಯ್ಕೆ ಮಾಡುವ/ ಬೇಡಿಕೆಯನ್ನು ತಿರಸ್ಕರಿಸುವ, ಅಥವಾ ಯಾವುದೇ ಸಮಯದಲ್ಲಿ ಪ್ರಕಟಣೆಯನ್ನು ಮುಂದೂಡುವ, ರದ್ದುಪಡಿಸುವ, ಮಾರ್ಪಾಡು ಮಾಡುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/-ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕಕರಸಾ ನಿಗಮ ವಿಜಯನಗರ ವಿಭಾಗ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/119

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಡಳಿತ ವೈದ್ಯಾಧಿಕಾರಿಯವರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ, 576201

ದೂರವಾಣಿ ಸಂಖ್ಯೆ: (08254) 230333/234808 ಇ-ಮೇಲ್: ghkundapura@yahoo.com

ಟೆಂಡರ್ ಪ್ರಕಟಣೆ

(1) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ:ತಾಸಾಆಕು/ಟೆಂಡರ್: ಗ್ರೂಪ್ ಡಿ ಹೊರಗುತ್ತಿಗೆ/4/2026-27 2026-27ನೇ ಸಾಲಿನಲ್ಲಿ ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ವಿವರ: 2026-27ನೇ ಸಾಲಿನಲ್ಲಿ ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ ಕುಂದಾಪುರ ಇಲ್ಲಿಯ ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ಅಂದಾಜು ಮೊತ್ತ: ರೂ. 23,00,000/-, ಇ.ಎಂ.ಡಿ ಮೊತ್ತ: ರೂ.57,500/-, ಟೆಂಡರ್ ಆರಂಭ ದಿನಾಂಕ: 08-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07-07-2026 ಅಪರಾಹ್ನ 4.30 ರ ವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 09-07-2026 ಪೂರ್ವಾಹ್ನ 11.30 ಗಂಟೆಗೆ

(2) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ:ತಾಸಾಆಕು/ಟೆಂಡರ್: ಗ್ರೂಪ್ ಡಿ ಹೊರಗುತ್ತಿಗೆ/5/2026-27 2026-27ನೇ ಸಾಲಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕುಂದಾಪುರ ಇಲ್ಲಿಯ ಸಿಬ್ಬಂದಿ / ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ವಿವರ: 2026-27ನೇ ಸಾಲಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕುಂದಾಪುರ ಇಲ್ಲಿಯ ಸಿಬ್ಬಂದಿ / ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2027, ಟೆಂಡರ್ ಅಂದಾಜು ಮೊತ್ತ: ರೂ. 16,00,000/-, ಇ.ಎಂ.ಡಿ ಮೊತ್ತ: ರೂ. 40,000/-, ಟೆಂಡರ್ ಆರಂಭ ದಿನಾಂಕ: 08-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07-07-2026 ಅಪರಾಹ್ನ 4.30 ರ ವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 09-07-2026 ಪೂರ್ವಾಹ್ನ 11.30 ಗಂಟೆಗೆ

(3) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ: ತಾಸಾಆಕು/ನಾಕ್ಲಿಸೇ: /6/2026-27 2026-27ನೇ ಸಾಲಿನಲ್ಲಿ ನಾನ್ ಕ್ಲೀನಿಕಲ್ ಸೇವಾ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ವಿವರ: 2026-27ನೇ ಸಾಲಿನಲ್ಲಿ ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ ಕುಂದಾಪುರ ಇಲ್ಲಿಯ ನಾನ್ ಕ್ಲೀನಿಕಲ್ ಸೇವಾ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ಅಂದಾಜು ಮೊತ್ತ: ರೂ. 28,00,000/-, ಇ.ಎಂ.ಡಿ ಮೊತ್ತ: ರೂ. 70,000/-, ಟೆಂಡರ್ ಆರಂಭ ದಿನಾಂಕ: 08-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07-07-2026 ಅಪರಾಹ್ನ 4.30 ರ ವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 09-07-2026 ಅಪರಾಹ್ನ 12.00 ಗಂಟೆಗೆ. ಟೆಂಡರ್ ತೆರೆಯಲು ಸ್ಥಳ: ಆಡಳಿತ ವೈದ್ಯಾಧಿಕಾರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ.

ಸಹಿ/- ಆಡಳಿತ ವೈದ್ಯಾಧಿಕಾರಿ,
ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ,
ಕುಂದಾಪುರ-576201, ಉಡುಪಿ ಜಿಲ್ಲೆ

ವಾಸಾಇ/ಸನಿಲು/ಕೆಎಸ್‌ಎಂಸಿಎ/148/26-27 ದಿ: 04.06.2026

ಕರ್ನಾಟಕ ಸರಕಾರ

(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ) ಕರ್ನಾಟಕ ಜಲಸಾರಿಗೆ ಮಂಡಳಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ

ಕ್ರ.ಸಂ.ಕಜಮಂ-09/ಕಾಮಗಾರಿ-II/2026-27 ದಿನಾಂಕ: 04.06.2026

ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST)

"Relocating of 2.6m dia Red and Green Navigation channel marking UV Stabilized Polyethylene Buoys at desired location in the sea at Karwar Port in Uttara Kannada District" ಕಾಮಗಾರಿಯನ್ನು ಕೈಗೊಳ್ಳಲು ಪೂರ್ವ ಅನುಭವ ಹೊಂದಿರುವ ಹೆಸರಾಂತ, ವಿಶ್ವಾಸಾರ್ಹ, ಸಂಪನ್ಮೂಲ ಮತ್ತು ಅನುಭವಿ ಮತ್ತು ಸಮರ್ಥ ಸಲಹೆಗಾರ ಆಸಕ್ತ ಸಂಸ್ಥೆಗಳಿಂದ ಕೆಳ ಸಹಿದಾರರು ಕೊಟೇಶನ್‌ನ್ನು ಇ-ಪ್ರೊಕ್ಯೂರ್ಮೆಂಟ್(KPP Portal) ನಲ್ಲಿ ಆಹ್ವಾನಿಸಿದ್ದಾರೆ.

Sl. No.	Description Of the Work	Qty	Unit	Rate Excluding GST	
				Figures	words
1	2	3	4	5	6
1.	**RELOCATINGOF EXISTING/DEPLOYED 2.6 MTR DIA RED BUOY** Relocating of Existing/Deployed Navigational channel marking 2.6 Mtr Dia Red Buoy to the original position of Latitude 14° 48' 45.7880" NLongitude 074° 05' 40.0010" E without any damage to the existing structure of Buoy with necessary cleaning.	01	No		
2.	**RELOCATING OF EXISTING/DEPLOYED 2.6 MTR DIA GREEN BUOY** Relocating of Existing/Deployed Navigational channel marking 2.6 Mtr Dia Green Buoy to the original position of Latitude 14° 48' 38.5628" NLongitude 074° 05' 40.0010" E without any damage to the existing structure of Buoy with necessary cleaning.	01	No		

ಜಿಎಸ್‌ಟಿಯನ್ನು ಹೊರತುಪಡಿಸಿ ಅನ್ವಯವಾಗುವ ಎಲ್ಲಾ ತೆರಿಗೆಗಳು ಹಾಗೂ ಸುಂಕಗಳನ್ನು ಒಳಗೊಂಡತೆ ಸಂಪೂರ್ಣವಾಗಿ ಪೂರ್ಣಗೊಂಡ ದರಗಳನ್ನು ದಿನಾಂಕ: 09.06.2026 ರಂದು ಅಥವಾ ಮುಂಚಿತವಾಗಿ ಕೆಳಸಹಿದಾರರಿಗೆ ಇ-ಪ್ರೊಕ್ಯೂರ್ಮೆಂಟ್‌ನಲ್ಲಿ ಸಲ್ಲಿಸುವುದು. ಈ ಕೊಟೇಶನ್ ದರಗಳು ಅಂದಾಜು ಪಟ್ಟಿ ತಯಾರಿಸಲು / ಇಲಾಖೆಯ ಅನುದಾನ ಹಾಗೂ ಟೆಂಡರ್ ಉದ್ದೇಶದ ಮೌಲ್ಯಮಾಪನಗಳನ್ನು ಪಡೆಯುವ ಸಲುವಾಗಿ ಮಾತ್ರ ಸೀಮಿತವಾಗಿರುತ್ತದೆ. ವಿವರವಾದ ವಿವರಣೆಯು ಅನುಬಂಧ-I ರಲ್ಲಿ ನೀಡಲಾಗಿದೆ. ದಯವಿಟ್ಟು ದರಗಳನ್ನು ಸಲ್ಲಿಸುವ ಮೊದಲು ಇದನ್ನು ಪರಿಶೀಲಿಸಿ. ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (1) E-mail: piwtdev.wks@gmail.com (2) Phone No. 08382 -221494

ಸಹಿ/- ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/178/26-27 dt. 04.06.2026

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ ಯಾದಗಿರಿ. ಜಿಲ್ಲೆ ಯಾದಗಿರಿ.

ಅಕ್ಷರ ದಾಸೋಹ ಯೋಜನೆ ಕಾರ್ಯಾಲಯ
ಮೊಬೈಲ್ ಸಂಖ್ಯೆ: 9980150294 E-Mail:eozpymdm@gmail.com

ಜಿಪಂಯಾ/ಪಿ.ಎಂ.ಪೋಷಣ್/ಸಾ.ಗು.ಟೆಂಡರ್/03/2026-27 ದಿನಾಂಕ: 03-06-2026

:: ಟೆಂಡರ್ ::

ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಮಧ್ಯಾಹ್ನ ಉಪಹಾರ ಯೋಜನೆಯಡಿ 2026-27ನೇ ಸಾಲಿನ ಯಾದಗಿರಿ ಜಿಲ್ಲೆಯ ಯಾದಗಿರಿ, ಶಹಾಪೂರ ಹಾಗೂ ಸುರಪುರ ತಾಲ್ಲೂಕಿನ KFCSC ತಾಲ್ಲೂಕು ಗೋದಾಮಿನಿಂದ ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯ ಸರಬರಾಜು ಮಾಡಲು ಸಾಗಾಣಿಕೆ ಗುತ್ತಿಗೆದಾರರ ಅರ್ಹ ಟೆಂಡರ್‌ದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ಕ್ರಸಂ ಟೆಂಡರ್ ಪ್ರಕಟಣೆ: **1) ವಿಷಯ:** ಯಾದಗಿರಿ ಜಿಲ್ಲೆಯ ಯಾದಗಿರಿ, ಶಹಾಪೂರ ಹಾಗೂ ಸುರಪುರ ತಾಲ್ಲೂಕಿನ KFCSC ತಾಲ್ಲೂಕು ಗೋದಾಮಿನಿಂದ ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯಗಳ ಸರಬರಾಜು ಮಾಡುವ ಕುರಿತು **2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ:** ಯಾದಗಿರಿ ತಾಲ್ಲೂಕ 27.00 ಲಕ್ಷ/- (ಇಪ್ಪತ್ತೇಳು ಲಕ್ಷ) ಶಹಾಪುರ ತಾಲ್ಲೂಕ 27.00 ಲಕ್ಷ/- (ಇಪ್ಪತ್ತೇಳು ಲಕ್ಷ) ಸುರಪುರ ತಾಲ್ಲೂಕ 35.00 ಲಕ್ಷ/- (ಮೂವತ್ತೈದು ಲಕ್ಷ) **3) ನಿಗದಿಪಡಿಸಿದ ಇ.ಎಂ.ಡಿ.ಮೊತ್ತ:** ಯಾದಗಿರಿ ತಾಲ್ಲೂಕ 67,500/- (ಅರವತ್ತೇಳು ಸಾವಿರದ ಐದು ನೂರು ರೂ.ಗಳು ಮಾತ್ರ) ಶಹಾಪುರ ತಾಲ್ಲೂಕ 67,500/- (ಅರವತ್ತೇಳು ಸಾವಿರದ ಐದು ನೂರು ರೂ.ಗಳು ಮಾತ್ರ) ಸುರಪುರ ತಾಲ್ಲೂಕ 87,500/- (ಎಂಭತ್ತೇಳು ಸಾವಿರದ ಐದು ನೂರು ರೂ.ಗಳು ಮಾತ್ರ) **4) 'ಇ-ಪ್ರೋಕ್ಯೂರಮೇಂಟ್' ಮುಖಾಂತರ ಅರ್ಜಿ ಸ್ವೀಕರಿಸುವ ಪ್ರಾರಂಭದ ದಿನಾಂಕ:** 03-06-2026 **5) ಆನ್ ಲೈನ್ ಸ್ವೀಕೃತಿಗೆ ಕೊನೆಯ ದಿನಾಂಕ, ಸಮಯ:** 12-06-2026 **6) ತಾಂತ್ರಿಕ ಬಿಡ್ಡ್ ಪರಿಶೀಲಿಸುವ ದಿನಾಂಕ, ಮತ್ತು ಸ್ಥಳ ತಾಂತ್ರಿಕ ಬಿಡ್ಡು ದಿನಾಂಕ:** 15-06-2026 (ಸ್ಥಳ ಜಿಲ್ಲಾ ಪಂಚಾಯತ ಯಾದಗಿರಿ) ಹಾಗೂ ಸ್ಥಳ ಮತ್ತು ದಿನಾಂಕ ಬದಲಾವಣೆಗೊಳಪಟ್ಟಿರುತ್ತದೆ **7) ವಾಣಿಜ್ಯ(ಆರ್ಥಿಕ) ಬಿಡ್ಡ್ ಪರಿಶೀಲಿಸುವ ದಿನಾಂಕ ಹಾಗೂ ಸ್ಥಳ:** ವಾಣಿಜ್ಯ ಬಿಡ್ಡು ದಿನಾಂಕ: 18-06-2026 **8) ಹೆಚ್ಚಿನ ಮಾಹಿತಿಗಾಗಿ Website:** www.eproc.karnataka.gov.in ಅಥವಾ ಜಿಲ್ಲಾ ಪಂಚಾಯತ ಯಾದಗಿರಿ ಪಿ.ಎಂ.ಪೋಷಣ್ (ಮ.ಉ.ಯೋ)ಯೋಜನೆ ಜಿಲ್ಲಾ ಪಂಚಾಯತ ಯಾದಗಿರಿ. (ಕಛೇರಿ ವೇಳೆ) E-Mail:eozpymdm@gmail.com ಮೋ. 9980150294

ಸಹಿ/- ಶಿಕ್ಷಣಾಧಿಕಾರಿಗಳು
ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ) ಜಿಲ್ಲಾ ಪಂಚಾಯತ ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/99/ಕೆ.ಎಸ್.ಎಂ.ಸಿ.ಎ/2026-27

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಉಪ ನಿರ್ದೇಶಕರು(ಗ್ರಾ.ಕೈ)ರವರ ಕಾರ್ಯಾಲಯ, ಜಿಲ್ಲಾ ಪಂಚಾಯತ್ ಕೊಪ್ಪಳ.

e-mail : ddkvikoppal@gmail.com ಫೋನ್ ನಂ. 08539-230980

ಸಂ: ಜಿಪಂಕೊ/ಉ.ನಿ(ಗ್ರಾಕೈ)/ಹೊವಾ/ಇ-ಪ್ರೋ/ಟೆ/2026-27/115 ದಿನಾಂಕ: 05/06/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು(ಗ್ರಾಕೈ), ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ ಕೊಪ್ಪಳ ಕಚೇರಿಗೆ 2026-27ನೇ ಸಾಲಿಗಾಗಿ **01-06-2026** ರಿಂದ **31-03-2027** ರವರೆಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಒಂದು ವಾಹನಸೇವೆ ಒದಗಿಸುವ ಕುರಿತು ಅರ್ಹ ಸಂಸ್ಥೆ / ಏಜೆನ್ಸಿ ವತಿಯಿಂದ ಹಳದಿ ಬೋರ್ಡ್ ವಾಹನ ಪಡೆಯಲು ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ನೋಟಿಫಿಕೇಷನ್ ನಂ:IC/2026-27/SE019 ದಿನಾಂಕ: **05-06-2026** ರಂದು ಆಹ್ವಾನಿಸಲಾಗಿದೆ.

ಸೇವೆಯ ವಿವರಗಳು: 1 ಮಾಸಿಕ ಬಾಡಿಗೆ ಆಧಾರದ ಮೇಲೆ 2023ರ ನಂತರ ನೋಂದಣಿಯಾದ ಹವಾ ನಿಯಂತ್ರಿತಾ (ಎಸಿ) ಟಾಟಾಝೆಸ್ಟ್, ಮಾರುತಿ ಸ್ವಿಫ್ಟ್ ಡಿಝೈರ್, ಟೊಯೋಟಾಇಟಿಯೋಸ್, ಹೋಂಡೈಜಿರಾ **ಇ.ಎಂ.ಡಿ. ಮೊತ್ತ:** 10,000=00 2 ವಾಹನದ ಮಾಸಿಕ ಬಾಡಿಗೆ ಗರಿಷ್ಠ ಮೊತ್ತ. **ರೂ. 40,000/-** 3 ಇ-ಪ್ರೊಕ್ಯೂರ್‌ಮೆಂಟರ್ ಮೂಲಕ ಟೆಂಡರ್ ಸಲ್ಲಿಸಲು ಆರಂಭ ದಿನಾಂಕ **05-06-2026** ಬೆಳಿಗ್ಗೆ 10.30 ಘಂಟೆ 4 ಇ-ಪ್ರೊಕ್ಯೂರ್‌ಮೆಂಟರ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **19-06-2026** ಸಾಯಂಕಾಲ 5.00 ಘಂಟೆ 5 ತಾಂತ್ರಿಕ ಬಿಡ್ ತೆರೆಯುವ ದಿನಾಂಕ **23-06-2026** ಬೆಳಿಗ್ಗೆ 10.30 ಘಂಟೆ 6 ಆರ್ಥಿಕ ಬಿಡ್ ತೆರೆಯುವ ದಿನಾಂಕ **25-06-2026** ಬೆಳಿಗ್ಗೆ 11.30 ಘಂಟೆ.

ಟೆಂಡರ್ ವಿವರಗಳನ್ನು http://www.KPPP.karnataka.gov.in ನಿಂದ ಪಡೆದು ಆಸಕ್ತ ಪೂರೈಕೆದಾರರು ಟೆಂಡರ್‌ಗೆ ನಿಗದಿಪಡಿಸಿದ ಷರತ್ತುಗಳನ್ವಯ ಅಗತ್ಯ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟನಲ್ಲಿ ಅಪ್‌ಲೋಡ್ ಮಾಡುವುದು.

ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಟೆಂಡರ್‌ದಾರರು ಮಾತ್ರ ಆರ್ಥಿಕ ಬಿಡ್‌ನಲ್ಲಿ ಭಾಗವಹಿಸಲು ಅರ್ಹತೆಯನ್ನು ಹೊಂದಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 08539-230980 ಸಂಪರ್ಕಿಸಲು ತಿಳಿಸಲಾಗಿದೆ.

ಸಹಿ/-ಉಪ ನಿರ್ದೇಶಕರು (ಖಾಗ್ರಾ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ್, ಕೊಪ್ಪಳ

ಡಿಐಪಿಆರ್/ಕೊಪ್ಪಳ/140/ ಕೆಎಸ್‌ಎಂಸಿಎ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ-591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026-27/402-411 ದಿನಾಂಕ:05.06.2026.

"ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ" (ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ
1	Providing Infrastructure facility to HireBagewadi Village coming under the jurisdiction of Belagavi Rural Constituency under Bagewadi TFS in Belagavi Taluka Belagavi District. (W.I.No.KNNL/2026-27/RD/ WORK_INDENT4440)	338.71	ದರ್ಜೆ 2 ಮತ್ತು ಮೇಲ್ಪಟ್ಟು
2	Providing Infrastructure facility to Modaga, Honnihal, Balekundri KH, Mavinakatti Villages coming under the jurisdiction of Bagewadi TFS in Belagavi taluka Belagavi District. (W.I. No.KNNL/2026-27/RD/ WORK_INDENT4441)	422.85	ದರ್ಜೆ 2 ಮತ್ತು ಮೇಲ್ಪಟ್ಟು
3	Improvements to roads in Basurte Konewadi and Turmari Villages in Belagavi Taluka Belagavi District. (W.I.No.KNNL/ 2026-27/RD/ WORK_ INDENT 4442)	422.63	ದರ್ಜೆ 2 ಮತ್ತು ಮೇಲ್ಪಟ್ಟು
4	Providing Infrastructure facility to Ranakunde, Attiwad, Navage and Kangrali BK Villages coming under the jurisdiction of Hangaraga TFS in Belagavi Taluka Belagavi District. (W.I. No. KNNL/2026-27/RD/ WORK_INDENT4443)	422.66	ದರ್ಜೆ 2 ಮತ್ತು ಮೇಲ್ಪಟ್ಟು
5	Improvements to road from Yelebail village to Markandeya river (near surute village) in Belagavi Taluka. (KNNL/2025-26/ RD/WORK_INDENT4181/Call-2)	127.09	ದರ್ಜೆ 3 ಮತ್ತು ಮೇಲ್ಪಟ್ಟು
6	Providing infrastructure facilities to Hirebagewadi, Mutanal, Kalarkoppa and Siddanabhavi villages coming under the jurisdiction of Belagavi Rural Constituency under Bagewadi TFS in Belagavi Tulaka. (W.I.No.KNNL/2026-27/RD/WORK_INDENT4332/ Call-2)	207.38	ದರ್ಜೆ 2 ಮತ್ತು ಮೇಲ್ಪಟ್ಟು
7	Providing Infrastructure facility to Bendigeri Village coming under the jurisdiction of Belagavi Rural Constituency under Bagewadi TFS in Belagavi Taluka. (W.I.No.KNNL/2026-27/RD/WORK_INDENT4334/ Call-2)	338.76	ದರ್ಜೆ 2 ಮತ್ತು ಮೇಲ್ಪಟ್ಟು
8	Providing infrastructure facilities to Karadiguddi, Marihal, Tumaraguddi, Siddanahalli, Karikatti and Balekundri KH villages coming under the jurisdiction of Belagavi Rural Constituency under Bagewadi TFS in Belagavi Taluka. (W.I.No.KNNL/2026-27/RD/ WORK_INDENT4338/Call-2)	207.40	ದರ್ಜೆ 2 ಮತ್ತು ಮೇಲ್ಪಟ್ಟು
9	Providing Infrastructure facility to Gajapati Village coming under the jurisdiction of Belagavi Rural Constituency under Bagewadi TFS in Belagavi Taluka. (W.I.No.KNNL/2026-27/RD/WORK_INDENT4343/ Call-2)	169.32	ದರ್ಜೆ 3 ಮತ್ತು ಮೇಲ್ಪಟ್ಟು
10	Providing Infrastructure facility to Chandan Hosur and Bastwad Villages coming under Bagewadi TFS in Belagavi Taluka. (W.I. No.KNNL/2026-27/RD/ WORK_INDENT4346/ Call-2)	422.60	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15.06.2026ರಂದು ಸಂಜೆ 4.00ಘಂಟೆ ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು ದಿನಾಂಕ:10.06.2026ರಂದು ಮುಂಜಾನೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:16.06.2026 ಸಂಜೆ 4.30 ಘಂಟೆಗೆ. ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08336-222163 ಸಂಪರ್ಕಿಸುವದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

DIPR/BGM/RO-NO-374/KSMCA/2026-27

ಹಣ ದುರ್ಬಳಕೆ ಆರೋಪ ಸುಳ್ಳು: ಚವ್ಹಾಣ



ಅಮೀನಗಡ : ಪಟ್ಟಣ ಪಂಚಾಯತಿಯಲ್ಲಿ ಮುಖ್ಯಾಧಿಕಾರಿಯಿಂದ ಹಣ ದುರ್ಬಳಕೆ ಸುಳ್ಳು ಆರೋಪ, ಕೆಲವು ಸದಸ್ಯರ ತಪ್ಪು ಮಾಹಿತಿ ಹಾಗೂ ಅಧ್ಯಕ್ಷರ ಮೇಲಿನ ದ್ವೇಷದಿಂದ ಈ ಆರೋಪ ಮಾಡಲಾಗಿದೆ ಎಂದು ಪಪಂ ಅಧ್ಯಕ್ಷೆ, ಉಪಾಧ್ಯಕ್ಷೆ ಹಾಗೂ ಕೆಲವು ಸದಸ್ಯರು ದಾಖಲೆ ಸಮೇತ ಆರೋಪಿಸಿದರು.

ಪಟ್ಟಣ ಪಂಚಾಯತಿಯಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪಟ್ಟಣ ಪಂಚಾಯತಿ ಸದಸ್ಯ ವಿಜಯಕುಮಾರ ಕನ್ನೂರ, ಬಾಬು ಛಬ್ಬಿಯವರು, ಪಟ್ಟಣದ ಪ್ರತಿ ವಾರ್ಡ್‌ನಲ್ಲೂ ಸ್ವಚ್ಛತೆಯಿಲ್ಲದ ಕಾರಣ, ಕಾರ್ಮಿಕರಿಗೆ ಸ್ವಚ್ಛತೆ ಮಾಡಲು ಒತ್ತಾಯಿಸಿದಾಗ ನಮ್ಮಿಂದ ಕೆಲಸ ತೆಗೆದುಕೊಳ್ಳುತ್ತೀರಿ. ನಮಗೆ ಸರಿಯಾಗಿ ಪಗಾರ ಕೊಡುವುದಿಲ್ಲ, ಈ ಬಗ್ಗೆ ಪಟ್ಟಣ ಪಂಚಾಯತಿ ಅಧಿಕಾರಿಗಳಿಗೆ ಸರಿಯಾಗಿ ತಿಂಗಳ ಪಗಾರ ಕೊಡಿಸಿರಿ, ನಾವು ಕೇಳಿದರೆ ಈ ತಿಂಗಳು ಮುಂದಿನ ತಿಂಗಳು ಎನ್ನುತ್ತಾರೆ. ನಮ್ಮ ಕುಟುಂಬ ಹೇಗೆ ನಡೆಯಬೇಕು. ದೀಪಾವಳಿ ಹಬ್ಬಗಳನ್ನು ಹೇಗೆ ಆಚರಿಸಬೇಕು ಎಂದು ಅವರು ಎಷ್ಟೋ ಬಾರಿ ನಮ್ಮ ಮುಂದೆ ತೊಂದರೆ ಹೇಳಿಕೊಂಡಿದ್ದರು.

ಎಷ್ಟೋ ಬಾರಿ ಕಾರ್ಯನಿರ್ವಹಿಸುವುದಿಲ್ಲವೆಂದು ಪಟ್ಟು ಹಿಡಿದು ಕುಳಿತಿದ್ದಾಗ, ಸಾಮಾನ್ಯಸಭೆಯಲ್ಲಿ ಪಕ್ಷಾತೀತವಾಗಿ ಎಲ್ಲ ಸದಸ್ಯರು, ಹೊರಗುತ್ತಿಗೆ ಕಾರ್ಮಿಕರಿಗೆ ಪಗಾರಕೊಡಿ ಎಂದು ಕೇಳಿದಾಗ ಈಗ ಹಣ ಸಂಗ್ರಹವಾಗಿಲ್ಲವೆಂದು ಹೇಳಿದಾಗ, ಸದಸ್ಯರೂ ಒಕ್ಕೊರಲಿನಿಂದ ನೀವು ಮಾನವೀಯತೆಯಿಂದ ಯಾವುದೇ ಖಾತೆಯಿಂದಲಾದರೂ ಅವರಿಗೆ ವೇತನವನ್ನು ನೀಡಿರಿ, ನಂತರ ಸಾಮಾನ್ಯ ಖಾತೆಯಿಂದ ಆ ಹಣವನ್ನು ಜಮಾ ಮಾಡಿಕೊಳ್ಳಿ ಎಂದು ಸರ್ವಸದಸ್ಯರೂ ಸಾಮಾನ್ಯಸಭೆಯಲ್ಲಿ ಒಪ್ಪಿಗೆ ಸೂಚಿಸಿದ್ದರು.

ಇಂಥಹದ್ದೇ ಖಾತೆಯಿಂದ ಹಣ ನೀಡಿ ಎಂದು ಯಾವ ಸದಸ್ಯರೂ ಹೇಳಿರಲಿಲ್ಲ. ಆಗ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತಿ ಎಂಟರ್‌ಪ್ರೆಸಸ್ ಖಾತೆಯಿಂದ ಕಾರ್ಮಿಕರಿಗೆ ವೇತನ ಪಾವತಿಸಿದ್ದು ನಂತರ ಸಾಮಾನ್ಯ ನಿಧಿಯಲ್ಲಿ ಹಣವನ್ನು ಹಂತಹಂತವಾಗಿ ಜಮಾ ಮಾಡಲಾಗಿದೆ. ಇದಕ್ಕೆ ಇತ್ತೀಚೆಗೆ ಜರುಗಿದ ಸಾಮಾನ್ಯಸಭೆಯಲ್ಲೂ ಸರ್ವಸದಸ್ಯರು ಒಪ್ಪಿಕೊಂಡು ಹೊರಗೆ ಬಂದು ಆರೋಪಿಸಿ ರುವುದು ಅಕ್ಷಮ್ಯ ಎಂದರು.

ಅಧ್ಯಕ್ಷೆ ಬೇಬಿಬಾಯಿ ಚವ್ಹಾಣ, ಪಟ್ಟಣ ಪಂಚಾಯತಿ ಸಭಾಪತಿ ಸಂತೋಷ ಕಂಗಳ,ಸದಸ್ಯರಾದ ಬಸವರಾಜ ಬೇವೂರ ಇದ್ದರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಅಲಸಂದೆ ಕಾಳು	3851	3851
ಕಡಲೆಕಾಳು	1889	6139
ಉದ್ದಿನಕಾಳು	3570	4510
ಹೆಸರುಕಾಳು	2100	5400
ನೆಲಗಡಲೆ (ಶೇಂಗಾ)	6700	6700
ಜೋಳ	1510	4351
ಮಡಿಕೆ (ಮಟಕಿ)	1510	7229
ಈರುಳ್ಳಿ	500	2100
ಆಲೂಗಡ್ಡೆ	1200	1400
ಸೋಯಾಬಿನ್	3229	6625

CHANGE OF NAME

I, MULLA RAZIYA RASUL resident of A/P MATTIWAD have changed my name RAZIYA SHABBIR PATHAN with wild affidavit before the Notary of Smt. A. H. Suryawanshi of Nipani dated 5th June 2026.

CHANGE OF NAME

I, ARUN NAVALI (Old Name) Resident of Srinivasa, 3505C/17, Muneeshwar Nagar, Near Vishwabharati Girls School, Hubli Eng College, Dharwad, State: Karnataka, Pin Code: 580031, have changed my name as ARUN VENKANNA NAVALI (New Name) henceforth I will be called and recognized by new name for all future purposes, dated: 05/06/2026.

IN THE COURT OF THE PRINCIPAL CIVIL JUDGE & J.M.F.C. AT BALLARI
Crl. M.C.No. 381 OF 2026

Between:
1) G.Jade Gouda S/o Late Somana Gouda, aged about 58 years, agriculturist, resident of Metri village, Kampli taluk, Ballari district. 2) G.Ravindra Gouda S/o Late Somana Gouda, aged about 56 years, agriculturist, resident of Metri village, Kampli taluk, Ballari district.
3) G.Shankar Gouda S/o Late Somana Gouda, aged about 54 years, agriculturist, resident of Metri village, Kampli taluk, Ballari district. 4) Smt. Somalingamma W/o Jetangi Jadeppa D/o Late Somana Gouda, aged about 52 years, resident of Kudathini Town, Ballari taluk and district.
5) Smt. Girijamma W/o B.V.Thippanna, D/o Late Somana Gouda, aged about 50 years, resident of H.No.48, W.No.32, Pannaraja Compound, near St.Johns school, Fort, Ballari. .....Petitioners

And

The Tahasildar cum Register of Births and Deaths, Taluk office, Kampli, Ballari district .....Respondent

TO WHOMSOEVER IT MAY CONCERN
NOTICE

WHEREAS above named petitioner herein have instituted above petition under section 13(2) of Births and Deaths Act 1969 before the respondent for the purpose of seeking death certificate of petitioner No.1's step grand mother by name Smt. Rangamma wife of Late Pompana Gouda who was died on 18-11-2004 at Metri village, Kampli taluk, Ballari district.

Any person interested are hereby summoned to appear before this court in person or by pleader duly instructed and able to answer all material questions relating to the petition on 03-07-2026 at 11-00 a.m. before this court.

In default of your appearance on the date/day of above petition will be heard an determined as 'ex-parte'.

Given under my hand and seal of the court of this 04th day of 06-2026.

By order of the court
Sd/- Chief Ministerial Officer
Prl. Civil Judge & JMFC Court Ballari
Sd/- (M.Sharmasa Vali)
(Advocate for petitioners)

IN THE COURT OF THE PRINCIPAL CIVIL JUDGE & J.M.F.C. AT BALLARI
Crl. M.C.No. 387 OF 2026

Between:
1) G.Jade Gouda S/o Late Somana Gouda, aged about 58 years, agriculturist, resident of Metri village, Kampli taluk, Ballari district. 2) G.Ravindra Gouda S/o Late Somana Gouda, aged about 56 years, agriculturist, resident of Metri village, Kampli taluk, Ballari district.
3) G.Shankar Gouda S/o Late Somana Gouda, aged about 54 years, agriculturist, resident of Metri village, Kampli taluk, Ballari district. 4) Smt. Somalingamma W/o Jetangi Jadeppa D/o Late Somana Gouda, aged about 52 years, resident of Kudathini Town, Ballari taluk and district.
5) Smt. Girijamma W/o B.V.Thippanna, D/o Late Somana Gouda, aged about 50 years, resident of H.No.48, W.No.32, Pannaraja Compound, near St.Johns school, Fort, Ballari. .....Petitioners

And

The Tahasildar cum Register of Births and Deaths, Taluk office, Kampli, Ballari district .....Respondent

TO WHOMSOEVER IT MAY CONCERN
NOTICE

WHEREAS above named petitioner herein have instituted above petition under section 13(2) of Births and Deaths Act 1969 before the respondent for the purpose of seeking death certificate of petitioner No.1's Great grand father by name Sri Basappa S/o. Late Somana Gouda who was died on 09-04-1974 at Metri village, Kampli taluk, Ballari district.

Any person interested are hereby summoned to appear before this court in person or by pleader duly instructed and able to answer all material questions relating to the petition on 03-07-2026 at 11-00 a.m. before this court.

In default of your appearance on the date/day of above petition will be heard an determined as 'ex-parte'.

Given under my hand and seal of the court of this 04th day of 06-2026.

By order of the court
Sd/- Chief Ministerial Officer
Prl. Civil Judge & JMFC Court Ballari
Sd/- (M.Sharmasa Vali)
(Advocate for petitioners)

ಸಾರ್ವಜನಿಕ ಪ್ರಕಟಣೆ

[illegible]

ಪ್ರಕಾಶಕರ ರುಜು
[ಹನುಮಂತಪ್ಪ ತಂದೆ ಗುಳ್ಳ ಹಾಮಪ್ಪ]
ಗುರುತಿಸುವವರ ರುಜು
MHS ವಕೀಲರು, ಗಂಗಾವತಿ

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ-6/ಜೇ/2026-27 ದಿನಾಂಕ:- 05.06.2026

ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಎ.ಎಫ್.ಟಿ 6/ ಜೇ/2026-27 ದಿನಾಂಕ: 05.06.2026.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಚನ್ನಗಿರಿ ತಾಲ್ಲೂಕಿನ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ: 4059-80-051-0-29-386 - ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿಗೆ ಮೊತ್ತ ರೂ. 300.00 ಲಕ್ಷ, (ಇಂಡೆಂಟ್ ಸಂಖ್ಯೆ 35696) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 20.06.2026 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 22.06.2026 ಸಂಜೆ 4.30 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿಪಿಜಿ/129/ ಕೆಎಸ್‌ಎಂಸಿಎ/2026-27

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ಜಿ.ಪಂ.) ಚಿಕ್ಕೋಡಿ

ದೂರವಾಣಿ ಸಂಖ್ಯೆ: 08338-274943
ಇ-ಮೇಲ್ ವಿಳಾಸ : sadhchikodi@gmail.com

ಸಂ/ಹಿಸತೋನಿ/ಜಿಪಂ/ಚಿ/ಟೆಂಡರ/ /2026-27 ದಿನಾಂಕ: 05/06/2026

ಅಲ್ಪಾವಧಿ ಟೆಂಡರ ಪ್ರಕಟಣೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಕ್ಕೋಡಿರವರ ಕಛೇರಿಗೆ ಮಹಿಂದ್ರಾ ಬೋಲೇರೋ/ಸ್ವಿಫ್ಟ್ ದಿಜೈರ/ ಟಾಟಾ ಜಸ್ಟ ವಾಹನದ ಅವಶ್ಯಕತೆ ಇರುವುದರಿಂದ ಮಾಸಿಕ ಬಾಡಿಗೆ ಆಧಾರದ ಮೇಲೆ ಗರಿಷ್ಠ 2500ಕಿಮೀ ಪ್ರತಿ ತಿಂಗಳಿಗೆ ವಾಹನವನ್ನು ಒದಗಿಸಲು ಅರ್ಹ GST ನೋಂದಾಯಿತ ಟ್ಯಾಕ್ಸಿ ಮಾಲಿಕರು/ಸಂಸ್ಥೆಗಳಿಂದ ಮುಚ್ಚಿದ ದ್ವಿಲಕೋಟೆಯಲ್ಲಿ ಟೆಂಡರ ಧರಪಟ್ಟಿ ಅಹ್ವಾನಿಸಲಾಗಿದೆ. ವಾಹನವು 2024ನೇ ಸಾಲಿನಲ್ಲಿ ಅಥವಾ ತದನಂತರ ನೋದಣಿಯಾಗಿರಬೇಕು ಮತ್ತು ವಾಹನದ ಪ್ರತಿ ತಿಂಗಳ ಬಾಡಿಗೆ ನಮೂದಿಸಬೇಕು. ಆಸಕ್ತ ಅರ್ಹ ಸರಬುರಾಜುದಾರರು ಭಾಗವಹಿಸಲು ಇಚ್ಛಿಸುವವರು ದಿನಾಂಕ: 06/06/2026 ರಿಂದ 13/06/2026ರವರೆಗೆ ರೂ. 500/-ಗಳನ್ನು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 13/06/2026 ರಂದು ಮುಂಜಾನೆ 11.00 ಗಂಟೆಯೊಳಗಾಗಿ ಸದರಿ ಕಚೇರಿಗೆ ಸಲ್ಲಿಸತಕ್ಕದ್ದು. ದಿನಾಂಕ: 13/06/2026 ರಂದು ಮಧ್ಯಾಹ್ನ 2.00ಗಂಟೆಗೆ ಸದರಿ ಕಛೇರಿಯಲ್ಲಿ ತೆರೆಯಲಾಗುವುದು ಮತ್ತು ಅಂಗೀಕರಿಸುವ, ತಿರಸ್ಕರಿಸುವ ಹಕ್ಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಕ್ಕೋಡಿರವರಿಗೆ ಇರುತ್ತದೆ.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ
ನಿರ್ದೇಶಕರು (ಜಿಪಂ) ಚಿಕ್ಕೋಡಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: 605/ಕಾನಿಇಂ(ವಿ)/ಸಕಾನಿಇಂ(ಕಾ)/ಯೋವಿ/ಹಾವೇರಿ/2026-27/98-101 ದಿನಾಂಕ: 02.06.2026

ಪ್ರಕಟಣೆ

ಸಾರ್ವಜನಿಕರ ಹಿತಕ್ಕಾಗಿ ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಕುಪ್ಪೇಲೂರು ಗ್ರಾಮದಲ್ಲಿ 110/11ಕೆ.ವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಲು ಕವಿಪ್ರನಿನಿಯು ಯೋಜನೆಯನ್ನು ಹಮ್ಮಿಕೊಂಡಿದೆ. ಸದರಿ ಯೋಜನೆಗಾಗಿ ಬೇಕಾಗುವ ಜಮೀನು ಶೋಧಿಸಲಾಗಿ ಕುಪ್ಪೇಲೂರು ಗ್ರಾಮದ ವ್ಯಾಪ್ತಿಯಲ್ಲಿ ಶ್ರೀಮತಿ ನೀಲಮ್ಮ ಕೋಂ ಶಿವನಗೌಡ ಸಂಕನಗೌಡ ಇವರ ವಹಿವಾಟಿನಲ್ಲಿರುವ ರಿ.ಸ.ನಂ:188/1 ರಲ್ಲಿ 02ಎಕರೆ 18ಗುಂಟೆ ಮಾಲ್ಕಿ ಜಮೀನನ್ನು ಗುರುತಿಸಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾವೇರಿ ಹಾಗೂ ಅಧ್ಯಕ್ಷರು ಭೂಬೆಲೆ ನಿಗದಿ ಸಮಿತಿರವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ:18.09.2025 ರಂದು ಜರುಗಿದ ಭೂಬೆಲೆ ಸಮಿತಿ ಸಭೆಯಲ್ಲಿ ನಿಗದಿಪಡಿಸಿದ ದರದಂತೆ ಜಮೀನುಗಳನ್ನು ನೇರ ಒಪ್ಪಂದದ ಮೂಲಕ ಭೂ ಮಾಲೀಕರಿಂದ ಕವಿಪ್ರನಿನಿಯು ಸದರಿ ಯೋಜನೆಗಾಗಿ ಖರೀದಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಈ ಪ್ರಕಟಣೆ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಕವಿಪ್ರನಿನಿಯು ಖರೀದಿಸಲು ಉದ್ದೇಶಿಸಿರುವ ಮೇಲಿನ ಜಮೀನುಗಳ ಮೇಲೆ ಯಾರದಾದರು ತಂಟೆ ತಕರಾರು ಅಥವಾ ಆಕ್ಷೇಪಣೆ ಏನಾದರೂ ಇದ್ದರೆ ಪ್ರಕಟಣೆಯ ದಿನಾಂಕದಿಂದ 30 ದಿವಸದೊಳಗಾಗಿ ಈ ಕೆಳ ಸಹಿ ಮಾಡಿರುವವರ ಗಮನಕ್ಕೆ ತರಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ವಿ)
ಯೋಜನೆಗಳ ವಿಭಾಗ, ಕವಿಪ್ರನಿನಿ, ಹಾವೇರಿ.

ಪೇಪರ್ ಪಬ್ಲಿಕೇಶನ್
ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ
ಕ್ರಿಮಿ. ನಂ. 07/2026

ತಿರುಪತಿ ಮೂಕ ನಾಯ್ಕ .....ಅರ್ಜಿದಾರ
ವಿರುದ್ಧ
1) ತಹಶೀಲ್ದಾರ್, ಸಿದ್ದಾಪುರ ಕೂಡಾ....ಎದುರುದಾರರು

ಅರ್ಜಿದಾರನ ತಂದೆಯಾದ ಮೂಕ ರಾಮ ನಾಯ್ಕ, ಸಿದ್ದಾಪುರ ತಾಲೂಕ, ಅಕ್ಕುಂಜಿ ಗ್ರಾಮದ ಗೋಳಗೋಡ ಊರಿನಲ್ಲಿ ಇವರು ದಿನಾಂಕ: 06-10-1979 ರಂದು ಸಿದ್ದಾಪುರ ತಾಲ್ಲೂಕ, ಅಕ್ಕುಂಜಿ ಗ್ರಾಮದ ಗೋಳಗೋಡ ಊರಿನಲ್ಲಿ ಇರುವ ಅರ್ಜಿದಾರನ ಮನೆಯಲ್ಲಿ ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣಪತ್ರ ಪಡೆಯುವ ಸಂಬಂಧ ಅರ್ಜಿದಾರ ಸಿದ್ದಾಪುರದ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರಿಂದ ಈ ಪ್ರಕರಣ ದಿನಾಂಕ: 02-07-2026 ರಂದು ನ್ಯಾಯಾಲಯದಲ್ಲಿ ವಿಚಾರಣೆಗೆ ಇರುತ್ತದೆ.

ಈ ಬಗ್ಗೆ ಯಾರದ್ದಾದರೂ ತಕರಾರು ಇದ್ದಲ್ಲಿ ದಿನಾಂಕ: 02-07-2026 ರಂದು ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಬೆಳಿಗ್ಗೆ 10.45 ಗಂಟೆಗೆ ನೀವಾಗಲೀ ನಿಮ್ಮ ಪರ ವಕೀಲರಾಗಲೀ ಹಾಜರಾಗಿ ನಿಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು. ಅದಿಲ್ಲವಾದಲ್ಲಿ ಮುಂದಿನ ಸೂಕ್ತ ಆದೇಶ ಮಾಡಲಾಗುವುದು.

ಸಿದ್ದಾಪುರ
ದಿನಾಂಕ : 05-06-2026

ಕೋರ್ಟ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರ
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ, ಸಿದ್ದಾಪುರ
ಸಹಿ/- ಆರ್.ಎಸ್. ಹೆಗಡೆ ಸಿದ್ದಾಪುರ
ಅರ್ಜಿದಾರ ಪರ ವಕೀಲರು

IN THE COURT OF THE PRINCIPAL CIVIL JUDGE & J.M.F.C. AT BALLARI
Crl. M.C.No. 389 OF 2026

Between:
1) G.Jade Gouda S/o Late Somana Gouda, aged about 58 years, agriculturist, resident of Metri village, Kampli taluk, Ballari district. 2) G.Ravindra Gouda S/o Late Somana Gouda, aged about 56 years, agriculturist, resident of Metri village, Kampli taluk, Ballari district.
3) G.Shankar Gouda S/o Late Somana Gouda, aged about 54 years, agriculturist, resident of Metri village, Kampli taluk, Ballari district. 4) Smt. Somalingamma W/o Jetangi Jadeppa D/o Late Somana Gouda, aged about 52 years, resident of Kudathini Town, Ballari taluk and district.
5) Smt. Girijamma W/o B.V.Thippanna, D/o Late Somana Gouda, aged about 50 years, resident of H.No.48, W.No.32, Pannaraja Compound, near St.Johns school, Fort, Ballari. .....Petitioners

And

The Tahasildar cum Register of Births and Deaths, Taluk office, Kampli, Ballari district .....Respondent

TO WHOMSOEVER IT MAY CONCERN
NOTICE

WHEREAS above named petitioner herein have instituted above petition under section 13(2) of Births and Deaths Act 1969 before the respondent for the purpose of seeking death certificate of petitioner No.1's Father by name G. Somana Gouda S/o. Late G. Pompana Gouda who was died on 26-11-1994 at Metri village, Kampli taluk, Ballari dsitrict.

Any person interested are hereby summoned to appear before this court in person or by pleader duly instructed and able to answer all material questions relating to the petition on 03-07-2026 at 11-00 a.m. before this court.

In default of your appearance on the date/day of above petition will be heard an determined as 'ex-parte'.

Given under my hand and seal of the court of this 04th day of 06-2026.

By order of the court
Sd/- Chief Ministerial Officer
Prl. Civil Judge & JMFC Court Ballari
Sd/- (M.Sharmasa Vali)
(Advocate for petitioners)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಜಿಲ್ಲಾ ಪಂಚಾಯತ್ ಕೊಪ್ಪಳ, ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ : ಗ್ರಾ.ಕು.ನೀ. & ನೈ./ವಿ.ಕೊ./ಟೆಂಡರ್/2026-27/295 ದಿನಾಂಕ : 04-06-2026

ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.ರ ನಿಯಮಗಳನ್ವಯ **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ** ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ **http://kppp.karnataka.gov.in** ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ **2025-26 ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ.** ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು.

1) ಟೆಂಡರ್ ಪ್ರೋಸೆಸಿಂಗ್ ಶುಲ್ಕ : kppp.karnataka.gov.in ನಲ್ಲಿರುವಂತೆ, 2) ಟೆಂಡರ್ ಡೌನ್ ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ : 06-06-2026 ರ ಬೆಳಿಗ್ಗೆ 10.00 ಗಂಟೆಯಿಂದ 20-06-2026 ರ ಸಂಜೆ 4.00 ಗಂಟೆವರೆಗೆ, 3) ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : 06-06-2026 ರ ಸಂಜೆ 4.00 ಗಂಟೆಯಿಂದ 20-06-2026 ರ ಸಂಜೆ 4.00 ಗಂಟೆವರೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : 22-06-2026 ರ ಸಂಜೆ 4.30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : 24-06-2026 ರ ಬೆಳಿಗ್ಗೆ 11.00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ.

ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾದ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. **ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ : 06-06-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.**

ಡಿಐಪಿಆರ್/ಕೊಪ್ಪಳ/135/ಮಣಿಪಾಲ್/2026-27

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ, ಕೊಪ್ಪಳ.

IN THE COURT OF THE PRINCIPAL CIVIL JUDGE & J.M.F.C. AT BALLARI
Crl. M.C.No. 388 OF 2026

Between:
1) G.Jade Gouda S/o Late Somana Gouda, aged about 58 years, agriculturist, resident of Metri village, Kampli taluk, Ballari district. 2) G.Ravindra Gouda S/o Late Somana Gouda, aged about 56 years, agriculturist, resident of Metri village, Kampli taluk, Ballari district.
3) G.Shankar Gouda S/o Late Somana Gouda, aged about 54 years, agriculturist, resident of Metri village, Kampli taluk, Ballari district. 4) Smt. Somalingamma W/o Jetangi Jadeppa D/o Late Somana Gouda, aged about 52 years, resident of Kudathini Town, Ballari taluk and district.
5) Smt. Girijamma W/o B.V.Thippanna, D/o Late Somana Gouda, aged about 50 years, resident of H.No.48, W.No.32, Pannaraja Compound, near St.Johns school, Fort, Ballari. .....Petitioners

And

The Tahasildar cum Register of Births and Deaths, Taluk office, Kampli, Ballari district .....Respondent

TO WHOMSOEVER IT MAY CONCERN
NOTICE

WHEREAS above named petitioner herein have instituted above petition under section 13(2) of Births and Deaths Act 1969 before the respondent for the purpose of seeking death certificate of petitioner No.1's grand mother by name Smt. Somakka wife of Late Pompana Gouda who was died on 17-06-1958 at Metri village, Kampli taluk, Ballari dsitrict.

Any person interested are hereby summoned to appear before this court in person or by pleader duly instructed and able to answer all material questions relating to the petition on 03-07-2026 at 11-00 a.m. before this court.

In default of your appearance on the date/day of above petition will be heard an determined as 'ex-parte'.

Given under my hand and seal of the court of this 04th day of 06-2026.

By order of the court
Sd/- Chief Ministerial Officer
Prl. Civil Judge & JMFC Court Ballari
Sd/- (M.Sharmasa Vali)
(Advocate for petitioners)

ಕರಡು ಪ್ರತಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಅವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಿಲೇನಿಯಸ್ ಸಂಖ್ಯೆ: 134/2026

ಅರ್ಜಿದಾರರು:-1) ಶ್ರೀ ರಂಜಾನಸಾಬ್ ಉರ್ಫ ರಂಜಾನಸಾಬ್ ತಂದೆ ಅಮೀನಸಾಬ್ ವಯಸ್ಸು: 38ವರ್ಷ, ಉದ್ಯೋಗ: ಒಕ್ಕಲುತನ 2) ಕು: ಶೌಕತ್ ಅಲಿ ತಂದೆ ರಂಜಾನಸಾಬ್ ವಯಸ್ಸು: 16 ವರ್ಷ, ಉದ್ಯೋಗ: ವಿದ್ಯಾರ್ಥಿ.
3) ಕು: ರಾಜಾಬಕ್ಷಿ ನದಾಫ್ ತಂದೆ ರಂಜಾನಸಾಬ್ ವಯಸ್ಸು: 14 ವರ್ಷ, ಉದ್ಯೋಗ: ವಿದ್ಯಾರ್ಥಿ, ಅನುಕ್ರಮ ಸಂಖ್ಯೆ: 2 ಮತ್ತು 3 ಅರ್ಜಿದಾರರು ಅಲ್ಪವಯ ವಯಸ್ಕರು ಅವರ ನೈಸರ್ಗಿಕ ಸಂರಕ್ಷಣೆದಾರರಾದ ಖಾಸ ತಂದೆ ಶ್ರೀ ರಂಜಾನಸಾಬ್ ಉರ್ಫ ರಂಜಾನಸಾಬ್ ತಂದೆ ಅಮೀನಸಾಬ್, ವಯಸ್ಸು: 38 ವರ್ಷ, ಉದ್ಯೋಗ: ಒಕ್ಕಲುತನ, ಎಲ್ಲರೂ ಸಾ: ಡಗ್ಗಿಕ್ಯಾಂಪ್, ಹೊಸ್ಕೇರಾ ತಾ: ಗಂಗಾವತಿ, ಜಿ: ಕೊಪ್ಪಳ.

ವಿರುದ್ಧ

ಎದುರುದಾರರು: ಜನನ ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರರು, ತಹಶೀಲ್ ಕಾರ್ಯಾಲಯ, ಗಂಗಾವತಿ ಮತ್ತು ಸಂಬಂಧಪಟ್ಟವರು

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ಕಲಂ 13(3) ನಿಯಮ 9(3) ಮತ್ತು ಕೆ.ಆರ್.ಬಿ & ಡಿ. ನಿಯಮಗಳು 1999 ರ ಅಡಿಯಲ್ಲಿ ಅರ್ಜಿದಾರರು ಮೃತರಾದ ದಿ| ಶ್ರೀಮತಿ ರೇಷ್ಮಾ ಗಂಡ ರಂಜಾನ್ ಸಾಬ್ ಇವರ ಮರಣ ನೋಂದಣಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ನಂ.01ರವರು ಮೃತಳಿಗೆ ಗಂಡನಾಗಿದ್ದು, ಅರ್ಜಿದಾರರು ನಂ.02 ಮತ್ತು 03 ರವರು ಮೃತಳಿಗೆ ಅಲ್ಪವಯ ಮಕ್ಕಳಾಗಿದ್ದು, ಅರ್ಜಿದಾರರ ನಂ.01 ರವರ ಹೆಂಡತಿಯಾದ ದಿ| ಶ್ರೀಮತಿ ರೇಷ್ಮಾ ಗಂಡ ರಂಜಾನ್‌ಸಾಬ್ ಇವರ ಮರಣ ದಿನಾಂಕ: 26/04/2016 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹೊಸ್ಕೇರಾ ಡಗ್ಗಿಕ್ಯಾಂಪಿನ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ರಿಂದ 03 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 27-06-2026 ರಂದು ಮಾನ್ಯ ಗೌರವಾನ್ವಿತ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅರಿಸಿಮ ಎರಿದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ : ಗಂಗಾವತಿ
ದಿ: 22/05/2026

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿ
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.ದಂ. ನ್ಯಾಯಾಲಯ, ಗಂಗಾವತಿ
ಮುಖಾಂತರ : (ಶ್ರೀಮತಿ ನಾಗರತ್ನಮ್ಮ,
ಅರ್ಜಿದಾರರ ಪರ ವಕೀಲರು, ಗಂಗಾವತಿ

ಕ್ರಿ.ಮಿ.ನಂ: 65/2026
ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ: ಶ್ರೀ ರವಿ ತಂದೆ ಹನಮಂತಪ್ಪ ಬಡಿಗೇರ ವಯಾ:32, ಉದ್ಯೋಗ: ಶೇತ್ಕಿ, ಸಾ॥ ಬು ಹುಲಿಕಟ್ಟಿ ತಾ॥ ಕಲಘಟಗಿ. ಜಿ॥ ಧಾರವಾಡ.
ವಿರುದ್ಧ
ಎದುರುಗಾರರು:1)ಮಾನ್ಯ ತಹಶೀಲ್ದಾರ ಕುಂದಗೋಳ (ಜನನ-ಮರಣ ನೋಂದಣಿ ಅಧಿಕಾರಿಗಳು)ಸಾ:ಕುಂದಗೋಳ ತಾ॥ ಕುಂದಗೋಳ ಜಿ॥ ಧಾರವಾಡ ಹಾಗೂ ಇನ್ನೊಬ್ಬ

ಆರ್ಡರ 5ರೂಲ 20 ಸಿಪಿಸಿ ಕೆಳಗೆ ನೋಟಿಸು

ಸದರಿ ಅರ್ಜಿದಾರನು ತನ್ನ ಪೋಷಿ ಅಜ್ಜನ ಮರಣ ನೋಂದಣಿಯನ್ನು ಎದುರುಗಾರರು ಹೊಂದಿರುವ ಮರಣ ನೋಂದಣಿ ಪುಸ್ತಕದಲ್ಲಿ ದಾಖಲ ಮಾಡುವ ಕುರಿತು ಸೂಕ್ತ ಆದೇಶ ಪಡೆದುಕೊಳ್ಳಲು ಮೇಲ್ಕಂಡ ಅರ್ಜಿ ದಾಖಲ ಮಾಡಿದ್ದು ಇರುತ್ತದೆ. ಕಾರಣ ಮೇಲ್ಕಂಡ ವಿಷಯದಲ್ಲಿ ಯಾರದಾದರೂ ಹಕ್ಕು, ಹಿತಾಸಕ್ತಿ, ವಗೈರೆ, ಇದ್ದಲ್ಲಿ ಅವರು ದಿನಾಂಕ: 15/06/2026 ರಂದು ಮುಂಜಾನೆ 10:30 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೆ ತಮ್ಮಿಂದ ಅಧಿಕಾರ ಪಡೆದ ವಕೀಲರ ಮುಖಾಂತರ ಹಾಜರಾಗಿ ತಮ್ಮದೇನಾದರೂ ತಕರಾರು ಇದ್ದಲ್ಲಿ ಸದರಿ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕತರ್ಫಿ ನಿಕಾಲಿ ಮಾಡುವದರಲ್ಲಿ ಬರುವದು ತಿಳಿಯಿರಿ.

ಈ ಹೊತ್ತು ದಿನಾಂಕ:05/06/2026 ರಂದು ನಮ್ಮ ಸಹಿ ಮಾಡಿ ನ್ಯಾಯಾಲಯದ ಮೊಹರು ಹಾಕಿ ಕೊಡಲ್ಪಟ್ಟಿತ್ತು.

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ\-ಶಿರಸ್ತೇದಾರರು ಜೆ.ಎಂ.ಎಫ್.ಸಿ
ನ್ಯಾಯಾಲಯ ಕುಂದಗೋಳ
ಸಹಿ\-ಶ್ರೀ ಪ್ರಶಾಂತ. ಎಸ್. ಪಾಟೀಲ
ಅರ್ಜಿದಾರನ ಪರ ವಕೀಲರು, ಕುಂದಗೋಳ

CHANGE OF NAME

I, AMIT NARVEKAR (Old Name) Resident of Plot No 80, Vishawakarma Colony, Rani Channamma Nagar, Tilakwadi, Belagavi, Karnataka, Pin Code: 590006, have changed my name as AMIT SANTOSH NARVEKAR (New Name) henceforth I will be called and recognized by new name for all future purposes, dated: 05/06/2026.

CHANGE OF NAME

I, AKSHATA ANAND SAMANEKAR (Old Name) Resident of #18469, Akkipeth 1st Cross, Hubli, Old Hubli, Dharwad Karnataka - 580024, have changed my name as AKSHATA SAMANEKAR (New Name) henceforth I will be called and recognized by new name for all future purposes, dated: 05/06/2026.

CHANGE OF NAME

I, MANJUNATH MATTIKOPPA (Old Name) Resident of 1002, At Post Hosur, Tq Saundatti, Dist: Belagavi - 591111, Karnataka, India, have changed my name as MANJUNATH MADIWALAPPA MATTIKOPPA (New Name) henceforth I will be called and recognized by new name for all future purposes, dated: 05/06/2026.

CHANGE OF NAME

I, MALLIKARJUNAGOUDA TOTAD (Old Name) Resident of # 3350/A, Unkal Cross, Near Danamma Temple, Siddeshwar Nagar, Hubli, Dharwad - 580031, Karnataka, India, have changed my name as MALLIKARJUNGOUD TOTAD (New Name) henceforth I will be called and recognized by new name for all future purposes, dated: 05/06/2026.

IN THE COURT OF CIVIL JUDGE & JMFC AT SIRUGUPPA
Criminal. Misc. No: 401/2026

Between:
Jayaprabhu .....Petitioner
And
The Tahasildar Cum Birth & Death, Taluk Office, Siruguppa .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Father Davidappa @ David @ Durugappa S/o. Balappa who was died on 12-08-2007 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 22-07-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 2nd day of June-2026.

By Order of the court,
Sd/- Sheristedar,
Civil Judge & JMFC Siruguppa.
Sd/- Sanna Huseni, Advocates Siruguppa

IN THE COURT OF CIVIL JUDGE & JMFC AT SIRUGUPPA
Criminal. Misc. No: 463/2026

Between:
Gopal Reddy B. .....Petitioner
And
The Registrar Cum Birth & Death, Taluk Office, Siruguppa .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Grandmother Neelamma W/o. Doddana Gouda who was died on 09-10-1947 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 01-07-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 22nd day of May-2026.

By Order of the court,
Sd/- Sheristedar,
Civil Judge & JMFC Siruguppa.
Sd/- Sanna Huseni, Advocates Siruguppa

IN THE COURT OF CIVIL JUDGE & JMFC AT SIRUGUPPA
Criminal. Misc. No: 464/2026

Between:
M. Shivakumar .....Petitioner
And
The Registrar Cum Birth & Death, Taluk Office, Siruguppa .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Grandmother M. Yallamma W/o. M. Ranganna who was died on 02-05-1970 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 02-07-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 22nd day of May-2026.

By Order of the court,
Sd/- Sheristedar,
Civil Judge & JMFC Siruguppa.
Sd/- Sanna Huseni, Advocates Siruguppa

ತಾಲೂಕ ಪಂಚಾಯತ, ಶಿಗ್ಗಾಂವ ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ, ಹಾವೇರಿ

ಗ್ರಾಮ ಪಂಚಾಯತ ಕಾರ್ಯಾಲಯ, ತಡಸ

ನಂ: ಗ್ರಾಪಂತ/ಆಡಳಿತ/2026-27 ದಿನಾಂಕ: 04-06-2026

-: ಇ-ಪ್ರೋಕ್ಯೂಮೆಂಟ್ ಟೆಂಡರ್ ಪ್ರಕಟಣೆ :-

ಈ ಕಛೇರಿಯಿಂದ 15ನೇ ಹಣಕಾಸು ಅನುದಾನದ ಅನುಮೋದಿತ ಕ್ರಿಯಾ ಯೋಜನೆಯಡಿಯಲ್ಲಿ ಅನುಮೋದನೆಯಾದ ಕಾಮಗಾರಿನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ, ಲೋಕೋಪಯೋಗಿ ಇಲಾಖೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Documents for E-procurement of Works K/W-1 ನಮೂನೆಯಲ್ಲಿ ಆಹ್ವಾನಿಸಲಾಗಿದೆ.

ಇ-ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕ್ರ. ಸಂ	ಇ-ಪ್ರಕ್ಯೂರಮೆಂಟ್ ಇಂಡೆಂಟ್ ಸಂಖ್ಯೆ	ಕಾಮಗಾರಿ ಹೆಸರು	ಟೆಂಡರ್‌ಗೆ ಇಡಲಾದ ಒಟ್ಟು ಮೊತ್ತ	ಇ.ಎಂ.ಡಿ ಮೊತ್ತ	ಕೊನೆಯ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ
1	2	3	4	5	6	7	8
1	RDPR/2026-27/ BD /WORK_IN-DENT27159	Construction of a minibus stop near the gate of Tadasa village in Shiggaon taluka	ರೂ. 4,19,150/-	ರೂ. 10,478/-	ದಿ: 18-06-2026 ಸ: 4.30PM	ದಿ: 20-06-2026 ಮು: 10.30AM	ದಿ: 20-06-2026 ಮು: 11.00AM
2	RDPR/2026-27/ BD /WORK_IN-DENT27158	Installing drains and beautifying the premises of the Shiggaon Taluk Tadasa Gram Panchayat office to prevent stagnant water	ರೂ. 4,97,000/-	ರೂ. 12,425/-	ದಿ: 18-06-2026 ಸ: 4.30PM	ದಿ: 20-06-2026 ಮು: 10.30AM	ದಿ: 20-06-2026 ಮು: 11.00AM

ಸಹಿ/- ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತ, ತಡಸ

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 619/2025

Between :-
Hemareddy .....Petitioner
And
The Register of Births & Death's, Thasildhar, Taluk office, Ballari .....Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's grandfather by name SUNKAPPA S/O LINGAPPA was died on 24-09-1981 at Amarapura village, Ballari taluk and District in the above mentioned address.

Therefore, If any persons are interested you are hereby directed to appear in this court in person or by a pleader duly instructed on 14-7-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 5th day of 6-2026.

By Order of the court.
Sd/- Sherestedar
3rd Addl. Civil Judge and JMFC Ballari
Sd/- Honnurswamy and Hulugappa H.
Advocates for the petitioners

IN THE COURT OF CIVIL JUDGE & JMFC AT SIRUGUPPA
Criminal. Misc. No: 466/2026

Between:
M. Shivakumar .....Petitioner
And
The Registrar Cum Birth & Death, Taluk Office, Siruguppa .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Grandfather M. Ranganna @ Gudadappa S/o. Mallappa who was died on 03-04-1966 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 04-07-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 22nd day of May-2026.

By Order of the court,
Sd/- Sheristedar,
Civil Judge & JMFC Siruguppa.
Sd/- Sanna Huseni, Advocates Siruguppa

IN THE COURT OF CIVIL JUDGE & JMFC AT SIRUGUPPA
Criminal. Misc. No: 465/2026

Between:
Gopal Reddy B. .....Petitioner
And
The Registrar Cum Birth & Death, Taluk Office, Siruguppa .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Grandfather Father Doddana Gouda S/o. Dodda Hanumantha Reddy who was died on 06-04-1940 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 03-07-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 22nd day of May-2026.

By Order of the court,
Sd/- Sheristedar,
Civil Judge & JMFC Siruguppa.
Sd/- Sanna Huseni, Advocates Siruguppa

ಕಿರುಸುದ್ದಿ

ಇಂಗ್ಲೆಂಡ್ ಟಿ20 ಸರಣಿಗೆ ಶ್ರೇಯಸ್‌ಗೆ ನಾಯಕತ್ವ?

ಮುಂಬೈ: ಮುಂಬರುವ ಇಂಗ್ಲೆಂಡ್ ಪ್ರವಾಸದ ವೇಳೆ ಭಾರತೀಯ ಪುರುಷರ ಟಿ20 ತಂಡವನ್ನು ಶ್ರೇಯಸ್ ಅಯ್ಯರ್ ಮುನ್ನಡೆಸುವ ಸಾಧ್ಯತೆಯಿದೆ. ಜು.1ರಿಂದ ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿ ಆರಂಭವಾಗಲಿದೆ. ಇಂಗ್ಲೆಂಡ್ ಪ್ರವಾಸವು ಟಿ20 ಸರಣಿಯೊಂದಿಗೆ ಆರಂಭ ಆಗಲಿದ್ದು, ಭಾರತ ಟಿ20 ಸರಣಿ ಗೆಲ್ಲುವ ಅಗತ್ಯವಿದೆ. ಟಿ20 ಸರಣಿ ಬಳಿಕ ಮೂರು ಪಂದ್ಯಗಳ ಏಕದಿನ ಸರಣಿ ಇರಲಿದೆ. ಇದಕ್ಕೂ ಮುನ್ನ ಐರ್ಲೆಂಡ್‌ನ ಬೆಲ್‌ಫಾಸ್ಟ್‌ನಲ್ಲಿ ಎರಡು ಟಿ20 ಪಂದ್ಯಗಳನ್ನು ಭಾರತ ಆಡಲಿದೆ. 31ರ ಹರೆಯದ ಅಯ್ಯರ್ ಕಳೆದ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ ಎಂಬುದು ಗಮನಾರ್ಹ ಅಂಶ. ಐಪಿಎಲ್‌ನಲ್ಲಿ ತಮ್ಮ ನಾಯಕತ್ವದಲ್ಲಿ ಮತ್ತು ಬ್ಯಾಟಿಂಗ್‌ನಲ್ಲೂ ಮಿಂಚಿರುವ ಅಯ್ಯರ್‌ಗೆ ಒಂದು ಅವಕಾಶ ನೀಡುವ ಅಗತ್ಯವಿದೆ. ಐಪಿಎಲ್ 2026ರಲ್ಲಿ 14 ಪಂದ್ಯಗಳಲ್ಲಿ ಅವರು 498 ರನ್ ಕಲೆಹಾಕಿದ್ದರು. ಮೊದಲಾರ್ಧ ಪಂಜಾಬ್ ಶ್ರೇಷ್ಠ ಪ್ರದರ್ಶನ ನೀಡಿತ್ತು. ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಹೆಸರುಗಳೂ ಕೇಳಿಬಂದಿವೆ. ಆದರೆ ಶ್ರೇಯಸ್ ನಾಯಕನಾಗಿ ಸಾಬೀತುಪಡಿಸಿದ್ದಾರೆ.

ಜ್ವೆರೆವ್ ಗ್ರ್ಯಾಂಡ್ ಸ್ಲಾಮ್ ಕನಸು ಜೀವಂತ

ಪ್ಯಾರಿಸ್: ಫ್ರೆಂಚ್ ಓಪನ್ ಪುರುಷರ ವಿಭಾಗದ ಸೆಮಿ ಫೈನಲ್‌ನಲ್ಲಿ ಜೇಕಬ್ ಮೆನ್ಸಿಕ್ ಅವರನ್ನು 7-5, 6-2, 3-6, 6-3 ಸೆಟ್ ಅಂತರದಿಂದ ಸೋಲಿಸಿದ ವಿಶ್ವ ನಂ.3 ಅಲೆಗ್ಸಾಂಡರ್ ಜ್ವೆರೆವ್ ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆಲ್ಲುವ ಕನಸನ್ನು ಜೀವಂತವಾಗಿರಿಸಿದ್ದಾರೆ. ಇಲ್ಲಿ ರೋಲ್ಯಾಂಡ್ ಗೇರೋಸ್‌ನಲ್ಲಿ ನಡೆದ ಮೂರು ಗಂಟೆಗಳ ಸೆಮಿ ಫೈನಲ್ ನಲ್ಲಿ ಅದ್ಭುತ ಪ್ರದರ್ಶನ ನೀಡುವ ಮೂಲಕ ಮೆನ್ಸಿಕ್ ಅವರನ್ನು ಹಿಮ್ಮೆಟ್ಟಿಸಿದರು. ಇದು ಗ್ರ್ಯಾಂಡ್ ಸ್ಲಾಮ್ ಪಂದ್ಯಾವಳಿಗಳಲ್ಲಿ ಜ್ವೆರೆವ್ ಅವರ ಪಾಲಿಗೆ ನಾಲ್ಕನೇ ಫೈನಲ್ ಆಗಿರಲಿದೆ. 2020ರ ಯುಎಸ್ ಓಪನ್, 2024ರ ಫ್ರೆಂಚ್ ಓಪನ್, 2025ರ ಆಸ್ಟ್ರೇಲಿಯನ್ ಫೈನಲ್ ಪ್ರವೇಶಿಸಿದ್ದ ಅಲೆಗ್ಸಾಂಡರ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆಲ್ಲುವಲ್ಲಿ ಯಶಸ್ವಿಯಾಗಿರಲಿಲ್ಲ. ತಾವು ಫ್ರೆಂಚ್ ಓಪನ್ ಪಂದ್ಯಾವಳಿಯಲ್ಲಿ ಒಂದು ವೇಳೆ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆದ್ದರೂ ಸಹ ತಮ್ಮ ಪಾಲಿಗೆ ಒಲಿಂಪಿಕ್ ಪದಕವೇ ಅತ್ಯುನ್ನತ ಪ್ರಶಸ್ತಿ ಎಂದು ಇತ್ತೀಚೆಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದರೆ ಫ್ರೆಂಚ್ ಓಪನ್ ಗೆಲ್ಲುವ ಮೂಲಕ ತಮ್ಮ ಗ್ರ್ಯಾಂಡ್ ಸ್ಲಾಮ್ ಫೈನಲ್ ಸೋಲಿನ ಸರಣಿಗೆ ಬ್ರೇಕ್ ಹಾಕಲು ಜ್ವೆರೆವ್ ಬಯಸುತ್ತಿದ್ದಾರೆ.

ಟೆಕ್ವಾಂಡೋ: ಕರ್ನಾಟಕದ ಅಕ್ಕ ತಮ್ಮನಿಗೆ ಸ್ವರ್ಣ

ನೆಲಮಂಗಲ : ರಾಷ್ಟ್ರೀಯ ಮಟ್ಟದ ಟೆಕ್ವಾಂಡೋ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅಕ್ಕ ತಮ್ಮ ಜೋಡಿ ಇಬ್ಬರೂ ವಿವಿಧ ವಿಭಾಗಗಳಲ್ಲಿ ಸ್ವರ್ಣ, ರಜತ ಹಾಗೂ ಕಂಚಿನ ಪದಕ ಪಡೆಯುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಅಂತರಾಷ್ಟ್ರೀಯ ಟೆಕ್ವಾಂಡೋ ಫೆಡರೇಷನ್ ಆಫ್ ಇಂಡಿಯಾದಿಂದ ಹಿಮಾಚಲ ಪ್ರದೇಶದ ಡಾಲೋಸಿಯಲ್ಲಿ ಆಯೋಜಿಸಲ್ಪಟ್ಟ 35ನೇ ನಾರ್ತ್‌ಈಸ್ಟ್ ಟೆಕ್ವಾಂಡೋ ಚಾಂಪಿಯನ್‌ಶಿಪ್ ಹಾಗೂ ಮಾರ್ಷಲ್ ಆರ್ಟ್ಸ್ ಸ್ಪರ್ಧೆಯಲ್ಲಿ ತಾಲೂಕಿನ ಕೊಡಿಗೆಹಳ್ಳಿಯ 12ನೇ ತರಗತಿಯ ಸೌಜನ್ಯ ಮಂಜುನಾಥ್ ಭಾಗವಹಿಸಿ



2 ಬೆಳ್ಳಿ ಹಾಗೂ 1 ಕಂಚಿನ ಪದಕ ಪಡೆದರೆ, ಸೌಜನ್ಯ ಸಹೋದರ 10ನೇ ತರಗತಿಯ ಶಂಶಾಕ್ ಮಂಜುನಾಥ 4 ಚಿನ್ನದ ಪದಕ, 1 ಬೆಳ್ಳಿ ಪದಕ ಹಾಗೂ 2 ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ. ಬೆಂಗಳೂರಿನ ವಿದ್ಯಾರಣ್ಯಪುರದ ಶ್ರೀ ರವಿಶಂಕರ್ ವಿದ್ಯಾಮಂದಿರ ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಕೊಡಿಗೆಹಳ್ಳಿಯ ಸೌಜನ್ಯ ಮಂಜುನಾಥ್ ಹಾಗೂ ಶಶಾಂಕ್ ಮಂಜುನಾಥ್ ನಿರಂತರ ಪರಿಶ್ರಮದ ಮೂಲಕ ಅತ್ಯುತ್ತಮ ಸಾಧನೆ ಮಾಡಿದ್ದು, ಅಕ್ಕ ತಮ್ಮನ ಸಾಧನೆ ಕಂಡು ಶಾಲಾ ಆಡಳಿತ ಮಂಡಳಿ, ಮುಖಂಡರು, ಪೋಷಕರು ಹಾಗೂ ಗುರುವಾದ ಪ್ರದೀಪ್, ಜನಾರ್ಧನ್, ತಂದೆ ಮಂಜುನಾಥ್, ತಾಯಿ ಕವಿತಾ ಹಾಗೂ ಸ್ನೇಹಿತರು ಸಂತೋಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ಏಕೈಕ ಟೆಸ್ಟ್: ಲೆಗ್ಗಿ ರಶೀದ್ ಖಾನ್ ಲಭ್ಯತೆ ಸಂಶಯ

ಚಂಡೀಗಢ: ಬೆನ್ನುನೋವಿನ ಸಮಸ್ಯೆ ಹಾಗೂ ಜಾಗತಿಕ ಕ್ರಿಕೆಟ್ ವೇಳಾಪಟ್ಟಿಯ ಒತ್ತಡದಿಂದಾಗಿ ಭಾರತ ವಿರುದ್ಧದ ಏಕೈಕ ಟೆಸ್ಟ್‌ಗೆ ರಶೀದ್ ಖಾನ್ ಲಭ್ಯತೆ ಅನಿಶ್ಚಿತ ಎಂಬುದನ್ನು ಅಫ್ಘಾನಿಸ್ತಾನ ತಂಡದ ಮುಖ್ಯ ಕೋಚ್ ರಿಚರ್ಡ್ ಪೈಬಸ್ ಶುಕ್ರವಾರ ಒಪ್ಪಿಕೊಂಡಿದ್ದಾರೆ. ಶನಿವಾರದ ಏಕೈಕ ಟೆಸ್ಟ್ ಪಂದ್ಯಕ್ಕೂ ಮುನ್ನ ಮಾತನಾಡಿದ ಪೈಬಸ್, ರಶೀದ್ ಅವರ ಕರ್ತವ್ಯದ ಭಾರವನ್ನು ಸಮರ್ಪಕ ನಿರ್ವಹಣೆಗೆ ಪ್ರಮುಖ ಆದ್ಯತೆ ನೀಡಿದ್ದು, ಅಫ್ಘಾನಿಸ್ತಾನ ದೀರ್ಘಕಾಲಿಕ ಟೆಸ್ಟ್ ಕಾರ್ಯಕ್ರಮ ರೂಪಿಸಲು ಬದ್ಧವಾಗಿದೆ ಎಂದರು.

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಐದನೇ ಆವೃತ್ತಿಯ ಆಟಗಾರರ ಹರಾಜು

ಹರಾಜಿನಲ್ಲಿ ಕರುಣ್ ನಾಯರ್ ಮಹಾರಾಜ!

ಬೆಂಗಳೂರು: ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಐದನೇ ಆವೃತ್ತಿಯ ಆಟಗಾರರ ಹರಾಜಿನ ಪ್ರಮುಖ ಆಕರ್ಷಣೆಯಾಗಿದ್ದ ಭಾರತ ಟೆಸ್ಟ್ ತಂಡದ ಉಪನಾಯಕ ಕೆಎಲ್ ರಾಹುಲ್ ಖರೀದಿಯಾಗದೆ ಉಳಿದಿದ್ದಾರೆ. ಶುಕ್ರವಾರ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಹರಾಜಿನ 2 ಲಕ್ಷ ರೂ. ಮೂಲಬೆಲೆಯ ಎ ಗುಂಪಿನಲ್ಲಿದ್ದ ರಾಹುಲ್‌ರನ್ನು ಖರೀದಿಸಲು ಯಾವುದೇ ಫ್ರಾಂಚೈಸಿ ಆಸಕ್ತಿ ತೋರಿಸಲಿಲ್ಲ. ಆದರೆ ಕರುಣ್ ಅವರು ದುಬಾರಿ 18 ಲಕ್ಷ ರೂ ಬೆಲೆಗೆ ಮಂಗಳೂರು ತಂಡ ಸೇರಿಕೊಂಡರು.

ತಾರಾ ವಿಕೆಟ್‌ಕೀಪರ್ ಬ್ಯಾಟರ್ ಐಪಿಎಲ್ 2026ರಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ್ದು, ಕೇವಲ 67 ಎಸೆತಗಳಲ್ಲಿ ಅಜೇಯ 152 ರನ್ ಚಚ್ಚಿದ್ದರು. ಈ ಆವೃತ್ತಿಯಲ್ಲಿ ದಿಲ್ಲಿ ಕ್ಯಾಪಿಟಲ್ಸ್ ಪರ 14 ಪಂದ್ಯಗಳಲ್ಲಿ 593 ರನ್ ಕಲೆಹಾಕಿದ್ದರು.

ಬಿಕರಿ ಆಗದಿರಲು ಕಾರಣ?: ಮಹಾರಾಜ ಟ್ರೋಫಿಗೆ ಅವರ ಲಭ್ಯತೆಯನ್ನು ದೃಢೀಕರಿಸದ ಕಾರಣ, ಅವರನ್ನು ಯಾವುದೇ ತಂಡಗಳು ಖರೀದಿಸಿಲ್ಲ ಎನ್ನಲಾಗುತ್ತಿದೆ. ಎ ಗುಂಪಿನ ಆಟಗಾರರಲ್ಲಿ 2 ಲಕ್ಷ ರೂ. ಮೂಲಬೆಲೆಗೆ ರಾಹುಲ್ ತಮ್ಮ ಹೆಸರು ನೋಂದಾಯಿಸಿದ್ದರು. ಶನಿವಾರ ಆರಂಭವಾಗುವ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದ ಉಪನಾಯಕನಾಗಿ ರಾಹುಲ್ ಮೈದಾನಕ್ಕೆ ಇಳಿಯಲಿದ್ದಾರೆ. ಇಂಗ್ಲೆಂಡ್ ಪ್ರವಾಸದಲ್ಲಿ ಅನುಭವಿ ಆಟಗಾರನಾಗಿ ರಾಹುಲ್ ಭಾರತ ಪ್ರತಿನಿಧಿಸಲಿದ್ದಾರೆ. ಇಂತಹ ಸಂದರ್ಭ ರಾಷ್ಟ್ರೀಯ ಕರ್ತವ್ಯದಲ್ಲಿ ವ್ಯಸ್ತರಾಗಿರುವ ರಾಹುಲ್ ಮಹಾರಾಜ ಟ್ರೋಫಿ ಆಡುವ ಸಾಧ್ಯತೆಯಿಲ್ಲ ಎಂಬ ಕಾರಣಗಳಿಂದ ಯಾವುದೇ ಫ್ರಾಂಚೈಸಿ ಅವರನ್ನು ಖರೀದಿಸಲು ಮುಂದಾಗಿಲ್ಲ ಎನ್ನಲಾಗುತ್ತಿದೆ.

ಕರುಣ್‌ಗೆ ಭರಪೂರ ಬೆಲೆ!: ಅನುಭವಿ ಬ್ಯಾಟರ್ ಕರುಣ್ ನಾಯರ್ ಅವರನ್ನು 18 ಲಕ್ಷ ರೂ. ಬೆಲೆಗೆ ಕೋಸ್ಟಲ್ ಕಿಂಗ್ಸ್ ಮಂಗಳೂರು ಫ್ರಾಂಚೈಸಿ ಖರೀದಿಸಿದೆ. ಅಚ್ಚರಿಯೆಂಬಂತೆ ಕರ್ನಾಟಕ ತಂಡದ ನಾಯಕ ಮತ್ತು ಆರ್‌ಸಿಬಿ ಬ್ಯಾಟರ್ ದೇವದತ್ ಪಡಿಕ್ಕಲ್ ಕೇವಲ 2.6 ಲಕ್ಷ ರೂ. ಬೆಲೆಗೆ ಮೈಸೂರು ವಾರಿಯರ್ಸ್ ಸೇರಿದ್ದಾರೆ. ಕೆಕೆಆರ್ ಖ್ಯಾತಿಯ ಮನೀಶ್ ಪಾಂಡೆ 12.75 ಲಕ್ಷ ರೂ. ಬೆಲೆಗೆ ಗುಲ್ಬರ್ಗಾ ಮಿಸ್ಟಿಕ್ಸ್ ಸೇರಿಕೊಂಡಿದ್ದಾರೆ. ಕರ್ನಾಟಕ ತಂಡದ ಮಾಜಿ ನಾಯಕ ಮಯಾಂಕ್ ಅಗರವಾಲ್ 11.5 ಲಕ್ಷ ರೂ. ಬೆಲೆಗೆ ಹುಬ್ಬಳ್ಳಿ ಟೈಗರ್ಸ್ ಸೇರಿದ್ದಾರೆ.





ಜೂ.20ರಿಂದ 6 ನಗರಗಳಲ್ಲಿ ಟೂರ್ನಿ

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ ಜೂ.20ರಿಂದ ಜು.12ರವರೆಗೆ ನಡೆಯಲಿದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮೈದಾನಗಳಲ್ಲಿ ಪಂದ್ಯಗಳನ್ನು ಆಯೋಜಿಸಲಾಗುವುದು. ಈ ಬಾರಿ ಬೆಳಗಾವಿ ಮತ್ತು ಶಿವಮೊಗ್ಗ ಸೇರಿಸಿಕೊಳ್ಳುವ ಸಾಧ್ಯತೆಯಿದೆ.

6 ತಂಡಗಳು

- ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಹುಬ್ಬಳ್ಳಿ ಟೈಗರ್ಸ್
- ಮೈಸೂರು ವಾರಿಯರ್ಸ್
- ಗುಲ್ಬರ್ಗಾ ಮಿಸ್ಟಿಕ್ಸ್
- ಶಿವಮೊಗ್ಗ ಯೋಧಾಸ್
- ಕೋಸ್ಟಲ್ ಕಿಂಗ್ಸ್ ಮಂಗಳೂರು



ದುಬಾರಿ ಖರೀದಿ

- ಕರುಣ್ ನಾಯರ್ - 18 ಲಕ್ಷ ರೂ.
- ಸ್ಮರಣ್ ಆರ್ - 15.75 ಲಕ್ಷ ರೂ.
- ಅಭಿನವ್ ಮನೋಹರ್ - 13.5 ಲಕ್ಷ ರೂ.
- ಮನೀಶ್ ಪಾಂಡೆ - 12.75 ಲಕ್ಷ ರೂ.
- ಮೆಕ್‌ನೀಲ್ ನೊರೊನ್ಹಾ - 12.25 ಲಕ್ಷ ರೂ.

ವೀಕ್ಷಿಸುವುದು ಹೇಗೆ?

ಫ್ಯಾನ್‌ಕೋಡ್ ಆ್ಯಪ್, ವೆಬ್‌ಸೈಟ್‌ನಲ್ಲಿ ಲೈವ್ ಸ್ಟ್ರೀಮಿಂಗ್ ಇರಲಿದ್ದು, ಪಂದ್ಯಗಳ ಪ್ರಸಾರ ಹಕ್ಕನ್ನು ಸೋನಿ ಸ್ಪೋರ್ಟ್ಸ್ ಖರೀದಿಸಿದ್ದು, ಸೋನಿ ಸ್ಪೋರ್ಟ್ಸ್ 5 ಮತ್ತು ಸೋನಿ ಸ್ಪೋರ್ಟ್ಸ್ 4 (ಕನ್ನಡ) ವಾಹಿನಿಗಳಲ್ಲಿ ಪ್ರಸಾರವಾಗಲಿವೆ.

ಎ ಗುಂಪಿನ ಪ್ರಮುಖರು

- ಅಭಿನವ್ ಮನೋಹರ್ – 13.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ದೇವದತ್ ಪಡಿಕ್ಕಲ್ – 2.6 ಲಕ್ಷ ರೂ. ಮೈಸೂರು ವಾರಿಯರ್ಸ್
- ಕರುಣ್ ನಾಯರ್ – 18 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಮನೀಶ್ ಪಾಂಡೆ – 12.75 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಮನೋಜ್ ಬಂಡಾಜೆ – 10 ಲಕ್ಷ ರೂ. ಮೈಸೂರು ವಾರಿಯರ್ಸ್
- ಮಯಾಂಕ್ ಅಗರವಾಲ್ – 11.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಪ್ರಸಿದ್ಧ ಕೃಷ್ಣ – 2.6 ಲಕ್ಷ ರೂ. ಮೈಸೂರು ವಾರಿಯರ್ಸ್
- ಪ್ರವೀಣ್ ದುಬೆ – 9.5 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಶರತ್ ಬಿಆರ್ – 5.75 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಶ್ರೇಯಸ್ ಗೋಪಾಲ್ – 10.25 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ವಿದ್ವತ್ ಕಾವೇರಪ್ಪ – 5 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಸ್ಮರಣ್ ಆರ್ – 15.75 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ವೈಶಾಕ್ ವಿಜಯಕುಮಾರ್ – 8.25 ಲಕ್ಷ ರೂ. ಮೈಸೂರು ವಾರಿಯರ್ಸ್
- ಯಶ್ ರಾಜ್ ಪೂಂಜಾ – 5 ಲಕ್ಷ ರೂ. ಶಿವಮೊಗ್ಗ ಯೋಧಾಸ್

ಬಿ ಗುಂಪಿನ ಪ್ರಮುಖರು

- ಮೆಕ್‌ನೀಲ್ ನೊರೊನ್ಹಾ – 12.25 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಧೀರಜ್ ಜೆ ಗೌಡ – 2 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಮನವಂತ್ ಕುಮಾರ್ ಎಲ್ – 7.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಶ್ರೀಖರ್ ಶೆಟ್ಟಿ – 4 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಎಸ್‌ಜೆ ನಿಕಿನ್ ಜೋಸ್ – 2.4 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಶುಭಾಂಗ್ ಹೆಗ್ಡೆ – 11 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಶಶಿಕುಮಾರ್ ಕೆ – 1.3 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಸೂರಜ್ ಅಹೂಜ – 6 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಅಭಿಲಾಷ್ ಶೆಟ್ಟಿ – 5.75 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಅನೀಶ್ ಕೆವಿ – 1.8 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಮೊಹ್ಸಿನ್ ಖಾನ್ – 2 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಲವನೀತ್ ಸಿಸೋಡಿಯಾ – 7.75 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಯಶೋವರ್ಧನ್ ಪರಂತಪ – 3.4 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ವೆಂಕಟೇಶ್ ಎಂ – 3.4 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಎ ರೋಹನ್ ಪಾಟೀಲ್ – 5.75 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಧ್ರುವ್ ಪ್ರಭಾಕರ್ – 4.25 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಶ್ರೀಜಿತ್ ಕೆಎಲ್ – 9 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಕೃತಿಕ್ ಕೃಷ್ಣ – 1 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಚೇತನ್ ಎಲ್‌ಆರ್ – 11.5 ಲಕ್ಷ ರೂ. ಮೈಸೂರು ವಾರಿಯರ್ಸ್
- ಕುಶ್ ಮರಾಠೆ – 30,000 ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಸಿಆರ್ ಹಾರ್ದಿಕ್ ರಾಜ್ – 7.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್

ಪ್ರಜ್ಞಾನಂದಗೆ ಗೆಲುವು!



ಓಸ್ಲೋ: ಆರ್.ಪ್ರಗ್ನಾನಂದ ಅವರು ಕ್ಯಾಂಡಿಡೇಟ್ಸ್ ಪಂದ್ಯಾವಳಿಯಲ್ಲಿ ಅತೃಪ್ತಿಕರ ಪ್ರದರ್ಶನ ನೀಡಿದ ಬಳಿಕ ನಾರ್ವೆ ಚೆಸ್ 2026 ಪ್ರಶಸ್ತಿ ಗೆಲ್ಲುವ ಹಂತಕ್ಕೆ ತಲುಪುವ ಮೂಲಕ ಬಲವಾದ ಕಂಬ್ಯಾಕ್ ಮಾಡಿದ್ದಾರೆ. ಹತ್ತನೇ ಮತ್ತು ಕೊನೆಯ ಸುತ್ತಿನ ನಂತರ, ಪ್ರಜ್ಞಾನಂದ ವೆಸ್ಲಿ ಸೊ(15.5 ಅಂಕಗಳು) ಅವರಿಗಿಂತ ಅರ್ಧ ಅಂಕ ಹಿಂದುಳಿದಿದ್ದರು. ಅಂತಿಮ 10ನೇ ಸುತ್ತಿನಲ್ಲಿ ಅವರು ಬಿಳಿ ಕಾಯಿಗಳೊಂದಿಗೆ ವಿನ್ಸೆಂಟ್ ಕೀಮರ್ ವಿರುದ್ಧ ಆಡಲಿದ್ದಾರೆ. ಮತ್ತೊಂದೆಡೆ ಸೊ ಅವರು ಅಲಿರೆಝಾ ಫಿರೂಜಾ ಅವರನ್ನು ಎದುರಿಸಲಿದ್ದಾರೆ.

9ನೇ ಸುತ್ತಿನಲ್ಲಿ, ಪ್ರಜ್ಞಾನಂದ ತಮ್ಮ ದೇಶದವರೇ ಆದ ಪ್ರಸ್ತುತ ಕ್ಲಾಸಿಕಲ್ ವಿಶ್ವ ಚಾಂಪಿಯನ್ ಆಗಿರುವ ಡಿ.ಗುಕೇಶ್ ಅವರನ್ನು ಸೋಲಿಸಿದರು. ಇದು ಪ್ರಗ್ ಅವರ ಸತತ ಮೂರನೇ ಗೆಲುವಾಗಿತ್ತು. ಅದಕ್ಕೂ ಮೊದಲು ಅವರು ಫಿರೂಜಾ ಮತ್ತು ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಸೋಲಿಸಿದ್ದರು. ಕಾರ್ಲ್ಸನ್ ವಿರುದ್ಧ ಎರಡು ಬಾರಿ ಗೆಲುವು ಸಾಧಿಸಿರುವುದು ಅವರ ಈ ಟೂರ್ನಿಯ ಪ್ರಮುಖ ಸಾಧನೆಯಾಗಿದೆ. ನಾರ್ವೆ ಚೆಸ್‌ನಲ್ಲಿ ಕಾರ್ಲ್ಸನ್ ಮತ್ತು ಗುಕೇಶ್ ಇಬ್ಬರೂ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡಿಲ್ಲ, ಪೆನಲ್ಟಿಮೇಟ್ ಸುತ್ತಿನ ಸೋಲುಗಳ ಬಳಿಕ ಕ್ರಮವಾಗಿ 5ನೇ ಮತ್ತು 6ನೇ ಸ್ಥಾನಗಳಲ್ಲಿ ಉಳಿದಿದ್ದಾರೆ. ಸೊ ವಿರುದ್ಧದ ಸೋಲು ಕಾರ್ಲ್ಸನ್‌ಗೆ ಈ ಟೂರ್ನಿಯಲ್ಲಿನ 5ನೇ ಸೋಲಾಗಿದ್ದು, ಗುಕೇಶ್ ಕೇವಲ 3 ಪಂದ್ಯಗಳನ್ನು ಮಾತ್ರ ಗೆದ್ದಿದ್ದಾರೆ.

> ಕ್ಲಾಸಿಕಲ್ ವಿಶ್ವ ಚಾಂಪಿಯನ್ ಗುಕೇಶ್ ಮಣಿಸಿದ ಪ್ರಗ್

ಪ್ರಶಸ್ತಿ ಸನಿಹದಲ್ಲಿ ಪ್ರಗ್

ನಾರ್ವೆ ಚೆಸ್ ಪ್ರಶಸ್ತಿ ಗೆಲ್ಲಬೇಕಿದ್ದರೆ, ಅಂತಿಮ ಸುತ್ತಿನಲ್ಲಿ ವಿನ್ಸೆಂಟ್ ಕೀಮರ್ ಅವರನ್ನು ಪ್ರಜ್ಞಾನಂದ ಸೋಲಿಸಬೇಕಿದೆ. ಇದಲ್ಲದೆ, ಅಲಿರೆಝಾ ಫಿರೂಜಾ ಎದುರು ವೆಸ್ಲಿ ಸೊ ಸೋಲಬೇಕು.

ವಿಶ್ವ ಚಾಂಪಿಯನ್‌ಶಿಪ್‌ಗೂ ಮುನ್ನ ಆಫ್ಘಾನ್ ಸವಾಲು

ಇಂದಿನಿಂದ ಅಫ್ಘಾನ್ ವಿರುದ್ಧ ಭಾರತಕ್ಕೆ ಟೆಸ್ಟ್

ಮಲ್ಲನ್ಪುರ್(ಚಂಡೀಗಢ): ಬಲಿಷ್ಠವಾದ ಭಾರತ ಶನಿವಾರ ಆರಂಭವಾಗಲಿರುವ ಏಕೈಕ ಟೆಸ್ಟ್‌ನಲ್ಲಿ ಅಫ್ಘಾನಿಸ್ತಾನ ತಂಡವನ್ನು ಎದುರಿಸಲಿದೆ. ಈ ಪಂದ್ಯವು ಜೂ.6ರಿಂದ ಜೂ.10ರವರೆಗೆ ನಡೆಯಲಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಭಿಯಾನ ಆರಂಭಿಸುವ ಮುನ್ನ ಭಾರತ ತಂಡದ ಸಮತೋಲನವನ್ನು ಪರೀಕ್ಷಿಸಲು ಇದೊಂದು ಅವಕಾಶವಾಗಿ ಇರಲಿದೆ. 2018ರಲ್ಲಿ ಭಾರತ ವಿರುದ್ಧ ನಡೆದ ಮೊದಲ ಟೆಸ್ಟ್‌ನಲ್ಲಿ ಅಫ್ಘಾನಿಸ್ತಾನ ಕೇವಲ ಒಂದು ಸೆಷನ್‌ನಲ್ಲೇ 10 ವಿಕೆಟ್ ಕಳೆದುಕೊಂಡಿತ್ತು. ನಂತರದ 10 ವಿಕೆಟ್‌ಗಳು ಟೀ ವಿರಾಮದಿಂದ ದಿನಾಂತ್ಯದ ನಡುವೆ ಉರುಳಿಬಿದ್ದವು, ಪಂದ್ಯ ಬೇಗನೆ ಅಂತ್ಯಗೊಂಡಿತ್ತು. ಆದರೆ 2026ರಲ್ಲಿ ನಾಯಕ ಹಶ್ಮತುಲ್ಲಾ ಶಾಹಿದಿ ತಮ್ಮ ತಂಡವು ಕನಿಷ್ಠ ಭಾರತಕ್ಕೆ ಗಟ್ಟಿಯಾದ ಸವಾಲು ನೀಡಬೇಕು ಎಂದು ಆಶಿಸುತ್ತಿದ್ದಾರೆ. ಭಾರತ ತಂಡವು ಈ ಬಾರಿ ಪರಿವರ್ತನಾ ಹಂತದಲ್ಲಿದ್ದು, ವಿಭಿನ್ನ ಸಂಯೋಜನೆಗಳನ್ನು ಪರೀಕ್ಷಿಸುವ ಪ್ರಯೋಗಾತ್ಮಕ ಹಾದಿಯಲ್ಲಿದೆ.

ಕಳೆದ ವರ್ಷ ತವರಿನಲ್ಲಿ ಸರಣಿ ಸೋಲು: ಆದಾಗ್ಯೂ, ಕಳೆದ ವರ್ಷ ದಕ್ಷಿಣ ಆಫ್ರಿಕಾ ಎದುರಿನ 0-2 ತವರಿನ ಸರಣಿ ಸೋಲನ್ನು ಭಾರತ ಮರೆಯಲಿಲ್ಲ. ತವರಿನ ಹಳೆಯ ಕಹಿ ಅನುಭವವನ್ನು ಮರೆತು ಅಫ್ಘಾನಿಸ್ತಾನ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ.

ಸಾಯಿ ಸುದರ್ಶನ್‌ಗೆ ಅವಕಾಶ : ಭಾರತದ ಟೆಸ್ಟ್ ತಂಡದಲ್ಲಿ ನಂ.3 ಸ್ಥಾನದಲ್ಲಿ ಬಿ.ಸಾಯಿ ಸುದರ್ಶನ್ ಅವರಿಗೆ ಅವಕಾಶ ನೀಡುವುದಾಗಿ ಮುಖ್ಯ ಕೋಚ್ ಗೌತಮ್ ಗಂಭೀರ್ ಶುಕ್ರವಾರ ದೃಢೀಕರಿಸಿದ್ದಾರೆ. ಮುಖ್ಯ ಕೋಚ್ ಗಂಭೀರ್ ಶುಕ್ರವಾರ ಮಾತನಾಡಿದ್ದು, ಸಾಯಿ ಸುದರ್ಶನ್‌ಗೆ ಇನ್ನೂ ನ್ಯಾಯಯುತ ಅವಕಾಶ ಸಿಕ್ಕಿಲ್ಲ. ಅವರು ಇಂಗ್ಲೆಂಡ್‌ನಲ್ಲಿ ಆಡಿದ್ದಾರೆ. ನಾವು ಅವರಿಗೆ ಹೆಚ್ಚಿನ ಅವಕಾಶ ನೀಡಲಿದ್ದೇವೆ. ತಂಡದಲ್ಲಿ ಕೇವಲ 11 ಆಟಗಾರರನ್ನು ಮಾತ್ರ ಆಯ್ಕೆ ಮಾಡಬಹುದು. ಸುದರ್ಶನ್ ಕೆಟ್ಟ ಲಯದಲ್ಲಿಲ್ಲ. ಅವರು ಐಪಿಎಲ್‌ನಲ್ಲಿ 700 ರನ್ ಗಳಿಸಿದ್ದಾರೆ.



ಪಿಚ್ ರಿಪೋರ್ಟ್

ಕಪ್ಪು ಮಣ್ಣಿನ ಪಿಚ್ ಆಗಿರುವುದರಿಂದ ಇದು ಬ್ಯಾಟಿಂಗ್ ಸ್ನೇಹಿ ಪಿಚ್ ಎಂದು ಗುರುತಿಸಲಾಗಿದೆ. ಜೂನ್ ತಿಂಗಳ 40 ಡಿಗ್ರಿ ಬಿಸಿಲಿನಲ್ಲಿ ಪಂದ್ಯ ನಡೆಯಲಿದೆ.

ನಾಲ್ಕು-ಐದು ಪಂದ್ಯಗಳ ಆಧಾರದ ಮೇಲೆ ಅವರನ್ನು ಮೌಲ್ಯಮಾಪನ ಮಾಡಿದರೆ, ನಾವು ಭವಿಷ್ಯಕ್ಕಾಗಿ ಬಲಿಷ್ಠ ತಂಡ ಕಟ್ಟಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಚೇತೇಶ್ವರ್ ಪೂಜಾರ 2025ರಲ್ಲಿ ನಿವೃತ್ತಿ ಬಳಿಕ 3ನೇ ಕ್ರಮಾಂಕದಲ್ಲಿ ಸ್ಥಿರತೆ ಕಂಡಿಲ್ಲ.

6ನೇ ಸ್ಥಾನದಲ್ಲಿ ಭಾರತ: ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಅಂಕಪಟ್ಟಿಯಲ್ಲಿ ಭಾರತ ಶೇ.48.15 ಅಂಕಗಳೊಂದಿಗೆ ಆರನೇ ಸ್ಥಾನದಲ್ಲಿದ್ದರೂ, ಗಂಭೀರ್ ತಂಡದ ಸಾಮರ್ಥ್ಯದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ನಾವು ಇನ್ನೂ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಗೆಲ್ಲಬಹುದು ಎಂಬ ನಂಬಿಕೆ ಹೊಂದಿದ್ದೇವೆ. ಈ ತಂಡದಲ್ಲಿ ಪ್ರತಿಭೆ ಮತ್ತು ಹಸಿವು ಎರಡೂ ಇವೆ ಎಂದು ಹೇಳಿದರು. ಐಪಿಎಲ್ ಮುಗಿದ ತಕ್ಷಣ ಟೆಸ್ಟ್ ಕ್ರಿಕೆಟ್‌ಗೆ ಮರಳುವ ಸವಾಲಿನ ಕುರಿತು ಮಾತನಾಡಿದ ಗಂಭೀರ್, ಯಾವುದೇ ನೆಪಗಳಿಗೆ ಇಲ್ಲಿ ಜಾಗವಿಲ್ಲ. ಟೆಸ್ಟ್ ಕ್ರಿಕೆಟ್ ಎನ್ನುವುದು ಮಾನಸಿಕ ದೃಢತೆಯ ಪರೀಕ್ಷೆ ಎಂದು ಸ್ಪಷ್ಟಪಡಿಸಿದರು.

ತಂಡಗಳು

ಭಾರತ: ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಕೆಎಲ್ ರಾಹುಲ್ (ಉಪನಾಯಕ), ಸಾಯಿ ಸುದರ್ಶನ್, ರಿಷಭ್ ಪಂತ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ನಿತೀಶ್ ಕುಮಾರ್ ರೆಡ್ಡಿ, ಹರ್ಷ ದುಬೆ, ಕುಲ್ದೀಪ್ ಯಾದವ್, ಪ್ರಸಿದ್ಧ್ ಕೃಷ್ಣ, ಮೊಹಮ್ಮದ್ ಸಿರಾಜ್, ಮನವ್ ಸುತಾರ್, ಧ್ರುವ್ ಜುರೇಲ್, ಗುರ್‌ನೂರ್ ಬ್ರಾರ್, ದೇವದತ್ತ ಪಡಿಕ್ಕಲ್.

ಅಫ್ಘಾನಿಸ್ತಾನ: ಹಶ್ಮತುಲ್ಲಾ ಶಾಹಿದಿ (ನಾಯಕ), ಅಬ್ದುಲ್ ಮಲಿಕ್, ರಹ್ಮಾನುಲ್ಲಾ ಗರ್ಬಾಜ್, ಅಫ್ಸರ್ ಝಜಾಯಿ, ಇಕ್ರಮ್ ಅಲೀಖಿಲ್, ಸದಿಕ್ಕುಲ್ಲಾ ಅಟಲ್, ರಹ್ಮತ್ ಶಾ, ಅಜ್ಮತುಲ್ಲಾ ಒಮರ್ಜಾಯಿ, ಶರಫುದ್ದೀನ್ ಅಶ್ರಫ್, ನಂಗೇಲಿಯಾ ಖರೋತೆ, ಬಿಲಾಲ್ ಸಾಮಿ, ಖೈಸ್ ಅಹ್ಮದ್, ಮೊಹಮ್ಮದ್ ಸೇಲಿಂ, ಝಿಯಾವುರ್ ರಹ್ಮಾನ್.

- ಪಂದ್ಯ ಆರಂಭ: ಬೆಳಗ್ಗೆ 9:30.
- ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್.

ಫ್ರೆಂಚ್ ಓಪನ್ 2026 ಮಹಿಳೆಯರ ಫೈನಲ್

ಇಂದು ಮಾಯಾ-ಮಿರ್ರಾ ಪ್ರಶಸ್ತಿ ಸೆಣಸು

ಪ್ಯಾರಿಸ್: ಪೋಲೆಂಡ್‌ನ 24 ವರ್ಷದ ಮಾಯಾ ಖ್ವಾಲಿನ್ಸ್ಕಾ ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ರಷ್ಯಾದ ಡಯಾನಾ ಶ್ನೈಡರ್‌ರನ್ನು 7-6 (7/4), 6-4 ಸೆಟ್‌ಗಳಿಂದ ಮಣಿಸಿ ಫ್ರೆಂಚ್ ಓಪನ್ ಫೈನಲ್‌ಗೆ ಪ್ರವೇಶಿಸಿದರು. ಇದರೊಂದಿಗೆ ಓಪನ್ ಯುಗದಲ್ಲಿ(1968ರಿಂದ) ಗ್ರ್ಯಾಂಡ್ ಸ್ಲ್ಯಾಮ್ ಸಿಂಗಲ್ಸ್ ಫೈನಲ್ ತಲುಪಿದ ಕೇವಲ ಎರಡನೇ ಅರ್ಹತಾ ಆಟಗಾರ್ತಿ ಎಂಬ ಸಾಧನೆ ಮಾಡಿದರು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ರಷ್ಯಾದ 19 ವರ್ಷದ ಪ್ರತಿಭಾವಂತ ಆಟಗಾರ್ತಿ ಮಿರ್ರಾ ಆ್ಯಂಡ್ರೀವಾ ಅವರನ್ನು ಎದುರಿಸಲಿದ್ದಾರೆ. 2021ರ ಯುಎಸ್ ಓಪನ್‌ನಲ್ಲಿ ಅರ್ಹತಾ ಸುತ್ತಿನಿಂದಲೇ ಪ್ರಶಸ್ತಿ ಗೆದ್ದ ಎಮ್ಮಾ ರಾಡಕಾನು ಸಾಧನೆಯನ್ನು ಖ್ವಾಲಿನ್ಸ್ಕಾ ಸರಿಗಟ್ಟುವ ಅವಕಾಶ ಹೊಂದಿದ್ದಾರೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಆಂಡ್ರೀವಾ, ಉಕ್ರೇನ್‌ನ ಮಾರ್ತಾ ಕೊಸ್ಟ್ಯುಕ್‌ರನ್ನು 6-1, 6-3 ಸೆಟ್‌ಗಳಿಂದ ಸೋಲಿಸಿ ತಮ್ಮ ಮೊದಲ ಗ್ರ್ಯಾಂಡ್ ಸ್ಲ್ಯಾಮ್ ಫೈನಲ್ ಪ್ರವೇಶಿಸಿದರು.




ಅಂಗಣದಲ್ಲಿ ಉದ್ವಿಗ್ನತೆ, ಹಸ್ತಲಾಘವ ಇಲ್ಲ

ಆಂಡ್ರೀವಾ ಮತ್ತು ಕೋಸ್ಟ್ಯುಕ್ ನಡುವಿನ ಸೆಮಿಫೈನಲ್ ಬಳಿಕ ಇಬ್ಬರೂ ಪರಸ್ಪರ ಹಸ್ತಲಾಘವ ಮಾಡಲಿಲ್ಲ. ಉಕ್ರೇನ್‌ನ ಕೋಸ್ಟ್ಯುಕ್ ತಕ್ಷಣವೇ ಕೋರ್ಟ್ ತೊರೆದು ಅಭಿಮಾನಿಗಳಿಗೆ ಕೈ ಬೀಸಿ ವಿದಾಯ ಹೇಳಿದರು. ರಷ್ಯಾದ ಉಕ್ರೇನ್ ಮೇಲಿನ ಆಕ್ರಮಣದ ಹಿನ್ನೆಲೆಯಲ್ಲಿ ಪಂದ್ಯಕ್ಕೂ ಮುನ್ನ ವಾತಾವರಣದಲ್ಲಿ ಸ್ವಲ್ಪ ಉದ್ವಿಗ್ನತೆ ಕಂಡುಬಂದಿತು. ಸಾಮಾನ್ಯವಾಗಿ ಇಬ್ಬರೂ ಆಟಗಾರ್ತಿಯರು ಹಸ್ತಲಾಘವ ನೀಡಿ ಫೋಟೋಗೆ ಪೋಸ್ ನೀಡುವ ಪದ್ಧತಿ ಇದ್ದರೂ, ಈ ಬಾರಿ ಪ್ರತ್ಯೇಕ ಛಾಯಾಚಿತ್ರ ತೆಗೆಸಿಕೊಂಡರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6006

6005 ಉತ್ತರ

ಎಡದಿಂದ ಬಲಕ್ಕೆ:
5.ಸದಾನಂದ 6.ಮದುಮಗ
7.ಜರಿ 8.ಸಹಾಯ 9.ನಗ
11.ಮಗ 13.ಸಮೀರ
15.ಕಟು 16.ಮಗುತನ
17.ಮನೋರಮೆ

ಮೇಲಿನಿಂದ ಕೆಳಕ್ಕೆ :
1.ದಾದಾಗಿರಿ 2.ಮಂದಹಾಸ
3.ಕಮನೀಯ
4.ಧೂಮಪಾನ 7.ಜನುಮ
10.ಕಸಟು 12.ಗದಗುಟ್ಟು
13.ನಗೆನಟ 14.ರಸಮಯ
15.ಕಸರತ್ತು

ಎಡದಿಂದ ಬಲಕ್ಕೆ
1.ಆಗಮನವನ್ನು ನಿರೀಕ್ಷಿಸು ಎಂಬರ್ಥದ ಶಬ್ದ (4)
3.ಸುದರ್ಶನ ಕೈಯಲ್ಲಿ ಹಿಡಿದವ ತಿರುಗಿದ್ದಾನೆ (4)
5.ಪಟ್ಟೆಯುಳ್ಳ ಒಂದು ಬಗೆಯ ಸರ್ಪ (5)
6.ಸಾಧನೆಯ ಸ್ಮರಣಾರ್ಥ ನೀಡುವ ಬಿಲ್ಲೆ (3)
7.ಅಮೂಲ್ಯ-ಹೊಳೆಯುವ ಕಲ್ಲು (2)
8.ಸಾರಾಸಗಟು ಹಲ್ಲೆಯಿಲ್ಲಿ ತಿರುಗಿದೆ (2)
12.ಎದೆಗಾರಿಕೆಯಿಂದ ಕೂಡಿದ ಕಾರ್ಯ (3)
14.ಭಿಡೆ ಸ್ವಭಾವದವನು ದಾರದ ನಡುವೆ ಇದ್ದಾನೆ (5)
16.ಬಾಗುವಿಕೆ-ನಮಿಸುವಿಕೆ (4)
17.ವಂಚಿಸುವವ-ನಂಬಿಕಸ್ತನಲ್ಲದ ವ್ಯಕ್ತಿ (4)

ಮೇಲಿನಿಂದ ಕೆಳಕ್ಕೆ
1.ಸರಿಯಾದ ಮಾರ್ಗದರ್ಶನ ತೋರುವ ವ್ಯಕ್ತಿ (4)
2.ದಯೆಯ ಸಾಗರ ಈ ದೇವರು (5)
3.ಆರೋಹಿಯಿಲ್ಲಿ ತಲೆಕೆಳಗಾಗಿದ್ದಾನೆ (3)
4.ಇವು ಚರ್ಮದ ಪಾದುಕೆಗಳು (4)
5. ಹಾಯ್ದು ಹೋಗು ಎಂಬ ಬೈರಪ್ಪನವರ ಕಾದಂಬರಿ (2)
9.ಸೇವಕರ ಸೇವಕ-ಅಡಿಯಾಳು (5)
10.ದೇವರ ವಿಗ್ರಹಗಳನ್ನಿಡುವ ಮಂಟಪ (4)
11.ಸುತ್ತು ಬಳಸುಗಳಿಲ್ಲದಿರುವಿಕೆ (2)
13.ಅರಸನ ದಾರಿ ಕಾಯುತ್ತಿರುವ ಸೇನಾಧಿಕಾರಿ (4)
15.ಕೆಲಸಕ್ಕೆ ಪ್ರತಿ ತಿಂಗಳು ನೀಡುವ ವೇತನ (3)



ಇದು ಭಾರತದ ಸಮಯ

ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳ ಮೂರನೇ-ಎರಡು ಭಾಗದ ಕಾಲಾವಧಿ ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಈ ವರ್ಗದ ಸಮಾರೋಪ ಸಮಾರಂಭ ನಾಗ್ಪುರದಲ್ಲಿ ಗುರುವಾರ ನಡೆಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಿರ್ಲಾ ಸಮೂಹದ ಅಧ್ಯಕ್ಷ ಕುಮಾರ ಮಂಗಳಂ ಬಿರ್ಲಾ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಮತ್ತು ಕುಮಾರ ಮಂಗಲಂ ಬಿರ್ಲಾ ಅವರು ಮಾಡಿದ ಭಾಷಣದ ಸಾರಾಂಶ ಇಲ್ಲಿದೆ.

▸ ಮೋಹನ್ ಭಾಗವತ್, ಆರೆಸ್ಸೆಸ್ ಸರಸಂಘಚಾಲಕ

ಭಾರತವು ಮುನ್ನಡೆಯಲಿ ಎಂಬುದಕ್ಕಾಗಿ ಈ ಪೂರಕ ವಾತಾವರಣ ಜನಮಾನಸದಲ್ಲಿ ಸೃಷ್ಟಿಯಾಗುತ್ತಿದೆ. ಅದರ ಜೊತೆಜೊತೆಗೆ ಪರಿಸ್ಥಿತಿಯೂ ತನ್ನ ಬಣ್ಣವನ್ನು ತೋರಿಸುತ್ತಿದೆ. ಜಗತ್ತಿನ ಸ್ವಾರ್ಥದ ಸಂಘರ್ಷಗಳಲ್ಲಿ, ಆ ಸಂಘರ್ಷಕ್ಕೂ ತಮಗೂ ಯಾವುದೇ ಸಂಬಂಧವಿಲ್ಲದ ದೇಶಗಳೂ ಸಹ ಸಂಕಷ್ಟಕ್ಕೀಡಾಗಿವೆ. ಯುದ್ಧ ಇರಾನ್ ಮತ್ತು ಅಮೆರಿಕದ ನಡುವೆ ನಡೆಯುತ್ತಿದ್ದರೆ, ತೈಲದ ಬೆಲೆ ನಮ್ಮಲ್ಲಿ ಹೆಚ್ಚಾಗುತ್ತಿದೆ.

ಒಂದು ಕಾಲದಲ್ಲಿ ಭಾರತ ವಿಶ್ವಗುರುವಾಗಿತ್ತು ಎಂದು ನಾವು ಕೇಳುತ್ತೇವೆ. ಆಗ ಕೇವಲ ಆಧ್ಯಾತ್ಮಿಕ ಗುರುವಾಗಿರಲಿಲ್ಲ, ಬದಲಿಗೆ ಕ್ರಿಸ್ತ ಶಕ 1ರಿಂದ ಕ್ರಿಸ್ತ ಶಕ 1600ರವರೆಗೆ ಭಾರತ ಆರ್ಥಿಕ ದೃಷ್ಟಿಯಿಂದ ವಿಶ್ವದ ಮೊದಲ ದೇಶವಾಗಿತ್ತು. ಜ್ಞಾನ-ವಿಜ್ಞಾನದಲ್ಲೂ ನಾವೇ ಅತ್ಯುನ್ನತರಾಗಿದ್ದೆವು. ಇಂದಿನ ವಿಶ್ವದ ಭೌತಿಕ ಜ್ಞಾನದ ಮೂಲಕ್ಕೆ ಹೋದರೆ, ಹುಡುಕುತ್ತಾ ಹುಡುಕುತ್ತಾ ನಾವು ಮತ್ತೆ ಭಾರತದ ಬಳಿಯೇ ತಲುಪುತ್ತೇವೆ. ಭಾರತೀಯ ಜ್ಞಾನ ಸಂಪತ್ತಿನ ಬಗ್ಗೆ ಚರ್ಚೆಯಾಗುತ್ತಿದೆ, ಅದನ್ನು ಅಧ್ಯಯನ ಮಾಡಿದರೆ ನಮಗೆ ಅರ್ಥವಾಗುತ್ತದೆ. ಇಲ್ಲಿಂದ ಸಂಸ್ಕೃತಿ, ನಾಗರಿಕತೆ, ಆಧ್ಯಾತ್ಮದ ಜೊತೆಗೆ ಅರ್ಥವಿದ್ಯೆ, ಭೌತಿಕ ವಿದ್ಯೆ, ಇಡೀ ಜ್ಞಾನ, ಆಯುರ್ವೇದ, ಗಣಿತ ಇವೆಲ್ಲವೂ ಇಲ್ಲಿಂದಲೇ ಹೋಗಿವೆ.

ಹಾಗಾದರೆ ಸಾವಿರ ವರ್ಷಗಳ ಕಾಲ ಗುಲಾಮಗಿರಿಯನ್ನು ಅನುಭವಿಸುವ ಪಾಡು ನಮಗೇಕೆ ಬಂತು? ನಮ್ಮನ್ನು ಗುಲಾಮರನ್ನಾಗಿ ಮಾಡಿದವರು ನಮಗಿಂತ ಶ್ರೇಷ್ಠರೇನೂ ಆಗಿರಲಿಲ್ಲ, ಅವರ ಸಂಖ್ಯೆಯೂ ಹೆಚ್ಚಿರಲಿಲ್ಲ. ಬಹಳ ದೂರದಿಂದ ಬಂದು ಅವರು ನಮ್ಮನ್ನು ಗೆದ್ದರು. ಯಾವುದೇ ವಿಷಯದಲ್ಲೂ ಅವರು ನಮಗಿಂತ ಮೇಲಿರಲಿಲ್ಲ, ನಮಗಿಂತ ಕೀಳಾಗಿಯೇ ಇದ್ದರು. ಹಾಗಾದರೆ, ನಮ್ಮ ಕೆಲವು ವಿಚಾರಗಳನ್ನು ನಾವು ಉಳಿಸಿಕೊಳ್ಳಲಿಲ್ಲ, ನಾವು ಮರೆತುಬಿಟ್ಟೆವು. ನಮ್ಮ ಸಿದ್ಧತೆಯನ್ನು ನಾವು ಕಳೆದುಕೊಂಡೆವು. ಆ ಸಿದ್ಧತೆಯನ್ನು ನಾವು ಮಾಡಿಕೊಳ್ಳಬೇಕಾಗಿದೆ.

ಮಾತೃವತ್ ಪರದಾರೇಷು, ಪರದ್ರವ್ಯೇಷು ಲೋಷ್ಟವತ್, ಆತ್ಮವತ್ ಸರ್ವಭೂತೇಷು ಎಂಬ ಜೀವನಶೈಲಿ ಇಂದಿಗೂ ಹಿಂದೂ ಸಮಾಜದಲ್ಲಿ ಯಥೇಚ್ಛವಾಗಿ ಕಾಣಸಿಗುತ್ತದೆ. ನಾವು ಹೀಗೆ ಹೇಗೆ ಆದೆವು ಎಂದು ಜಗತ್ತು ಆಲೋಚಿಸುತ್ತದೆ. ಆ ಮಾರ್ಗ ನಮಗೆ ಎಲ್ಲಿಂದ ಸಿಕ್ಕಿತು? ನಮ್ಮ ಪರಂಪರೆಯಿಂದ ಸಿಕ್ಕಿತು. ಈ ದೇಶದ ಅನ್ನ, ನೀರು, ಗಾಳಿಯಿಂದ ನನ್ನ ಪೋಷಣೆಯಾಗಿದೆ. ಈ ದೇಶದ ಸಮೃದ್ಧಿ ಮತ್ತು ಭದ್ರತೆಯು ನಮ್ಮ ಪೂರ್ವಜರಿಗೆ ನೀಡಿದ ಸಂಸ್ಕಾರಗಳಿಂದ ನನ್ನ ಸಂಸ್ಕಾರ ರೂಪುಗೊಂಡಿದೆ. ಅದರ ಆಧಾರದ ಮೇಲೆ ನಾನು ಜಗತ್ತಿನಲ್ಲಿ ಮಾಡುವ ಪರಾಕ್ರಮದ ಶ್ರೇಯಸ್ಸು ನನಗೆ ಸಿಗುತ್ತದೆ. ಆದರೆ ಇದೆಲ್ಲಾ ಯಾರದ್ದು? ಇದು ಈ ರಾಷ್ಟ್ರದ್ದು. ಸಮಾಜ, ಭೂಮಿ, ಅದರ ಮೇಲಿನ ಸೃಷ್ಟಿ, ಅರಣ್ಯ, ಪ್ರಾಣಿ, ನೀರು ಮತ್ತು ಅದರಲ್ಲಿ ವಾಸಿಸುವ ಸಮಾಜ, ಜನಪದ ಇವೆಲ್ಲದರ ಕಾರಣದಿಂದ ನನಗೆ ಇದೆಲ್ಲ ಸಿಕ್ಕಿದೆ. ಹಾಗಾಗಿ ನಾನು ಮರಳಿ ಕೊಡಬೇಕು.

ಮರಳಿ ಕೊಡುವ ಮಾತನ್ನೂ ನನ್ನ ಪರಂಪರೆಯೇ ನನಗೆ ಕಲಿಸುತ್ತದೆ. ಸೃಷ್ಟಿಯನ್ನು ಗೆಲ್ಲಿ, ಸೃಷ್ಟಿಯನ್ನು ಲೂಟಿ ಮಾಡಿ, ಸೃಷ್ಟಿ ಇರುವುದು ನಿಮ್ಮ ಬಳಕೆಗಾಗಿ' ಎಂದು ನಮ್ಮ ಪರಂಪರೆ ಹೇಳಲಿಲ್ಲ. ನಮ್ಮ ಪರಂಪರೆ ಹೇಳಿದ್ದು: 'ನೀನೂ ಸೃಷ್ಟಿಯ ಒಂದು ಭಾಗ, ಮತ್ತು ಇವೆಲ್ಲವೂ ನಿನ್ನ ಪೋಷಕರು' ಅಂತ. ಹಾಗಾಗಿ ತುಳಸಿ ಗಿಡವೂ ನಮಗೆ ಮಾತೆ, ಹಸು ಎಂಬ ಪ್ರಾಣಿಯೂ ನಮಗೆ ಮಾತೆ ಮತ್ತು ಹರಿಯುವ ನದಿಯೂ ಮಾತೆ. ಈ ಕೃತಜ್ಞತೆಯನ್ನು ಇಟ್ಟುಕೊಂಡು ನೀವು ಜೀವನ ನಡೆಸಬೇಕು. ಎರಡು ಕೈಗಳಿಂದ ಸಂಪಾದಿಸಿ, ಸಾವಿರ ಕೈಗಳಿಂದ ಹಂಚಬೇಕು. ನಮಗೆ ಸಿಕ್ಕ ಈ ಜೀವನದ ಅಭ್ಯಾಸ, ಪೀಳಿಗೆಯಿಂದ ಪೀಳಿಗೆಗೆ ನಮ್ಮ ಸಂಸ್ಕಾರಗಳ ಮೂಲಕ ನಮ್ಮ ಸಂಸ್ಕೃತಿಯಿಂದ ನಮಗೆ ಸಿಕ್ಕಿದೆ. ಆ ಅಭ್ಯಾಸ ಪ್ರಪಂಚದ ಬಳಿ ಇಲ್ಲ.

ಅದಕ್ಕಾಗಿಯೇ ಇದೆಲ್ಲವನ್ನೂ ಅರ್ಥಮಾಡಿಕೊಂಡು, ಓದಿ, ಕೇಳಿಯೂ ಜಗತ್ತು ಹೇಳುತ್ತದೆ, 'ಈ ಜಗತ್ತಿಗೆ ಒಂದು ಹೊಸ ದಾರಿಯ ಅಗತ್ಯವಿದೆ. ಆ ದಾರಿಯನ್ನು ಭಾರತ ಮಾತ್ರ ನೀಡಬಲ್ಲದು'. ಆದ್ದರಿಂದಲೇ ಭಾರತದ ಸಮಯ ಬಂದಿದೆ. ಆದರೆ ಕೇವಲ ಸಮಯ ಬಂದರೆ ಸಾಲದು, ಆ ಸಮಯಕ್ಕಾಗಿ ಸಿದ್ಧರಾಗಬೇಕಾಗುತ್ತದೆ. ಮುಖ್ಯ ಅತಿಥಿಗಳು ಭವಿಷ್ಯವು ಈಗಾಗಲೇ ಬಂದಾಗಿದೆ ಎಂದರು. ನಿಯತಿಯು ನಮ್ಮ ಸಿದ್ಧತೆಗಾಗಿ ಕಾಯುತ್ತಿದೆ. ನಾವಂತೂ ಬಹಳ ವರ್ಷಗಳಿಂದ ಹೇಳುತ್ತಿದ್ದೇವೆ – ನಾವು ಎಂದರೆ ಸಂಘದವರಲ್ಲ, ನಾವು ಭಾರತದ ಜನರು – 'ಭಾರತ ವಿಶ್ವಗುರು, ಭಾರತ ವಿಶ್ವಗುರುವಾಗುತ್ತದೆ, ಭಾರತವನ್ನು ವಿಶ್ವಗುರು ಮಾಡಬೇಕು' ಎಂದು ಬಹಳ ದಿನಗಳಿಂದ ಹೇಳುತ್ತಿದ್ದೇವೆ. ಹಾಗಾದರೆ ನಿಂತಿರುವುದಾದರೂ ಎಲ್ಲಿ? ಅಲ್ಲಿಯೇ ನಿಂತಿದ್ದೇವೆ, ನಮ್ಮ ಸಿದ್ಧತೆ ಬಾಕಿ ಇದೆ.

ಸಂಘದ ಸಂಸ್ಥಾಪಕರಾದ ಡಾ. ಹೆಡಗೇವಾರ್ ಅವರು, ಸಮಾಜದ ಉದ್ಧಾರಕ್ಕಾಗಿ ಅವರ ಕಾಲದಲ್ಲಿ ನಡೆಯುತ್ತಿದ್ದ ಎಲ್ಲಾ ಪ್ರಯತ್ನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು, ಅನುಭವ ಪಡೆದರು, ಅವರ ನಾಯಕರೊಂದಿಗೆ ಚರ್ಚಿಸಿದರು. ಕೊನೆಗೆ ಅವರು ಒಂದು ತೀರ್ಮಾನಕ್ಕೆ ಬಂದು, ಇವೆಲ್ಲವೂ ಆಗಬೇಕು, ಆದರೆ ಇದಕ್ಕೆ ಸಮಾಜದ ಸಿದ್ಧತೆ ಅಗತ್ಯವಿದೆ. ಆ ಸಿದ್ಧತೆಯ ಕಾರಣದಿಂದಾಗಿ, ಈ ಎಲ್ಲಾ ಕಾರ್ಯಗಳನ್ನು ಮಾಡಲು



ಸಿದ್ಧರಾದ ವ್ಯಕ್ತಿಗಳು ಸಿಗುತ್ತಾರೆ.

ಎಲ್ಲರ ಕೆಲಸಗಳನ್ನು ಪೂರ್ಣಗೊಳಿಸುವ ಈ ಕೆಲಸವನ್ನು ಅವರು 100 ವರ್ಷಗಳ ಹಿಂದೆ ಪ್ರಾರಂಭಿಸಿದರು. ಇದು ಅತ್ಯಂತ ಶ್ರದ್ಧೆಯಿಂದ ಮಾಡಬೇಕಾದ ಕೆಲಸ. ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಸಮಯ ವಿನಿಯೋಗಿಸಬೇಕಾಗುತ್ತದೆ. ವರ್ಷಗಳ ಕಾಲ ಶ್ರಮಿಸಿದಾಗ ಒಬ್ಬ ವ್ಯಕ್ತಿ ಸ್ವಲ್ಪ ಮಟ್ಟಿಗೆ ಸಿದ್ಧನಾಗುತ್ತಾನೆ. ಹೀಗಾಗಿ, ಉಳಿದೆಲ್ಲಾ ಕೆಲಸಗಳಿಂದ ದೂರ ಸರಿದು ಇದರ ಮೇಲೆಯೇ ಅವರು ಕೇಂದ್ರೀಕರಿಸಿದರು. ಅದರ ಪ್ರತಿಫಲವನ್ನು ನೀವು ರಾಷ್ಟ್ರೀಯ ಸ್ವಯಂಸೇವಕ ಸಂಘದ ಇಂದಿನ ಸ್ವರೂಪದಲ್ಲಿ ನೋಡುತ್ತಿದ್ದೀರಿ.

> **ಶಿಬಿರಾರ್ಥಿಗಳು ಮಾಡಿದ ಕಾರ್ಯಕ್ರಮಗಳನ್ನು ನೀವು ನೋಡಿದ್ದೀರಿ. ನೋಡಲು ಅವು ಬಹಳ ಸರಳ ಮತ್ತು ನೇರವಾಗಿವೆ. ಇಷ್ಟು ದೊಡ್ಡ ವ್ಯಾಪಕ ಗುರಿಗೂ ಅದಕ್ಕೂ ಏನು ಸಂಬಂಧ? ಎಂದು ಹೊರಗಿನಿಂದ ನೋಡಿದರೆ ಅರ್ಥವಾಗುವುದಿಲ್ಲ, ಒಳಗೆ ಬಂದು ನೋಡಬೇಕು, ಆಗ ಅದು ಅರಿವಾಗುತ್ತದೆ. ಅದನ್ನು ಪದಗಳಲ್ಲಿ ಹೇಳಲಾಗದು, ಪುಸ್ತಕಗಳಲ್ಲಿ ಬರೆಯಲಾಗದು, ಅದನ್ನು ಅನುಭವಿಸಿಯೇ ತಿಳಿಯಬೇಕು. ಅದಕ್ಕಾಗಿಯೇ ನಾವು ಈ ವರ್ಗಕ್ಕೆ ಆಹ್ವಾನಿತರನ್ನು ಕರೆಯುತ್ತೇವೆ, ಸಂಘವನ್ನು ಒಳಗಿನಿಂದ ನೋಡಲು.**

ಸಂಘವು ಇದೆಲ್ಲವನ್ನೂ ಏಕೆ ಮಾಡಬೇಕು? ತಮಗಾಗಿ ಅಂತೂ ಮಾಡುತ್ತಿಲ್ಲ. ಇದೆಲ್ಲವೂ ರಾಷ್ಟ್ರಕ್ಕಾಗಿ. ನಮ್ಮ ಹೆಸರನ್ನೂ ಇತಿಹಾಸ ತೆಗೆದುಕೊಳ್ಳದಿದ್ದರೂ ಅದು ಅತ್ಯಂತ ಒಳ್ಳೆಯದೇ, ಸಂಪೂರ್ಣ ಶ್ರೇಯಸ್ಸು ಸಮಾಜಕ್ಕೆ ಸಲ್ಲಬೇಕು. ಏಕೆಂದರೆ ಸಮಾಜದ ಸಂಘಟಿತ ಶಕ್ತಿಯಿಂದಲೇ ರಾಷ್ಟ್ರದ ಉದ್ಧಾರವಾಗುತ್ತದೆ. ಹಿಂದೂ ಭಾರತಕ್ಕಾಗಿ ಜವಾಬ್ದಾರನಾಗಿದ್ದಾನೆ. ಸಂಘಟಿತ ಹಿಂದೂ ಸಮಾಜದ ಶಕ್ತಿಯು, ಎಲ್ಲರನ್ನೂ ಬೆಸೆಯುವ, ಎಲ್ಲರನ್ನೂ ಮುನ್ನಡೆಸುವ, ಎಲ್ಲರನ್ನೂ ಉನ್ನತೀಕರಿಸುವ ತನ್ನ ಈ ಧರ್ಮವನ್ನು ರಕ್ಷಿಸಬೇಕು. ದೇಹ, ಮನಸ್ಸು, ಬುದ್ಧಿಯನ್ನು ಜೋಡಿಸುವ ಅಂಶವು 'ಆತ್ಮ' ಎಂದು ಕರೆಯಲ್ಪಡುತ್ತದೆ. ವ್ಯಕ್ತಿ, ಸಮಾಜ ಮತ್ತು ಸೃಷ್ಟಿಯನ್ನು ಬೆಸೆಯುವ ಅಂಶವು 'ಪರಮಾತ್ಮ' ಎಂದು ಕರೆಯಲ್ಪಡುತ್ತದೆ. ಅದೇ ರೀತಿ, ಅರ್ಥ ಮತ್ತು ಕಾಮಗಳನ್ನು ಬಂಧಿಸಿ ಮೋಕ್ಷದ ಕಡೆಗೆ ಕೊಂಡೊಯ್ಯುವ ಅಂಶವು 'ಧರ್ಮ' ಎಂದು ಕರೆಯಲ್ಪಡುತ್ತದೆ. ನಮ್ಮ ದೇಶ ಧರ್ಮಪ್ರಾಣ ದೇಶ. ನಮ್ಮ ಧರ್ಮವನ್ನು ರಕ್ಷಿಸುತ್ತಾ, ನಮ್ಮ ರಾಷ್ಟ್ರವನ್ನು ಪರಮ ವೈಭವ ಸಂಪನ್ನವನ್ನಾಗಿ ಮಾಡಬೇಕಾಗಿದೆ.

ನಮ್ಮ ಒಬ್ಬ ಕಾರ್ಯಕರ್ತರು ವಿದೇಶದಲ್ಲಿ ವಾಸಿಸುವ ಹಿಂದೂಗಳ ಹೊಸ ಪೀಳಿಗೆಯ ಮುಂದೆ ಈ ಮಾತನ್ನು ವ್ಯಕ್ತಪಡಿಸಿದ್ದರು, ನೀವು ಹಿಂದೂ ಸ್ವಯಂಸೇವಕ ಸಂಘದ ಕೆಲಸವನ್ನು ಎಷ್ಟರಮಟ್ಟಿಗೆ ಮಾಡಬೇಕೆಂದರೆ, ಅದನ್ನು ನೋಡಿ ಅಲ್ಲಿನ ಜನರು ತಮಗೂ ಒಂದು 'ರಾಷ್ಟ್ರೀಯ ಸ್ವಯಂಸೇವಕ ಸಂಘ' ಇರಬೇಕು ಎಂದು ಬಯಸುವಂತಾಗಬೇಕು. ಇಡೀ ಜಗತ್ತು ನೋಡಿ, 'ಯಾವ ಬುನಾದಿಯ ಮೇಲೆ ಇವರು ತಮ್ಮ ದೇಶವನ್ನು ಕಟ್ಟಿದ್ದಾರೋ, ಅದೇ ಬುನಾದಿಯ ಮೇಲೆ ನಾವು ನಮ್ಮ ದೇಶವನ್ನು ನಮ್ಮ ಪ್ರಕೃತಿಗೆ ತಕ್ಕಂತೆ ಕಟ್ಟುತ್ತೇವೆ' ಎಂದು ಹೇಳುವ ರೀತಿಯಲ್ಲಿ ಭಾರತ ತನ್ನ ಮಾರ್ಗದೊಂದಿಗೆ ನಿಲ್ಲಬೇಕು.

ಆಗ ಸೃಷ್ಟಿಯಾಗುವ ಎಲ್ಲ ರಾಷ್ಟ್ರಗಳ ನಿರ್ಮಾಣದ ತಳಪಾಯವೂ 'ವಿಶ್ವ ಬಂಧುತ್ವ'ದ್ದಾಗಿರುತ್ತದೆ, 'ವಸುಧೈವ ಕುಟುಂಬಕಂ' ಆಗಿರುತ್ತದೆ. ಎಲ್ಲರಲ್ಲೂ ಒಂದೇ ಅಂಶವನ್ನು ಕಾಣುವ ದೃಷ್ಟಿಯಿರುತ್ತದೆ. ಅದರ ಆಧಾರದ ಮೇಲೆ ಪ್ರಪಂಚದ ದೇಶಗಳು ನಿರ್ಮಾಣವಾದಾಗ, ಜಗತ್ತಿನ ಎಲ್ಲಾ ರಾಷ್ಟ್ರಗಳು ತಮ್ಮ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಲೇ, ಇಡೀ ವಿಶ್ವದ ನಿರ್ವಹಣೆಯಲ್ಲಿ ತಮ್ಮ ಕೊಡುಗೆಯನ್ನು ಪರಸ್ಪರ ಮೈತ್ರಿ ಭಾವದಿಂದ ಒಟ್ಟಾಗಿ ನೀಡುತ್ತಿರುತ್ತವೆ. ಅಂತಹ ಒಂದು ಕನಸನ್ನು ಕಂಡು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲಸ ಶುರುವಾಗಿದೆ. ಈಗ ಸಂಘ ಎಲ್ಲೆಡೆ ಪರಿಚಿತವಾಗಿದೆ. ಸಮಾಜದ ಪ್ರೀತಿಯೂ ಸಿಗುತ್ತಿದೆ, ನಂಬಿಕೆಯೂ ಇದೆ.

ಇಂತಹ ಗುಣಮಟ್ಟವನ್ನು ಸೃಷ್ಟಿಸುವ ತರಬೇತಿ ಕಾರ್ಯಕ್ರಮ ಇಲ್ಲಿ ನಡೆಯುತ್ತದೆ. ಶಿಬಿರಾರ್ಥಿಗಳು ಮಾಡಿದ ಕಾರ್ಯಕ್ರಮಗಳನ್ನು ನೀವು ನೋಡಿದ್ದೀರಿ. ನೋಡಲು ಅವು ಬಹಳ ಸರಳ ಮತ್ತು ನೇರವಾಗಿವೆ. ಇಷ್ಟು ದೊಡ್ಡ ವ್ಯಾಪಕ ಗುರಿಗೂ ಅದಕ್ಕೂ ಏನು ಸಂಬಂಧ? ಎಂದು ಹೊರಗಿನಿಂದ ನೋಡಿದರೆ ಅರ್ಥವಾಗುವುದಿಲ್ಲ, ಒಳಗೆ ಬಂದು ನೋಡಬೇಕು, ಆಗ ಅದು ಅರಿವಾಗುತ್ತದೆ. ಅದನ್ನು ಪದಗಳಲ್ಲಿ ಹೇಳಲಾಗದು, ಪುಸ್ತಕಗಳಲ್ಲಿ ಬರೆಯಲಾಗದು, ಅದನ್ನು ಅನುಭವಿಸಿಯೇ ತಿಳಿಯಬೇಕು. ಅದಕ್ಕಾಗಿಯೇ ನಾವು ಈ ವರ್ಗಕ್ಕೆ ಆಹ್ವಾನಿತರನ್ನು ಕರೆಯುತ್ತೇವೆ, ಸಂಘವನ್ನು ಒಳಗಿನಿಂದ ನೋಡಲು.

ಸಂಘದ ಈ ಪ್ರಯತ್ನ ನಡೆಯುತ್ತಿದೆ. ಆದರೆ ವಾಸ್ತವವಾಗಿ ಇದು ಕೇವಲ ಸಂಘದ ಪ್ರಯತ್ನವಲ್ಲ. ನಾವೆಲ್ಲರೂ ಈ ಪ್ರಯತ್ನವನ್ನು ಮಾಡಬೇಕು, ಏಕೆಂದರೆ ಭಾರತದ ಸಮಯ ಬಂದಿದೆ. ಭಾರತವೀಗ ಉನ್ನತಿಯತ್ತ ಸಾಗಬೇಕಿದೆ. ಸಾಗಬೇಕೆಂಬ ಇಚ್ಛೆಯೂ ಎಲ್ಲರಿಗೂ ಇದೆ. ಆದರೆ ಅಡೆತಡೆಗಳೂ ಇವೆ. ನಮ್ಮಲ್ಲಿ ಒಡಕು ಮೂಡಿಸುವವರೂ ಇದ್ದಾರೆ. ಭಾರತ ದೊಡ್ಡದಾಗುವುದನ್ನು ಸಹಿಸದ ಶಕ್ತಿಗಳು, ಸಣ್ಣ-ಪುಟ್ಟ ನೆಪಗಳನ್ನು ಹುಡುಕಿಕೊಂಡು ಸಮಾಜ ಜೀವನದಲ್ಲಿ ಅಶಾಂತಿ ಸೃಷ್ಟಿಸಲು ತುದಿಗಾಲಲ್ಲಿ ನಿಂತಿವೆ. ಅವರ ಷಡ್ಯಂತ್ರಗಳೂ ನಡೆಯುತ್ತಿವೆ. ಈ ಸಂಸ್ಕಾರಗಳು ಪ್ರಬಲವಾದರೆ ಜಗತ್ತಿನಲ್ಲಿ ತಮ್ಮ ಆಟ ನಡೆಯುವುದಿಲ್ಲ ಎಂದು ಯೋಚಿಸಿ, ಹಲವು ಶಕ್ತಿಗಳು ನಮ್ಮ ಸಂಸ್ಕಾರಗಳ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರಲು ಸಿದ್ಧವಾಗಿವೆ. ನಾನು ಹೆಚ್ಚು ವಿವರಣೆಗೆ ಹೋಗುವುದಿಲ್ಲ, ಪರಿಸ್ಥಿತಿ ನಿಮ್ಮ ಮುಂದಿದೆ.

ನಿಮ್ಮಲ್ಲಿ ನನ್ನ ವಿನಂತಿ ಇಷ್ಟೇ, ಕೇವಲ ಪ್ರೇಕ್ಷಕರಾಗಿ ಉಳಿಯಬೇಡಿ. ಸಂಘಕ್ಕೆ ಬನ್ನಿ, ಸಂಘವನ್ನು ನೋಡಿ, ಅರ್ಥಮಾಡಿಕೊಳ್ಳಿ. ನಂತರ ಪ್ರತ್ಯಕ್ಷವಾಗಿ ಸಂಘದ ಕಾರ್ಯದಲ್ಲಿ ಪಾಲ್ಗೊಳ್ಳಿ, ಸಮವಸ್ತ್ರ ಧರಿಸಿ ಕಾರ್ಯಕ್ರಮಗಳಿಗೆ, ಶಾಖೆಗೆ ಬನ್ನಿ. ಇದು ಕಷ್ಟವೆನಿಸಿದರೆ, ಸಂಘದ ಸ್ವಯಂಸೇವಕರು ಹಲವಾರು ಕೆಲಸಗಳನ್ನು ಮಾಡುತ್ತಿದ್ದಾರೆ. ವಿವಿಧ ಸಂಘಟನೆಗಳಿವೆ, ಚಟುವಟಿಕೆಗಳಿವೆ, ಸೇವಾ ಕಾರ್ಯಗಳು ನಡೆಯುತ್ತಿವೆ. ಅವುಗಳಲ್ಲಿ ನೀವು ಹಿತೈಷಿಯಾಗಿ ಸಹಕರಿಸಬಹುದು, ಅಲ್ಲಿ ಕಾರ್ಯಕರ್ತರಾಗಬಹುದು, ಅಥವಾ ಆಗಾಗ್ಗೆ ಈ ಕೆಲಸಗಳಲ್ಲಿ ಸಹಾಯ ಮಾಡಬಹುದು. ಅಥವಾ, ಈ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ, ನಿಸ್ವಾರ್ಥ ಬುದ್ಧಿಯಿಂದ ನೀವು ನಿಮ್ಮಿಚ್ಛೆಯಂತೆ ದೇಶಕ್ಕಾಗಿ ಒಳ್ಳೆಯ ಕೆಲಸ ಮಾಡಿದರೆ ಸಾಕು. ನಾವು ಸಂಪರ್ಕ ಇಟ್ಟುಕೊಳ್ಳುತ್ತೇವೆ. ನೀವು ಸಂಘಕ್ಕೆ ಕಾಲಿಡದಿದ್ದರೂ, ದೇಶಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದರೆ ನೀವು ಸಂಘದ ಸ್ವಯಂಸೇವಕರೇ ಎಂದು ನಾವು ಭಾವಿಸುತ್ತೇವೆ.

ಆದರೆ ಈಗ ಸಮಯ ಬಂದಿದೆ. ಇಡೀ ಸಮಾಜವು 'ಸ್ವ'ದ ಬಗೆಗಿನ ಈ ಸ್ಪಷ್ಟ ಕಲ್ಪನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ತನ್ನ ರಾಷ್ಟ್ರದ ಒಳಿತಿಗಾಗಿ, ಜಗತ್ತಿನ ಹಿತಕ್ಕಾಗಿ ಸಕ್ರಿಯವಾಗಲೇಬೇಕಿದೆ. ಹೀಗಾದರೆ, ಮುಂದಿನ ಎರಡು-ಮೂರು ದಶಕಗಳಲ್ಲಿ ಆ ಭವ್ಯ ಭಾರತವನ್ನು ನಾವು ನೋಡಲಿದ್ದೇವೆ.

ಸಮಾಜಮುಖಿ ಆರ್‌ಎಸ್‌ಎಸ್

▸ ಕುಮಾರ ಮಂಗಲಂ ಬಿರ್ಲಾ, ಬಿರ್ಲಾ ಸಮೂಹದ ಅಧ್ಯಕ್ಷರು

ನನಗೆ ಹಲವು ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರಾದ ಮೋಹನ್ ಭಾಗವತ್ ಜೀ ಅವರನ್ನು ಭೇಟಿಯಾಗುವ ಮತ್ತು ಅವರೊಂದಿಗೆ ಸಂವಾದ ನಡೆಸುವ ಸೌಭಾಗ್ಯ ದೊರೆತಿದೆ. ಪ್ರತಿ ಭೇಟಿಯಲ್ಲೂ ಅವರ ಸರಳತೆ, ವಿನಮ್ರತೆ ಮತ್ತು ರಾಷ್ಟ್ರ ನಿರ್ಮಾಣದ ಬಗೆಗಿನ ಅವರ ಅಚಲವಾದ ಸಮರ್ಪಣಾ ಭಾವ ನನ್ನನ್ನು ಯಾವಾಗಲೂ ಪ್ರೇರೇಪಿಸುತ್ತದೆ. ಸ್ವಾತಂತ್ರ್ಯಪೂರ್ವ ಭಾರತದಿಂದ ಹಿಡಿದು ದೇಶದಲ್ಲಿ ಸಂಭವಿಸಿದ ಭೂಕಂಪಗಳು, ಸುನಾಮಿ, ಪ್ರವಾಹಗಳು, ಯುದ್ಧಗಳು, ಸಾಂಕ್ರಾಮಿಕ ರೋಗಗಳು ಮತ್ತು ಇನ್ನೆಷ್ಟೋ ಸವಾಲುಗಳ ಸಮಯದಲ್ಲಿ ಆರ್‌ಎಸ್‌ಎಸ್ ಸದಾ ರಾಷ್ಟ್ರ ಮತ್ತು ಸಮಾಜದ ಜೊತೆಗೆ ನಿಂತಿದೆ.

ಕಳೆದ ವರ್ಷ 2025ರಲ್ಲಿ ಸಂಘವು 100 ವರ್ಷಗಳನ್ನು ಪೂರೈಸಿದೆ. 100 ವರ್ಷಗಳೆಂದರೆ ಸಣ್ಣ ಮಾತಲ್ಲ. 1925ರಲ್ಲಿ ಭಾರತವು ಇಂದಿನ ನಮ್ಮ ಜನಸಂಖ್ಯೆಯ ಕೇವಲ ಐದನೇ ಒಂದು ಭಾಗವನ್ನು ಹೊಂದಿತ್ತು. ಶತಮಾನಗಳ ಗುಲಾಮಗಿರಿ ನಮ್ಮ ಆತ್ಮವಿಶ್ವಾಸವನ್ನು ಬಹುಶಃ ದುರ್ಬಲಗೊಳಿಸಿತ್ತು. ಆದರೆ ಇಂದು ಭಾರತವು ವಿಶ್ವದ 6ನೇ ಅತಿದೊಡ್ಡ ಆರ್ಥಿಕತೆಯಾಗಿದೆ.

ಪ್ರಧಾನಿ ಮೋದಿ ಜೀ ಅವರು ಆಗಾಗ್ಗೆ ಮುಂಬರುವ 'ಅಮೃತಕಾಲ'ದ ಬಗ್ಗೆ ಮಾತನಾಡುತ್ತಾರೆ. ಭಾರತವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಯುಗವಿದು. ಜನಸಂಖ್ಯಾ ಲಾಭಾಂಶ, ಪೂರಕ ವಾತಾವರಣ, ಮೂಲಸೌಕರ್ಯ, ಡಿಜಿಟಲ್ ವ್ಯವಸ್ಥೆಗಳು ಮತ್ತು ಹಣಕಾಸು ಸೇವೆಗಳ ಈ ವಿಶಿಷ್ಟ ಸಂಗಮವು, ರಾಷ್ಟ್ರವೊಂದರ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಬರುವ ಅವಕಾಶವನ್ನು ನಮಗೆ ಒದಗಿಸುತ್ತದೆ.

ಇದು ಭಾರತದ ಸಮಯ. ಜಗತ್ತು ಮಹಾಸತ್ತೆಗಳ ಪೈಪೋಟಿಯ ಮಹತ್ವಾಕಾಂಕ್ಷೆಗಳ ನಡುವೆ ಸಿಲುಕಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ, ಕಚ್ಚಾ ತೈಲದ ಬೆಲೆಯು ಯುದ್ಧಗಳ ಕಾರಣದಿಂದಾಗಿ ಒಮ್ಮೆ ಗಗನಕ್ಕೇರಿತು, ಮತ್ತೊಮ್ಮೆ ದಿಢೀರನೆ ಕುಸಿದು ಮತ್ತೆ ಹೊಸ ಎತ್ತರವನ್ನು ತಲುಪಿತು. ಪೂರೈಕೆ ಸರಪಳಿಗಳು ಈ ದಶಕದಲ್ಲಿ ಮೂರನೇ ಬಾರಿಗೆ ಒತ್ತಡಕ್ಕೆ ಸಿಲುಕಿವೆ. ಮತ್ತು ಅಂತಿಮವಾಗಿ ಎಐ (ಕೃತಕ ಬುದ್ಧಿಮತ್ತೆ) ನಮ್ಮ ಬಾಗಿಲಿಗೆ ಬಂದು ನಿಂತಿದೆ.

ಹಲವರಿಗೆ ಬಹುಶಃ ತಿಳಿದಿರಲಿಕ್ಕಿಲ್ಲ, ಆದಿತ್ಯ ಬಿರ್ಲಾ ಗ್ರೂಪ್‌ನ ಪ್ರಮುಖ ಕಂಪನಿಯಾದ 'ಗ್ರಾಸಿಮ್' ನಮ್ಮ ಸ್ವಾತಂತ್ರ್ಯದ ಕೇವಲ 10 ದಿನಗಳ ನಂತರ ಸ್ಥಾಪನೆಯಾಯಿತು. ಆಗ ಹತ್ತಿ ಬೆಳೆಯುತ್ತಿದ್ದ ಹೊಲಗಳು ಪಾಕ್‌ನಲ್ಲಿ ಉಳಿದವು. ಆದರೆ ನನ್ನ ಮುತ್ತಜ್ಜ ಜಿ.ಡಿ.ಬಿರ್ಲಾ ಅವರು ಕೃತಕ ನಾರುಗಳ ಉತ್ಪಾದನೆ ಆರಂಭಿಸಿದರು.

ಇದು ಹೊಸ ದೇಶದ ಹೊಸ ಚಿಂತನೆ. ಅಂದು ತೆಗೆದುಕೊಂಡ ಆ ನಿರ್ಧಾರದಿಂದಾಗಿ, 80 ವರ್ಷಗಳ ನಂತರ ಇಂದು ಗ್ರಾಸಿಮ್ ಕಟ್ಟಡ ಸಾಮಗ್ರಿಗಳು, ರಾಸಾಯನಿಕಗಳು ಮತ್ತು ಫೈಬರ್‌ಗಳಲ್ಲಿ ಜಾಗತಿಕ ನಾಯಕನಾಗಿದೆ, ಲಕ್ಷಾಂತರ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ ಮತ್ತು ಭಾರತದ ಕೈಗಾರಿಕಾ ಶಕ್ತಿಗೆ ಕೊಡುಗೆ ನೀಡುತ್ತಿದೆ.

ಆದಿತ್ಯ ಬಿರ್ಲಾ ಗ್ರೂಪ್ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅನೇಕ ಚಟುವಟಿಕೆಗಳಲ್ಲಿ ಬಹಳಷ್ಟು ಸಾಮ್ಯತೆಗಳಿವೆ. ನಾವೂ ಸಹ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ, ಆರೋಗ್ಯ ಸೇವೆ, ಸಾಮಾಜಿಕ ಉನ್ನತಿ, ಮಹಿಳಾ ಸಬಲೀಕರಣ ಮತ್ತು ಕೌಶಲ್ಯ ಅಭಿವೃದ್ಧಿಗೆ ಅತ್ಯಂತ ಮಹತ್ವ ನೀಡುತ್ತೇವೆ.

ಆರ್‌ಎಸ್‌ಎಸ್‌ನಂತಹ ಶಾಶ್ವತ ಸಂಸ್ಥೆಗಳ ನಿರ್ಮಾಣ ಮತ್ತು ರಾಷ್ಟ್ರ ನಿರ್ಮಾಣವು ನಾವು ಊಹಿಸುವುದಕ್ಕಿಂತ ಹೆಚ್ಚು ನಿಕಟವಾಗಿ ಹೆಣೆದುಕೊಂಡಿವೆ ಎಂಬ ಸರಳ ನಂಬಿಕೆಯನ್ನು ನಮ್ಮ ಅನುಭವಗಳು ಬಲಪಡಿಸಿವೆ. ಬಲವಾದ ಉದ್ಯಮಗಳ ಅಡಿಪಾಯದ ಮೇಲೆ ಭವಿಷ್ಯವು ರೂಪುಗೊಳ್ಳುತ್ತದೆ.

ಸಿಮೆಂಟ್‌ನಿಂದಲೇ ಪ್ರಾರಂಭಿಸುತ್ತೇನೆ. ನೀರಿನ ನಂತರ ಜಗತ್ತಿನಲ್ಲಿ ಅತಿ ಹೆಚ್ಚು ಬಳಕೆಯಾಗುವ ವಸ್ತು ಸಿಮೆಂಟ್ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗಬಹುದು. ಈ ಅಂಕಿ ಅಂಶವೇ ಸಿಮೆಂಟ್ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಹೇಳುತ್ತದೆ.

ವಾರ್ಷಿಕವಾಗಿ ಸುಮಾರು 500 ಮಿಲಿಯನ್ ಟನ್‌ಗಳ ಉತ್ಪಾದನೆಯೊಂದಿಗೆ ಭಾರತವು ಇಂದು ವಿಶ್ವದ ಎರಡನೇ ಅತಿದೊಡ್ಡ ಸಿಮೆಂಟ್ ಉತ್ಪಾದಕ ರಾಷ್ಟ್ರವಾಗಿದೆ. ಕಳೆದ ದಶಕವು ವಿಶೇಷವಾಗಿ ಪರಿವರ್ತನಾಕಾರಿಯಾಗಿದೆ. ಭಾರತದ ಹೆದ್ದಾರಿ ಜಾಲವು ಸುಮಾರು ಶೇ.60ರಷ್ಟು ವಿಸ್ತರಿಸಿದೆ, ನಮ್ಮ ಮೆಟ್ರೋ ರೈಲು ಜಾಲವು ಶೇ.350ರಷ್ಟು ಹೆಚ್ಚಾಗಿದೆ.



> **ಇಂದಿನ ನನ್ನ ಭೇಟಿಯ ನಂತರ, ರಾಷ್ಟ್ರ ನಿರ್ಮಾಣ ಯೋಜನೆಯಲ್ಲಿ ಆರ್‌ಎಸ್‌ಎಸ್‌ನ ಪ್ರಭಾವದ ಬಗ್ಗೆ ನನಗೆ ಇನ್ನಷ್ಟು ವಿಶ್ವಾಸ ಮೂಡಿದೆ. ಇಂದು ದಿನವಿಡೀ ಇಲ್ಲಿದ್ದು, ನೀವೆಲ್ಲರೂ ಆರ್‌ಎಸ್‌ಎಸ್‌ನಲ್ಲಿ ಯಾವೆಲ್ಲಾ ವಿಭಿನ್ನ ಚಟುವಟಿಕೆಗಳನ್ನು ಮಾಡುತ್ತಿದ್ದೀರಿ ಎಂಬುದನ್ನು ನೋಡುವ ಅವಕಾಶ ನನಗೆ ಸಿಕ್ಕಿತು.**

ದೇಶವೊಂದು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ನಿರ್ಮಾಣ ಕಾರ್ಯ ಕೈಗೊಂಡಾಗ, ಸಿಮೆಂಟ್ ಕೇವಲ ಒಂದು ವಸ್ತುವಾಗಿ ಉಳಿಯುವುದಿಲ್ಲ, ಅದೊಂದು ರಾಷ್ಟ್ರೀಯ ಅಭಿವೃದ್ಧಿಯ ಆಸ್ತಿಯೆಂದು ಪರಿಗಣಿಸಲ್ಪಡುತ್ತದೆ. ನಮ್ಮ ಸ್ವಂತ ಸಿಮೆಂಟ್ ಕಂಪನಿ ಅಲ್ಟ್ರಾಟೆಕ್ ಸಿಮೆಂಟ್ ಮೂಲಕ ಈ ಪರಿವರ್ತನೆಯನ್ನು ನೋಡುವ ಸೌಭಾಗ್ಯ ನನ್ನದಾಗಿದೆ.

ಕಳೆದ ದಶಕದಲ್ಲಿ, ಅಲ್ಟ್ರಾಟೆಕ್ ಸಿಮೆಂಟ್‌ನ ಸಾಮರ್ಥ್ಯವು 60 ಮಿಲಿಯನ್ ಟನ್‌ಗಳಿಂದ ಇಂದು 200 ಮಿಲಿಯನ್ ಟನ್‌ಗಳಿಗೆ ಏರಿದೆ. ಮತ್ತು ಇಂದು ಅಲ್ಟ್ರಾಟೆಕ್ ಸಿಮೆಂಟ್ ವಿಶ್ವದ ಅತಿದೊಡ್ಡ ಸಿಮೆಂಟ್ ಕಂಪನಿಯಾಗಿದೆ ಎಂಬುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯ.

ಈ ಯುಗ ಭಾರತದ ಯುಗ. ಯುವ ಭಾರತೀಯನಾಗಿ ಭಾರತದಲ್ಲಿರಲು ಇದಕ್ಕಿಂತ ಉತ್ತಮ ಸಮಯ ಮತ್ತೊಂದಿಲ್ಲ. ನೀವು ಯುವಕರಾಗಿದ್ದು, ಭಾರತದಲ್ಲಿದ್ದುಕೊಂಡು, ನಿಮ್ಮದೇ ಆದ ದೊಡ್ಡ ಉದ್ಯಮವನ್ನು ನಿರ್ಮಿಸಲು ಈ ಹಿಂದಿಗಿಂತಲೂ ಇದು ಅತ್ಯುತ್ತಮ ಸಮಯವಾಗಿದೆ.

ಜಗತ್ತು 100 ವರ್ಷಗಳಲ್ಲಿ ಎಷ್ಟು ಪ್ರಗತಿ ಸಾಧಿಸಿದೆಯೋ, ಅಷ್ಟೇ ಪ್ರಗತಿಯನ್ನು ಮುಂದಿನ 10 ವರ್ಷಗಳಲ್ಲಿ ಜಗತ್ತು ಕಾಣಲಿದೆ. ನಮ್ಮ ಮುಂದಿರುವ ಪ್ರಶ್ನೆಯೆಂದರೆ ಭವಿಷ್ಯವು ಬರುತ್ತದೆಯೇ ಎಂಬುದಲ್ಲ, ಅದು ಈಗಾಗಲೇ ಬಂದಾಗಿದೆ.

ಸಂಸ್ಕೃತದ ಒಂದು ವಾಕ್ಯವಿದೆ, ಅದು ನನಗೆ ಜೀವನ ಮಂತ್ರದಂತಿದೆ. ನಾನು ಬಹಳ ನಂಬುವ ಆ ಮಾತೇ – 'ಚರೈವೇತಿ ಚರೈವೇತಿ', ಅಂದರೆ ನಡೆಯುತ್ತಲೇ ಇರಿ, ಮುನ್ನಡೆಯುತ್ತಲೇ ಇರಿ. ಆದ್ದರಿಂದ ಈ ಅಮೃತಕಾಲವು ರಾಷ್ಟ್ರ ನಿರ್ಮಾಣದಿಂದ ವ್ಯಾಖ್ಯಾನಿಸಲ್ಪಡಲಿ.

ಕಿರುಸುದ್ದಿ

ರಜತ ಮಹೋತ್ಸವಕ್ಕೆ ಚಾಲನೆ

◆ **ಗದಗ:** ನಗರದ ಕಾಳಿದಾಸ ಶಿಕ್ಷಣ ಸಮಿತಿಯ ರಜತ ಮಹೋತ್ಸವದ ಅಂಗವಾಗಿ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ವರ್ಷವಿಡೀ ಜರುಗುವ ಕಾರ್ಯಕ್ರಮಗಳಿಗೆ ಕೊಪ್ಪಳದ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಜೂ.7 ರಂದು ಸಂಜೆ 5.30ಕ್ಕೆ ಕಳಸಾಪುರ ರಸ್ತೆಯಲ್ಲಿರುವ ಬಯಲು ಆಂಜನೇಯ ದೇವಸ್ಥಾನದ ಆವರಣದಲ್ಲಿ ಚಾಲನೆ ನೀಡುವರು. ಇದಕ್ಕೂ ಮುನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರಾಯೋಜಿತ ಕಾರ್ಯಕ್ರಮಗಳು ಹಾಗೂ ಸಸಿ ನೆಡುವ ಕಾರ್ಯಕ್ರಮ ಜರುಗುವುದು ಎಂದು ಕಾಳಿದಾಸ ಶಿಕ್ಷಣ ಸಮಿತಿಯ ರಜತ ಮಹೋತ್ಸವ ಸಮಿತಿಯು ಪ್ರಕಟನೆಯಲ್ಲಿ ತಿಳಿಸಿದೆ.

ಲಿಂಕ್ ಮಾಡಿ ಮಾರಾಟ ಸಲ್ಲ

◆ **ನರಗುಂದ:** ಕೃಷಿ ಪರಿಕರ ಮಾರಾಟಗಾರರು ರೈತರಿಗೆ ಅಗತ್ಯವಿರುವ ರಸಗೊಬ್ಬರಗಳನ್ನು ಮಾತ್ರ ವಿತರಿಸಬೇಕು. ಯಾವುದೇ ರೀತಿಯ ಕೃಷಿ ಪರಿಕರಗಳನ್ನು ಲಿಂಕ್ ಮಾಡಿ ಮಾರಾಟ ಮಾಡುವಂತಿಲ್ಲ. ಲಿಂಕ್ ಮಾಡಿ ರಸಗೊಬ್ಬರ ಮಾರಾಟ ಮಾಡುತ್ತಿದ್ದಲ್ಲಿ ಅಂಥವರ ರಸಗೊಬ್ಬರ ಪರವಾನಗಿಯನ್ನು ತಾತ್ಕಾಲಿಕವಾಗಿ ರದ್ದು ಪಡಿಸಲಾಗುವುದು ಮತ್ತು ಈ ಸಂಬಂಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಎಫ್. ಬೆಳವಟಗಿ ತಿಳಿಸಿದ್ದಾರೆ.

ಕ್ರೀಡಾಪಟುಗಳಿಗೆ ಅರ್ಜಿ ಆಹ್ವಾನ

◆ **ಗದಗ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕೇಂದ್ರ ಹಾಗೂ ಗದಗ ಜಿಲ್ಲೆಯಲ್ಲಿ ವಿವಿಧ ಕ್ರೀಡೆಗಳಲ್ಲಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಕ್ರೀಡಾಪಟುಗಳ ಅಧಿಕೃತ ಮಾಹಿತಿ ಸಂಗ್ರಹಿಸಬೇಕಾಗಿರುವುದು ಅವಶ್ಯಕವಾಗಿರುತ್ತದೆ. ಆದರಂತೆ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಕ್ರೀಡಾಪಟುಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಹಾಯಕ ನಿರ್ದೇಶಕರ ಕಚೇರಿ, ಗದಗ ಇಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿ ಪಡೆದು ಜೂ.15 ರೊಳಗಾಗಿ ಅರ್ಜಿ ನಮೂನೆಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಲಗತ್ತಿಸಿ ಹಾಗೂ ಪ್ರಶಸ್ತಿ ಪತ್ರಗಳ ಜೊತೆ ಮಾಹಿತಿ ಭರ್ತಿ ಮಾಡಿ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಶರಣು ಗೋಗೇರಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆ **ಗದಗ:** ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ರೋಣ ಇಲ್ಲಿ ಕನ್ನಡ, ಇಂಗ್ಲೀಷ ಮತ್ತು ಸಮಾಜ ವಿಜ್ಞಾನ ವಿಷಯಗಳನ್ನು ಬೋಧಿಸಲು ಅರ್ಹ ಅತಿಥಿ ಉಪನ್ಯಾಸಕರ ಅವಶ್ಯವಿದೆ. ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಜೂ.9 ರೊಳಗಾಗಿ ತಮ್ಮ ಶೈಕ್ಷಣಿಕ ದಾಖಲಾತಿಗಳನ್ನು ಪ್ರಾಂಶುಪಾಲರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ರೋಣ ಇಲ್ಲಿ ಖುದ್ದು ಭೇಟಿ ನೀಡಿ ಅರ್ಜಿ ಸಲ್ಲಿಸಲು ಸೂಚಿಸಿದೆ. ವಸತಿ ಶಾಲೆಯಲ್ಲಿ ವಾಸವಿರಲೂ ಇಚ್ಛಿಸುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಹವಾಲು ಸ್ವೀಕಾರ

◆ **ಗದಗ:** ಕರ್ನಾಟಕ ಲೋಕಾಯುಕ್ತ ಕಚೇರಿಯ ಪೊಲೀಸ್ ಅಧಿಕಾರಿಗಳು ಜೂನ್ 10ರ ಬೆಳಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ಗದಗ ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆ ಮತ್ತು ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಏರ್ಪಡಿಸಿದ್ದಾರೆ ಎಂದು ಕರ್ನಾಟಕ ಲೋಕಾಯುಕ್ತ ಗದಗ ಕಚೇರಿಯ ಪೊಲೀಸ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	6751-6116
ಅಜವಾನ	10600-10401
ಅಲಸಂದಿ	5176-5176
ಕಡಲೆ	3314-6139
ಹೆಸರು	3200-8814
ಹುರಳಿ	4244-4244
ಜೋಳ	1979-4639
ಗೋವಿನಜೋಳ	4639-3864
ಸಾಸವಿ	2140-2140
ಕುಸಬಿ	4419-4669
ಸೂರ್ಯಕಾಂತಿ	7125-7127
ತೊಗರಿ	4666-4505
ಗೋಧಿ	3821-2357
ಬೆಲ್ಲ	3900-3900



ನರಗುಂದ: ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾಕೋತ್ತರ ಅಧ್ಯಯನ ಕೇಂದ್ರದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್ ಕ್ರಾಸ್ ಘಟಕಗಳ ಅಡಿಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಡಾ.ಜಗದೀಶ ತಳವಾರ, ಡಾ.ರಾಮು ಎಂ.ಎಸ್. ಮತ್ತು ಪ್ರೊ. ಫಕೀರಬಿ ನದಾಫ ಅವರುಗಳ ಮಾರ್ಗದರ್ಶನದಲ್ಲಿ ಸಸಿಗಳನ್ನು ಕಾಲೇಜಿನ ಆವರಣದಲ್ಲಿ ನೆಡಲಾಯಿತು. ಹಿರಿಯ ಪ್ರಾಧ್ಯಾಪಕ ಡಾ.ಸಿ.ಬಿ. ನಂದನ್, ಐಕ್ಯೂಎಸಿ ಸಂಚಾಲಕ ಯಶೋಧ ಅಂಗಡಿ ಇತರರಿದ್ದರು.

ಪ್ರತಿಭಾ ಪುರಸ್ಕಾರ, ವಿವಿಧ ಸಾಧಕರಿಗೆ ಸನ್ಮಾನ

◆ **ಗದಗ:** ಇಲ್ಲಿನ ಸಂಭಾಪುರ ರೋಡ್ ಹತ್ತಿರದ ಶಂಕರಮಠದ ಸಾಂಸ್ಕೃತಿಕ ಭವನದಲ್ಲಿ ಜೂ.7ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಬ್ರಾಹ್ಮಣ ಸಂಘದಿಂದ ಪ್ರಸಕ್ತ ಸಾಲಿನ ಪ್ರತಿಭಾ ಪುರಸ್ಕಾರ ಹಾಗೂ ಸರ್ಕಾರಿ ಸೇವೆಯಿಂದ ಸೇವಾ ನಿವೃತ್ತರಿಗೆ ಸನ್ಮಾನ ಹಾಗೂ ಸಮಾಜದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಬ್ರಾಹ್ಮಣ ಸಂಘದ ಜಿಲ್ಲಾಧ್ಯಕ್ಷ ವೆಂಟಕೇಶ ಕುಲಕರ್ಣಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವೈದಿಕ ವಿದ್ವಾಂಸ ರತ್ನಾಕರಭಟ್ ಜೋಶಿ ಸಾನ್ನಿಧ್ಯ ವಹಿಸುವರು. ಶಾಸಕ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಬ್ರಾಹ್ಮಣ ಸಂಘದ ಜಿಲ್ಲಾಧ್ಯಕ್ಷ ವೆಂಟಕೇಶ ಕುಲಕರ್ಣಿ ಅಧ್ಯಕ್ಷತೆ ವಹಿಸುವರು. ಅಖಿಲ ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಎಸ್.ರಘುನಾಥ, ಆಸುಗೋಡು ಜಯಸಿಂಹ, ಹಾಸ್ಯ ಕಲಾವಿದ ನರಸಿಂಹ ಜೋಶಿ, ಗುರುರಾಜ ಬಳಗಾನೂರ, ಡಾ.ಕುಶಾಲ ಗೋಡಖಿಂಡಿ, ಶ್ರೀನಿವಾಸ ಹುಯಿಲಗೋಳ, ಡಾ.ಜಿ.ಆರ್. ನೆರ್ಲೆಕರ, ದತ್ತಾತ್ರಯ ಜೋಶಿ, ಎನ್.ಆರ್. ಕುಲಕರ್ಣಿ, ಕೃಷ್ಣ ಕುಲಕರ್ಣಿ ಭಾಗವಹಿಸುವರು.

ಈ ವೇಳೆ ಬ್ರಾಹ್ಮಣ ಸಮಾಜದ ಮುಖಂಡ ಗುರಣ್ಣ ಬಳಗಾನೂರ, ರತ್ನಕರಭಟ್ ಜೋಶಿ, ಶ್ರೀನಿವಾಸ ಹುಯಿಲಗೋಳ, ರಾಮಚಂದ್ರ ಮೊನೆ, ರವೀಂದ್ರ ಜೋಶಿ, ಶ್ರೀಪಾದ, ಕಿರಣ ಪೂಜಾರ, ಅನಿಲ ತಬ್ಬದಮನಿ, ಅನಿಲ ಪುರಾಣಿಕ, ದತ್ತಣ್ಣ ಜೋಶಿ ಇದ್ದರು.



ನರಗುಂದ: ಪಟ್ಟಣದ ವಿವೇಕಾನಂದ ಸಿಬಿಎಸ್‌ಇ ಪಬ್ಲಿಕ್ ಶಾಲೆ ಆವರಣದಲ್ಲಿ ಮಾಜಿ ಶಾಸಕ ಬಿ.ಆರ್. ಯಾವಗಲ್ಲ ಅವರು ಮಕ್ಕಳೊಂದಿಗೆ ಸಸಿಗಳನ್ನು ನೆಟ್ಟು ವನಮಹೋತ್ಸವ ಆಚರಿಸಿದರು. ಪ್ರಾಂಶುಪಾಲ ಎಚ್.ವಿ. ಸತೀಶ್ಚಂದ್ರ, ರುಕ್ಸರ್ ಶೇಖ(ಕಾರವಾರ), ಪಿ.ಪಿ. ಅಥಿರಾ(ಕೇರಳ) ಹಾಗೂ ವಿದ್ಯಾರ್ಥಿಗಳು ಇದ್ದರು.

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ | ಸಿ.ಸಿ. ಪಾಟೀಲ ಅಭಿಮತ

ನೆಟ್ಟ ಗಿಡಗಳ ಪೋಷಣೆ ಅಗತ್ಯ

◆ **ನರಗುಂದ:** ಶಾಲಾ ಆವರಣ ಮತ್ತು ಹೊಲಗಳ ಬದುವಿನಲ್ಲಿ ಸೇರಿದಂತೆ ತಾಲೂಕಿನಾದ್ಯಂತ 8600 ಗಿಡಗಳನ್ನು ನೆಡಲಾಗುತ್ತಿದೆ. ನೆಟ್ಟ ಗಿಡಗಳ ಸಂರಕ್ಷಣಾ ಜವಾಬ್ದಾರಿಯನ್ನು ಪ್ರತಿ ವಿದ್ಯಾರ್ಥಿಗೂ ಹಾಗೂ ಜನರಿಗೆ ನೀಡಬೇಕು. ಗಿಡಗಳ ಬೆಳೆಸುವಿಕೆ ಮತ್ತು ಸಂರಕ್ಷಿಸುವಿಕೆ ಕೇವಲ ಅರಣ್ಯ ಇಲಾಖೆ ಜವಾಬ್ದಾರಿ ಆಗಬಾರದು ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಶುಕ್ರವಾರ ತಾಲೂಕಿನ ಬನಹಟ್ಟಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ 2026-27ನೇ ಸಾಲಿನ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾವೀಗ ಹಿಂದಿನ ಹಿರಿಯರು ಹಚ್ಚಿದ ಗಿಡಗಳ ನೆರಳು ಮತ್ತು ಫಲವನ್ನು ಪಡೆಯುತ್ತಿದ್ದೇವೆ. ಹಿಂದೆ ನಾನು ಅರಣ್ಯ ಸಚಿವನಿದ್ದಾಗ ಗುಡ್ಡದ ಹಿಂದೆ ಸಾಲುಮರದ ತಿಮ್ಮಕ್ಕಳ ಉದ್ಯಾನವನ ನಿರ್ಮಿಸಿದ್ದೇನೆ. ಈಗದು ಪಿಕ್ನಿಕ್ ಸ್ಥಳವಾಗಿ ಮಾರ್ಪಟ್ಟಿದೆ. ಕನ್ನೇರಿ ಕಾಡಸಿದ್ದೇಶ್ವರ ಮಠದ ಆವರಣದಲ್ಲಿ 300 ಎಕರೆ ರೈತರ ಫಾರ್ಮ್ ಮಾಡಲಾಗಿದೆ. ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗಿಡಗಳನ್ನು ನೆಡಲಾಗಿದೆ. ಕೊಲ್ಲಾಪೂರ ಭಾಗದಲ್ಲಿ ಹೆಚ್ಚು ಬಿಸಿಲಿದ್ದರೆ ಕನ್ನೇರಿ ಮಠದ ಆವರಣದಲ್ಲಿ ಬಿಸಿಲಿನ ತಾಪಮಾನ ಕಡಿಮೆ ಇರುತ್ತದೆ. ಹೆಚ್ಚಿನ ಗಿಡಗಳು ಜನರ ಆರೋಗ್ಯವನ್ನು ಸಂರಕ್ಷಣೆ ಮಾಡಲಿದೆ ಎಂದರು.

ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಅವರ ಸಂಪುಟದಲ್ಲಿ ಅರಣ್ಯ ಸಚಿವ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವನಾಗಿದ್ದೆ. ಆಗ ಬಿಎಸ್‌ವೈ ಅವರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಖಾತೆಯನ್ನು ಮಾತ್ರ ವಹಿಸಿಕೊಳ್ಳಬೇಕೆಂದು ತಿಳಿಸಿದರು. ಗಣಿ ಖಾತೆಯಿಂದ ರಾಜ್ಯಕ್ಕೆ ವರ್ಷದಲ್ಲಿ 4500 ಕೋಟಿ ಸಂಪನ್ಮೂಲ ಕ್ರೂಢೀಕರಿಸಿ ಕೊಟ್ಟಿದ್ದೇನೆ. ಅರಣ್ಯ ಇಲಾಖೆಯಡಿ ತಾಲೂಕಿನಾದ್ಯಂತ ಸಾವಿರಾರು ಗಿಡಗಳನ್ನು ನೆಡಲಾಗಿದೆ ಎಂದರು.

ವಲಯ ಅರಣ್ಯಾಧಿಕಾರಿ ಸಿ ಜಿ ಮುದ್ದನಗೌಡ್ರ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಮಹಾದೇವ ಭೋಸಲೆ, ಬಿಇಒ ಎಂ.ಎಚ್. ಕಂಬಳಿ, ತಾಪಂ ಇಒ ಶ್ರೀಧರ ಚಿನಗುಳಿ, ಪಿಡಿಒ ಎಂಟಿ ಗಣಿ, ಅರಣ್ಯಾಧಿಕಾರಿ ಮುತ್ತಪ್ಪ ಗಡ್ಡಿ, ಪಿಯುಸಿ ವಿಭಾಗದ ಮುಖ್ಯ ಶಿಕ್ಷಕ ಖಾನಾಪೂರ, ಈರಪ್ಪ ಸುಂಕದ, ಮುಖ್ಯ ಶಿಕ್ಷಕ ಎಸ್.ವೈ. ಪಾಟೀಲ, ಭೀಮಪ್ಪ ಕಡ್ಲಿಕೊಪ್ಪ, ಗುರಪ್ಪ ಆದೆಪ್ಪನವರ, ಎಸ್.ಎಸ್. ಜಕಬಾಳ, ರಾಚಪ್ಪ ಅಳಗವಾಡಿ, ಶಿವು ಕಲ್ಲಾಪೂರ ಇದ್ದರು. ಮುಖ್ಯ ಶಿಕ್ಷಕ ಎಸ್.ವೈ ಪಾಟೀಲ ಸ್ವಾಗತಿಸಿದರು. ಶಿಕ್ಷಕ ಎಸ್ ಎಸ್ ಪಾಟೀಲ ವಂದಿಸಿದರು. ಶಿಕ್ಷಕಿ ಗೀತಾ ಪೂಜಾರ ನಿರೂಪಿಸಿದರು.



ಶಾಲಾ ಪ್ರದೇಶ ಸುಂದರಗೊಳಿಸಿ

ಪ್ರೌಢಶಾಲೆ ಹಾಗೂ ಪ್ರಾಥಮಿಕ ವಿಭಾಗದ ಕರ್ನಾಟಕ ಪಬ್ಲಿಕ್ ಶಾಲಾ ಮೈದಾನವು ಸಂಪೂರ್ಣ ಕಲ್ಲು, ಮಣ್ಣು, ಕಸಕಡ್ಡಿ ಇವುಗಳಿಂದ ಕೂಡಿದೆ. ಈ ವ್ಯವಸ್ಥೆ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರಲಿದೆ. ಸರಿಯಾದ ಕಂಪೌಂಡ್ ಇಲ್ಲ, ಪಬ್ಲಿಕ್ ಶಾಲಾ ಕಟ್ಟಡ ನಿರ್ಮಿಸಿದ ಇಬ್ಬರೂ ಗುತ್ತಿಗೆದಾರರು ತಾವು ಪತ್ರ ಬರೆದು ಕೊಟ್ಟಂತೆ ಕೆಲಸವನ್ನು ಮಾಡಿಲ್ಲ. ಮಕ್ಕಳ ಶೈಕ್ಷಣಿಕ ಬೆಳವಣಿಗೆ ದೃಷ್ಟಿಯಿಂದ ಶಾಲಾ ಪ್ರದೇಶವನ್ನು ಸುಂದರಗೊಳಿಸಬೇಕೆಂದು ಶಾಸಕ ಸಿ.ಸಿ. ಪಾಟೀಲ ಅವರು ಗುತ್ತಿಗೆದಾರರಿಗೆ ಫೋನ್ ತಿಳಿಸಿದರು.

ಪ್ರತಿಯೊಬ್ಬರ ಕಲ್ಯಾಣಕ್ಕಾಗಿ ಶ್ರಮಿಸಿ

◆ **ಲಕ್ಷ್ಮೇಶ್ವರ:** ಜನರ, ರೈತರ ಒಳಿತು ಬಯಸುವ ಚಿಂತನೆ ಕಾರ್ಯ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕಲ್ಯಾಣಕ್ಕಾಗಿ ಶ್ರಮಿಸುವುದು ಲೋಕಕಲ್ಯಾಣ ಎಂದು ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಕರೆವಾಡಿಮಠದ ನಿಯೋಜಿತ ಉತ್ತರಾಧಿಕಾರಿ ಡಾ. ಮಂಜುನಾಥಯ್ಯ ದೇವರು ನೇತೃತ್ವದಲ್ಲಿ ಪಟ್ಟಣದ ಹಳ್ಳದಕೇರಿಯಿಂದ ಗುಂಜಳ ರಸ್ತೆಯಲ್ಲಿ ಬರುವ ಸಾಲಾವಳಿ ಬಸವೇಶ್ವರ ದೇವಸ್ಥಾನದಲ್ಲಿ ಮೂರು ದಿನಗಳು ನಡೆದ ಲೋಕಕಲ್ಯಾಣಕ್ಕಾಗಿ ಇಷ್ಟಲಿಂಗ ಮಹಾಪೂಜಾ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಧರ್ಮ ಜಾಗೃತಿ, ಲೋಕಕಲ್ಯಾಣಕ್ಕಾಗಿ ಇಷ್ಟಲಿಂಗ ಮಹಾಪೂಜೆಯ ಮಹತ್ವದ ಅರಿವಿನ ಜೊತೆಗೆ ಕರೆವಾಡಿಮಠದ ಕಿರಿಯ ಶ್ರೀಗಳ ಮೌನಾನುಷ್ಠಾನ ಹಾಗೂ ಈ ಭಾಗದ ರೈತರ ಅರಿಕೆಯಂತೆ ವರುಣನ ಕೃಪೆ ನಾಡಿನ ರೈತರ ಮೇಲಾಗಿರುವುದು ಸಂತಸ ತಂದಿದೆ. ನೇಗಿಲ ಯೋಗಿಯ ಪ್ರಾರ್ಥನೆ ಭಗವಂತನಿಗೆ ತಲುಪಿದೆ. ಅದರ ಪ್ರತಿಫಲವಾಗಿ ವರುಣನ ಕೃಪೆ ಆಗಿದ್ದು ಹೊಲಗಳಲ್ಲಿ ಉತ್ತಮವಾದ ಫಸಲು ಬರಲಿ ಹಾಗೂ ಅದಕ್ಕೆ ತಕ್ಕ ಬೆಲೆಯು ಮಾರುಕಟ್ಟೆಯಲ್ಲಿ ದೊರೆಯುವಂತಾಗಲಿ ಎಂದರು.

ಕೂಡ್ಲಿಗಿ ಆಲೂರಿನ ಹಿರೇಮಠ ಸಂಸ್ಥಾನದ ಮರುಳಸಿದ್ಧ ಶಂಕರ ಶಿವಾಚಾರ್ಯ ಸ್ವಾಮೀಜಿ ಹಾಗೂ ಸದ್ಗುರು ಸಿದ್ದಲಿಂಗ ಶಿವಯೋಗಿಗಳು, ಕರೆವಾಡಿಮಠದ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಡಾ. ಮಂಜುನಾಥಯ್ಯ ದೇವರು ಮಾತನಾಡಿದರು. ಪ್ರತಿದಿನ ದಿನ ಬೆಳಗ್ಗೆ ಪ್ರಾತಃಕಾಲದಲ್ಲಿ ದೈವದವರ ಸಮ್ಮುಖದಲ್ಲಿ ಗಂಗೆ ಪೂಜೆ, ಗಣಪತಿ ಪೂಜೆ, ಗುರು ಕಲಶಪೂಜೆ ನಂತರ ಶ್ರೀಗಳ ಹಾಗೂ ಭಕ್ತರ ಇಷ್ಟಲಿಂಗಕ್ಕೆ ಮತ್ತು ಸಾಲಾವಳಿ ಬಸವೇಶ್ವರ ಸ್ವಾಮಿಗೆ ಎರಡು ದಿನಗಳು ಯಥಾವತ್ತಾಗಿ ರುದ್ರಾಭಿಷೇಕ ಪೂಜೆ ಮಂಗಳಾರತಿ ಹಾಗೂ ಶ್ರೀಗುರುಗಳ ಪಾದಪೂಜೆ, ವರುಣನ ಪೂಜೆ ಕಾರ್ಯಕ್ರಮ ಹಾಗೂ ಸಂಜೆ ಶ್ರೀಗಳ ಇಷ್ಟಲಿಂಗ ಪೂಜಾ ಮತ್ತು ಜಪತಪಗಳು ನಡೆದವು. ಈ ವೇಳೆ ಗ್ರಾಮದ ವಿವಿಧ ಗ್ರಾಮ ದೇವತೆಗಳಿ ಅರ್ಚನೆಯನ್ನು ಸಲ್ಲಿಸಲಾಯಿತು. ಮೂರು ದಿನಗಳು ಬಳಿಗಾರ ಭಜನಾ ಸಂಘ, ಹಾವಳಿ ಆಂಜನೇಯ ದೇವಸ್ಥಾನ ಭಜನಾ ಸಂಘ, ಧಾನಿಕೇರಿ ಬಜನಾ ಸಂಘ, ಸಣ್ಣದ್ಯಾಮವ್ವ ಭಜನಾ ಸಂಘ ಭಕ್ತಿ ಸೇವೆ ಮಾಡಿದರು.



ಎರಡು ಬಾರಿ ಹಾಜರಾತಿ ಕಡ್ಡಾಯ: ಪಿಡಿಒ

◆ **ಗಜೇಂದ್ರಗಡ:** ಸಾಮೂಹಿಕ ಬದು ನಿರ್ಮಾಣ ಕಾಮಗಾರಿಯಲ್ಲಿ ಕೂಲಿಕಾರರು ಎರಡು ಬಾರಿ ಹಾಜರಾತಿಯನ್ನು ಕಡ್ಡಾಯವಾಗಿ ಹಾಕಿಸಬೇಕು. ಇಲ್ಲವಾದರೆ ನಿಮಗೆ ಕೂಲಿಮೊತ್ತ ಪಾವತಿಯಾಗುವುದಿಲ್ಲ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿಶ್ವನಾಥ ರಾಠೋಡ ಹೇಳಿದರು.

ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಗೌಡಗೇರಿ ಗ್ರಾಮದಲ್ಲಿ ಶುಕ್ರವಾರ ಮೊದಲನೇ ದಿನದ ಸಾಮೂಹಿಕ ಬದು ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ನರೇಗಾ ಯೋಜನೆಲ್ಲಿ ಈ ಬಾರಿ ಫೇಸ್ ಅಥೇಂಟಿಕೇಷನ್ ಇರುವ ಕಾರಣ ಜಾಬ್ ಕಾರ್ಡ್ ಹೊಂದಿರುವ ಎಲ್ಲಾ ಕೂಲಿಕಾರರು ಇ ಕೆವೈಸಿ ಮಾಡಿ ಎನ್‌ಎಂಆರ್ ತೆಗೆಯಲಾಗಿದೆ. ಎನ್‌ಎಂಆರ್‌ನಲ್ಲಿ ಇ ಕೆವೈಸಿ ಮಾಡಿಸಿಕೊಂಡು ಹಾಜರಾತಿ ಹಾಕಿಸಿ ಕೆಲಸ ಮಾಡುವಂತೆ ಕೂಲಿಕಾರರಿಗೆ ತಿಳಿಸಿದರು. ಕಾಯಕ ಬಂಧುಗಳು ಸರಿಯಾಗಿ ಎರಡು ಹಾಜರಾತಿಯನ್ನು ನಿರ್ವಹಣೆ ಮಾಡಬೇಕು. ಯಾವುದೇ ಕೂಲಿಕಾರರು ಉಳಿಯದಂತೆ ನೋಡಿಕೊಳ್ಳಬೇಕು ಎಂದರು.

ಐಇಸಿ ಸಂಯೋಜಕ ಮಂಜುನಾಥ ಹಳ್ಳದ ಮಾತನಾಡಿ, ನರೇಗಾ ಯೋಜನೆಯಡಿ ಕೂಲಿಕಾರರ ಹಾಜರಾತಿ ಫೇಸ್ ಅಥೇಂಟಿಕೇಷನ್ ಜಾರಿಗೆ ತರಲಾಗಿದೆ. ಮೊದಲನೇ ಹಾಜರಾತಿ ಒಬ್ಬೊಬ್ಬರದ್ದೇ ಮುಖದ ಹಾಜರಾತಿ ತೆಗೆದುಕೊಳ್ಳಲಾಗುತ್ತದೆ. ಎರಡನೇ ಹಾಜರಾತಿ 10 ಜನರ ಗುಂಪು ತೆಗೆದುಕೊಳ್ಳುತ್ತದೆ. ಹಾಗಾಗಿ ಕೂಲಿಕಾರರು ಎರಡು ಹಾಜರಾತಿ ಹಾಕುವವರಿಗೂ ಕೆಲಸದ ಸ್ಥಳದಲ್ಲಿಯೇ ಇರಬೇಕು. ಹಾಜರಾತಿ ಹಾಕಿಸಿದವರಿಗೆ ಮಾತ್ರ ಕೂಲಿ ಪಾವತಿಯಾಗುತ್ತದೆ. ಹಾಜರಾತಿ ಹಾಕದೇ ಇರುವವರಿಗೆ ಕೂಲಿ ಹಣ ಪಾವತಿಯಾಗುವುದಿಲ್ಲ ಎಂದರು.

ನರೇಗಾ ತಾಂತ್ರಿಕ ಸಹಾಯಕ ಅಭಿಯಂತರ ಗುರುನಾಥ ಫಕೀರಗೌಡ ಮಾತನಾಡಿ, ಕೂಲಿಕಾರರು 105 2 ಪಿಟ್ ಅಳತೆ ಮಾದರಿಯಲ್ಲಿ ಕಟ್ಟೆ (ಪಡ) ಕಡಿದರೆ ನಿಮಗೆ ಪೂರ್ಣ ಪ್ರಮಾಣದ ಕೂಲಿ ಸಿಗುತ್ತದೆ. ಎಲ್ಲರೂ ಅಳತೆಗೆ ತಕ್ಕಂತೆ ಕೆಲಸ ಮಾಡಿದರೆ 370 ರೂ. ದೊರಕುತ್ತದೆ ಎಂದರು.

ಈ ಗ್ರಾಮ ಪಂಚಾಯತ್ ಅಧ್ಯಕ್ಷ ಪೂನಾಬಾಯಿ ನೇಮಪ್ಪ ರಾಠೋಡ ಅಧ್ಯಕ್ಷತೆ ವಹಿಸಿ ಗುದ್ದಲಿಪೂಜೆ ನೆರವೇರಿಸಿದರು. ಉಪಾಧ್ಯಕ್ಷ ಚನ್ನವ್ವ ಯಂಕಪ್ಪ ಅಜಮೀರ್, ಮುಖಂಡರಾದ ವೀರೇಶ ರಾಠೋಡ, ಕೃಷ್ಣಪ್ಪ ಮಾಳೋತ್ತರ, ಕಳಕಪ್ಪ ಜನಾಯಿ, ಭೀಮಪ್ಪ ಪೂಜಾರ, ಸುರೇಶ ಮಾಳೋತ್ತರ, ಶರಣಪ್ಪ ರಾಠೋಡ, ನಿಂಗನಗೌಡ ಗೌಡ್ರ, ಮುದಕಪ್ಪ ದೊಣೆಗುಡ್ಡ ಸೇರಿದಂತೆ ಪಂಚಾಯತ್ ಸಿಬ್ಬಂದಿ ಇದ್ದರು.



ಪಾರದರ್ಶಕ ಚುನಾವಣೆಗೆ ಮತದಾರರ ಪಟ್ಟಿ ಪರಿಷ್ಕರಣೆ ಅತೀ ಮುಖ್ಯ: ದೊಡ್ಡಮನಿ

◆ **ಶಿರಹಟ್ಟಿ:** ಮತದಾರರ ಪಟ್ಟಿಯು ಚುನಾವಣೆ ಪ್ರಕ್ರಿಯೆಯ ಮೂಲಾಧಾರ ಆಗಿರುವುದರಿಂದ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದೆ ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಹೇಳಿದರು.

ಸ್ಥಳೀಯ ಡಿ. ದೇವರಾಜ ಅರಸು ಭವನದಲ್ಲಿ ಶುಕ್ರವಾರ ಚುನಾವಣಾ ಆಯೋಗದ ನಿರ್ದೇಶನದಂತೆ ತಾಲೂಕು ಆಡಳಿತದ ವತಿಯಿಂದ ಶಿರಹಟ್ಟಿ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಸಿಎಲ್‌ಒ ಮತ್ತು ಬಿಎಲ್‌ಎ ಗಳಿಗೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಧಿಕಾರಿಗಳು ಪ್ರತಿ ಮನೆ ಮನೆಗೂ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಬೇಕು. ಅರ್ಹ ಮತದಾರರ ಸೇರ್ಪಡೆ, ಹೆಸರು ತಿದ್ದುಪಡಿ, ವಿಳಾಸ ಬದಲಾವಣೆ, ಮೃತರನ್ನು ಪಟ್ಟಿಯಿಂದ ಕೈಬಿಡುವುದು. ಇನ್ನಿತರ ವಿಶೇಷಗಳ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ, ಪರಿಶುದ್ಧವಾದ ಮತದಾರರ ಪಟ್ಟಿ ತಯಾರಿಸಬೇಕು ಎಂದರು.



ತಹಶೀಲ್ದಾರ್ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ ಕೆ. ರಾಘವೇಂದ್ರ ರಾವ್, ಬಿಜೆಪಿ ಮುಖಂಡ ಶಂಕರ ಮರಾಠೆ, ಎಚ್.ಡಿ. ಮಾಗಡಿ, ನಾಗರಾಜ ಲಕ್ಕುಂಡಿ, ತಿಮ್ಮರಡ್ಡಿ ಮರಡ್ಡಿ, ಅಕ್ಬರ ಯಾದಗಿರಿ, ಶಿರಸ್ತೆದಾರ ಸಂತೋಷ ಅಸ್ಕಿ, ಕಂದಾಯ ನಿರೀಕ್ಷಕ ಬಸವರಾಜ ಕಾಂತ್ರಾಳ, ತಾಲೂಕು ಮಾಸ್ಟರ್ ಟ್ರೇನರ್ ಕೆ.ಎಚ್. ಹೊಂಬಳಮಠ ಇದ್ದರು.

ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಯ ಹೊಣೆ ಹೊರಲಿ: ನ್ಯಾ. ಬಸವರಾಜ

◆ **ಮುಂಡರಗಿ:** ಗಿಡಮರಗಳನ್ನು ಕಾಳಜಿಪೂರ್ವಕವಾಗಿ ಬೆಳೆಸುವ ಮೂಲಕ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಯ ಹೊಣೆ ಹೊರಬೇಕು. ಕಾಡು ಬೆಳೆದರೆ ನಾಡು ಸಮೃದ್ಧಿಯಾಗಬಲ್ಲದು ಎಂದು ತಾಲೂಕು ದಿವಾಣಿ ನ್ಯಾಯಾಧೀಶ ಬಸವರಾಜ ಹೇಳಿದರು.

ಪಟ್ಟಣದಲ್ಲಿ ಕಪ್ಪತಗುಡ್ಡ ಪರಿಸರ ಸಂರಕ್ಷಣಾ ವೇದಿಕೆ, ಕಪ್ಪತ್‌ಹಿಲ್ಸ್ ವಲಯ ಅರಣ್ಯ, ಸಾಮಾಜಿಕ ಅರಣ್ಯ, ಶಿಕ್ಷಣ ಇಲಾಖೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಪುರಸಭೆ, ಎಸ್‌ಬಿಎಸ್‌ಆಯುರ್ವೇದ ಮೆಡಿಕಲ್ ಕಾಲೇಜು, ಶಾಸಕರ ಮಾದರಿ ಶಾಲೆ ಇವುಗಳ ಆಶ್ರಯದಲ್ಲಿ ಶುಕ್ರವಾರ ಜರುಗಿದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕಪ್ಪತ್‌ಹಿಲ್ಸ್ ವಲಯ ಅರಣ್ಯಾಧಿಕಾರಿ ಮಂಜುನಾಥ ಮೇಗಲಮನಿ ಮಾತನಾಡಿ, ರಾಷ್ಟ್ರೀಯ ಅರಣ್ಯ ನೀತಿ ಪ್ರಕಾರ ಶೇ.33ರಷ್ಟು ಅರಣ್ಯ ಪ್ರದೇಶ ಇರಬೇಕು. ಗದಗ ಜಿಲ್ಲೆಯಲ್ಲಿ ಕಡಿಮೆ ಅರಣ್ಯ ಪ್ರದೇಶ ಇದ್ದು ಅರಣ್ಯ ಪ್ರದೇಶವಲ್ಲದ ಸ್ಥಳದಲ್ಲಿ ಹೆಚ್ಚಿನ ಗಿಡಮರಗಳನ್ನು ಬೆಳೆಸಿದಾಗ ಅರಣ್ಯ ಸಂರಕ್ಷಣೆ ಸಾಧ್ಯ ಎಂದರು.

ಪರಿಸರವಾದಿ ಸಿ.ಎಸ್.ಅರಸನಾಳ ಮಾತನಾಡಿ ಶಾಲೆಗಳಲ್ಲಿ ಪಂಚವಟಿ ವನ ನಿರ್ಮಾಣದ ಯೋಜನೆ ಹಮ್ಮಿಕೊಂಡಿದ್ದು, 5 ವರ್ಷ ಉತ್ತಮವಾಗಿ ಪಂಚವಟಿ ಸಸಿಗಳಾದ ಬಿಲ್ವ,ಬನ್ನಿ,ಬೇವು,ಅರಳಿ ಮತ್ತು ಅತ್ತಿ ಸಸಿಗಳನ್ನು ಬೆಳೆಸಿ ರಕ್ಷಿಸಿದರೆ ಅಂತಹ ಶಾಲೆಗೆ 5 ಸಾವಿರ ರೂಪಾಯಿ ಬಹುಮಾನವನ್ನು ನೀಡಲಾಗುವುದು ಎಂದರು.

ಸಾನ್ನಿಧ್ಯ ವಹಿಸಿದ್ದ ಜ.ಡಾ.ಅನ್ನದಾನೀಶ್ವರ ಸ್ವಾಮೀಜಿ ಮೌನಾಚರಣೆ ನಿಮಿತ್ತ ಅವರ ಸಂದೇಶಗಳನ್ನು ಸಿ.ಎಸ್.ಅರಸನಾಳ ಸಾದರಪಡಿಸಿ, ಅಗತ್ಯ ಇರುವಷ್ಟು ಗಿಡಮರಗಳು ಇಲ್ಲದ ಕಾರಣ ಪರಿಸರ ಸಮತೋಲನ ಕಾಯ್ದುಕೊಳ್ಳಲು ವಿಫಲರಾಗಿದ್ದೇವೆ. ಭೂಮಿ ಪರಿಸರ ಅಸಮತೋಲನವಾದರೆ ವಿವಿಧ ರೀತಿಯ ಅಪಾಯದ ಸಂಕೇತಗಳನ್ನು ತೋರಿಸುತ್ತದೆ. ಪರಿಸರ ಸಂರಕ್ಷಣೆ ಎಂದರೆ ಕೇವಲ ಅರಣ್ಯ ಇಲಾಖೆ ಮತ್ತು ಸರ್ಕಾರದ ಕೆಲಸವಲ್ಲ, ಒಬ್ಬರು ಕನಿಷ್ಠ 500 ಗಿಡ ನೆಡಿ ಎಂದರು. ಬಿಇಒ ಜಿ.ಎಸ್.ಅಣ್ಣಿಗೇರಿ, ಆರೋಗ್ಯ ನಿರೀಕ್ಷಕ ಎಂ.ಎಸ್.ಮ್ಯಾಗೇರಿ, ವಿಶಾಲಾಕ್ಷಿ ಮಲ್ಲಾಪೂರ ಮಾತನಾಡಿದರು. ಮಾಜಿ ಸಚಿವ ಎಸ್.ಎಸ್.ಪಾಟೀಲ ಶಾಲೆಗಳಿಗೆ ಪಂಚವಟಿ ಸಸಿಗಳನ್ನು ವಿತರಿಸಿದರು. ಅರಣ್ಯಾಧಿಕಾರಿ ಸುನಿತಾ ಪೂಜಾರ, ಪ್ರಭಾವತಿ ಬೆಳವಣಿಕಮಠ, ಎಸ್.ಎಂ.ನಾಗರಹಳ್ಳಿ, ಬಸವರಾಜ ನವಲಗುಂದ, ಎಂ.ಎಸ್.ಶೀರನಹಳ್ಳಿ, ಹೊಳೆಯಮ್ಮನವರ, ಪ್ರಗು ಮೇಗಲಮನಿ ಇತರರಿದ್ದರು. ಕಾರ್ಯಕ್ರಮಕ್ಕೂ ಮೊದಲು ಶಾಲಾ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು. ದೇವಪ್ಪ ಇಟಗಿ ಸ್ವಾಗತಿಸಿ ಪ್ರಾಸ್ತಾವಿಸಿದರು. ಶಿಕ್ಷಕ ಗುಡದಪ್ಪ ಲಿಂಗಶೆಟ್ಟರ ನಿರೂಪಿಸಿದರು. ಸಿಆರ್‌ಪಿ ಉಪ್ಪಾರ ವಂದಿಸಿದರು.



ಕನಿಷ್ಠ ಒಂದು ಸಸಿಯನ್ನಾದರೂ ನೆಡಿ



◆ **ಗಜೇಂದ್ರಗಡ:** ನಗರ ಸಮೀಪದ ಸೈನಿಕ ನಗರದ ಹತ್ತಿರದ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಶುಕ್ರವಾರ ಆಚರಿಸಲಾಯಿತು.

ಗಜೇಂದ್ರಗಡ ಪೊಲೀಸ್ ಠಾಣೆಯ ಪಿ.ಎಸ್.ಐ. ಪ್ರಕಾಶ್ ಡಿ. ಕಾರ್ಯಕ್ರಮ ಉದ್ಘಾಟಿಸಿ, ಶಾಲೆಯ ಆವರಣದಲ್ಲಿ ಸಸಿನೆಡುವ ಮೂಲಕ ನೆರವೇರಿಸಿ ಮಾತನಾಡಿ, ಪರಿಸರ ಸಂರಕ್ಷಣೆ ಕೇವಲ ಒಂದು ದಿನದ ಆಚರಣೆಯಾಗಬಾರದು. ಪ್ರತಿಯೊಬ್ಬ ಪಾಲಕರು ಮತ್ತು ಮಕ್ಕಳು ವರ್ಷಕ್ಕೆ ಕನಿಷ್ಠ ಒಂದು ಸಸಿಯನ್ನಾದರೂ ನೆಟ್ಟು, ಅದನ್ನು ಹೆತ್ತ ಮಗುವಿನಂತೆ ಪೋಷಿಸಬೇಕು ಎಂದರು. ಸಂಸ್ಥೆಯ ಚೇರ್ಮನ್ ಸೀತಲ ಓಲೇಕಾರ ಮಾತನಾಡಿ, ಶಾಲಾ ಹಂತದಲ್ಲೇ ಮಕ್ಕಳಿಗೆ ಪ್ರಕೃತಿಯ ಮಹತ್ವವನ್ನು ತಿಳಿಸಿಕೊಡುವುದು ಇಂದಿನ ತುರ್ತು ಅಗತ್ಯವಾಗಿದೆ. ಗಿಡ-ಮರಗಳನ್ನು ಬೆಳೆಸುವುದರಿಂದ ಮಾತ್ರ ಶುದ್ಧ ಗಾಳಿ ಮತ್ತು ಆರೋಗ್ಯಕರ ಭವಿಷ್ಯವನ್ನು ಹೊಂದಲು ಸಾಧ್ಯ ಎಂದರು. ಸಂಸ್ಥೆಯ ಕಾರ್ಯದರ್ಶಿ ನಾಜೀಯಾ ಮುದಗಲ್ಲ, ಶಿಕ್ಷಕಿಯರಾದ ನಸ್ರೀನ್ ಮುದೋಳ, ತೈಸಿನ್ ಕರ್ನಾಚಿ, ಶಾಂತವ್ವ ಮುದಟಗಿಮಠ, ಶಾಂತಾ, ಸಂಗಮೇಶ ರೇವಡಿ, ಕಿರಣ ನಿಡಗುಂದಿ, ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಉತ್ತಮ ಪರಿಸರ ಬಹಳ ಮುಖ್ಯ

◆ **ಲಕ್ಷ್ಮೇಶ್ವರ:** ಸಕಲ ಜೀವಿರಾಶಿಗಳ ಉಳಿವಿಗೆ ಉತ್ತಮ ಪರಿಸರ ಬಹಳ ಮುಖ್ಯ ಎಂದು ಉಪವಲಯ ಅರಣ್ಯ ಅಧಿಕಾರಿ ಪ್ರಕಾಶ್ ಕರಗುಪ್ಪಿ ಹೇಳಿದರು.

ಅವರು ಪಟ್ಟಣದ ರಾಮಗೇರಿ ಗ್ರಾಮದಲ್ಲಿ ಶಿರಹಟ್ಟಿ ಪ್ರಾದೇಶಿಕ ವಲಯದಿಂದ ಯಜಮಾನ ಗೂಳಪ್ಪ ಉಪನಾಳ ಸರಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಸಸಿ ನೆಟ್ಟು ಮಾತನಾಡಿ, ಸುತ್ತಮುತ್ತಲಿನ ಪರಿಸರವನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಪರಿಸರವನ್ನು ಉಳಿಸಿದರೆ ಮಾತ್ರ ನಮಗೆ ಆರೋಗ್ಯವಾದ ಜೀವನ ನಡೆಸಲು ಸಾಧ್ಯ. ವಿದ್ಯಾರ್ಥಿ ಜೀವನದಿಂದಲೇ ಪರಿಸರ ಸಂರಕ್ಷಣೆ ಬಗ್ಗೆ ಕಾಳಜಿ ವಹಿಸಬೇಕು. ಸಸಿ ನೆಡುವುದರ ಜೊತೆಗೆ ಅದರ ಪೋಷಣೆ ಪಾಲನೆ ಮಾಡಬೇಕು ಪರಿಸರ ರಕ್ಷಣೆ ಎಲ್ಲರ ಹೊಣೆ ಎಂದರು.

ಶಾಲೆಯ ಮುಖ್ಯ ಶಿಕ್ಷಕಿ ಜಯಶ್ರೀ ಪುರಾಣಿಕಮಠ ಮಾತನಾಡಿ, ಸಸಿ ನೆಡುವುದರಿಂದ ಉತ್ತಮ ಪರಿಸರದ ಜೊತೆಗೆ ಉತ್ತಮ ಆರೋಗ್ಯ ಹೊಂದಬಹುದು. ವಿದ್ಯಾರ್ಥಿಗಳು ಪರಿಸರದ ಬಗ್ಗೆ ಕಾಳಜಿ ವಹಿಸಬೇಕು ಎಂದರು. ಈ ಸಂದರ್ಭದಲ್ಲಿ ಗಸ್ತು ಅರಣ್ಯ ಪಾಲಕ ಮಂಜುನಾಥ್ ಚವ್ಹಾಣ, ಅರಣ್ಯ ಇಲಾಖೆ ಸಿಬ್ಬಂದಿ, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.



ಪರಿಸರ ರಕ್ಷಣೆಗೆ ಕೈಜೋಡಿಸಿ



◆ **ಗಜೇಂದ್ರಗಡ:** ತಾಲೂಕಿನ ರಾಜೂರು ಗ್ರಾಮ ಪಂಚಾಯತಿಯ ಮುಖ್ಯ ರಸ್ತೆಯ ಬದಿಯಲ್ಲಿ ವಿಶ್ವ ಪರಿಸರ ದಿನದ ಪ್ರಯುಕ್ತ ಕಾರ್ಯನಿರ್ವಾಹಕ ಅಧಿಕಾರಿಗಳು ಸಸಿ ನೆಟ್ಟು ನೀರುಣಿಸಿದರು.

ನಂತರ ಮಾತನಾಡಿದ ಅವರು, ಪರಿಸರ ದಿನ ಆಚರಣೆ ಮಾಡಿದರೆ ಅಷ್ಟೇ ಸಾಲದು ಪರಿಸರ ರಕ್ಷಣೆಯನ್ನು ನಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಸಾರ್ವಜನಿಕರ ಸಹಕಾರ ಇಲ್ಲದೇ ಪರಿಸರ ರಕ್ಷಣೆ ಸಾಧ್ಯವಿಲ್ಲ. ಸಾರ್ವಜನಿಕರ ಸಹಕಾರ ಬಹಳ ಮುಖ್ಯವಾಗಿದೆ ಎಂದರು. ಕೇವಲ ಪರಿಸರ ರಕ್ಷಣೆ ಒಂದೇ ವಿಷಯವಲ್ಲ ಗ್ರಾಮದ ಮೂಲಭೂತ ಸೌಲಭ್ಯಗಳ ಪೂರೈಕೆ ಮತ್ತು ರಕ್ಷಣೆಯಲ್ಲಿ ಸಾರ್ವಜನಿಕರು ಗ್ರಾಪಂಗೆ ಸಹಕಾರ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಗ್ರಾ.ಪಂ. ಆಡಳಿತಾಧಿಕಾರಿ ಅರವಿಂದ ಬಂಡಿ, ಪಿಡಿಒ ಮಂಜುನಾಥ ಮೇಟಿ, ಕಾರ್ಯದರ್ಶಿ ರಾಜು ಗಾರ್ಗಿ, ಮುಖಂಡರಾದ ವೀರಣ್ಣ ಈ ಹಾದಿಮನಿ, ವಿ.ಎಸ್. ಕೋರಿ, ಉಮೇಶ್ ರಾವ್ ಕುಲಕರ್ಣಿ, ಶರಣಪ್ಪ ಜಾದವ್, ಬಿ.ಕೆ. ಮಲಗಿ, ಪರಶುರಾಮ್ ಶಂಕ್ರಿ, ಸಕ್ರಪ್ಪ ಕುಡುಗುದ್ರಿ, ಸಂಗಮೇಶ್ ಹಾದಿಮನಿ, ಕೇಶಪ್ಪ ರಾಥೋಡ, ವೀರಣ್ಣ ಹೊಗರಿ ಸೇರಿದಂತೆ ಇತರರಿದ್ದರು.

ಜಿ.ಎಸ್.ಪಾಟೀಲಗೆ ಸಚಿವ ಸ್ಥಾನ ನೀಡಿ

◆ **ಗದಗ:** ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಲು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರೋಣ ತಾಲೂಕು ಘಟಕದ ಪದಾಧಿಕಾರಿಗಳು ಒಕ್ಕೊರಲಿನಿಂದ ಆಗ್ರಹಿಸಿದರು. ಅಲ್ಲದೇ ಸಚಿವ ಸ್ಥಾನ ನೀಡದಿದ್ದರೆ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರೋಣ ತಾಲೂಕು ಘಟಕದ ಅಧ್ಯಕ್ಷ ಅನೀಲಕುಮಾರ ತೆಗ್ಗಿನಕೇರಿ ಎಚ್ಚರಿಕೆ ನೀಡಿದರು.

ನಗರದ ಪತ್ರಿಕಾಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿಎಂ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ಸಚಿವ ಸಂಪುಟದಲ್ಲಿ ಶಾಸಕ ಜಿ.ಎಸ್. ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು. ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷ ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುತ್ತಾರೆ ಎಂಬ ವಿಶ್ವಾಸವಿದೆ. ಆ ವಿಶ್ವಾಸವನ್ನು ಘಾಸಿಗೊಳಿಸಿದರೆ ಬೀದಿಗಿಳಿದು ಹೋರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಜೊತೆಗೆ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದರು. ಮುಖಂಡರಾದ ಎಂ.ಎಸ್.ಮಲ್ಲಾಪೂರ, ಸಿದ್ದರಾಮಗೌಡ ಜೀವನಗೌಡರ, ಮಂಜುಳಾ ರೇವಡಿ, ರೇಣುಕಾ ಧರ್ಮಾಯತ, ಮಲ್ಲಿಕಾರ್ಜುನ ರಡ್ಡೇರ, ವಿಜಯಕುಮಾರ ಪಾಟೀಲ, ಶರಣು ಪಾಟೀಲ, ಮಂಜುನಾಥ ಅಂಗಡಿ ಸೇರಿ ಹಲವರಿದ್ದರು.



ಕಿರುಸುದ್ದಿ

ರಾಷ್ಟ್ರಮಟ್ಟದ ಕಾರ್ಯಕ್ರಮಕ್ಕೆ ವಿದ್ಯಾರ್ಥಿ ಯಶ್ ಆಯ್ಕೆ



ಕೊಪ್ಪಳ: ಕುಷ್ಟಗಿ ಪಟ್ಟಣದ ಎಸ್‌ವಿಸಿ ಮೆಮೋರಿಯಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಯಶ್ ಮಧಾಳೆ ಗುಜರಾತ್ ರಾಜ್ಯದಲ್ಲಿ ನಡೆಯುವ ರಾಷ್ಟ್ರಮಟ್ಟದ ಪ್ರತಿಷ್ಠಿತ 'ಪ್ರೇರಣಾ ಉತ್ಸವ' ಕಾರ್ಯಕ್ರಮ ಪಾಲ್ಗೊಳ್ಳಲು ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ ಎಂದು ಎಸ್‌ವಿಸಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಿ.ವಿ. ಚಂದ್ರಶೇಖರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕ ರಾಜ್ಯದಿಂದ ಎರಡು ಶಾಲೆಗಳ ಎರಡು ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಅದರಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣದ ಎಸ್‌ವಿಸಿ ಮೆಮೋರಿಯಲ್ ಪಬ್ಲಿಕ್ ಶಾಲೆಯ ಒಂಬತ್ತನೇ ತರಗತಿ ವಿದ್ಯಾರ್ಥಿ ಯಶ್ ಮಧಾಳೆ ಒಬ್ಬರು. ಗುಜರಾತ್ ರಾಜ್ಯದ ವಡ್ನಾಗರ್‌ನಲ್ಲಿ ಜುಲೈ19ರಿಂದ 25ರ ತನಕ ಒಂದು ವಾರ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರತಿಯೊಂದು ರಾಜ್ಯದಿಂದ ಇಬ್ಬರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಕೇಂದ್ರ ಶಿಕ್ಷಣ ಮಂತ್ರಾಲಯ 'ಪ್ರೇರಣಾ ಉತ್ಸವ' ಆಯೋಜಿಸುತ್ತಿದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ ವಿದ್ಯಾರ್ಥಿಗಳಲ್ಲಿ ಒಂಬತ್ತು ಅಂಶಗಳ ನಾಯಕತ್ವ ಗುಣಗಳನ್ನು ಬೆಳೆಸುವ ಗುರಿ ಹೊಂದಿದೆ. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿವಿಧ ಕಲಿಕಾ ಅನುಭವಗಳನ್ನು ಪಡೆಯಲಿದ್ದಾರೆ. ಮೋದಿ ಅವರು ಓದಿದ ಶಾಲೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದ್ದಾರೆ. ಕಾರ್ಯಕ್ರಮಕ್ಕೆ ಆಯ್ಕೆಯಾಗಲು 'ವಿಕಸಿತ ಭಾರತ' ಹಾಗೂ 'ಸಮಾಜ ಮತ್ತು ದೇಶಕ್ಕೆ ನನ್ನ ಕೊಡುಗೆ' ವಿಷಯಗಳ ಕುರಿತು ಐದು ಹಂತದ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿತ್ತು. ಆಯ್ಕೆಯಾಗುವ ಮೂಲಕ ಯಶ್ ಮಧಾಳೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಕೀರ್ತಿ ತಂದಿದ್ದಾನೆ ಎಂದು ತಿಳಿಸಿದ್ದಾರೆ. ಸಂಸ್ಥೆಯ ಸಿಇಒ ಡಾ. ಜಗದೀಶ್ ಅಂಗಡಿ, ಶಾಲೆಯ ಪ್ರಾಂಶುಪಾಲ ಮಹದೇವ ಮಧಾಳೆ ಹಾಗೂ ಸಿಬ್ಬಂದಿ ವಿದ್ಯಾರ್ಥಿಯ ಆಯ್ಕೆಗಾಗಿ ಹರ್ಷ ವ್ಯಕ್ತಪಡಿಸಿದ್ದಾರೆ.

ಓರ್ವ ವಿದ್ಯಾರ್ಥಿನಿ ಪರೀಕ್ಷೆಗೆ 14 ಜನ ಸಿಬ್ಬಂದಿ

ವಿಜಯಪುರ: ಓರ್ವ ವಿದ್ಯಾರ್ಥಿನಿಯ ಪರೀಕ್ಷೆಗಾಗಿ 14 ಜನ ಸಿಬ್ಬಂದಿ ಸಮರ್ಪಣೆಯಿಂದ ಕಾರ್ಯ ನಿರ್ವಹಿಸಿದ ವಿಶೇಷ ಘಟನೆ ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದಲ್ಲಿ ನಡೆದಿದೆ. ಶುಕ್ರವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ನಾತಕೋತ್ತರ ವಿಭಾಗದ ಸಂಹಿತ ಸಿದ್ಧಾಂತ ವಿಷಯದ ಪರೀಕ್ಷೆ ಆಯೋಜಿಸಿತ್ತು. ಈ ಪರೀಕ್ಷೆಗೆ ಓರ್ವ ವಿದ್ಯಾರ್ಥಿನಿ ಮಾತ್ರ ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ನಿಯಮದಂತೆ ಕಾಲೇಜಿನ 14 ಜನ ಸಿಬ್ಬಂದಿ ಪರೀಕ್ಷೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು ಎಂದು ಕಾಲೇಜಿನ ಪ್ರಾಚಾರ್ಯ ಡಾ ಅಶೋಕ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ್ಯ ವಿವಾಹ ಪ್ರಕರಣ: ಆರೋಪಿಗೆ ಶಿಕ್ಷೆ

ಕುಷ್ಟಗಿ: ತಾಲೂಕಿನ ಹೆಸರೂರು ಗ್ರಾಮದಲ್ಲಿ 2019ರಲ್ಲಿ ಜರುಗಿದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಬಾಲ್ಯ ಮಾಡಿಕೊಂಡಿದ್ದ ಅದೇ ಗ್ರಾಮದ ಸಂತೋಷನ ವಿರುದ್ಧ ಹಾಗೂ ಸಂತೋಷನ ತಂದೆ ಶರಣಪ್ಪ, ತಾಯಿ ಶಾಂತವ್ವ ಮತ್ತು ಅಪ್ರಾಪ್ತ ಬಾಲಕಿಯ ತಂದೆ ಪರಸಪ್ಪ, ತಾಯಿ ದ್ಯಾಮವ್ವನ ವಿರುದ್ಧ ದೂರು ದಾಖಲಾಗಿತ್ತು. ದೂರಿನ್ವಯ ಕುಷ್ಟಗಿ ಪ್ರಧಾನ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯವು ಎರಡು ವರ್ಷ ಶಿಕ್ಷೆ, 10.000 ರೂ. ದಂಡ ವಿಧಿಸಿದೆ. ಅದರಂತೆ ಮದುವೆ ಮಾಡಿಸಿದ್ದ ವರನ ತಂದೆ, ತಾಯಿ ಮತ್ತು ಅಪ್ರಾಪ್ತ ಬಾಲಕಿಯ ತಂದೆ, ತಾಯಿಗೆ ತಲಾ 20.000 ರೂ ದಂಡ ಹಾಗೂ ಎರಡು ವರ್ಷ ಶಿಕ್ಷೆ ನೀಡಿ ಆದೇಶಿದೆ. ಸಹಾಯಕ ಸರ್ಕಾರಿ ಅಭಿಯೋಜಕ ರಾಯನಗೌಡ ಎಲ್. ವಾದ ಮಂಡಿಸಿದ್ದರು.

ಸಿಡಿಲಿಗೆ ಯುವಕ ಸಾವು

ಗಜೇಂದ್ರಗಡ: ಸಮೀಪದ ರಾಜೂರು ಗ್ರಾಮದ ಯುವಕ ಹೊಲದಲ್ಲಿ ಕೆಲಸ ಮಾಡುವಾಗ ಸಿಡಿಲು ಬಡಿದು ಮೃತಪಟ್ಟ ಘಟನೆ ಶುಕ್ರವಾರ ನಡೆದಿದೆ. ಪರಶುರಾಮ ಶರಣಪ್ಪ ಹುಡೇದ (20) ಮೃತಪಟ್ಟ ಯುವಕ. ಮಗನ ಕಳೆದುಕೊಂಡ ಪಾಲಕರು ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ.

ಅತ್ಯಾಧುನಿಕ ರಂಗಮಂದಿರಕ್ಕೆ ಕೇಂದ್ರ ಸಚಿವೆ ನಿರ್ಮಲಾ ಭೂಮಿಪೂಜೆ



ವಿಜಯನಗರ: ಹೊಸಪೇಟೆ ನಗರದ ಜಿಲ್ಲಾಧಿಕಾರಿ ಕಚೇರಿ ಹಿಂಭಾಗದಲ್ಲಿ ತಮ್ಮ ಸಂಸದರ ನಿಧಿಯಡಿ 5 ಕೋಟಿ ರೂ. ಮೊತ್ತದಲ್ಲಿ ನಿರ್ಮಿಸಲಾಗುವ ಅತ್ಯಾಧುನಿಕ ರಂಗಮಂದಿರಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶಂಕುಸ್ಥಾಪನೆ ನೆರವೇರಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಮೀಪ 3 ಎಕರೆ ಪ್ರದೇಶದಲ್ಲಿ ಈ ರಂಗಮಂದಿರ ನಿರ್ಮಾಣಗೊಳ್ಳಲಿದೆ. ಹಂಪಿಯ ಕಲ್ಲಿನ ರಥ, ಸಾಲು ಮಂಟಪಗಳನ್ನು ಪ್ರಧಾನವಾಗಿ ಬಿಂಬಿಸಿಕೊಂಡು ರಂಗಮಂದಿರ ನಿರ್ಮಾಣವಾಗಲಿದೆ.

500 ಆಸನ ಸಾಮರ್ಥ್ಯದ ಮತ್ತು ಬಾಲ್ಕನಿಯಲ್ಲಿ 120 ಆಸನ ಸಾಮರ್ಥ್ಯದ (ಒಟ್ಟು 620 ಆಸನ) ಈ ರಂಗಮಂದಿರದಲ್ಲಿ ಕಲಾ ಗ್ಯಾಲರಿ, ಗ್ರಂಥಾಲಯ, ಮಿನಿ ಥಿಯೇಟರ್, ಕಲಾವಿದರಿಗೆ 9 ವಸತಿ ಕೊಠಡಿಗಳು, 2 ಗ್ರೀನ್ ರೂಂಗಳು, ಅಭ್ಯಾಸ ಮತ್ತು ತರಬೇತಿ ಕೊಠಡಿಗಳು, ಧ್ವನಿ ಮುದ್ರಣ ಸ್ಟುಡಿಯೊ, ಡಬ್ಬಿಂಗ್ ಸ್ಟುಡಿಯೊ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿ ಇರಲಿದೆ. 300 ಆಸನ ಸಾಮರ್ಥ್ಯದ ಬಯಲು ರಂಗಮಂದಿರವೂ ಇಲ್ಲಿ ನಿರ್ಮಾಣವಾಗಲಿದೆ.

ಪ್ರಧಾನ ವಾಸ್ತು ವಿನ್ಯಾಸಕಾರ ಅವಿನ್ ಎಸ್. ಜೈನ್ ಅವರು ಸಚಿವರಿಗೆ ರಂಗಮಂದಿರದ ವಿಶೇಷತೆಗಳ ಕುರಿತು ಮಾಹಿತಿ ನೀಡಿದರು.

ಸಂಸದ ಇ.ತುಕಾರಾಂ, ಶಾಸಕ ಎಚ್.ಆರ್. ಗವಿಯಪ್ಪ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಎಸ್ಪಿ ಎಸ್.ಜಾಹ್ನವಿ, ಜಿಪಂ ಸಿಇಒ ಮೊಹಮ್ಮದ್ ಅಲಿ ಅಕ್ರಂ ಷಾ, ನಗರಸಭೆ ಅಧ್ಯಕ್ಷ ಎನ್ ರೂಪೇಶ ಕುಮಾರ ಮತ್ತಿತರರು ಇದ್ದರು.

ಹಿಂದಿನಿಂದ ಆಟವಾಡಲು ಶುರು ಮಾಡಿದ ಸಿದ್ದರಾಮಯ್ಯ: ಬೆಲ್ಲದ



ಹುಬ್ಬಳ್ಳಿ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ರಾಜೀನಾಮೆ ನೀಡಿ ಜನರಿಂದ ಒಳ್ಳೆ ಹೆಸರು ಪಡೆದು, ಇದೀಗ ಹಿಂದಿನಿಂದ ಆಟವಾಡಲು ಶುರು ಮಾಡಿದ್ದಾರೆ. ಡಿ.ಕೆ.ಶಿವಕುಮಾರ ಮುಖ್ಯಮಂತ್ರಿ ಆಗಿರುವುದು ಸಿದ್ದರಾಮಯ್ಯ ಅವರಿಗೆ ಸಹನೆ ಇಲ್ಲ. ಹೀಗಾಗಿ ಬೇರೆ ಬೇರೆ ಅವರಿಂದ ಆಟವಾಡಿಸುತ್ತಿದ್ದಾರೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಹಾಗೂ ಹು-ಧಾ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ವ್ಯಂಗ್ಯವಾಡಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಈ ಸರ್ಕಾರ ಸರಳವಾಗಿ ನಡೆಯುವುದಿಲ್ಲ ಎಂದು ನಾನು ಈ ಮೊದಲೇ ಹೇಳಿದ್ದೆ. ಅದರಂತೆ ಇದೀಗ ಆ ಎಲ್ಲ ಲಕ್ಷಣಗಳು ಕಾಣುತ್ತಿವೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಅವರನ್ನು ಕೆಳಗಿಳಿಸಲು ಡಿ.ಕೆ. ಶಿವಕುಮಾರ ಆಟವಾಡಿದ್ದರು. ಇದೀಗ ಸಿದ್ದರಾಮಯ್ಯ ಅವರು ತಮ್ಮ ಆಪ್ತರೊಂದಿಗೆ ಆಟವಾಡುವ ಕೆಲಸ ಮಾಡುತ್ತಿದ್ದಾರೆ.

ರಾಜ್ಯ ಬರಗಾಲ ಎದುರಿಸುವ ಲಕ್ಷಣ ಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸಹಿತ ಎಲ್ಲ ಸಚಿವರು, ಶಾಸಕರು ಕಾಳಜಿ ವಹಿಸಿ ಜನರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು. ಆದರೆ, ಇವರು ಮಾತ್ರ ಇದ್ಯಾವುದಕ್ಕೂ ಗಮನ ನೀಡದೆ ಖಾತೆಗಾಗಿ ಹೊಡೆದಾಡುತ್ತಿರುವುದು ದುರದೃಷ್ಟಕರ. ಜನರ ಹಾಗೂ ರಾಜ್ಯದ ಬಗ್ಗೆ ಕಾಳಜಿ ಇಲ್ಲದ ಸರ್ಕಾರದಿಂದ ಅಭಿವೃದ್ಧಿ ಕಾರ್ಯಗಳು ನಡೆಯುವುದು ಅನುಮಾನವೇ. ಇಂತಹ ಸರ್ಕಾರಗಳಿಗೆ ಜನರೇ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿರುದ್ಧ ಮಾತನಾಡುವ ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಸಚಿವ ಸ್ಥಾನ ನೀಡಲಾಗಿದೆ. ಜವಾಬ್ದಾರಿಯುತ ಸ್ಥಾನ ಪಡೆದ ಪ್ರಿಯಾಂಕ್ ಅವರು, ಸಂಘ-ಸಂಸ್ಥೆಗಳನ್ನು ಕಾಮಾಲೆ ಕಣ್ಣಿನಿಂದ ನೋಡದೆ ಅವರ ಕೆಲಸಗಳನ್ನು ಗಮನಿಸಲಿ. ಜನರ ಬೆಂಬಲ ಇರುವ ಹಾಗೂ ಜನರಿಂದಲೇ ನಡೆಯುವಂತಹ ಸಂಘಟನೆಗಳ ಸಾಮಾಜಿಕ ಕಾರ್ಯ ಗಮನಿಸಿ ಬೆಂಬಲಿಸುವಂತಹ ಕೆಲಸ ಮಾಡಲಿ ಎಂದು ಅರವಿಂದ ಬೆಲ್ಲದ ತಿಳಿಸಿದ್ದಾರೆ.

ಸೋಂದಾ ಶಾಲ್ಮಲಾ ನದಿ ತೀರದಲ್ಲಿ ಬೃಹತ್ ಜನಾಂದೋಲನ

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಪ್ರಸ್ತಾಪಿತ ನದಿ ತಿರುವು ಹಾಗೂ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ವಿರೋಧಿಸಿ, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶುಕ್ರವಾರ ಸಂಜೆ ಸೋಂದಾ ಶಾಲ್ಮಲಾ ನದಿ ತೀರದಲ್ಲಿ ಬೃಹತ್ ಜನಾಂದೋಲನ ಹಾಗೂ ವೃಕ್ಷಾರೋಪಣ ಹಮ್ಮಿಕೊಳ್ಳಲಾಗಿತ್ತು.

ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಆಯೋಜಿಸಿದ್ದ ಸಭೆಯ ಸಾನ್ನಿಧ್ಯ ವಹಿಸಿದ್ದ ಸೋಂದಾ ಸ್ವರ್ಣವಲ್ಲೀ ಶ್ರೀಮದ್ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಪಶ್ಚಿಮ ಘಟ್ಟದ ಪರಿಸರ ರಕ್ಷಣೆಗೆ ಮುಂದಿನ 12 ದಿನಗಳಲ್ಲಿ ವ್ಯಾಪಕ ಗಿಡ ನೆಡುವಿಕೆ ಹಾಗೂ ಪತ್ರ ಚಳವಳಿ ನಡೆಸಲು ಕರೆ ನೀಡಿದರು.

ಶ್ರೀ ಮನ್ನೆಲೆಮಾವು ಮಠದ ಶ್ರೀ ಶ್ರೀಮದ್ ಮಾಧವಾನಂದ ಭಾರತೀ ಸ್ವಾಮೀಜಿ ಮಾತನಾಡಿ, ಯೋಜನೆಗಳ ಹೆಸರಿನಲ್ಲಿ ಜನರನ್ನು ಪಶ್ಚಿಮ ಘಟ್ಟದಿಂದ ಓಡಿಸುವ ಹುನ್ನಾರ ನಡೆಯುತ್ತಿದ್ದು, ಕೈಗಾ ವಿಕಿರಣದಿಂದ ಯಲ್ಲಾಪುರದ ಕಳಚೆಯಲ್ಲಿ ಕ್ಯಾನ್ಸರ್ ಹೆಚ್ಚುತ್ತಿರುವುದು ಆಘಾತಕಾರಿ ಎಂದರು. ಕಾರ್ಯಕ್ರಮದಲ್ಲಿ ಶ್ರೀಮದ್ ಶ್ರೀ ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ ಉಪಸ್ಥಿತರಿದ್ದರು.

ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಶ್ರೀಗಳ ಸೂಚನೆಯಂತೆ ಸಿಎಂ ಹಾಗೂ ಡಿಸಿಎಂ ಭೇಟಿಯಾಗಿ ವಿರೋಧ ತಿಳಿಸಿದ್ದಾಗಿ ಹೇಳಿದರೆ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ರಾಜ್ಯ ಸರ್ಕಾರ ಡಿಪಿಆರ್ ಸಲ್ಲಿಸದಿದ್ದರೆ ಯೋಜನೆ ಜಾರಿಗೆ ತರುವುದಿಲ್ಲ ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿರುವುದಾಗಿ ತಿಳಿಸಿದರು.

ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮಾತನಾಡಿ, ಯೋಜನೆಗಳ ವಿರುದ್ಧ ಈಗಾಗಲೇ ಸುಪ್ರೀಂ ಕೋರ್ಟ್‌ಗೆ ದೂರು ಸಲ್ಲಿಸಲಾಗಿದೆ ಎಂದರು.

ಜೂನ್ 7ರಂದು ಸಿದ್ದಾಪುರದಲ್ಲಿ ಗೋಪಾಲಕೃಷ್ಣ ಹೆಗಡೆ ತಂಗಾರಮನೆ ನೇತೃತ್ವದಲ್ಲಿ ವೃಕ್ಷಾರೋಪಣ, ಜೂನ್ 10ರಂದು ಯಲ್ಲಾಪುರದಲ್ಲಿ ನರಸಿಂಹ ಸಾತೊಡ್ಡಿ ನೇತೃತ್ವದಲ್ಲಿ 'ಹಸಿರು ಸಮಾರಂಭ' ಹಾಗೂ ಜೂನ್ 15ರಂದು ವಿಶ್ವನಾಥ ಶಿಗೇಹಳ್ಳಿ ನೇತೃತ್ವದಲ್ಲಿ ಸಿಎಂಗೆ 20 ಸಾವಿರ ಪತ್ರ ಬರೆಯುವ ಚಳವಳಿ ಹಮ್ಮಿಕೊಳ್ಳಲಾಗಿದೆ.

ವೇದಿಕೆಯಲ್ಲಿ ವಿ.ಎನ್.ಹೆಗಡೆ ಬೊಮ್ಮನಳ್ಳಿ, ಸಂದೀಪ ಸೂರ್ಯವಂಶಿ, ಆರ್.ಎಂ.ಹೆಗಡೆ ಬಾಳೇಸರ, ಎನ್.ವಿ.ಹೆಗಡೆ ಮುತ್ತಿಗೆ ಇದ್ದರು. ಸುರೇಶ ಹೆಗಡೆ ಹಕ್ಕಿಮನೆ ನಿರೂಪಿಸಿ, ರತ್ನಾಕರ ಹೆಗಡೆ ಬಾಡಲಕೊಪ್ಪ ವಂದಿಸಿದರು.



ಕೇಂದ್ರ ಸಚಿವ ಗಡ್ಕರಿಗೆ ಬೆದರಿಕೆ ಹಾಕಿದ್ದ ಕೈದಿಗೆ ಪೊಲೀಸರ ಡ್ರಿಲ್



ಬೆಳಗಾವಿ: ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಕೈದಿ ಮೊಬೈಲ್ ಬಳಕೆ ಮಾಡಿದ ಪ್ರಕರಣ ಇದೀಗ ಹೊಸ ತಿರುವು ಪಡೆದುಕೊಂಡಿದ್ದು, ಪ್ರಕರಣದ ತನಿಖೆಯನ್ನು ಬೆಳಗಾವಿ ಪೊಲೀಸರು ತೀವ್ರಗೊಳಿಸಿದ್ದಾರೆ.

ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದ್ದು, ಜೈಲಿನೊಳಗೆ ಮೊಬೈಲ್ ಹಾಗೂ ಸಿಮ್ ಕಾರ್ಡ್ ಪೂರೈಕೆ ಮಾಡಿದ ಜಾಲದ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಪ್ರಕರಣವನ್ನು ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಗಂಭೀರವಾಗಿ ಪರಿಗಣಿಸಿರುವ ಹಿನ್ನೆಲೆಯಲ್ಲಿ ಜೈಲಿನಲ್ಲೇ ನಟೋರಿಯಸ್ ಕೈದಿ ಜಯೇಶ್ ಪೂಜಾರಿಯನ್ನು ಕೋರ್ಟ್ ಅನುಮತಿ ಪಡೆದು ತೀವ್ರ ವಿಚಾರಣೆ ನಡೆಸಲಾಗುತ್ತಿದೆ. ಆದರೆ, ತನಿಖಾಧಿಕಾರಿಗಳು ಕೇಳುತ್ತಿರುವ ಹಲವು ಪ್ರಶ್ನೆಗಳಿಗೆ ಕೈದಿ ಸಮರ್ಪಕ ಉತ್ತರ ನೀಡದೆ ಮೌನ ವಹಿಸಿದ್ದಾನೆ ಎಂದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ತನಿಖಾ ತಂಡವು ಇನ್ನಷ್ಟು ಮಾಹಿತಿ ಕಲೆ ಹಾಕಲು ಮುಂದಾಗಿದೆ.

ಕೇಂದ್ರ ಸಚಿವ ನಿತಿನ್ ಗಡ್ಕರಿಗೆ ಜೀವ ಬೆದರಿಕೆ ಹಾಕಿದ್ದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳ ನಡೆಸಿತ್ತು. ಆ ತನಿಖೆಯ ವೇಳೆ ಕೈದಿ ಜಯೇಶ್ ಪೂಜಾರಿ ಹಿಂಡಲಗಾ ಜೈಲಿನೊಳಗೇ ಇದ್ದುಕೊಂಡು 28 ಬಾರಿ ಮೊಬೈಲ್ ಬಳಕೆ ಮಾಡಿರುವುದು ಪತ್ತೆಯಾಗಿತ್ತು. ಜೈಲಿನ ಭದ್ರತಾ ವ್ಯವಸ್ಥೆಯ ನಡುವೆಯೂ ಮೊಬೈಲ್ ಬಳಕೆಯಾಗಿರುವುದು ತನಿಖಾ ಸಂಸ್ಥೆಗಳಿಗೂ ಆತಂಕ ಮೂಡಿಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ನಾಗಪುರ ನ್ಯಾಯಾಲಯ ಜಯೇಶ್ ಪೂಜಾರಿಗೆ ಐದು ವರ್ಷಗಳ ಶಿಕ್ಷೆ ವಿಧಿಸಿದೆ. ಬಳಿಕ ಎನ್‌ಐಎ ಅಧಿಕಾರಿಗಳು ನೀಡಿದ ಮಾಹಿತಿಯ ಮೇರೆಗೆ ಹಿಂಡಲಗಾ ಜೈಲು ಅಧಿಕಾರಿಗಳು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆ ದೂರು ಆಧರಿಸಿ ಇದೀಗ ಬೆಳಗಾವಿ ಪೊಲೀಸರು ಪ್ರತ್ಯೇಕ ತನಿಖೆ ಆರಂಭಿಸಿದ್ದಾರೆ.

ಜೈಲಿನೊಳಗೆ ಮೊಬೈಲ್, ಸಿಮ್ ಕಾರ್ಡ್ ಹಾಗೂ ಇತರ ಸಂಪರ್ಕ ಸಾಧನಗಳನ್ನು ಯಾರು ಪೂರೈಸುತ್ತಿದ್ದರು?, ಜೈಲು ಸಿಬ್ಬಂದಿಗಳ ಪಾತ್ರ ಇದೆಯೇ?, ಹೊರಗಿನಿಂದ ಯಾವ ಜಾಲ ಕಾರ್ಯನಿರ್ವಹಿಸುತ್ತಿತ್ತು? ಎಂಬ ಹಲವು ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತನಿಖೆಯ ಭಾಗವಾಗಿ ಜೈಲಿನ ಕೆಲ ಸಿಬ್ಬಂದಿ ಹಾಗೂ ಕೈದಿಗಳ ಮಾಹಿತಿ ಸಂಗ್ರಹ ಕಾರ್ಯವೂ ನಡೆಯುತ್ತಿದೆ ಎಂದು ತಿಳಿದು ಬಂದಿದೆ.

ಬಿಲ್ ಬಿಡುಗಡೆಗೆ ಸರ್ಕಾರಕ್ಕೆ ಗಡುವು | ಪ್ಯಾಕೇಜ್ ಟೆಂಡರ್ ಕೈಬಿಡಲು ಆಗ್ರಹ
ಗುತ್ತಿಗೆದಾರರ 23 ಸಾವಿರ ಕೋಟಿ ರೂ. ಬಾಕಿ

ಧಾರವಾಡ: ಉತ್ತರ ಕರ್ನಾಟಕದ ಗುತ್ತಿಗೆದಾರರ ರೂ.23 ಸಾವಿರ ಕೋಟಿ ಬಾಕಿ ಇದೆ. ಬಾಕಿ ಬಿಲ್ ಪಾವತಿಸುವವರೆಗೆ ಹೊಸ ಟೆಂಡರ್ ಕರೆಯಬಾರದು ಎಂದು ಉತ್ತರ ಕರ್ನಾಟಕ ಸಿವಿಲ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸುಭಾಷ ಪಾಟೀಲ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಲೋಕಪಯೋಗಿ ಇಲಾಖೆ ರೂ.4 ಸಾವಿರ, ಬೃಹತ್ ನೀರಾವರಿ ಇಲಾಖೆ ರೂ.5 ಸಾವಿರ, ಸಣ್ಣ ನೀರಾವರಿ ಇಲಾಖೆ ರೂ.2 ಸಾವಿರ, ಇತರೆ ಇಲಾಖೆ ರೂ.12 ಸಾವಿರ ಕೋಟಿ ಬಾಕಿ ಇದೆ ಎಂದರು.

ಆಸ್ತಿ ಮುಟ್ಟುಗೋಲು: ಸರ್ಕಾರ ಗುತ್ತಿಗೆದಾರರಿಗೆ ಬಾಕಿ ಹಣ ನೀಡದ ಕಾರಣ ಸಾಕಷ್ಟು ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದಾರೆ. ಬ್ಯಾಂಕಿನ ಬಡ್ಡಿ ತುಂಬದ ಕಾರಣ ಅಧಿಕಾರಿಗಳು ಆಸ್ತಿ ಮತ್ತು ಯಂತ್ರೋಪಕರಣಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು.

ಆತ್ಮಹತ್ಯೆ ದಾರಿ: ಸಮಾಜದಲ್ಲಿ ಅವಮಾನಕ್ಕೆ ಹೆದರಿದ ಗುತ್ತಿಗೆದಾರರ ಆತ್ಮಹತ್ಯೆಗೆ ಶರಣಾಗುವುದು ಖೇದಕರ. ಕಾಮಗಾರಿಯ ಪೂರ್ಣ ಹಣವಿದ್ದರೆ ಹೊಸ ಟೆಂಡರ್ ಕರೆಯಬೇಕು. 60 ದಿನಗಳಲ್ಲಿ ಬಿಲ್ ಪಾವತಿಸದಿದ್ದರೆ, ಬ್ಯಾಂಕಿಗೆ ಬಡ್ಡಿ ಕಟ್ಟುವುದು ತಪ್ಪುವುದಿಲ್ಲ ಎಂದರು.

> **ಗುತ್ತಿಗೆದಾರರು ಕಾರ್ಯಾದೇಶ ಪಡೆದ ನಂತರ ಕ್ಷೇತ್ರದ ಶಾಸಕರು ಕಾಮಗಾರಿಗೆ ಪೂಜೆ ಮಾಡಬೇಕೆಂದು ಅಧಿಕಾರಿಗಳು ಒತ್ತಾಯಿಸುತ್ತಾರೆ. ಆದರೆ, ಶಾಸಕರು ಬೇಗನೇ ಪೂಜೆ ಮಾಡುವುದಿಲ್ಲ. ಈ ಪದ್ಧತಿ ಭ್ರಷ್ಟಾಚಾರಕ್ಕೂ ನಾಂದಿ ಹಾಡಲಿದೆ. ಕಾಮಗಾರಿ ಪಡೆದ ಗುತ್ತಿಗೆದಾರರಿಂದ ಶಾಸಕರ ಕಟೌಟ್, ಪೂಜಾ ಸ್ಥಳದಲ್ಲಿ ಪೆಂಡಾಲ್ ಹಾಗೂ ಶಾಸಕರ ಕಾರ್ಯಕರ್ತರಿಗೆ ಊಟ ಹಾಕಿಸುವುದು ಇಂತಹ ಅನಗತ್ಯ ಖರ್ಚುಗಳ ಗುತ್ತಿಗೆದಾರರಿಗೆ ಹೊರೆಯಾಗಲಿವೆ.**
>
> ■ **ರವೀಂದ್ರ ಮಾನೆ,** ಪ್ರಧಾನ ಕಾರ್ಯದರ್ಶಿ ಉತ್ತರ ಕರ್ನಾಟಕ ಗುತ್ತಿಗೆದಾರರ ಅಸೋಸಿಯೇಷನ್

ಪೊಲೀಸರಿಗೆ ಹಪ್ತಾ: ಮೊರಂ, ಮರಳು, ಜಲ್ಲಿಕಲ್ಲು ತರುವಾಗ ಪೊಲೀಸರು ಎಂಡಿಪಿ ಕೇಳುತ್ತಾರೆ. ಅದು ರೈತರಲ್ಲಿ ಇಲ್ಲದಕ್ಕೆ ಪೊಲೀಸರಿಗೆ ಹಪ್ತಾ ಕೊಡಬೇಕು. ಹೀಗಾಗಿ ಎಂಡಿಪಿಯಿಂದ ವಿನಾಯತಿ ನೀಡಬೇಕು, ಇಲ್ಲವೇ ಸರ್ಕಾರವೇ ಜಲ್ಲಿಕಲ್ಲು, ಮೊರಂ ಪೂರೈಸಲು ಆಗ್ರಹಿಸಿದರು.

ನಿರ್ವಹಣೆ ಸಮಯ: ಇಲಾಖೆಯಲ್ಲಿ ಟೆಂಡರ್ ಕರೆಯುವಾಗ ಮಳೆಗಾಲ ಸಹಿತವಾಗಿ ಎಂದು ಟೆಂಡರ್ ಆಹ್ವಾನ ಅವೈಜ್ಞಾನಿಕ. ಡಾಂಬರ್ ರಸ್ತೆ ಕಾಮಗಾರಿ ಮಳೆಗಾಲದಲ್ಲಿ ನಿರ್ವಹಣೆ ಅಸಾಧ್ಯ. ಈ ಕಾಮಗಾರಿ ಆರು ತಿಂಗಳ ಬದಲು, ಒಂದು ವರ್ಷಕ್ಕೆ ವಿಸ್ತರಿಸಲು ಒತ್ತಾಯಿಸಿದರು.

ಮುಖ್ಯ ಅಭಿಯಂತರರಿಗೆ ಟೆಂಡರ್‌ಗಳ ಅನುಮೋದನೆ ಅಧಿಕಾರ ನೀಡಬೇಕು. ರೂ.2 ಕೋಟಿ ಮೇಲ್ಪಟ್ಟ ಕಾಮಗಾರಿಗೆ 2 ವರ್ಷ, ರೂ.2 ಕೋಟಿ ಒಳಗಿರುವ ಕಾಮಗಾರಿಗೆ ಒಂದು ವರ್ಷ ನಿರ್ವಹಣೆ ಸಮಯ ನಿಗದಿಪಡಿಸಬೇಕು ಎಂದು ಕೋರಿದರು.

ಪ್ಯಾಕೇಜ್ ಟೆಂಡರ್‌ನಿಂದ ಸಣ್ಣ-ಮಧ್ಯಮ ಗುತ್ತಿಗೆದಾರರಿಗೆ ತೊಂದರೆ ಆಗಲಿದೆ. ಹೀಗಾಗಿ ಪ್ಯಾಕೇಜ್ ಟೆಂಡರ್ ಕರೆಯಬಾರದು. ಬೇಡಿಕೆ ಈಡೇರಿಕೆಗೆ ಸರ್ಕಾರಕ್ಕೆ 2 ತಿಂಗಳ ಗಡುವು ನೀಡಿದೆ. ಈಡೇರಿಸದಿದ್ದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ಸಸಿ ನೆಡುವ ಮೂಲಕ ಎಸ್.ಕೆ.ಬೆಳ್ಳುಬ್ಬಿ ಜನ್ಮದಿನ ಆಚರಣೆ

ಕೊಲ್ಹಾರ: ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರ ಜನ್ಮದಿನ ಮತ್ತು ವಿಶ್ವ ಪರಿಸರ ದಿನ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಏಕ್ ಪೇಡ್ ಮಾ ಕೆ ನಾಮ್ ಅಭಿಯಾನಕ್ಕೆ ಪಟ್ಟಣದ ವಿಶ್ವಭಾರತಿ ವಿದ್ಯಾ ವರ್ಧಕ ಸಂಘದಯಲ್ಲಮ್ಮ ದೇವಿ ಸಿಬಿಎಸ್‌ಇ ಶಾಲಾ ಆವರಣದಲ್ಲಿ ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕೈಲಾಸನಾಥ ಸ್ವಾಮೀಜಿ, ಬಿಜೆಪಿ ಮಂಡಲ ಅಧ್ಯಕ್ಷ ಸಿದ್ದರಾಮ ಕಾಕಂಡಕಿ, ಡೊಂಗ್ರಿಸಾಬ ಗಿರಗಾಂವಿ, ರಮೇಶ್ ಗಾಯಕವಾಡ, ಪ್ರಶಾಂತ ಪವಾರ, ಚಿನ್ನಪ್ಪ ಗಿಡ್ಡಪ್ಪಗೋಳ, ಮಲ್ಲಿಕಾರ್ಜುನ ದೇವರಮನಿ, ಗುರು ಚಲವಾದಿ, ಗುರುಪಾದ ಗಣಿ, ಜಗದೀಶ ಸುನಗದ ಸೇರಿದಂತೆ ಎಸ್.ಕೆ.ಬೆಳ್ಳುಬ್ಬಿ ಅಭಿಮಾನಿ ಬಳಗದ ಕಾರ್ಯಕರ್ತರು ಇದ್ದರು.



ಮಾಜಿ ಶಾಸಕನ ಮೇಲೆ ಎಫ್‌ಐಆರ್ ರಾಜಕೀಯ ಪ್ರೇರಿತ
ಅಪ್ಪುಗೌಡರ ತೇಜೋವಧೆಗೆ ಪ್ರಯತ್ನ: ಅಶೋಕ್ ಬಗಲಿ

ಕಲಬುರಗಿ: ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ರಾಜಕೀಯ ಪ್ರೇರಿತವಾಗಿದ್ದು, ಸುಳ್ಳು ಆರೋಪಗಳ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಅಶೋಕ್ ಬಗಲಿ ಆರೋಪಿಸಿದರು.



ನಗರದ ಹೊರವಲಯದ ನಾಗೇನಹಳ್ಳಿ ರಸ್ತೆಯ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.1ರಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿಯಲ್ಲಿ ದತ್ತಾತ್ರೇಯ ಪಾಟೀಲ ರೇವೂರ ಅವರು ತಮ್ಮ ಭಾಷಣದಲ್ಲಿ ಈ ಹಿಂದೆ ನಡೆದ ರಾಜಕೀಯ ಬೆಳವಣಿಗೆಗಳು ಹಾಗೂ ಮಾಜಿ ಸಚಿವ ದಿವಂಗತ ಖಮರುಲ್ ಇಸ್ಲಾಂ ಅವರ ಕೆಲವು ಭಾಷಣಗಳ ಕುರಿತು ಪ್ರಸ್ತಾಪಿಸಿದ್ದರು. ಆದರೆ, ಅವರ ಭಾಷಣದಲ್ಲಿ ಯಾವುದೇ ದುರುದ್ದೇಶ ಅಥವಾ ಕೋಮು ಸೌಹಾರ್ದತೆಗೆ ಧಕ್ಕೆ ತರುವ ಉದ್ದೇಶ ಇರಲಿಲ್ಲ ಎಂದು ಸ್ಪಷ್ಟಪಡಿಸಿದರು.

ಕೆಲವು ಕಾಂಗ್ರೆಸ್ ಮುಖಂಡರು, ಮಹಾನಗರ ಪಾಲಿಕೆ ಸದಸ್ಯರು ಹಾಗೂ ಅವರ ಬೆಂಬಲಿಗರು ಅಧಿಕಾರಿಗಳ ಮೇಲೆ ಒತ್ತಡ ಹೇರಿ ರೇವೂರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ದೂರಿದ ಅವರು, ಇದು ಖಂಡನೀಯ ಹಾಗೂ ವಿಷಾದನೀಯ ಬೆಳವಣಿಗೆಯಾಗಿದೆ. ಇದೇ ವೇಳೆ, ನಗರದ ಜಗತ್ ವೃತ್ತದಿಂದ ರೈಲ್ವೆ ನಿಲ್ದಾಣದವರೆಗೆ ನೂರಾರು ಬೈಕ್‌ಗಳಲ್ಲಿ ರ್‍ಯಾಲಿ ನಡೆಸಿ ಸಾರ್ವಜನಿಕರಲ್ಲಿ ಆತಂಕದ ವಾತಾವರಣ ನಿರ್ಮಿಸಿದವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ದತ್ತಾತ್ರೇಯ ಪಾಟೀಲ ರೇವೂರ ಅವರ ವಿರುದ್ಧ ಅವಹೇಳನಕಾರಿ ಪೋಸ್ಟ್‌ಗಳು ಮತ್ತು ಕೋಮು ಉದ್ವಿಗ್ನತೆ ಸೃಷ್ಟಿಸುವ ರೀತಿಯ ಹೇಳಿಕೆಗಳು ಹರಿದಾಡುತ್ತಿದ್ದು, ಇಂತಹ ಕಿಡಿಗೇಡಿಗಳ ವಿರುದ್ಧ ತಕ್ಷಣ ಎಫ್‌ಐಆರ್ ದಾಖಲಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ಶಿವರಾಜ್ ಪಾಟೀಲ ರದ್ದೇವಾಡಗಿ ಮಾತನಾಡಿದರು. ಅವ್ವಣ್ಣಾ ಮ್ಯಾಕೇರಿ, ಶರಣಪ್ಪ ತಳವಾರ, ಬಸವರಾಜ ಬೆಣ್ಣೂರ, ಲಿಂಗರಾಜ ಬಿರಾದಾರ, ಶೋಭಾ ಬಾಣಿ, ಉಮೇಶ್ ಪಾಟೀಲ, ಮಹಾದೇವ ಬೆಳಮಗಿ, ಶಿವಯೋಗಿ ನಾಗೇನಹಳ್ಳಿ, ವಿಶಾಲ ದರ್ಗಿ, ಆನಂದ ಪಾಟೀಲ್, ರಾಘವೇಂದ್ರ ಕುಲಕರ್ಣಿ, ಮಹೇಶ್ ಚೌಹಾಣ್, ಶಿವ ಅಷ್ಟಗಿ ಇದ್ದರು.

> **ಕಾಂಗ್ರೆಸ್‌ನವರು ಕೊಟ್ಟಿರುವ ದೂರು ಪೋಲಿಸರು ತಗೋತಾರೆ. ಬಿಜೆಪಿಯವರು ಕೊಡಲು ಬಂದಾಗ ತೋಗೊಳಲ್ಲ, ಸಾಮಾಜಿಕ ಜಾಲತಾಣದಲ್ಲಿ ಒಬ್ಬ ಮಾಜಿ ಶಾಸಕರಿಗೆ ಧಮ್ಕಿ, ಅವಾಚ್ಯವಾಗಿ ನಿಂದನೆ ಮಾಡಿದರೆ ಹೆದರುವ ಪ್ರಶ್ನೆಯೇ ಇಲ್ಲ. ಅಪ್ಪುಗೌಡರ ಹಿಂದೆ ಇಡೀ ಬಿಜೆಪಿ ಪಕ್ಷ ನಿಂತಿದೆ.**
>
> ■ **ಚಂದು ಪಾಟೀಲ, ಬಿಜೆಪಿ ನಗರಾಧ್ಯಕ್ಷ**

> **ಸಮಾಜದ ಸೌಹಾರ್ದತೆ ಕೆಡಿಸುವ ಯಾವುದೇ ಹೇಳಿಕೆ ಅಪ್ಪುಗೌಡರು ನೀಡಿಲ್ಲ. ಅವರು ಹಿಂದೆ ಶಾಸಕರಾಗಿದ್ದಾಗಲೂ ಈ ರೀತೀ ಮಾತನಾಡಿಲ್ಲ, ಸಮಾಜದಲ್ಲಿ ಶಾಂತಿ ಕದಡುವ ಕೆಲಸವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ಈ ನಿಟ್ಟಿನಲ್ಲಿ ಕಾನೂನಾತ್ಮಕ ಹೋರಾಟ ಮಾಡಲು ಸಹ ಬಿಜೆಪಿ ಸಿದ್ಧವಿದೆ.**
>
> ■ **ಅಮರನಾಥ ಪಾಟೀಲ, ಮಾಜಿ ಎಂಎಲ್ಸಿ**

ಉದ್ಯೋಗ ಕೊಡಿಸುವುದಾಗಿ ವಂಚನೆ: ಇಬ್ಬರ ಬಂಧನ

ಕಲಬುರಗಿ: ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಜನರಿಗೆ ವಂಚನೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಘವೇಂದ್ರ ನಗರ ಪೊಲೀಸ್ ಠಾಣೆ ಪೊಲೀಸರು ಬಂಧಿಸಿ, ನಾಲ್ಕು ಮೊಬೈಲ್‌ಗಳು ಸೇರಿದಂತೆ ವಿವಿಧ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.



ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆಜಾದ್‌ಪುರ ರಸ್ತೆಯ ನಿವಾಸಿ ಹಾಗೂ ಚಿಕನ್ ವೆಸ್ಟೇಜ್ ಉದ್ಯಮ ನಡೆಸುತ್ತಿರುವ ಅಶರಫ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು. ಆರೋಪಿಗಳು ರೈಲ್ವೆ, ಅಂಚೆ ಇಲಾಖೆ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಅಭ್ಯರ್ಥಿಗಳಿಂದ 5 ಲಕ್ಷ ರೂ. ಪಡೆದುಕೊಳ್ಳುವುದಾಗಿ ಆಮಿಷ ಒಡ್ಡುತ್ತಿದ್ದರು. ಅಲ್ಲದೆ, ಅಭ್ಯರ್ಥಿಗಳನ್ನು ಪರಿಚಯಿಸಿದವರಿಗೆ 1 ಲಕ್ಷ ರೂ. ಕಮಿಷನ್ ನೀಡುವುದಾಗಿ ಭರವಸೆ ನೀಡುತ್ತಿದ್ದರು ಎಂದರು.

ಈ ಕುರಿತು ರಾಘವೇಂದ್ರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಬಿಹಾರ ಮೂಲದ ಪ್ರೇಮಶಾಮಕುಮಾರ ಮೋಹನಸಿಂಗ್ (32) ಹಾಗೂ ಗಣೇಶಕುಮಾರ ಸಿಂಗ್ (40) ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ. ವಿಚಾರಣೆ ವೇಳೆ ಆರೋಪಿಗಳು ವಂಚನೆ ಕೃತ್ಯ ಎಸಗಿರುವುದನ್ನು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

> **ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಹಣ ಕೇಳುವ ವ್ಯಕ್ತಿಗಳ ಮಾತಿಗೆ ಮರುಳಾಗಬಾರದು. ಇಂತಹ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ತಕ್ಷಣವೇ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು.**
>
> ■ **ಡಾ.ಶರಣಪ್ಪ ಎಸ್.ಡಿ., ನಗರ ಪೊಲೀಸ್ ಆಯುಕ್ತ**

ಬಂಧಿತರಿಂದ 4 ಮೊಬೈಲ್‌ಗಳು, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಹಾಗೂ ಎಟಿಎಂ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪ್ರಕರಣದ ಇತರೆ ಆರೋಪಿತರ ಪತ್ತೆ ಕಾರ್ಯ ಮುಂದುವರಿದಿದೆ.

ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅಭಿನಂದಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ಶ್ರೀಗಂಗಾ ಪರಮೇಶ್ವರಿ ಜಾತ್ರಾ ಮಹೋತ್ಸವ

ಮುಂಡಗೋಡ: ಪಟ್ಟಣದ ನ್ಯಾಸರ್ಗಿ ರಸ್ತೆಯಲ್ಲಿರುವ ಶ್ರೀಗಂಗಾ ಪರಮೇಶ್ವರಿ ದೇವಸ್ಥಾನದ 15ನೇ ವರ್ಷದ ಜಾತ್ರಾ ಮಹೋತ್ಸವ ಶನಿವಾರ ನಡೆಯಲಿದೆ. ಬೆಳಗ್ಗೆ 9 ಗಂಟೆಗೆ ಗಣಹೋಮ, ದುರ್ಗಾ ಹೋಮ, ಅಭಿಷೇಕ, ಪಂಚಾಮೃತಾಭಿಷೇಕ, ಸಹಸ್ರ ಕುಂಕುಮಾರ್ಚನೆ, ಪಲಪುಷ್ಪ ಸಮರ್ಪಣೆ ಹಾಗೂ ಮಹಾ ಮಂಗಳಾರತಿ ಸೇವೆ ನಡೆಯಲಿದೆ ಎಂದು ಶ್ರೀಗಂಗಾ ಪರಮೇಶ್ವರಿ ದೇವಸ್ಥಾನದ ಟ್ರಸ್ಟ್ ಕಮಿಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಶ್ವ ಪರಿಸರ ದಿನಾಚರಣೆ



ಗೋಕರ್ಣ: ಇಲ್ಲಿನ ಕೆನರಾ ಶಿಕ್ಷಣ ಪ್ರಸಾರಕ ಮಂಡಳದ ಭದ್ರಕಾಳಿ ಪದವಿ ಪೂರ್ವ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಯೋಜನಾ ಘಟಕದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಪರಿಸರದ ಕುರಿತಾದ ಜಾಗೃತಿ ಭಾಷಣ ಹಾಗೂ ಘೋಷಣಾ ವಾಕ್ಯಗಳ ಕುರಿತಾದ ಸ್ಪರ್ಧೆ ಶುಕ್ರವಾರ ನಡೆಯಿತು.

ಉಪನ್ಯಾಸಕರಾದ ರಾಮಮೂರ್ತಿ ನಾಯಕ ಕಾರ್ಯಕ್ರಮ ಉದ್ಘಾಟಿಸಿ, ಹಸಿರು- ಉಸಿರು ಎನ್ನುವ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಎಸ್. ಸಿ.ನಾಯ್ಕ ಮಾತನಾಡಿ, ಪ್ರಕೃತಿಯೊಡನೆ ಬದುಕುವ ರೀತಿಯನ್ನು ನಮಗೆ ನಮ್ಮ ಪೂರ್ವಜರು ತೋರಿಸಿಕೊಟ್ಟಿದ್ದಾರೆ.ಆದರೆ ನಾವಿಂದು ಈ ಪ್ರಕೃತಿಯನ್ನು ನಾಶ ಮಾಡುತ್ತಾ ಇದರ ಪರಿಣಾಮವನ್ನು ಅನುಭವಿಸುತ್ತಿದ್ದೇವೆ. ಇದು ಹೀಗೆ ಮುಂದುವರಿದಲ್ಲಿ ಮುಂದಿನ ಪೀಳಿಗೆ ಅನಾನುಕೂಲವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಎಲ್ಲರೂ ಜಾಗೃತರಾಗಿ ಪರಿಸರ ಸಂರಕ್ಷಣೆಗೆ ಕಟ್ಟಿ ಬದ್ಧರಾಗಬೇಕು ಎಂದು ಹೇಳಿದರು.

ಸ್ಪರ್ಧೆಯಲ್ಲಿ ವಿಜೇತರಾದ ಶ್ರೀಮತಿ ಗೌಡ, ಲತಾ ಗೌಡ, ಮೇಘನಾ ಹುಲಸ್ವಾರ್ ಈ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ವೇದಿಕೆಯಲ್ಲಿ ಉಪನ್ಯಾಸಕರಾದ ಎನ್.ಎಸ್.ಲಮಾಣಿ, ರಾಜಶೇಖರ ಬಾಗೇವಾಡಿ, ರೋಹಿತ ನಾಯಕ, ಸಾವಿತ್ರಿ ಗೌಡ, ಮಂಜು ಮುಕ್ರಿ ಉಪಸ್ಥಿತರಿದ್ದರದ್ದು. ಉಪನ್ಯಾಸಕಿ ಡಾ.ಪಲ್ಲವಿ ಹೆಗಡೆ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60099	69099
ಬಿಳಿಗೋಟು	26219	38199
ಕೆಂಪುಗೋಟು	26100	35099
ಚೆಟ್ಟೆ	41800	48699
ರಾಶಿ	50000	53500
ಚಾಲಿ	44299	48799
ಬಿ.ಕಾಳುಮೆಣಸು	80000	92299

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58999	61600
ರಾಶಿ	50400	56059
ಬೆಟ್ಟೆ	38599	49928
ಕೆಂಪುಗೋಟು	24899	36899
ಬಿಳಿಗೋಟು	16012	37289
ಚಾಲಿ	37709	49099
ಕೋಕಾ	16900	34699
ಕಾಳುಮೆಣಸು	55699	66789



ಮುಂಡಗೋಡ: ಪಟ್ಟಣದ ಕೆ.ಎಚ್.ಬಿ. ಕಾಲನಿಯಲ್ಲಿರುವ ರೋಟರಿ ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ಮತ್ತು ಸಿಹಿ ಹಂಚುವ ಮೂಲಕ ಶಾಲಾ ಪ್ರಾರಂಭೋತ್ಸವ ಆಚರಿಸಲಾಯಿತು. ಎಮ್.ಇ.ಎಸ್. ಖಜಾಂಚಿ ಡಾ.ಪಿ.ಪಿ.ಛಬ್ಬಿ, ಮುಖ್ಯೋಪಾಧ್ಯಾಯ ಜಿ.ಎನ್. ಕುಲಕರ್ಣಿ, ಶಿಕ್ಷಕರು ಮತ್ತು ಸಿಬ್ಬಂದಿ ಇದ್ದರು.

ಉಕದಲ್ಲಿ ಮೊದಲ ಇ-ಆಫೀಸ್ ವ್ಯವಸ್ಥೆ ಜಾರಿ

ದಾಂಡೇಲಿ: ಆಡಳಿತದಲ್ಲಿ ಪಾರದರ್ಶಕತೆ, ಕಾರ್ಯಕ್ಷಮತೆ ಹಾಗೂ ದಾಖಲೆಗಳ ಸುಲಭ ಮತ್ತು ತ್ವರಿತ ನಿರ್ವಹಣೆಯನ್ನು ಉತ್ತೇಜಿಸುವ ಉದ್ದೇಶದಿಂದ ದಾಂಡೇಲಿ ನಗರಸಭೆಯಲ್ಲಿ ಇ-ಆಫೀಸ್ ವ್ಯವಸ್ಥೆ ಜಾರಿಗೊಂಡಿದ್ದು, ಇದು ಉಕ ಜಿಲ್ಲೆಯಲ್ಲಿಯೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜಾರಿಗೆ ಬಂದಿರುವ ಮೊದಲ ಡಿಜಿಟಲ್ ವ್ಯವಸ್ಥೆ ಎಂಬುದು ವಿಶೇಷವಾಗಿದೆ. ಇದು ದಾಂಡೇಲಿ ನಗರಸಭೆಯ ಪೌರಾಯುಕ್ತ ವಿವೇಕ ಬನ್ನೆಯವರ ಪ್ರಯತ್ನವಾಗಿದ್ದು, ಮೊದಲ ತಿಂಗಳಲ್ಲಿಯೇ ಈ ಡಿಜಿಟಲ್ ವ್ಯವಸ್ಥೆಯ ಮೂಲಕ 400 ಕ್ಕೂ ಹೆಚ್ಚಿನ ಅರ್ಜಿ ವಿಲೇವಾರಿ ಮಾಡಿ ಗಮನ ಸೆಳೆದಿದ್ದಾರೆ. ಇ-ಆಫೀಸ್ ವ್ಯವಸ್ಥೆಯನ್ನು ಎಲ್ಲ ಸರ್ಕಾರಿ ಕಾರ್ಯಗಳಲ್ಲಿ ಮಾಡಬೇಕೆಂಬ ಆದೇಶ ಸರ್ಕಾರದಾಗಿತ್ತು. ಇದೀಗ ಇದನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲೂ ಕೂಡ ಮಾಡಲು ಮುಂದಾಗಿದ್ದು, ಅದರ ಒಂದು ಪ್ರಯತ್ನವನ್ನು ದಾಂಡೇಲಿ ನಗರಸಭೆಯಲ್ಲಿ ಮಾಡಲಾಗಿದ್ದು, ಇದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಇ-ಆಫೀಸ್ ವ್ಯವಸ್ಥೆಯ ಮೂಲಕ ಕಡತಗಳ ವಿಲೇವಾರಿ, ಪತ್ರ ವ್ಯವಹಾರ, ಅನುಮೋದನೆ ಪ್ರಕ್ರಿಯೆ ಹಾಗೂ ವಿವಿಧ ಆಡಳಿತಾತ್ಮಕ ಕಾರ್ಯಗಳು ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಇದರಿಂದ ಸಾರ್ವಜನಿಕರ ಅರ್ಜಿಗಳ ವಿಲೇವಾರಿ ವೇಗವಾಗಿ ನಡೆಯಲು ಸಾಧ್ಯವಾಗಲಿದೆ. ನಗರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಈಗಾಗಲೇ ಇ-ಆಫೀಸ್ ಬಳಕೆಯ ಕುರಿತು ಅಗತ್ಯ ತರಬೇತಿ ನೀಡಲಾಗಿದ್ದು, ಸರ್ಕಾರದ ಡಿಜಿಟಲ್ ಆಡಳಿತದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಈ ಕ್ರಮ ಮಹತ್ವದ್ದಾಗಿದೆ ಎಂದು ಪೌರಾಯುಕ್ತ ವಿವೇಕ ಬನ್ನೆಯವರು ಅಭಿಪ್ರಾಯಿಸಿದ್ದಾರೆ.





ಮುಂಡಗೋಡ: ತಾಲೂಕಿನ ಬೆಡಸಗಾಂವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವವನ್ನು ವಿಭಿನ್ನವಾಗಿ ಆಚರಿಸಲಾಯಿತು. ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಿ ಶಾಲೆಯ ಪ್ರವೇಶ ದ್ವಾರದಲ್ಲಿ ಆಕರ್ಷಕ ರಂಗೋಲಿ ಹಾಕುವ ಮೂಲಕ ಶಿಕ್ಷಕರು, ಪಾಲಕರು ಹಾಗೂ ಸಾರ್ವಜನಿಕರು ದೀಪಗಳನ್ನು ಬೆಳಗಿಸುವ ಮೂಲಕ ಮಕ್ಕಳನ್ನು ಬರಮಾಡಿಕೊಂಡರು. ನಂತರ ಪಾಲಕ-ಪೋಷಕರ ಸಭೆ ನಡೆಸಲಾಯಿತು. ಎಸ್.ಡಿ.ಎಂ.ಸಿ. ಅಧ್ಯಕ್ಷ, ಉಪಾಧ್ಯಕ್ಷ, ಸರ್ವ ಸದಸ್ಯರು, ಬಿಸಿ ಊಟದ ಸಹಾಯಕಿಯರು ಇದ್ದರು.

ಮೂರಿನಕಟ್ಟೆ ಧ್ವಂಸಕ್ಕೆ ತೀವ್ರ ಆಕ್ರೋಶ
ಭಟ್ಕಳದಲ್ಲಿ ಹಿಂದು ಸಂಘಟನೆ ಪ್ರತಿಭಟನೆ

ಭಟ್ಕಳ : ಪಟ್ಟಣದ ಮೂರಿನಕಟ್ಟೆಯ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಲಾದ ಮಾರಿ ಹೊರೆ ಇಡುವ ಕಟ್ಟೆಯನ್ನು ಧ್ವಂಸಗೊಳಿಸಿರುವುದನ್ನು ತೀವ್ರವಾಗಿ ಖಂಡಿಸಿ ಶುಕ್ರವಾರ ಸಂಜೆ ಹಿಂದು ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಸಹಾಯಕ ಆಯುಕ್ತ ಮಹೇಶ ಅವರಿಗೆ ಮನವಿ ಸಲ್ಲಿಸಲಾಯಿತು.

ಹಿಂದೂಗಳ ಶ್ರದ್ಧಾಭಕ್ತಿಯ ಮೂರಿನಕಟ್ಟೆಯನ್ನು ಧ್ವಂಸಗೊಳಿಸಿರುವುದಕ್ಕೆ ಸಾವಿರಾರು ಹಿಂದೂಗಳು ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನಾ ಮೆರವಣಿಗೆಯುದ್ದಕ್ಕೂ ಕಟ್ಟೆ ಧ್ವಂಸಗೊಳಿಸಿದವರ ವಿರುದ್ಧ ಧಿಕ್ಕಾರ ಕೂಗಿದರು.

ಕಟ್ಟೆ ಧ್ವಂಸಗೊಳಿಸಿದವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ?

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ ಪ್ರಮುಖ ಶ್ರೀಕಾಂತ ಶೆಟ್ಟಿ ಕಾರ್ಕಳ ಮಾತನಾಡಿ, ಮತಾಂಧ ಮುಸ್ಲೀಮರು ಧ್ವಂಸಗೊಳಿಸಿದ ಮೂರಿನಕಟ್ಟೆಯನ್ನು ಪುನ: ಸ್ಥಾಪಿಸಬೇಕೆಂದು ಆಗ್ರಹಿಸಿದರು. ಹಿಂದೂಗಳ ಪ್ರತಿಭಟನೆಗೆ ಸಾವಿರಗಟ್ಟಲೆ ಪೊಲೀಸರನ್ನು ಕರೆಸುವ ಸರ್ಕಾರ ಕಟ್ಟೆ ಧ್ವಂಸ ಮಾಡಿದ ಮತಾಂಧರ ಮೇಲೆ ಯಾವ ಕ್ರಮ ಕೈಗೊಂಡಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಹಿಂದುಗಳ ಶ್ರದ್ಧಾ ಭಕ್ತಿಯ ಕೇಂದ್ರದ ಜೊತೆಗೆ ಪೊಲೀಸ್ ಅಧಿಕಾರಿಗಳ ಮೇಲೆ ದಾಳಿ ಆಗಿದೆ, ಗಂಟೆಗಳ ಕಾಲ ಹೆದ್ದಾರಿ ಬಂದ್ ಮಾಡಿದ್ದಾರೆ ಅಂತವರ ಮೇಲೆ ಯಾವ ಕಠಿಣ ಕ್ರಮವಾಗಿದೆ ಎಂದು ಪ್ರಶ್ನಿಸಿದ ಅವರು ಭಟ್ಕಳದ ತಂಝೀಂ ಮುಖಂಡರ ಮೇಲೂ ಕ್ರಮ ಆಗಬೇಕು ಎಂದು ಆಗ್ರಹಿಸಿದರು.

ಭಟ್ಕಳ ಗಲಭೆಯ ತನಿಖೆಯನ್ನು ನಡೆಸಿದ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಆಯೋಗದ ವರದಿಯಲ್ಲಿ ಭಟ್ಕಳದಲ್ಲಿ ಪಾಕಿಸ್ಥಾನದ ಐ.ಎಸ್.ಐ. ಸಂಪರ್ಕದಲ್ಲಿರುವವರು ಇದ್ದಾರೆ, ಇಂಡಿಯನ್ ಮುಜಾಹಿದ್ದೀನ್ ಇಲ್ಲಿಯೇ ಹುಟ್ಟಿಕೊಳ್ಳುತ್ತದೆ ಎಂದು ಹೇಳಿದ್ದಾರೆಂದರೆ ಕಾನೂನು ಎಲ್ಲಿದೆ ಎಂದು ಪ್ರಶ್ನಿಸಿದ ಅವರು ಹಿಂದೂ ಸಮಾಜ 1993ರಲ್ಲಿ ನಡೆದ ಆಕ್ರಮಣದಲ್ಲಿ ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಂಡಂತೆ ನಮ್ಮ ರಕ್ಷಣೆಗೆ ನಾವು ಬದ್ಧರಿದ್ದೇವೆ ಎಂದರು.

ಸರ್ಕಾರದಿಂದ ಆಗದಿದ್ದರೆ ರಾಜ್ಯದಿಂದ ವಿಶ್ವ ಹಿಂದು ಪರಿಷತ್, ಭಜರಂಗ ದಳ ಬಂದು ಕಟ್ಟುವುದಕ್ಕೆ ಶಕ್ತಿ ಹೊಂದಿದ್ದೇವೆ. ಆದರೆ ಭಟ್ಕಳದ ಹಿಂದು ಸಂಘಟನೆಗಳು ತಾವೇ ಕಟ್ಟುತ್ತೇವೆ ಎಂದು ಹೇಳಿದ್ದರಿಂದ ನಾವು ಸುಮ್ಮನಾಗಿದ್ದೇವೆ ಎಂದರು.

ತಾಲೂಕು ವಿಶ್ವಹಿಂದೂ ಪರಿಷತ್ ಅಧ್ಯಕ್ಷ ರಾಮಕೃಷ್ಣ ನಾಯ್ಕ ಮಾತನಾಡಿದರು. ಪ್ರತಿಭಟನೆಯಲ್ಲಿ ಹಿಂದು ಜಾಗರಣಾ ವೇದಿಕೆಯ ಜಿಲ್ಲಾ ಪ್ರಮುಖ ಸುಬ್ರಹ್ಮಣ್ಯ ಕುಮಟಾ, ಮಾಜಿ ಸಚಿವ ಶಿವಾನಂದ ನಾಯ್ಕ, ಮಾಜಿ ಶಾಸಕ ಸುನಿಲ್ ನಾಯ್ಕ, ನಾಮಧಾರಿ ಸಮಾಜದ ಅಧ್ಯಕ್ಷ ಅರುಣ ನಾಯ್ಕ, ಹಿಂದೂ ಜಾಗರಣ ವೇದಿಕೆಯ ಸಂಚಾಲಕ ಜಯಂತ ನಾಯ್ಕ, ಪಶ್ಚಿಮಘಟ್ಟಗಳ ಕಾರ್ಯಪಡೆಯ ಮಾಜಿ ಅಧ್ಯಕ್ಷ ಗೋವಿಂದ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಪ್ರಮುಖರಾದ ಶ್ರೀಕಾಂತ ನಾಯ್ಕ, ರಾಜೇಶ ನಾಯ್ಕ, ಈಶ್ವರ ಎನ್ ನಾಯ್ಕ, ಕೃಷ್ಣಾ ನಾಯ್ಕ ಆಸರಕೇರಿ, ಶ್ರೀನಿವಾಸ ನಾಯ್ಕ, ದಿನೇಶ ನಾಯ್ಕ, ಮಾಸ್ತಪ್ಪ ನಾಯ್ಕ ಬಲ್ಸೆ, ಶೈಲೇಂದ್ರ ಜೈನ್, ಹುರಳಿಸಾಲ ಘಟಕದ ಸುಬ್ರಾಯ ನಾಯ್ಕ ಸೇರಿದಂತೆ ವಿವಿಧ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.



ಭಟ್ಕಳ ಚಲೋ ಅನಿವಾರ್ಯ

ಸಾವಿರಾರು ಜನ ಮತಾಂಧರು ಬಂದು ನಮ್ಮ ಮೂರಿನಕಟ್ಟೆ ಧ್ವಂಸ ಮಾಡಿರುವುದು ಅಕ್ಷಮ್ಯ ಅಪರಾಧ. ನಮ್ಮ ಬೇಡಿಕೆ ಈಡೇರದಿದ್ದರೆ ಮುಂದಿನ ದಿನಗಳು ಜಿಲ್ಲಾ ಮಟ್ಟದಲ್ಲಿ ಆಗಲು ಈಡೇರದಿದ್ದಲ್ಲಿ ಮುಂದೆ ರಾಜ್ಯದಿಂದ ಭಟ್ಕಳ ಚಲೋ ಮಾಡುವುದು ಅನಿವಾರ್ಯ ಎಂದು ಅವರು ಹೇಳಿದರು.

> ನಮ್ಮ ಸಮಾಜದ ಧಾರ್ಮಿಕ ನಂಬಿಕೆಯ ಸ್ಥಳ ಧ್ವಂಸ ಮಾಡಿದವರ ಮೇಲೆ ಕಠಿಣ ಕ್ರಮವಾಗಬೇಕು, ಅವರಿಗೆ ಕುಮ್ಮಕ್ಕು ನೀಡಿದವರ ಮೇಲೂ ಸೂಕ್ತ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು.
>
> ■ ಶ್ರೀಕಾಂತ ಶೆಟ್ಟಿ ಕಾರ್ಕಳ, ಹಿಂದು ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ ಪ್ರಮುಖ

ಹಾಸ್ಟೆಲ್‌ಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆಯಾಗಲಿ: ಡಾ. ದಿಲೀಷ್ ಶಶಿ

ಕಾರವಾರ: ಜಿಲ್ಲೆಯ ಎಲ್ಲಾ ಹಾಸ್ಟೆಲ್ ಗಳಲ್ಲಿ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಯಾಗುತ್ತಿರುವ ಕುರಿತು ಪರಿಶೀಲಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಜಿಪಂ ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಸೂಚಿಸಿದರು.

ಅವರು ಶುಕ್ರವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ಪೂರೈಕೆಯಾಗುತ್ತಿರುವ ಕುಡಿಯುವ ನೀರಿನ ಮೂಲ ಮತ್ತು ನೀರಿನ ಮಾದರಿಗಳನ್ನು ಪರೀಕ್ಷೆಗಳಿಗೆ ಒಳಪಡಿಸಿ, ಉತ್ತಮ ಗುಣಮಟ್ಟದ ನೀರುಪೂರೈಕೆಯಾಗುವ ಬಗ್ಗೆ ನಿರಂತರವಾಗಿ ಎಚ್ಚರವಹಿಸಬೇಕು, ಸಂಬಂಧಪಟ್ಟ ಹಾಸ್ಟೆಲ್‌ಗಳನ್ನುನಿರ್ವಹಣೆ ಮಾಡುವ ಇಲಾಖೆಗಳ ಅಧಿಕಾರಿಗಳು ಮತ್ತುಗ್ರಾಮೀಣ ಕುಡಿಯುವ ನೀರು ಮತ್ತುನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದ ಅವರು ಜಿಲ್ಲೆಯ ಎಲ್ಲಾ ಶಾಲೆಗಳು ಮತ್ತುಅಂಗನವಾಡಿಗಳಲ್ಲಿ ಕೂಡಾ ನೀರನ್ನು ಆಗಾಗ ಗುಣಮಟ್ಟಪರೀಕ್ಷೆಗೆ ಒಳಪಡಿಸುವಂತೆ ನಿರ್ದೇಶನನೀಡಿದರು.

ಜಿಲ್ಲೆಯಲ್ಲಿ ಹೊಸದಾಗಿ ಬೋರ್‌ವೆಲ್ಲಗಳನ್ನು ಕೊರೆದ ನಂತರ ಅವುಗಳಿಗೆ ಜಲ ಮರುಪೂರಣ ವ್ಯವಸ್ಥೆಯನ್ನು ಒದಗಿಸುವ ಮೂಲಕ ಆಭಾಗದಲ್ಲಿ ಅಂತರ್ಜಲ ಅಭಿವೃದ್ಧಿ ಯಾಗುವಂತೆ ಮತ್ತುಬೋರ್‌ವೆಲ್ಗಳು ನಿರಂತರವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಜಲಜೀವನ ಮಿಷನ್ ಯೋಜನೆಯಡಿ ಮಂಜೂರಾದ ಕಾಮಗಾರಿಗಳ ಅವಧಿ ವಿಸ್ತರಣೆ ಪ್ರಸ್ತಾವನೆಗಳ ಅನುಮೋದನೆ ಮತ್ತು 2026-27 ನೇಸಾಲಿನ ರೂ.139 ಲಕ್ಷದ ಟಾಸ್ಕ್ ಪೋರ್ಸ್ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

ಜಿಪಂಉಪಕಾರ್ಯದರ್ಶಿಅಲ್ಲಾಭಕಷ್ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.



ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ: ಕುಂಬಾರ

ಬನವಾಸಿ: ಪ್ರಕೃತಿಗೆ ನಾವು ಅನಿವಾರ್ಯವಲ್ಲ, ನಮಗೆ ಪ್ರಕೃತಿ ಅನಿವಾರ್ಯ ಎಂಬ ಸತ್ಯವನ್ನು ಅರಿತು ನಡೆಯೋಣ. ಪರಿಸರದಸಂರಕ್ಷಣೆ ಹಾಗೂ ಸಂವರ್ಧನೆಗೆ ನಾವು ಬದ್ಧರಾಗಿ ಬದುಕೋಣ ಎಂದು ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ಹೇಳಿದರು.

ಅವರು ಸಮೀಪದ ಕಂತ್ರಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬನವಾಸಿ ವಲಯದಿಂದ ಹಮ್ಮಿಕೊಂಡ ಪರಿಸರ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರೂ ಪರಿಸರ ಸಂರಕ್ಷಿಸಬೇಕು. ಗಿಡಮರಗಳನ್ನು ಹೆಚ್ಚು ಬೆಳೆಸುವುದರಿಂದ ಬಿಸಿಲ ಬೇಗೆ ಕಡಿಮೆಯಾಗಿ ಜನರಿಗೆ ಉತ್ತಮ ಆಮ್ಲಜನಕ ದೊರೆಯಲಿದೆ. ಪರಿಸರದ ಸೌಂದರ್ಯವೂ ಹೆಚ್ಚಾಗಲಿದೆ. ಮುಂದಿನ ಪೀಳಿಗೆಗಾಗಿ ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಜಿಲ್ಲಾ ಜನ ಜಾಗೃತಿ ವೇದಿಕೆಯ ಜಿಲ್ಲಾ ಸಂಘಟನಾ ಉಪಾಧ್ಯಕ್ಷ ಸುಧೀರ ನಾಯರ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಗಿಡ-ಮರಗಳ ಮಾರಣಹೋಮ ನಡೆಯುತ್ತಿದೆ. ಪ್ರತಿಯೊಬ್ಬರೂ ಹುಟ್ಟಿದ ದಿನದಂದು ಗಿಡ ನೆಟ್ಟು ಪೋಷಿಸಬೇಕು. ಶುಭ ಸಮಾರಂಭಗಳಲ್ಲಿ ಉಡುಗೊರೆಗಳ ಬದಲಾಗಿ ಗಿಡಗಳನ್ನು ನೀಡುವುದರಿಂದ ಪರಿಸರವನ್ನು ಉಳಿಸಬಹುದು ಎಂದರು.

ಶಿಕ್ಷಕ ಪ್ರಸನ್ನ ಕುಮಾರ್ ಮಾತನಾಡಿ, ಪರಿಸರದ ಬಗ್ಗೆ ಅರಿವಿದ್ದರೆ ಸಾಲದು. ಪ್ರಜ್ಞೆ, ಕಾಳಜಿಯೂ ಇರಬೇಕು. ನಾವು ಬದುಕುವ ಪರಿಸರವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಶಾಲಾ ಮುಖ್ಯೋಪಾಧ್ಯಾಯಿನಿ ಭಾರತಿ ಹೆಗಡೆ, ಅಧ್ಯಕ್ಷತೆವಹಿಸಿದ್ದ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ನಂಜುಡ ಗೌಡ ಮಾತನಾಡಿದರು.

ಶಾಲಾ ಆವರಣದಲ್ಲಿ ಗಣ್ಯರು ವಿವಿಧ ಹಣ್ಣಿನ ಗಿಡ ನೆಟ್ಟು ನೀರೆರೆದರು. ಶಾಲಾ ಶಿಕ್ಷಕಿಯರಾದ ಜ್ಯೋತಿ ಪಟಗಾರ, ಖುದ್ಸಿಯಾ ಅಫ್ರೀನ್, ಸಿಎಸ್‌ಸಿ ಸೇವದಾರರಾದ ಸುಮ ಸೇರಿದಂತೆ ಶಾಲಾ ವಿದ್ಯಾರ್ಥಿಗಳು, ರಾಣಿ ಚೆನ್ನಮ್ಮ ಮಹಿಳಾ ಜ್ಞಾನ ವಿಕಾಸ ಕೇಂದ್ರದ ಸದಸ್ಯರು, ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರು, ನವಜೀವನ ಸಮಿತಿ ಸದಸ್ಯರು, ಪೋಷಕರು, ಗ್ರಾಮಸ್ಥರು ಇದ್ದರು. ಬನವಾಸಿ ವಲಯ ಮೇಲ್ವಿಚಾರಕಿ ಸುನಂದಾ ನಾಯ್ಕ ನಿರೂಪಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಭಾರತಿ ಹೆಗಡೆ ಸ್ವಾಗತಿಸಿದರು. ಸೇವಾ ಪ್ರತಿನಿಧಿ ಶಿವಾಜಿ ವಂದಿಸಿದರು.



ಶ್ರಮದಾನದೊಂದಿಗೆ ಪರಿಸರ ಸಂರಕ್ಷಣೆಯ ಸಂಕಲ್ಪ

ಹಳಿಯಾಳ: ನರೇಗಾ ಯೋಜನೆಯು ಕೇವಲ ಉದ್ಯೋಗ ನೀಡುವುದಷ್ಟೇ ಅಲ್ಲ, ಜಲಮೂಲಗಳ ರಕ್ಷಣೆ ಮತ್ತು ಹಸಿರು ಕ್ರಾಂತಿಗೆ ಪೂರಕವಾಗಿದೆ. ಗ್ರಾಮೀಣ ಭಾಗದಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳಲು ನರೇಗಾ ಕಾಮಗಾರಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಪ್ರತಿಯೊಬ್ಬ ಕಾರ್ಮಿಕರೂ ತಮ್ಮ ಮನೆಯ ಸುತ್ತಮುತ್ತ ಹಾಗೂ ಕಾಮಗಾರಿ ನಡೆದ ಸ್ಥಳಗಳಲ್ಲಿ ಗಿಡಗಳನ್ನು ಬೆಳೆಸಬೇಕು ಎಂದು ಹವಗಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಹಾಂತೇಶ ಹುರಕಡ್ಲಿ ಹೇಳಿದರು.

ತಾಲೂಕಿನ ಹವಗಿ ಗ್ರಾಪಂ ವ್ಯಾಪ್ತಿಯ ಗೌಡರ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ವಿಶ್ವ ಪರಿಸರ ದಿನ ಆಚರಿಸಿ ಅವರು ಮಾತನಾಡಿದರು.

ಪ್ರತಿದಿನ ಕೇವಲ ಶ್ರಮದಾನಕ್ಕೆ ಸೀಮಿತವಾಗದೇ ನರೇಗಾ ಕೂಲಿ ಕಾರ್ಮಿಕರು, ಶುಕ್ರವಾರ ಪರಿಸರ ಉಳಿಸುವ ನಿಟ್ಟಿನಲ್ಲಿ ಸಸಿಗಳನ್ನು ನೆಟ್ಟು, ಅವುಗಳನ್ನು ಪೋಷಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದು ಮಹತ್ವದ ನಿರ್ಧಾರವಾಗಿದ್ದು, ಅವುಗಳನ್ನು ಮಕ್ಕಳಂತೆ ಪೋಷಿಸಬೇಕು ಎಂದರು.

ನರೇಗಾ ಕಾಮಗಾರಿ ಸ್ಥಳದಲ್ಲಿ ಅಧಿಕಾರಿಗಳು ಹಾಗೂ ನರೇಗಾ ಕೂಲಿ ಕಾರ್ಮಿಕರು ಜಂಟಿಯಾಗಿ ಕಾಮಗಾರಿ ಸ್ಥಳದ ಸುತ್ತಮುತ್ತ ಗಿಡಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ನರೇಗಾ ಐಇಸಿ ಸಂಯೋಜಕರಾದ ಸೌಂದರ್ಯ ಕುರಕುರಿ, ತಾಂತ್ರಿಕ ಸಹಾಯಕರಾದ ಸುಗಂಧ ಧಾಮನೇಕರ, ವಿನಯ ಕೊಳೂರ್, ಮಹೇಶ ಪಾಟೀಲ್, ಮನೀಶ್ ನಾಯ್ಕ್, ತಾಂತ್ರಿಕ ಸಹಾಯಕರಾದ(ಅರಣ್ಯ) ಅಬ್ದುಲ್ ಗಫರ್ ಸಾಬ್, ಗ್ರಾಪಂ ಸಿಬ್ಬಂದಿ, ಕಾಯಕ ಬಂಧು ಹಾಗೂ ನರೇಗಾ ಕೂಲಿಕಾರ್ಮಿಕರು ಹಾಜರಿದ್ದರು.



ಶಾಂತಿನಿಕೇತನದಲ್ಲಿ ವಿಶ್ವ ಪರಿಸರ ದಿನಾಚರಣೆ

ಅಂಕೋಲಾ: ಶಾಂತಿನಿಕೇತನ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಯನ್ನು ಗಿಡಗಳಿಗೆ ನೀರು ಹಾಕುವ ಮೂಲಕ ಆಚರಿಸಲಾಯಿತು. ಸಂಸ್ಥೆಯ ಮುಖ್ಯಸ್ಥರಾದ ಡಾ. ಸಂಜು ನಾಯಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಕ್ಕಳಿಗೆ ಗಿಡಗಳ ಮಹತ್ವದ ಬಗ್ಗೆ ತಿಳಿಹೇಳಿದರು.

ನಮ್ಮ ಸುತ್ತಮುತ್ತ ಗಿಡ ಮರಗಳು ಇದ್ದರೆ ಮಾತ್ರ ಪರಿಸರ ಒಳ್ಳೆಯದಾಗಿ ಇರುತ್ತದೆ, ಮನುಷ್ಯನಿಗೆ ಶುದ್ಧವಾದ ಗಾಳಿ ಸಿಗುತ್ತದೆ ಎಂದರು.

ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಶೀತಲ್ ನಾಯ್ಕ್, ಮಮತಾ ನಾಯ್ಕ, ಶ್ರದ್ಧಾ ಆಚಾರ್ಯ, ಮೈತ್ರಿ ಭಟ್ ಮತ್ತು ಸೌಖ್ಯಾ ಉಪಸ್ತಿತರಿದ್ದರು.



ಪರಿಸರ ಉಳಿವಿಗೆ ಕೈಜೋಡಿಸಿ: ಗಾಂವಕರ



ಅಂಕೋಲಾ: ಭಾರತೀಯ ಜನತಾ ಪಕ್ಷ ಉತ್ತರ ಕನ್ನಡ ಜಿಲ್ಲಾ ರೈತ ಮೋರ್ಚಾ, ಬಿಜೆಪಿ ಅಂಕೋಲಾ ಮಂಡಲ, ಅಗಸೂರು ಮಹಾಶಕ್ತಿ ಕೇಂದ್ರದ ವತಿಯಿಂದ ಡೋಂಗ್ರಿ ಮತ್ತು ಹೆಗ್ಗಾರ ಬೂತ್‌ಗಳ ಸಹಯೋಗದಲ್ಲಿ ವೈದ್ಯ ಹೆಗ್ಗಾರದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಮಾವು ಮತ್ತು ಹಲಸಿನ ಗಿಡಗಳನ್ನು ನೆಡಲಾಯಿತು.

ಭಾರತೀಯ ಜನತಾ ಪಕ್ಷದ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಗಾಂವಕರ ಮಾತನಾಡಿ, ಗಿಡ ಮರಗಳನ್ನು ಬೆಳೆಸುವುದು ಇಂದಿನ ಅಗತ್ಯತೆಗಳಲ್ಲಿ ಒಂದಾಗಿದ್ದು, ಪರಿಸರ ಉಳಿಸುವ ಕೆಲಸದಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು.

ಅಂಕೋಲಾ ಮಂಡಲ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಮಾತನಾಡಿ, ಹಿಂದಿನ ಜನರು ಇಂದಿನವರಿಗಾಗಿ ಗಿಡ ಮರಗಳನ್ನು ಬೆಳೆಸಿ ಕೊಡುಗೆ ನೀಡಿರುವಂತೆ ಮುಂದಿನ ಪೀಳಿಗೆಗೆ ಸ್ವಚ್ಛ ಸುಂದರ ಪರಿಸರ ಉಳಿಸುವುದು ಇಂದಿನವರ ಜವಾಬ್ದಾರಿಯಾಗಿದೆ ಎಂದರು.

ರೈತ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ವಿ.ಎಸ್.ಭಟ್ಟ, ಅಗಸೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾರಾಯಣ ಹೆಗಡೆ ಪ್ರಮುಖರುಗಳಾದ ಸುಧಾಕರ ಭಟ್ಟ, ಶೇಖರ ಗಾಂವ್ಕರ್, ಶ್ರೀಪಾದ ಬೆಳ್ಳಿ, ರಾಘವೇಂದ್ರ ಹೆಗಡೆ, ನರಸಿಂಹ ಭಟ್ಟ, ಶ್ರೀಶ ವೈದ್ಯ, ಸೂರಜ ವೈದ್ಯ ಉಪಸ್ಥಿತರಿದ್ದರು.

ಇಂದು ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ

ಯಲ್ಲಾಪುರ: ಪಟ್ಟಣದ ಅಡಿಕೆ ಭವನದಲ್ಲಿ ಜೂ೬ರಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ ಎಂದು ಮಹಾಸಭಾ ನೂತನ ಜಿಲ್ಲಾಧ್ಯಕ್ಷ ವಿ.ಎಸ್. ಪಾಟೀಲ ಹೇಳಿದರು.

ಶನಿವಾರಬೆಳಗ್ಗೆ11ಗಂಟೆಗೆಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರಾಧ್ಯಕ್ಷ, ಸಚಿವ ಈಶ್ವರ್ ಖಂಡ್ರೆ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯಾಧ್ಯಕ್ಷ , ನಿವೃತ್ತ ಐಪಿಎಸ್ ಅಧಿಕಾರಿ ಶಂಕರ ಎಂ. ಬಿದರಿ, ರಾಷ್ಟ್ರೀಯ ಮಹಿಳಾ ವಿಭಾಗ ಅಧ್ಯಕ್ಷೆ ವೀಣಾ ವಿಜಯಾನಂದ ಕಾಶಪ್ಪನವರ್ ಹಾಗೂ ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ನಟರಾಜ್ ಸಾಗರನಹಳ್ಳಿ, ರಾಜ್ಯ ಖಜಾಂಚಿ ಗಿರೀಶ ಗೌಡ ದ್ಯಾವನಹಳ್ಳಿ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.



ನಿಕಟಪೂರ್ವ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ಅಲ್ಲಯ್ಯನವರ ಮಠ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಸಮಾರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ನೂತನ ಅಧ್ಯಕ್ಷರು, ಪದಾಧಿಕಾರಿಗಳಿಗೆ ಪದಗ್ರಹಣ ನೆರವೇರಿಸಲಾಗುವುದು. ಅಂತೆಯೇ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಗುವುದು.

ವೀರಶೈವ-ಲಿಂಗಾಯತ ಸಮಾಜದ ಸಂಘಟನೆ ಬಲವರ್ಧನೆ, ಯುವಜನತೆ ಮತ್ತು ಮಹಿಳಾ ಸಬಲೀಕರಣ, ಶಿಕ್ಷಣೋನ್ನತಿ ಹಾಗೂ ಸಮಾಜದ ಸಮಗ್ರ ಅಭಿವೃದ್ಧಿಗೆ ನಿರ್ದೇಶನ ನೀಡುವ ಮಹತ್ವದ ಕಾರ್ಯಕ್ರಮ ಇದಾಗಿದ್ದು, ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದರು.

ಸುದ್ದಿ ಗೋಷ್ಠಿಯಲ್ಲಿ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ಅಲ್ಲಯ್ಯನವರಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಕುಮಾರ ದಾವಣಗೇರಿ, ಮಹಿಳಾ ಘಟಕದ ರಾಜ್ಯ ಉಪಾಧ್ಯಕ್ಷೆ ಜ್ಯೋತಿ ಪಾಟೀಲ, ಕೋಶಧ್ಯಕ್ಷ ಸಂಗಪ್ಪ ಕೋಳೂರು, ರಾಜ್ಯ ಯುವ ಘಟಕದ ಸದಸ್ಯ ರಾಜೇಶ ಹಂಚಿನಮಠ, ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಹಿರೇಮಠ, ಜಿಲ್ಲಾ ಸಮಿತಿ ಸದಸ್ಯೆ ಪ್ರಭಾವತಿ ಗೋವಿ ಇದ್ದರು.

ಪರಿಸರ ಅಭಿವೃದ್ಧಿಯೊಂದಿಗೆ ಸುಸ್ಥಿರ ಅಭಿವೃದ್ಧಿಯಾಗಲಿ: ಡಿಸಿ

ಕಾರವಾರ: ಪ್ರಕೃತಿಯು ಮನುಷ್ಯನಿಗೆ ಬದುಕಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿದ್ದು, ಪ್ರಕೃತಿಯನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರದ್ದೂ ಆಗಿದ್ದು, ಪರಿಸರ ಅಭಿವೃದ್ಧಿಯೊಂದಿಗೆ ಸುಸ್ಥಿರ ಅಭಿವೃದ್ಧಿಯಾಗಬೇಕು ಎಂದು ಜಿಲ್ಲಾ ಪರಿಸರ ಅಧಿಕಾರಿ ಬಿ.ಕೆ.ಸಂತೋಷ್ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ

ಅವರು ಶುಕ್ರವಾರ ಹಿಂದೂ ಪ್ರೌಢಶಾಲಾ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ವತಿಯಿಂದ ಆಯೋಜಿಸಲಾದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಬ್ಬರೂ ಆರೋಗ್ಯಯುತ ಜೀವನ ಸಾಗಿಸಲು ಉತ್ತಮ ಪರಿಸರ ಅತ್ಯಗತ್ಯವಾಗಿದ್ದು, ಅಭಿವೃದ್ಧಿಯ ಹೆಸರಿನಲ್ಲಿ ಪರಿಸರದ ನಾಶ ಸಲ್ಲದು. ಪರಿಸರ ಸಂರಕ್ಷಣೆಗಾಗಿ ಪ್ರತಿಯೊಬ್ಬರೂ ಒಟ್ಟಾಗಿ ಮುಂದೆ ಬರಬೇಕು. ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ತ್ಯಜಿಸಬೇಕು ಎಂದರು. ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿಯ ಯೋಜನಾ ಸಹಾಯಕಿ ಡಾ.ಅಮೃತಾ ಶೇಟ್ ಮಾತನಾಡಿದರು.

ಹಿಂದೂ ಪ್ರೌಢಶಾಲೆಯ ಮುಖ್ಯಾಧ್ಯಾಪಕ ರೋಹಿದಾಸ ದೇಶಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ವಾರ್ತಾಧಿಕಾರಿ ಬಿ. ಶಿವಕುಮಾರ್, ಸುಮತಿ ದಾಮ್ಲೆ ಪ್ರೌಢ ಶಾಲೆಯ ಮುಖೋಧ್ಯಾಪಕ ಟಿ.ಎಮ್. ಶಮೀಂದ್ರ, ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದ ಸದಸ್ಯ ಕಾರ್ಯದರ್ಶಿ ರೋಹನ ಭುಜಲೆ ಇದ್ದರು. ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಕವಿತಾ ಮೇಸ್ತ ಸ್ವಾಗತಿಸಿದರು. ಶಿಕ್ಷಕಿ ವನಿತಾ ಶೇಟ್, ನಿರೂಪಿಸಿದರು. ಪ್ರಿಯಾಂಕಾ ದೇಶಭಂಡಾರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಪರಿಸರ ದಿನಾಚರಣೆ ಪ್ರಯುಕ್ತ ಆಯೋಜಿಸಲಾದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಾದ ಕಾಂಚಿಕಾ ಆರ್. ನಾಯ್ಕ, ಸಾನಿಯಾ ಮೋಹನ ಖಾರ್ವಿ, ಎನ್.ವಿ. ಇಂಪನಾ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಅಮುಲ್ಯಾ ಖಾರ್ವಿ, ಹುರೇನ್ ಶೇಖ್, ಶ್ರೇಯಾ ಎಮ್. ಶೇಟ್ ಅವರಿಗೆ ಪ್ರಶಸ್ತಿ ವಿತರಿಸಲಾಯಿತು. ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ಶ್ರಮಿಸುತ್ತಿರುವ ಕಾರವಾರ ನಗರಸಭೆಯ ಕಿರಿಯ ಆರೋಗ್ಯ ನಿರೀಕ್ಷಕಿ ಕು. ದೀಪಾ ಎಮ್. ಶೆಟ್ಟಿ ಮತ್ತು ಪೌರಕಾರ್ಮಿಕರಾದ ಪೆದ್ದಣ್ಣ ಪೆದ್ದ ಕೊಂಡಯ್ಯ, ನಿರ್ಮಲಾ ಮಹಾಬಳೇಶ್ವರ ಕುಮಟಾಕರ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಹಿಂದೂ ಹೈಸ್ಕೂಲ್ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು.



ಕಿರುಸುದ್ದಿ

ನಾಳೆ ಮಹಾರಾಣಾ ಪ್ರತಾಪಸಿಂಹ ಜಯಂತಿ

ಹಾವೇರಿ: ಇಲ್ಲಿನ ಶಿವಾಜಿ ನಗರದ 4ನೇ ಕ್ರಾಸ್‌ನಲ್ಲಿರುವ ಗಣಪತಿ, ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಜೂ. 7ರಂದು ರಜಪೂತ ಸಮಾಜದ ವತಿಯಿಂದ ರಾಷ್ಟ್ರವೀರ ಮಹಾರಾಣಾ ಪ್ರತಾಪಸಿಂಹರವರ 486ನೇ ಜಯಂತ್ಯುತ್ಸವ ನಡೆಯಲಿದೆ. ಸಮಾಜದ ಅಧ್ಯಕ್ಷ ಲಕ್ಷ್ಮಣಸಿಂಗ್ ಎಚ್. ರಜಪೂತ, ಗೌರವಾಧ್ಯಕ್ಷ ಪ್ರಸನ್ನಸಿಂಗ್ ಪಿ. ಧಾರವಾಡಕರ್, ಉಪಾಧ್ಯಕ್ಷ ಸುನೀಲಸಿಂಗ್, ಕಾರ್ಯದರ್ಶಿ ನವೀನಸಿಂಗ್, ಸಮಾಜದ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು, ಚೇತಕ ರಜಪೂತ ಮಹಿಳಾ ಮಂಡಳಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಳ್ಳಲಿದ್ದಾರೆ.

ವಿಶ್ವ ಪರಿಸರ ದಿನಾಚರಣೆ



ರಾಣೇಬೆನ್ನೂರು: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆ ವತಿಯಿಂದ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸುವ ಉದ್ದೇಶದಿಂದ ಸಸಿ ನೆಡುವ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ಎಸ್.ಸಿ. ಕಾಡದೇವರಮಠ ಅವರು ಸಸಿ ನೆಡುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಮರಗಳನ್ನು ಬೆಳೆಸುವುದು ಹಾಗೂ ಪರಿಸರವನ್ನು ಕಾಪಾಡುವುದು ಇಂದಿನ ದಿನಗಳಲ್ಲಿ ಅಗತ್ಯವಾಗಿದೆ ಎಂದರು. ವಿಶ್ವ ಪರಿಸರ ದಿನಾಚರಣೆಯು ಕೇವಲ ಒಂದು ದಿನದ ಆಚರಣೆಯಾಗದೇ, ಪ್ರತಿದಿನ ಪರಿಸರದ ಬಗ್ಗೆ ಕಾಳಜಿ ವಹಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಿಬ್ಬಂದಿ ಪ್ರಕಾಶ ಬಿಲ್ಲಾರ, ನಿಂಗಪ್ಪ ಸನ್ನಿಂಗಣ್ಣನವರ, ಸೊರಟೂರ, ಮಲಕೇಶಿ ಪೂಜಾರ ಸೇರಿದಂತೆ ಪೊಲೀಸ್ ಸಿಬ್ಬಂದಿ ಹಾಗೂ ಮತ್ತಿತರರು ಇದ್ದರು.

ಕಲಾವಿದರು, ಕಲಾ ತಂಡಗಳಿಂದ ಅರ್ಜಿ ಆಹ್ವಾನ

ಹಾವೇರಿ: ಸಿ.ಸಿ.ಆರ್ (AAS) ಸಂಸ್ಥೆಯ ವತಿಯಿಂದ ರಾಜ್ಯ ಸರ್ಕಾರದ ಸಾಂಸ್ಕೃತಿಕ ಕಲಾತಂಡಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಉತ್ಸವ ಹಾಗೂ ಕಾರ್ಯಕ್ರಮಗಳಿಗೆ ಕಳುಹಿಸಿಕೊಡುವ ಮೂಲಕ ಕಲಾವಿದರ ಮತ್ತು ಕಲಾತಂಡಗಳ ಪ್ರತಿಭೆಯನ್ನು ಪ್ರಚುರಪಡಿಸಲು ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ನಮೂನೆಯನ್ನು ಭರ್ತಿಮಾಡಿ ಜೂ.12ರೊಳಗಾಗಿ ಸಲ್ಲಿಸಬೇಕು. ಅರ್ಜಿ ನಮೂನೆಯನ್ನು www.Kannadasiri.karnatakaನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಗೆ ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ತಿಳಿಸಿದ್ದಾರೆ.

ಹಸಿರು ಪರಿಸರ ನಿರ್ಮಾಣಕ್ಕೆ ಚಾಲನೆ



ಹಾವೇರಿ: ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಬಸವೇಶ್ವರ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರದಂದು ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ಆವರಣದಲ್ಲಿ ಸಸಿ ನೆಡುವ ಅಭಿಯಾನ ಹಮ್ಮಿಕೊಳ್ಳಲಾಯಿತು. ಮುಖ್ಯ ಅತಿಥಿಯಾಗಿ ಹೊಸಮಠದ ಶ್ರೀ ಬಸವಶಾಂತಲಿಂಗ ಸ್ವಾಮಿಜಿಗಳು ಹಾಗೂ ಸಾಹಿತಿ ಡಾ.ಸತೀಶ ಕುಲಕರ್ಣಿ ಅವರು ಸಸಿಗಳನ್ನು ನೆಡುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಚಾಲನೆ ನೀಡಿದರು. ಹೊಸಮಠದ ಶ್ರೀ ಬಸವಶಾಂತಲಿಂಗ ಸ್ವಾಮಿಜಿ, ಪ್ರಾ. ರವಿಕುಮಾರ ಅಂಬೋರೆ, ನಿವೃತ್ತ ಉಪನಿರ್ದೇಶಕ ಅಶೋಕ ಶಾಸ್ತ್ರಿ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಭೀಮಪ್ಪ ಮನಸಾನಿ, ಹಿರಿಯ ಉಪನ್ಯಾಸಕ ಕೆ.ಎನ್. ಗುದಗಿ, ಐ.ಡಿ. ಕೊರಗರ, ಎಸ್.ಬಿ. ದೊಡ್ಡಮನಿ, ಪ್ರಮೋದ ನೆಲವಾಗ, ಲಲಿತಾಬಾಯಿ ನರಗುಂದ, ನಂದಿನಿ ಪಾಟೀಲ, ವ್ಹಿ.ವ್ಹೆ. ಕಣಕಿ, ಡಾ.ರಮೇಶಕುಮಾರ ಹಾಗೂ ಅತಿಥಿ ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಹಾವೇರಿ: ಇಲ್ಲಿನ ಮಹಿಳಾ ಪೊಲೀಸ್ ಠಾಣೆ ಆವರಣದಲ್ಲಿರುವ ರೋಶನಿ ಟ್ರಸ್ಟ್‌ನ ವಾತ್ಸಲ್ಯ ಶಿಶುಪಾಲನಾ ಕೇಂದ್ರದಲ್ಲಿ ಪುಟಾಣಿ ಮಕ್ಕಳೊಂದಿಗೆ ಸಸಿ ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಪುಟಾಣಿ ಮಕ್ಕಳು, ಕೇಂದ್ರದ ಶಿಕ್ಷಕಿ ಮತ್ತು ಸಹಾಯಕಿಯರು ಪಾಲ್ಗೊಂಡಿದ್ದರು.

ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ಬಳ್ಳಾರಿ

ಬ್ಯಾಡಗಿ: ಅರಣ್ಯ ಸಂಪತ್ತು ಕಡಿಮೆಯಾಗುತ್ತಿರುವುದರಿಂದ ವಾತಾವರಣದಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಿದೆ. ಆದ್ದರಿಂದ ಪರಿಸರ ರಕ್ಷಣೆ ಮಾಡುವುದು ಎಲ್ಲರ ಹೊಣೆಯಾಗಿದೆ ಎಂದು ಮಾಜಿ ಶಾಸಕ ಬಿಜೆಪಿ ಜಿಲ್ಲಾ ಅಧ್ಯಕ್ಷರು ವಿರುಪಾಕ್ಷಪ್ಪ ಬಳ್ಳಾರಿ ಹೇಳಿದರು. ಭಾರತೀಯ ಜನತಾ ಪಾರ್ಟಿ ವತಿಯಿಂದ ಇಂದು ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹಿಂದೆ ಇರುವ ಪುರಸಭೆ ಉದ್ಯಾನವನದಲ್ಲಿ ಪರಿಸರ ದಿನಾಚರಣೆ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದರು. ವಿಶ್ವ ಪರಿಸರ ದಿನಾಚರಣೆಯಂದು ಮಾತ್ರ ಪರಿಸರದ ಬಗ್ಗೆ ಕಾಳಜಿ ತೋರಿದರೆ ಸಾಲದು 365 ದಿನವೂ ಪರಿಸರ ಪ್ರಜ್ಞೆ ಹೊಂದಿರಬೇಕು ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟು ಪರಿಸರವನ್ನು ಉಳಿಸಿ-ಬೆಳೆಸಬೇಕು. ಪ್ರತಿಯೊಬ್ಬರ ನಾಗರಿಕರು ತಮ್ಮ ತಮ್ಮ ಮನೆಗಳ ಮುಂದೆ ಸಸಿ ನೆಡುವ ಮೂಲಕ ಅವುಗಳನ್ನು ಸಂರಕ್ಷಿಸಿ ಪರಿಸರ ಬೆಳೆಸುವ ಕೆಲಸ ಮಾಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಯಾಡಗಿ ಮಂಡಲದ ಅಧ್ಯಕ್ಷರಾದ ನಿಂಗಪ್ಪ ಬಟ್ಟಲಕಟ್ಟಿ, ಪ್ರಧಾನ ಕಾರ್ಯದರ್ಶಿ ವಿಜಯ ಮಾಳಗಿ, ಮಹಿಳಾ ಮೋರ್ಚಾ ಅಧ್ಯಕ್ಷರಾದ ಸರೋಜಾ ಉಳ್ಳಾಗಡ್ಡಿ, ಪ್ರಧಾನ ಕಾರ್ಯದರ್ಶಿ ಕಲಾವತಿ ಬಡಿಗೇರ, ಗಾಯತ್ರಿ ರಾಯ್ಕರ ಬಸಮ್ಮ ಹಡಿಯಾಲ, ಶಂಕ್ರಪ್ಪ ಅಕ್ಕಿ, ಸಿದ್ದಲಿಂಗಪ್ಪ ಪಟ್ಟಣಶೆಟ್ಟಿ, ಹನುಮಂತಪ್ಪ ಮ್ಯಾಗೇರಿ, ನಾಗರಾಜ ಹಾವನೂರ, ವಿಷ್ಣುಕಾಂತ ಬೆನ್ನೂರು, ಚೆಕೇಂದ್ರ ಸುಣಗಾರ, ಪರಶುರಾಮ ಉಜನಿಕೊಪ್ಪ, ಶಿವಯೋಗಿ ಗಡಾದ, ಎಸ್‌ಸಿ ಮೋರ್ಚಾ ಅಧ್ಯಕ್ಷರಾದ ನಾಗರಾಜ್ ದೊಡ್ಡಮನಿ, ಈರಣ್ಣ ಕೊಪ್ಪದ ಹಾಗೂ ಉಪಸ್ಥಿತರಿದ್ದರು.



ಬ್ಯಾಡಗಿ: ಭಾರತೀಯ ಜನತಾ ಪಾರ್ಟಿ ವತಿಯಿಂದ ಇಂದು ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹಿಂದೆ ಇರುವ ಪುರಸಭೆ ಉದ್ಯಾನವನದಲ್ಲಿ ಮಾಜಿ ಶಾಸಕ ಬಿಜೆಪಿ ಜಿಲ್ಲಾ ಅಧ್ಯಕ್ಷರು ವಿರುಪಾಕ್ಷಪ್ಪ ಬಳ್ಳಾರಿ ಪರಿಸರ ದಿನಾಚರಣೆ ಸಸಿ ನೆಡುವ ಮೂಲಕ ಚಾಲನೆ ನೀಡಿದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ | ಜಿಲ್ಲಾಧಿಕಾರಿ ಹೇಳಿಕೆ

ಪರಿಸರ ಜೀವನದ ಮೂಲಾಧಾರ

ಹಾವೇರಿ: ಪರಿಸರವು ಮಾನವ ಜೀವನದ ಮೂಲಾಧಾರ. ಗಾಳಿ, ನೀರು, ಮಣ್ಣು, ಸಸ್ಯಗಳು ಮತ್ತು ಜೀವಜಾಲಗಳ ಸಮತೋಲನದಿಂದ ಪರಿಸರ ನಿರ್ಮಾಣವಾಗಿದ್ದು, ಇವುಗಳ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ಜಿಪಂ ಆವರಣದಲ್ಲಿ ಶುಕ್ರವಾರ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ ಹಾಗೂ ಸಾಮಾಜಿಕ ಅರಣ್ಯ ವಿಭಾಗದಿಂದ ಆಯೋಜಿಸಲಾದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕೀಕರಣ, ಅರಣ್ಯ ನಾಶ ಮತ್ತು ಮಾಲಿನ್ಯದಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಹವಾಮಾನ ಬದಲಾವಣೆ, ಅನಿಯಮಿತ ಮಳೆ, ಬರಗಾಲ, ಪ್ರವಾಹ ಹಾಗೂ ತಾಪಮಾನದ ಏರಿಕೆಯಂತಹ ಸಮಸ್ಯೆಗಳು ಪರಿಸರ ಅಸಮತೋಲನಕ್ಕೆ ಕಾರಣವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪರಿಸರ ಸಂರಕ್ಷಣೆಗೆ ಗಿಡ ನೆಡುವುದು ಅತ್ಯಂತ ಸರಳ ಹಾಗೂ ಪರಿಣಾಮಕಾರಿ ಮಾರ್ಗ. ಒಂದು ಗಿಡವು ಬೆಳೆಯುತ್ತಾ ದೊಡ್ಡ ಮರವಾದಾಗ ಪರಿಸರಕ್ಕೆ ಅನೇಕ ರೀತಿಯಲ್ಲಿ ಸಹಕಾರಿಯಾಗುತ್ತದೆ. ಮರಗಳು ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೈಡ್ ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಮಣ್ಣಿನ ಸವಕಳಿಯನ್ನು ತಡೆಗಟ್ಟುತ್ತವೆ. ಮರಗಳ ಬೇರುಗಳು ಮಣ್ಣನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡು ಮಳೆ ಮತ್ತು ಗಾಳಿಯಿಂದ ಮಣ್ಣು ಕೊಚ್ಚಿ ಹೋಗುವುದನ್ನು ತಡೆಯುತ್ತವೆ. ಇದರಿಂದ ಕೃಷಿ ಭೂಮಿಯ ಫಲವತ್ತತೆ ಉಳಿಯುತ್ತದೆ. ಮರಗಳು ಮಳೆಯ ಪ್ರಮಾಣವನ್ನು ಹೆಚ್ಚಿಸಲು ಹಾಗೂ ಅಂತರ್ಜಲ ಮಟ್ಟವನ್ನು ಕಾಪಾಡಲು ಸಹಕಾರಿ. ಪಕ್ಷಿ-ಪ್ರಾಣಿಗಳು ಮತ್ತು ವಿವಿಧ ಜೀವಿಗಳಿಗೆ ಮರಗಳು ಆಶ್ರಯ ತಾಣಗಳಾಗಿದೆ. ಜೀವ ವೈವಿಧ್ಯತೆಯ ಸಂರಕ್ಷಣೆಯಲ್ಲಿ ಮರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಹಣ್ಣು, ಹೂವು, ಔಷಧೀಯ ಸಸ್ಯಗಳು ಹಾಗೂ ಅರಣ್ಯ ಸಂಪನ್ಮೂಲಗಳ ಮೂಲಕ ಮರಗಳು ಮಾನವನ ಆರ್ಥಿಕ ಹಾಗೂ ಆರೋಗ್ಯದ ಅಗತ್ಯಗಳನ್ನು ಪೂರೈಸುತ್ತವೆ ಎಂದರು.



> ಪ್ರತಿ ವ್ಯಕ್ತಿಯು ಕನಿಷ್ಠ ವರ್ಷಕ್ಕೊಂದು ಗಿಡ ನೆಟ್ಟು ಪೋಷಿಸಬೇಕು. ಶಾಲೆ-ಕಾಲೇಜುಗಳು, ಸರ್ಕಾರಿ ಕಚೇರಿಗಳು, ಗ್ರಾಪಂಗಳು ಹಾಗೂ ಸಂಘ-ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಂಡು ಅವುಗಳನ್ನು ಸಂರಕ್ಷಿಸಿ ಬೆಳೆಸುವುದಕ್ಕೂ ಆದ್ಯತೆ ನೀಡಿ. ಪರಿಸರ ಸಂರಕ್ಷಣೆ ಒಂದು ದಿನದ ಕಾರ್ಯಕ್ರಮ ಆಗದೇ ನಿರಂತರ ಜವಾಬ್ದಾರಿ. ನಮ್ಮ ಪರಿಸರವನ್ನು ನಾವು ಇಂದು ಕಾಪಾಡಿದರೆ, ಮುಂದಿನ ಪೀಳಿಗೆಗೆ ಆರೋಗ್ಯಕರ ಮತ್ತು ಸುಸ್ಥಿರ ಭವಿಷ್ಯವನ್ನು ನೀಡಲು ಸಾಧ್ಯ. ಇದಕ್ಕೆ ಎಲ್ಲರೂ ಕೈಜೋಡಿಸಿ. ಹೆಚ್ಚಿನ ಗಿಡಗಳನ್ನು ನೆಟ್ಟು ಹಸಿರು ಭೂಮಿಯ ನಿರ್ಮಾಣಕ್ಕೆ ಸಹಕರಿಸೋಣ
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಡಿಸಿ, ಹಾವೇರಿ

ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ ಪಾಟೀಲ ಮಾತನಾಡಿ, ಸಾಮಾಜಿಕ ಅರಣ್ಯ ವಿಭಾಗ ವತಿಯಿಂದ 2026-27ನೇ ಸಾಲಿನಲ್ಲಿ ಸಾರ್ವಜನಿಕರು / ರೈತರಿಗೆ 1,22,000 ವಿವಿಧ ಜಾತಿಯ ಸಸಿಗಳನ್ನು ವಿತರಿಸಿದ್ದು ಪಿಆರ್ ಇಡಿ ಮತ್ತು ಶಿಕ್ಷಣ ಇಲಾಖೆ ಸಹಯೋಗದಲ್ಲಿ ಸರ್ಕಾರಿ ಶಾಲೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಸ್ತೆ ಬದಿ, ಶಾಲೆ ಕಾಲೇಜು ಆವರಣ, ಸರ್ಕಾರಿ ಜಮೀನುಗಳಲ್ಲಿ ಸಸಿನೆಡುವ ಕಾರ್ಯ ಆರಂಭವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಡಾ.ಪುನೀತ್, ಸಿಪಿಒ ಎಸ್.ವೈ. ಮೀಶಿ, ಯೋಜನಾ ನಿರ್ದೇಶಕಿ ರೇಖಾ ಡೊಳ್ಳಿನ, ಕುಮಾರ ಮಣ್ಣವಡ್ಡರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಖೇಮಸಿಂಗ್ ರಾಠೋಡ್ ಇತರರಿದ್ದರು.

ಜಮೀರ್‌ಅಹ್ಮದ್ ಖಾನ್‌ಗೆ ಮಂತ್ರಿ ಸ್ಥಾನ ನೀಡಲು ಒತ್ತಾಯಿಸಿ ಪ್ರತಿಭಟನೆ

ಹಾವೇರಿ: ಡಿ.ಕೆ.ಶಿವಕುಮಾರ ನೇತೃತ್ವದ ಹೊಸ ಸರ್ಕಾರದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಜಡ್ ಜಮೀರ್‌ಅಹ್ಮದ್ ಖಾನ್ ಅವರಿಗೆ ಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಅವರ ಅಭಿಮಾನಿ ಬಳಗದ ಹಾವೇರಿ ಜಿಲ್ಲಾ ಮುಖಂಡರು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ಶಿಗ್ಗಾವಿ, ಸವಣೂರು, ಹಾವೇರಿ ಸೇರಿದಂತೆ ವಿವಿಧ ಭಾಗಗಳಿಂದ ನಗರದ ಕಾಗಿನೆಲೆ ರಸ್ತೆಯ ಮುರುಘರಾಜೇಂದ್ರ ಮಠದ ಬಳಿ ನೂರಾರು ಅಭಿಮಾನಿಗಳು ಜಮಾಯಿಸಿದರು. ಶ್ರೀ ಮಠದಿಂದ ಕಾಗಿನೆಲೆ ವೃತ್ತ, ಪಿ.ಬಿ. ರಸ್ತೆ, ಹೊಸಮನಿ ಸಿದ್ದಪ್ಪ ವೃತ್ತದ ಮಾರ್ಗವಾಗಿ ಪ್ರತಿಭಟನಾ ರ್‍ಯಾಲಿ ನಡೆಸಿದ ಕೈ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮೈಲಾರ ಮಹದೇವಪ್ಪ ವೃತ್ತ ತಲುಪಿ, ಅಲ್ಲಿ ಡಿ.ಕೆ.., ಡಿ.ಕೆ.,, ಎಂದು ಘೋಷಣೆ ಕೂಗಿದರಲ್ಲದೇ, ಜಮೀರ್ ಅಹ್ಮದ್ ಖಾನ್‌ಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮುಸ್ಲಿಂ ಮುಖಂಡ ಮೌಲಾನಾ ಮಹ್ಮದ್ ಸಾಃಕ ಮುಲ್ಲಾ ಮಾತನಾಡಿ, ಎರಡನೇ ಪಟ್ಟಿಯಲ್ಲಾದರೂ ಸಚಿವ ಸ್ಥಾನ ನೀಡಲೇಬೇಕು. ಒಂದು ವೇಳೆ ಸಚಿವ ಸ್ಥಾನ ನೀಡದೆ ಹೋದರೆ 2028ರ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆಂದು ಎಚ್ಚರಿಸಿದರು.

ಜಮೀರ್ ಅಹ್ಮದ್‌ಖಾನ್ ಅಭಿಮಾನಿ ಬಳಗದ ಮುಖಂಡ ಅಣ್ಣಪ್ಪ ನಡಹಟ್ಟಿ ಮಾತನಾಡಿ, ಜಮೀರ್‌ಅಹ್ಮದ್ ಅವರ ವರ್ಚಸ್ಸನ್ನು ಸಹಿಸಿಕೊಳ್ಳದ ಕೆಲವರು ದಾವಣಗೆರೆ ಉಪ ಚುನಾವಣೆ ವೇಳೆ ಸುಮ್ಮನಿದ್ದು, ಡಿಕೆಶಿ ನೇತೃತ್ವದ ಸರ್ಕಾರ ರಚನೆ ಹಿಂದಿನ ದಿನ ಅವರೇ ಮಾತನಾಡಿದ್ದಾರೆ ಎನ್ನಲಾದ ಆಡಿಯೋವನ್ನು ವೈರಲ್ ಮಾಡಿದ್ದಾರೆ. ಇದರಿಂದ ಪಕ್ಷಕ್ಕೆ ನಷ್ಟವಾಗಲಿದೆಯೇ ಹೊರತು, ಜಮೀರ್‌ಅಹ್ಮದ್ ಅವರ ವರ್ಚಸ್ಸಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ. ಇದೊಂದು ಷಡ್ಯಂತ್ರವಾಗಿದ್ದು, ಸೂಕ್ತ ತನಿಖೆಯಾಗಬೇಕು ಎಂದು ಆಗ್ರಹಿಸಿದರು.

ಈ ವೇಳೆ ಅಭಿಮಾನಿ ಬಳಗದ ಮುಖಂಡರಾದ ಜಿ.ಎ. ಸವಣೂರು, ಶಿವರಾಜ ಅಮರಾಪುರ, ಮಾಲಿಂಗಪ್ಪ ಕುಂಬಾರ, ರುದ್ರೇಶ ಗುಡಗೇರಿ, ಸಂಜೀವ ಪಾಳೆದ, ಡಿ.ಯು. ಅಜ್ಜಣ್ಣವರ, ಇಸಾಕ್ ಶಿಗ್ಗಾವಿ, ಮಲ್ಲಿಕ್‌ರೆಹಾನ್ ಶಿಗ್ಗಾವಿ, ಇಮ್ತಿಯಾಜ್ ಬಾವಿಕಟ್ಟಿ, ಬಶೀರ್‌ಅಹ್ಮದ್ ಶಿಗ್ಗಾವಿ, ಅಕ್ಬರ್ ಅಲಿ ಶಿಗ್ಗಾವಿ, ಅಬ್ದುಲ್‌ಖಾದರ್ ಹುಲಗೂರ, ಮಾಬುಸಾಬ್ ಜಿಗಳೂರ, ಫಕ್ರುದ್ದೀನ್ ಸವಣೂರು, ಮೌಲಾಲಿ ಶಿಗ್ಗಾವಿ, ಜಾಫರ್ ಸಾಬ್ ಸೇರಿದಂತೆ ಅನೇಕ ಅಭಿಮಾನಿಗಳು ಪಾಲ್ಗೊಂಡಿದ್ದರು.



ಜಮೀರ್ ಅಹ್ಮದ್‌ಗೆ ಸಚಿವ ಸ್ಥಾನ ನೀಡಲು ಖಾದ್ರಿ ಮನವಿ

ಹಾವೇರಿ: ರಾಜ್ಯ ಸಚಿವ ಸಂಪುಟದಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಶಾಸಕ ಜಮೀರ್ ಅಹ್ಮದ್ ಖಾನ್ ಅವರಿಗೆ ಸಚಿವ ಸ್ಥಾನನೀಡದಿರುವುದು ಅಲ್ಪಸಂಖ್ಯಾತ ಸಮುದಾಯಕ್ಕೆ ಬೇಸರ ಉಂಟು ಮಾಡಿದೆ ಎಂದು ಮಾಜಿ ಶಾಸಕ, ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ್ ಖಾದ್ರಿ ಹೇಳಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಮೀರ್ ಅಹ್ಮದ್ ಅಲ್ಪಸಂಖ್ಯಾತರ ಬಲಿಷ್ಠ ನಾಯಕರಾಗಿದ್ದು, ಪಕ್ಷ ಸಂಘಟನೆ ಹಾಗೂ ಚುನಾವಣಾ ಕಾರ್ಯಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ನನ್ನ 30 ವರ್ಷಗಳ ರಾಜಕೀಯ ಜೀವನದಲ್ಲಿ ನೋಡಿದಂತೆ ಅಲ್ಪಸಂಖ್ಯಾತರನ್ನು ಒಗ್ಗೂಡಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಿದ ನಾಯಕ ಜಮೀರ್ ಅಹ್ಮದ್. ರಾಜ್ಯದ ಮುಸ್ಲಿಮರನ್ನು ಒಂದೇ ವೇದಿಕೆಯಲ್ಲಿ ತರುವಲ್ಲಿ ಅವರ ಪಾತ್ರ ಅತ್ಯಂತ ದೊಡ್ಡದು. ಇಂತಹ ನಾಯಕರಿಗೆ ಸಚಿವ ಸ್ಥಾನ ಸಿಗದಿರುವುದು ಎಲ್ಲರಿಗೂ ನೋವು ತಂದಿದೆ ಎಂದರು.

ಜಮೀರ್ ಅಹ್ಮದ್ ಅವರ ಕೊಡುಗೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲದೆ ರಾಜ್ಯದ ಅಭಿವೃದ್ಧಿಗೂ ಮಹತ್ವದ್ದಾಗಿದೆ. ಅವರಿಗೆ ಸಚಿವ ಸ್ಥಾನ ಕೈತಪ್ಪಿರುವುದು ಬೇಸರದ ಸಂಗತಿಯಾಗಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಅವಕಾಶ ದೊರೆಯುವ ವಿಶ್ವಾಸವಿದೆ ಎಂದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣೆಯ ವೇಳೆ ಜಮೀರ್ ಅಹ್ಮದ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ವೈರಲ್ ಆಗಿದ್ದು, ಸಚಿವ ಸ್ಥಾನ ಕೈತಪ್ಪಲು ಅದೇ ಕಾರಣವಾಗಿದೆಯೇ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಈ ಕುರಿತು ಈಗಾಗಲೇ ಹಿರಿಯ ನಾಯಕರಾದ ಸತೀಶ್ ಜಾರಕಿಹೋಳಿ, ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ಹಿರಿಯ ನಾಯಕರು ಮಾತನಾಡಿದ್ದಾರೆ. ಈ ವಿಚಾರದಲ್ಲಿ ಕೆಲವು ಮೀರ್ ಸಾಧಕರು ಕೆಲಸ ಮಾಡಿದ್ದಾರೆ. ಯಾರು ಇದಕ್ಕೆ ಕಾರಣ ಎಂಬುದು ನಮಗೆ ಗೊತ್ತಿದೆ. ಸೂಕ್ತ ಸಮಯದಲ್ಲಿ ಸತ್ಯ ಹೊರಬರಲಿದೆ ಎಂದರು.

ಹೈಕಮಾಂಡ್ ಈ ಕುರಿತು ಮಾಹಿತಿ ಕಲೆ ಹಾಕುತ್ತಿದ್ದು, ಯಾರು ಏನು ಮಾಡಿದ್ದಾರೆ ಎಂಬ ಸಂಪೂರ್ಣ ವಿವರಗಳನ್ನು ಪರಿಶೀಲಿಸುತ್ತಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಜಮೀರ್ ಅಹ್ಮದ್ ಸಕ್ರಿಯವಾಗಿ ಕೆಲಸ ಮಾಡಿದ್ದರಿಂದ ಕಾಂಗ್ರೆಸ್ ಗೆಲುವು ಸಾಧಿಸಲು ಸಾಧ್ಯವಾಯಿತು. ಜಮೀರ್ ಅಹ್ಮದ್ ಅವರ ಸೇವೆ ಮತ್ತು ಕೊಡುಗೆಯನ್ನು ಪರಿಗಣಿಸಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ಅವರು ಮನವಿ ಮಾಡಿದರು.

ಉತ್ತಮ ಜೀವನ ಶೈಲಿಗೆ ಸ್ವಚ್ಛ ಪರಿಸರ ಅಗತ್ಯ

ಬ್ಯಾಡಗಿ: ಪರಿಸರ ದಿನಾಚರಣೆಯಂದು ಮಾತ್ರ ಸಸಿ ನೆಟ್ಟು ಕಾಳಜಿ ವಹಿಸಿದರೆ, ಪರಿಸರ ಸಂರಕ್ಷಣೆ ಸಾಧ್ಯವಿಲ್ಲ, ಹೀಗಾಗಿ ಪರಿಸರ ಸಂರಕ್ಷಣೆ ನಮ್ಮ ಬದುಕಿನ ಪ್ರಮುಖ ಭಾಗವಾಗಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರ ಅಭಿಪ್ರಾಯಪಟ್ಟರು.

ಪಟ್ಟಣದ ಕಲಾಭವನ ಹತ್ತಿರ ಪುರಸಭೆ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ತ್ಯಜಿಸಿ, ಪರ್ಯಾಯ ವಸ್ತುಗಳನ್ನು ಬಳಕೆ ಮಾಡಲು ಹೆಚ್ಚಿನ ಆದ್ಯತೆನೀಡಬೇಕಿದೆ. ಹಿರಿಯರು-ಕಿರಿಯರು ಹಾಗೂ ಯುವ ಸಮುದಾಯ ಸೇರಿದಂತೆ ಪ್ರತಿಯೊಬ್ಬರು ಪರಿಸರ ಸಂರಕ್ಷಣೆಯಲ್ಲಿ ತೊಡಗಬೇಕು. ಈ ನಿಟ್ಟಿನಲ್ಲಿ ಪರಿಸರ ಸಂರಕ್ಷಣೆ ನಮ್ಮ ದಿನನಿತ್ಯದ ಭಾಗವಾಗಬೇಕು, ಇಲಾಖೆಯವರು ಹಾಗೂ ಸಂಘ ಸಂಸ್ಥೆಗಳು ಸೇರಿ ಪಟ್ಟಣದಲ್ಲಿ ಅತಿ ಹೆಚ್ಚು ಸಸಿಗಳನ್ನು ನೆಟ್ಟು ಉತ್ತಮ ಪರಿಸರವನ್ನು ನಿರ್ಮಾಣ ಮಾಡುವ ಕೆಲಸ ಮಾಡಬೇಕು ಎಂದು ಹೇಳಿದರು.



ಮಾಜಿ ಶಾಸಕ ಸುರೇಶ್ ಗೌಡ ಪಾಟೀಲ ಮಾತನಾಡಿ, ಆರೋಗ್ಯಕರ ಬದುಕನ್ನು ನಡೆಸಲು ಉತ್ತಮ ಜೀವನ ಶೈಲಿಯೊಂದಿಗೆ ಸ್ವಚ್ಛ ಹಾಗೂ ಉತ್ತಮ ಪರಿಸರ ಅಗತ್ಯ. ಹೆಚ್ಚುತ್ತಿರುವ ಭೂಮಿಯ ತಾಪಮಾನ ಕಡಿಮೆ ಮಾಡಲು ಹಸಿರನ್ನು ಹೆಚ್ಚಿಸಿ ಶುದ್ಧ ಗಾಳಿಯನ್ನು ಪಡೆಯಲು ಪ್ರತಿಯೊಬ್ಬರು ಸಸಿ ನೆಟ್ಟು ಉಳಿಸಿ ಬೆಳೆಸಬೇಕಾದ ಅಗತ್ಯವಿದೆ ಎಂದರು.

ತಹಶೀಲ್ದಾರ್ ಚಂದ್ರಶೇಖರ್ ನಾಯಕ್, ತಾಲೂಕ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ, ಪುರಸಭೆ ಮುಖ್ಯಾಧಿಕಾರಿ ವಿನಯಕುಮಾರ, ಅರಣ್ಯ ಇಲಾಖೆ ಅಧಿಕಾರಿ ಲೋಕೇಶ್ ಚವ್ಹಾಣ್, ಮಹೇಶ ನಾಯಕ್, ತಾಲೂಕು ಅಧ್ಯಕ್ಷ ದಾನಪ್ಪ ಚೂರಿ, ಅಬ್ದುಲ್ ಮುನಾಫ್ ಎರೆಸಿಮಿ, ಡಿ.ಎಚ್.ಬುದ್ದನಗೌಡ, ರೈತ ಮುಖಂಡ ಗಂಗಣ್ಣ ಎಲಿ ಸೇರಿದಂತೆ ಅರಣ್ಯ ಇಲಾಖೆಯ ಹಾಗೂ ಪುರಸಭೆ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಸಸಿ ನೆಟ್ಟು ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಮುಂದಾದಲಿ

ರಾಣೇಬೆನ್ನೂರ: ಪ್ರತಿಯೊಬ್ಬರು ಸಸಿಗಳನ್ನು ನೆಟ್ಟು ಅವುಗಳನ್ನು ಸಂರಕ್ಷಣೆ ಮಾಡಬೇಕು ಅಂದಾಗ ನಾವು ಪರಿಸರಕ್ಕೆ ಅಪಾರವಾದ ಕೊಡುಗೆ ನೀಡಿದಂತಾಗುತ್ತದೆ ಎಂದು ಕ್ಷೇತ್ರ ಧರ್ಮಸ್ಥಳಗ್ರಾಮಾಭಿವೃದ್ಧಿಯೋಜನೆಯ ಗಂಗಾಪುರ ವಲಯದ ಕೃಷಿ ಮೇಲ್ವಿಚಾರಕ ದೇವರಾಜ ಹೆಚ್. ಹೇಳಿದರು.

ಶುಕ್ರವಾರದಂದು ತಾಲೂಕಿನ ಚಿಕ್ಕ ಅರಳಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರ ಆಶ್ರಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಇಂದು ಪರಿಸರ ಜಾಗೃತಿ ಬಗ್ಗೆ ಸರ್ವರೂ ಅರ್ಥೈಸಿಕೊಂಡು ಪರಿಸರ ಸಂರಕ್ಷಣೆ ಮುಂದಾಗಬೇಕೆಂದರು.



ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥಸುಣಗಾರ ಮಾತನಾಡಿ, ನಾವು ನೆಮ್ಮದಿಯಿಂದ ಉಸಿರಾಡಲು ಗಿಡಮರಗಳು ಅತ್ಯವಶ್ಯಕವಾಗಿ ಬೇಕೆ ಬೇಕು, ಗಿಡಮರಗಳಿದ್ದರೆ ಮಳೆ ಗಾಳಿ ಕಾಲ ಕಾಲಕ್ಕೆ ಸರಿಯಾಗಿರುತ್ತದೆ ಗಿಡಮರಗಳ ಕೊರತೆ ಇದ್ದರೆ ಗಾಳಿ ಹಾಗೂ ಮಳೆಯ ಕೊರತೆ ಕಂಡು ಬರುತ್ತದೆ ಆದ್ದರಿಂದ ಎಲ್ಲರೂ ಸಸಿಗಳನ್ನು ನೆಟ್ಟು ಅವುಗಳನ್ನು ಸಂರಕ್ಷಿಸಬೇಕೆಂದರು.

ಎಸ್ಡಿಎಂಸಿ ಅಧ್ಯಕ್ಷ ಶಿವಾಜಿ ನನ್ನೂರಿ, ಉಪಾಧ್ಯಕ್ಷ ಬಸವರಾಜ ಮಡಿವಾಳರ, ಒಕ್ಕೂಟದ ಅಧ್ಯಕ್ಷ ಲಲಿತಮ್ಮ, ಪದಾಧಿಕಾರಿ ಪುಷ್ಪ, ಸೇವಾಪ್ರತಿನಿಧಿ ಗೀತಾ ದುರ್ಗದ ಹಾಗೂ ಶಾಲಾ ಶಿಕ್ಷಕರು ಮತ್ತು ಮಕ್ಕಳು ಮತ್ತು ಸಂಘದ ಸದಸ್ಯರು ಇದ್ದರು.

ಜೀವರಾಶಿ ಉಳಿವಿಗೆ ಪರಿಸರ ಸಂರಕ್ಷಣೆ ಅಗತ್ಯ

ಹಾವೇರಿ: ಸೌರಮಂಡಲದಲ್ಲಿರುವ ಎಲ್ಲ ಗ್ರಹಗಳ ಪೈಕಿ ಭೂಗ್ರಹದ ಮೇಲಿರುವ ಜೀವರಾಶಿಯ ಉಳಿವಿಗೆ ಪರಸರ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ. ವಿದ್ಯಾರ್ಥಿ ಯುವ ಸಮುದಾಯ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಜಿಲ್ಲಾ ಪ್ರಧಾನ ಮತ್ತು ಸೇಷನ್ಸ್ ನ್ಯಾಯಾಧೀಶ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ದೇವೀಂದ್ರಪ್ಪ ಬಿರಾದಾರ ಸಲಹೆ ನೀಡಿದರು.

ಇಲ್ಲಿನ ಹಾವೇರಿ ವಿಶ್ವವಿದ್ಯಾಲಯುದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬ ನಾಗರಿಕರು ಪರಿಸರ ರಕ್ಷಣೆಗೆ ತಮ್ಮದೇ ಆದ ಕೊಡುಗೆ ನೀಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯು ಕನಿಷ್ಠ ಹತ್ತು ಸಸಿಗಳನ್ನು ನೆಟ್ಟು ಪೋಷಿಸಬೇಕು ಎಂದು ಸಲಹೆ ನೀಡಿದ ಅವರು, ತಾವು ಸ್ವತಃ ಒಂದು ಸಾವಿರ ಸಸಿಗಳನ್ನು ತಮ್ಮ ಸ್ವಂತ ಜಮೀನಿನಲ್ಲಿ ನೆಡುವುದಾಗಿ ತಿಳಿಸಿದರು.



ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರವು ಅರಣ್ಯ ಇಲಾಖೆ ಸಹಯೋಗದಲ್ಲಿ ರಾಜ್ಯದಲ್ಲಿ ಐದು ಕೋಟಿ ಗಿಡಗಳನ್ನು ನೆಡುವ ಬೃಹತ್ ಯೋಜನೆ ಹಮ್ಮಿಕೊಂಡಿದ್ದು, ಈ ಪ್ರಯುಕ್ತ ಜಿಲ್ಲೆಯಲ್ಲಿ ಹತ್ತು ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಲಾಗಿದೆ. ಈ ನಿಟ್ಟಿನಲ್ಲಿ ಹಾವೇರಿ ವಿಶ್ವವಿದ್ಯಾಲಯದಲ್ಲಿ ಸಾಂಕೇತಿಕ ಆರಂಭವಾಗಿ ಸಸಿ ನೆಡುವ ಕಾರ್ಯವನ್ನು ಆರಂಭಿಸಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ.ಸುರೇಶ ಜಂಗಮಶೆಟ್ಟಿ ಮಾತನಾಡಿ, ಪ್ರತಿಯೊಬ್ಬರು ತಮ್ಮ ವಯಸ್ಸಿಗನುಗುಣವಾಗಿ ಅಷ್ಟೇ ಸಂಖ್ಯೆಯ ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ನಾವು ಪರಿಸರವನ್ನು ನಿರ್ಲಕ್ಷಿಸಿದರೆ ಸೂಪರ್ ಎಲ್ ನೀನೋದಂತಹ ಭೀಕರ ನೈಸರ್ಗಿಕ ವಿಕೋಪಗಳನ್ನು ಎದುರಿಸಬೇಕಾಗುತ್ತದೆ. ಇದರಿಂದ ಇಡೀ ಮಾನವ ಕುಲ ನಾಶವಾಗುವ ಸಾಧ್ಯತೆ ಇರುವುದರಿಂದ ಪರಿಸರದ ರಕ್ಷಣೆಯನ್ನು ಗಂಭೀರ ವಿಷಯವಾಗಿ ಪರಿಗಣಿಸಬೇಕಾದ ಅಗತ್ಯವಿದೆ ಎಂದರು.

ಹಿರಿಯ ದಿವಾಣಿ ನ್ಯಾಯಾಧೀಶೆ ಶ್ರೀಶೈಲಜಾ ಎಚ್.ವಿ., ಉಪ ಅರಣ್ಯ ಸಂರಕ್ಷಣಾಧಿಕಾರಿ ಅಕ್ಷಯ ಅಶೋಕ ಪ್ರಕಾಶಕರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಡಾ.ಎಚ್. ಲಕ್ಷ್ಮೀಕಾಂತ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸಿದ್ದನಗೌಡ ಎಚ್.ಸಿ., ಮೌಲ್ಯಮಾಪನ ಕುಲಸಚಿವೆ ಡಾ. ರೇಣುಕಾ ಮೇಟಿ, ಗೀತಾ ಬೆಳಗಾವಿ ಇದ್ದರು. ಡಾ.ಕವಿತಾ ನಾಯ್ಕ ಸ್ವಾಗತಿಸಿದರು. ಸಂಗೀತಾ ಬೆಳವಟ್ಟಿ ನಿರೂಪಿಸಿದರು. ಕುಲಸಚಿವ ಪ್ರೊ. ಎಸ್.ಟಿ. ಬಾಗಲಕೋಟಿ ವಂದಿಸಿದರು.

ವಕೀಲರ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

ಹಾವೇರಿ: ಅಥಣಿ ನಗರದಲ್ಲಿ ಎರಡು ದಿನಗಳ ಹಿಂದ ವಕೀಲರ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದು, ಈ ಘಟನೆ ಖಂಡಿಸಿ ಶುಕ್ರವಾರ ನ್ಯಾಯವಾದಿಗಳು ಕೋರ್ಟ್ ಕಲಾಪಗಳನ್ನು ಬಹಿಷ್ಕರಿಸಿ, ಹಲ್ಲೆ ನಡೆಸಿದ ಪೊಲೀಸರ ಮೇಲೆ ಕ್ರಮಕ್ಕೆ ಆಗ್ರಹಿಸಿ ನಗರದಲ್ಲಿ ಪ್ರತಿಭಟನೆ ನಡೆಸಿ ತಮ್ಮ ಆಕ್ರೋಶ ಹೊರಹಾಕಿದರು.

ಶುಕ್ರವಾರ ನಗರದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಭವನದಲ್ಲಿ ಸೇರಿದ ಎಲ್ಲಾ ನ್ಯಾಯವಾದಿಗಳು ಅಥಣಿಯಲ್ಲಿ ವಕೀಲರ ಮೇಲೆ ನಡೆದ ಹಲ್ಲೆ ಖಂಡಿಸಿ ಖಂಡನಾ ಸಭೆ ನಡೆಸಿ, ನಿರ್ಣಯ ಕೈಗೊಂಡರು. ನಂತರ ಕೋರ್ಟ್ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಪ್ರವಾಸಿ ಮಂದಿರ ಸರ್ಕಲ್ ಮೂಲಕ ಸಾಗಿ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲ ಕಾಲ ರಸ್ತೆ ತಡೆ ನಡೆಸಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.



ಈ ವೇಳೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡರ ಮಾತನಾಡಿ, ಅಥಣಿ ನಗರದಲ್ಲಿ ಸಿವಿಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ವ್ಯಾಪ್ತಿಯಲ್ಲೆ ಪೊಲೀಸರು ವಕೀಲರ ಮೇಲೆ ಹಲ್ಲೆ ನಡೆಸಿ ಗೂಂಡಾ ವರ್ತನೆ ತೋರಿದ್ದಾರೆ. ಅಲ್ಲದೇ ಈ ಕುರಿತು ನ್ಯಾಯವಾದಿಗಳ ಮೇಲೆ ಮಾನಸಿಕ ಒತ್ತಡ ತಂತ್ರ ಅನುಸರಿಸಿದ್ದು ಇದು ಖಂಡನೀಯ. ವಕೀಲರ ಮೇಲೆ ಹಲ್ಲೆ ನಡೆಸಿದಂತಹ ಗೂಂಡಾ ವರ್ತನೆಯ ಪೊಲೀಸರನ್ನು ತಕ್ಷಣವೇ ಅಮಾನತು ಮಾಡಿ ಇಲಾಖಾ ತನಿಖೆಯ ತನಿಖೆಯನ್ನು ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ವಕೀಲರ ಮೇಲೆ ಪೊಲೀಸರು ನಡೆಸಿದ ಹಲ್ಲೆಯ ವಿಡಿಯೋ ನಗರದಾದ್ಯಂತ ವೈರಲ್ ಆಗಿದ್ದು, ಈ ಕುರಿತು ಅಲ್ಲಿನ ಎಸ್ಪಿ ಸಂಬಂಧಿತ ಪೊಲೀಸರ ಮೇಲೆ ಕ್ರಮಕ್ಕೆ ಇದುವರೆಗೂ ಮುಂದಾಗಿಲ್ಲ, ಈ ವರ್ತನೆಯಿಂದ ವಕೀಲರ ನೈತಿಕ ಹೊಣೆಗಾರಿಕೆ ಕುಸಿಯಲಿದ್ದು, ಕೂಡಲೇ ಅಲ್ಲಿನ ಎಸ್ಪಿಯವರು ಸಂಬಂಧಿಸಿದ ಪೊಲೀಸರನ್ನು ತಕ್ಷಣವೇ ಅಮಾನತು ಮಾಡಿ ಇಲಾಖಾ ವಿಚಾರಣೆಯ ಜತೆಗೆ ಅವರ ಮೇಲೆ ಅಗತ್ಯ ಶಿಸ್ತು ಕ್ರಮ ಹಾಗೂ ಕಾನೂನು ಕ್ರಮಗಳನ್ನು ಜರುಗಿಸುವ ಮೂಲಕ ನ್ಯಾಯಾಂಗದ ಕೆಲಸ ಕಾರ್ಯಗಳು ಸೂಕ್ತ ರೀತಿಯಲ್ಲಿ ಮತ್ತು ಸುಗಮವಾಗಿ ನಡೆಯಲು ಅನುವು ಮಾಡಿಕೊಡಬೇಕು. ತಪ್ಪಿದಲ್ಲಿ ಸಂಬಂಧಿಸಿದವರ ಮೇಲೆ ಸೂಕ್ತ ಕ್ರಮ ಆಗುವವರೆಗೂ ನ್ಯಾಯವಾದಿಗಳು ಹೋರಾಟ ಮುಂದುವರೆಸಲಿದ್ದಾರೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಎಸ್.ಸಿ. ಪಾಟೀಲ, ಪಿ.ಎಸ್. ಹೆಬ್ಬಾಳ, ಸಿ.ಎಸ್. ಹಿರೇಮಠ, ಸಿ.ಎಂ. ನೆಗಳೂರ, ಜಿ.ಬಿ. ಅಂದಾನಿಗೌಡ್ರ, ಎಸ್.ಸಿ. ಕುರುವತ್ತಿಗೌಡ್ರ, ಸಿ.ವಿ. ಬಡಿಗೇರ, ಎಸ್.ಬಿ. ಹಳೇಮನಿ, ಜಿ.ಕೆ. ನಾಗನೂರ, ಜಿ.ಸಿ. ಗಿರಿಯಪ್ಪನವರ, ಎಸ್.ಎಸ್. ಹಿರೇತನದ, ಎಸ್.ಎಸ್. ಸಣ್ಣತಮ್ಮನವರ, ಸಿ.ಪಿ. ಜಾವಗಲ್ಲ, ಶಿವರಾಜ ವನಳ್ಳಿ, ಕೆಲ ಮಹಿಳಾ ನ್ಯಾಯವಾದಿಗಳೂ ಸೇರಿದಂತೆ ನೂರಾರು ಜನರು ಪಾಲ್ಗೊಂಡಿದ್ದರು.

ಕಿರುಸುದ್ದಿ



ಗೋಕಾಕ: ತಾಲೂಕಿನ ಬೆಟಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ಕುಮಾರಿ ಭುವನಾ ಶಿವರುದ್ರಗೌಡ ದೇಯಣ್ಣವರ ಜೂ.5ರಂದು ವಿಶ್ವ ಪರಿಸರ ದಿನ ಪ್ರಯುಕ್ತ ಸಸಿ ನೆಟ್ಟು ನೀರು ಹಾಕಿ ಪರಿಸರ ಪ್ರೇಮ ಮೆರದು ಎಲ್ಲರ ಗಮನ ಸೆಳೆದಳು.

ಪತ್ರಕರ್ತರಿಗೆ ಉಚಿತ ಬಸ್ ಪಾಸ್‌ಗೆ ಅರ್ಜಿ ಆಹ್ವಾನ

ಬೆಳಗಾವಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು, ಮಾಧ್ಯಮ ಸಂಸ್ಥೆಗಳಲ್ಲಿ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್‌ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ.ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ, ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ, ಸ್ಥಾನಿಕ ಸಂಪಾದಕರ, ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ ಸೇವಾಸಿಂಧು ಪೋರ್ಟಲ್‌ನಲ್ಲಿ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ರಾಜ್ಯದ ಎಲ್ಲ ತಾಲೂಕುಗಳ ಅರ್ಹ ಪತ್ರಕರ್ತರು ಕೂಡಲೇ ಜೂ.20ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಯರಗಟ್ಟಿ: 2026-27ನೇ ಸಾಲಿಗಾಗಿ ಯರಗಟ್ಟಿ ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರವರ್ಗ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕಟಕೋಳ ರಸ್ತೆ ಯರಗಟ್ಟಿ ಇಲ್ಲಿಗೆ 5 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡ/ಪರಿಶಿಷ್ಟ ಜಾತಿ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರಿಗೆ, ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ನೀಡುವ ಕುರಿತು ಆನ್-ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆದ್ದರಿಂದ, ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯಲಿಚ್ಚಿಸುವ ಅರ್ಹ ಪರಿಶಿಷ್ಟ ಪಂಗಡ/ಪರಿಶಿಷ್ಟ ಜಾತಿ ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಆನಲೈನ್ ಅರ್ಜಿ ಸಲ್ಲಿಕೆ ಮಾಡಬೇಕು. ನಂತರ ಸಲ್ಲಿಸಿದ ಅರ್ಜಿ ಜೊತೆಗೆ ಅಗತ್ಯ ದಾಖಲೆಗಳೊಂದಿಗೆ ಅಂಕಪಟ್ಟಿ ಲಗತ್ತಿಸಿ ವಿದ್ಯಾರ್ಥಿ ನಿಲಯದ ವಾರ್ಡನ್‌ರಿಗೆ ಜೂ.30ರೊಳಗಾಗಿ ಅರ್ಜಿ ಸಲ್ಲಿಸುವಂತೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಯರಗಟ್ಟಿ-ಸವದತ್ತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ



ಸವದತ್ತಿ: ತಾಲೂಕಿನ ಹಿಟ್ಟಣಗಿ ಗ್ರಾಮದ ಮಹಾಂತೇಶ್ ಶಂಕರಗೌಡ ಪಾಟೀಲ ಎಂಬಾತ ವ್ಯಕ್ತಿ ತನ್ನ ಮನೆಯಿಂದ ಎಲ್ಲಿಗೋ ಹೋಗಿ ಕಾಣೆಯಾಗಿದ್ದಾರೆ. ಆದ್ದರಿಂದ ಈ ಕುರಿತು ಆತನ ಪತ್ನಿ ನಿರ್ಮಲಾ ಮಹಾಂತೇಶ್ ಪಾಟೀಲ್ ಅವರು ಸವದತ್ತಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆದ್ದರಿಂದ ಈ ವ್ಯಕ್ತಿಯು ಇರುವ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅವರು ಕೂಡಲೇ ಸವದತ್ತಿ ಪೊಲೀಸ್ ಠಾಣೆಗೆ ತಿಳಿಸಲು ಕೋರಲಾಗಿದೆ.

ನಿಧನಸುದ್ದಿ

ವಿಷ್ಣು ಮಾಳಿ



ರಾಯಬಾಗ: ಪಟ್ಟಣದ ನಿವಾಸಿ ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ವಿಷ್ಣು ರುಕ್ಕಪ್ಪ ಮಾಳಿ (76) ಗುರುವಾರ ನಿಧನರಾಗಿದ್ದಾರೆ. ಮೃತರು ಪತ್ನಿ ,ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ.



ಯಮಕನಮರಡಿ: ಸಮೀಪದ ಯ. ವಿ. ಸಂಘದ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು. ಕಾರ್ಯದರ್ಶಿ ಜಿ. ಎನ್. ಅವಾಡೆ ಮಾತನಾಡಿದರು. ಮುಖ್ಯೋಪಾಧ್ಯಯರಾದ ಎ.ಬಿ. ಮುಗಳಿ, ಎಸ್. ಜಿ .ಹುನ್ನರಗಿ, ಗ್ರಾಮೀಣ ಒಕ್ಕೂಟಗಳ ಮೇಲ್ವಿಚಾರಕ ಹನುಮಂತ , ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸುಂದರ ಭವಿಷ್ಯಕ್ಕಾಗಿ ಪರಿಸರ ರಕ್ಷಿಸಿ

ಹಾರೂಗೇರಿ: ಸ್ಥಳೀಯ ವಿಶ್ವಭಾರತಿ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆಯ, ವಿಶ್ವಭಾರತಿ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು.

ರಾಯಬಾಗ ಅರಣ್ಯ ಇಲಾಖೆಯ ಗಸ್ತು ಅರಣ್ಯ ಪಾಲಕ ರಾಜು ಗಿಡಗಿರಿ ಮಾತನಾಡಿ, ನಾವು ಇಂದಿನ ಐಷಾರಾಮಿ ಜೀವನಕ್ಕಾಗಿ ಮರಗಿಡಗಳನ್ನು ಸ್ವಾರ್ಥಕ್ಕೆ ಬಳಸಿಕೊಂಡರೆ ಮುಂದಿನ ಪೀಳಿಗೆ ಪ್ರತಿ ಉಸಿರಿಗೂ ಬೆಲೆ ಕೊಟ್ಟು ಖರೀದಿಸುವ ಪ್ರಸಂಗ ಬರಬಹುದು.ಇಂದು ನಾವು ನೀರುಣಿಸಿ ಬೆಳೆಸಿದ ಸಸಿ ನಾಳೆ ನಮ್ಮ ಭವಿಷ್ಯದ ಜೀವಿಗಳಿಗೆ ಹಸಿರಿನ ಉಸಿರಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಎಂ.ಎಸ್. ಸಾವಡಕರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಆಡಳಿತಾಧಿಕಾರಿ ಪಿ.ಟಿ. ಗೋಣೆ ಅತಿಥಿ ಸ್ಥಾನ ಅಲಂಕರಿಸಿದ್ದರು. ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷರು ಜಿ ಎಸ್ ಗಲಗಲಿ, ಎಚ್.ಎ. ಕದಂ, ಎಸ್. ಐ. ಪಾಟೀಲ, ಎನ್. ಎಂ. ಗದಗ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಜಿ.ಎಸ್. ನಾಗರಾಳೆ ಪರಿಚಯಿಸಿ, ಸ್ವಾಗತಿಸಿದರು.

ಕವಿತಾ ಗಲಗಲಿ ನಿರೂಪಿಸಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ವಿಭಾಗದ ಪ್ರಧಾನ ಗುರು ಕೆ. ಬಿ. ಹೊಸೂರ, ಶಿಕ್ಷಕ/ಕಿಯರು,ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



ಹಾರೂಗೇರಿ: ಸ್ಥಳೀಯ ವಿಶ್ವಭಾರತಿ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆಯ, ವಿಶ್ವಭಾರತಿ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು. ರಾಯಬಾಗ ಅರಣ್ಯ ಇಲಾಖೆಯ ಗಸ್ತು ಅರಣ್ಯ ಪಾಲಕ ರಾಜು ಗಿಡಗಿರಿ, ಸಂಸ್ಥೆಯ ಅಧ್ಯಕ್ಷರಾದ ಎಂ.ಎಸ್. ಸಾವಡಕರ, ಸಂಸ್ಥೆಯ ಆಡಳಿತಾಧಿಕಾರಿ ಪಿ.ಟಿ. ಗೋಣೆ, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷರು ಜಿ ಎಸ್ ಗಲಗಲಿ, ಎಚ್.ಎ. ಕದಂ, ಎಸ್. ಐ. ಪಾಟೀಲ, ಎನ್. ಎಂ. ಗದಗ ಉಪಸ್ಥಿತರಿದ್ದರು.

ಜಿಲ್ಲಾದ್ಯಂತ ಪರಿಸರ ದಿನ ಆಚರಣೆ | ಶಾಸಕ ಆಸೀಫ್ ಸೇಠ್ ಹೇಳಿಕೆ

ಮಿಯಾವಾಕಿ ಉದ್ಯಾನ ನಿರ್ಮಾಣಕ್ಕೆ ಚಾಲನೆ

ಬೆಳಗಾವಿ: ಸಕಲ ಜೀವಿಗಳ ಜೀವನಾಡಿ ಪರಿಸರ. ಅದನ್ನು ಉಳಿಸುವುದು ಪ್ರತಿಯೊಬ್ಬ ನಾಗರಿಕನ ಪ್ರಮುಖ ಕರ್ತವ್ಯ ಎಂದು ಬೆಳಗಾವಿ ಉತ್ತರ ಶಾಸಕ ಆಸೀಫ್ ಸೇಠ್ ಹೇಳಿದರು.

ವಿಶ್ವ ಪರಿಸರ ದಿನದ ಅಂಗವಾಗಿ ವಾರ್ಡ್ 35 ನಂದಿನಿ ಮಾರ್ಗದ ಗಾಜಿನ ಮನೆ ಆವರಣದಲ್ಲಿ ಮಹಾನಗರ ಪಾಲಿಕೆ ಹಮ್ಮಿಕೊಂಡ ಮಿಯಾವಾಕಿ ಉದ್ಯಾನ ನಿರ್ಮಾಣಕ್ಕೆ ಅವರು ಸಸಿ ನೆಟ್ಟು ಚಾಲನೆ ನೀಡಿದರು. ಬಳಿಕ ಮಾತನಾಡಿ,

ಜಪಾನ್ ಮಾದರಿಯ ಮಿಯಾವಾಕಿ ಕಲ್ಪನೆಯಲ್ಲಿ ಇಲ್ಲಿ ನಗರ ಅರಣ್ಯ ಉದ್ಯಾನ ನಿರ್ಮಾಣವಾಗುತ್ತಿರುವುದು ಸಂತಸದ ವಿಷಯ. ಭವಿಷ್ಯದಲ್ಲಿ ಇಲ್ಲಿ ಉತ್ತಮ ಪರಿಸರ ಸೃಷ್ಟಿಯಾಗಲಿದೆ ಎಂದು ಆಸೀಫ್ ಸೇಠ್ ವಿಶ್ವಾಸ ವ್ಯಕ್ತಪಡಿಸಿದರು.

ಪಾಲಿಕೆ ಪರಿಸರ ವಿಭಾಗದ ಅಭಿಯಂತರ ಹಣಮಂತ ಕಲಾದಗಿ ಮಾತನಾಡಿ, ಸರ್ಕಾರದ ಆಯವ್ಯಯದಲ್ಲಿ ಆಯ್ಕೆಯಾದ 100 ಸ್ಥಳೀಯ ಸಂಸ್ಥೆಗಳಲ್ಲಿ ಬೆಳಗಾವಿ ಪಾಲಿಕೆಯೂ ಸೇರಿದೆ.



ಶಾಸಕರ ವಿಶೇಷ ಪ್ರಯತ್ನದಿಂದ ವಾರ್ಡ್ 35ರಲ್ಲಿ ಮಿಯಾವಾಕಿ ಉದ್ಯಾನ ನಿರ್ಮಾಣವಾಗುತ್ತಿದೆ ಎಂದು ವಿವರಿಸಿದರು.

ಕಾರ್ಯಕ್ರಮಕ್ಕೂ ಮುನ್ನ ವನಮಹೋತ್ಸವ ನಡೆಯಿತು. ನಗರಸೇವಕ ಶ್ರೇಯಸ್ ನಾಕಾಡಿ, ಸಮಾಜ ಸೇವಕ ಮಹಾದೇವ ರಾಥೋಡ್, ನಿವೃತ್ತ ಪ್ರಾಚಾರ್ಯ ಹಿರೇಮಠ, ಶೈಲಜಾ ಮಠಪತಿ ಸೇರಿದಂತೆ ಗಣ್ಯರು, ಸ್ಥಳೀಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹಣಮಂತ ಕಲಾದಗಿ ಸ್ವಾಗತಿಸಿ ನಿರೂಪಿಸಿದರು.

ಪರಿಸರವಿಲ್ಲದ ಬದುಕು ಕಲ್ಪನೆಗೂ ಸಾಧ್ಯವಿಲ್ಲ

ಮೂಡಲಗಿ: ಪ್ರಕೃತಿಯೊಂದಿಗೆ ಬದುಕು ಬೆರೆತು ಹೋಗಿದೆ. ಪರಿಸರವನ್ನು ದೈವಸ್ಥಾನದಲ್ಲಿಇಟ್ಟು ಆರಾಧಿಸಿದ ಸಂಸ್ಕೃತಿ ನಮ್ಮದು. ಹೀಗಾಗಿ ಇದರ ರಕ್ಷಣೆಯ ಹೊಣೆಯೂ ನಮ್ಮದೆ ಆಗಿದೆ. ಎಂದು ರಾಯಬಾಗ ವಲಯ ಅರಣ್ಯಾಧಿಕಾರಿ ಡಿ. ಶಿವಕುಮಾರ ಹೇಳಿದರು.

ನಾಗನೂರ ಪಟ್ಟಣದ ಅಥರ್ವ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ಆಯೋಜಿಸಿದ್ದ ಪೃಥ್ವಿ ಸಂಜೀವಿನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಆಧುನಿಕತೆ ವಿಕಾಸವಾದಂತೆ ಅದು ಪಕೃತಿಯ ಮೇಲೆ ವಿಷಮ ಪರಿಣಾಮ ಬೀರುತ್ತಿದೆ. ಇದರಿಂದ ಮಾನವ ಸೇರಿದಂತೆ ಇಡೀ ಜೀವ ಸಂಕುಲ ಅಪಾಯದ ಅಂಚಿನಲ್ಲಿದೆ. ಹೀಗಾಗಿ ಇನ್ನಾದರೂ ಅರಿತು ಪ್ರಕೃತಿಯ ಸಂರಕ್ಷಣೆ ಹಾಗೂ ಸಂವರ್ಧನೆಗೆ ಕಟಿಬದ್ಧರಾಗೋಣ ಎಂದು ಹೇಳಿದರು.

ಗುರುದೇವ ರವೀಂದ್ರನಾಥ ಫೌಂಡೇಶನ್ ಅಧ್ಯಕ್ಷ ಎ. ಆರ್. ಪಾಟೀಲ ಮಾತನಾಡಿ, ಜಾಗತಿಕ ತಾಪಮಾನ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಹವಾಮಾನ ವೈಪರಿತ್ಯಗಳು ಹಾಗೂ ಮಳೆ ಪ್ರಮಾಣದ ಏರಿಳಿತದಂತಹ ಸಮಸ್ಯೆಗಳಿಗೆ ನಮ್ಮ ಪರಿಸರದ ಮೇಲಿನ ನಿರ್ಲಕ್ಷ್ಯವೇ ಕಾರಣ. ಇದು ಮುಂದಿನ ದಿನಗಳಲ್ಲಿ ಮತ್ತಷ್ಟು ಸಸ್ಯ ಹಾಗೂ ಪ್ರಾಣಿ ಪ್ರಬೇಧಗಳ ಅವನತಿಗೆ ಕಾರಣವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲರೂ ಸೇರಿ ಮಹಾವಿದ್ಯಾಲಯದ ಆವರಣದಲ್ಲಿ ಸಸಿಗಳನ್ನು ನೆಟ್ಟರು. ಕಾರ್ಯಕ್ರಮದಲ್ಲಿ ಡಾ. ಪ್ರಸನ್ನಕುಮಾರ ಶಾಸ್ತ್ರೀಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷರಾದ ವೆಂಕಟೇಶ ಜಂಬಗಿ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಗಿರೀಶ ಗೋರಬಾಳ, ಡಾ. ಸಂತೋಷ ಮಿರ್ಜಿ, ಚೇತನ ಜೋಗನ್ನವರ ಉಪಸ್ಥಿತರಿದ್ದರು. ಪೂಜಾ ಮಾಡಲಗಿ ಸ್ವಾಗತಿಸಿದರು. ರಾಚಯ್ಯ ನಿರ್ವಾಣಿ ವಂದಿಸಿದರು. ಅನ್ನಪೂರ್ಣಾ ಪಾಶ್ಚಾಪೂರ ನಿರೂಪಿಸಿದರು.





ಗೋಕಾಕ: ವಿಶ್ವ ಪರಿಸರ ದಿನಾಚರಣೆ

ಗೋಕಾಕ: ವಿಶ್ವ ಪರಿಸರ ದಿನಾಚರಣೆ ನಿಮಿತ್ಯ ಬಿಜೆಪಿ ಪಕ್ಷದಿಂದ ನಗರದ ಸಸ್ಯೋಧ್ಯಾನ ವನದಲ್ಲಿ ಶುಕ್ರವಾರದಂದು ಯುವ ಧುರೀಣ ಅಮರನಾಥ ಜಾರಕಿಹೊಳಿ ನೇತೃತ್ವದಲ್ಲಿ ಸಸಿಗಳನ್ನು ನೆಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಪ್ರಕಾಶ ಮುರಾರಿ, ಡಾ.ಜಮಾದಾರ, ಸುರೇಶ ಸನದಿ, ಜಯಾನಂದ ಹುಣಚ್ಯಾಲ, ಅಡಿವೆಪ್ಪ ಕಿತ್ತೂರ, ಅಬ್ಬಾಸ ದೇಸಾಯಿ, ಸಿದ್ರಾಮ ಹುಚ್ಚರಾಮಗೋಳ, ಬಾಬು ಮುಳಗುಂದ, ಕೆಂಚಪ್ಪ ಗೌಡಪ್ಪಗೋಳ, ಮಂಜುನಾಥ ಮಾವರಕರ, ರವಿ ಮಡ್ಡೆಪ್ಪಗೋಳ, ಶ್ರೀರಂಗ ನಾಯಕ ಸೇರಿದಂತೆ ಅನೇಕರು ಇದ್ದರು.

ಏಕ್ ಪೇಡ್ ಮಾ ಕೆ ನಾಮ್ ಅಭಿಯಾನ ಯಶಸ್ವಿಗೊಳಿಸೋಣ: ದೊಡ್ಡಗೌಡರ

ನೇಸರಗಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಬಿಜೆಪಿ ಕಿತ್ತೂರು ಮಂಡಲ ವತಿಯಿಂದ ಮಾಜಿ ಶಾಸಕ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ನೇತೃತ್ವದಲ್ಲಿ ನೇಸರಗಿ ಜಿಪಂ ವಲಯದ ಮಲ್ಲಾಪುರ ಕೆ ಎನ್ ಗ್ರಾಮದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ, ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕರೆ ಮೇರೆಗೆ ನಡೆಯುತ್ತಿರುವ ಏಕ್ ಪೇಡ್ ಮೌ ಕೆ ನಾಮ್' ಅಭಿಯಾನದ ಅಂಗವಾಗಿ ಸಸಿ ನೆಟ್ಟು, ಪರಿಸರ ಸಂರಕ್ಷಣೆ ಮತ್ತು ಹಸಿರು ಭವಿಷ್ಯ ನಿರ್ಮಾಣದ ನಮ್ಮ ಸಂಕಲ್ಪವನ್ನು ನೆರವೇರುತ್ತಿದ್ದು, ಕಳೆದ 12 ವರ್ಷಗಳಲ್ಲಿ ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಅನೇಕ ಪರಿಸರ ಸ್ನೇಹಿ ಯೋಜನೆಗಳು ಹಾಗೂ ಉಪಕ್ರಮಗಳು ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯತ್ತ ಭಾರತದ ಬದ್ಧತೆಯನ್ನು ಜಗತ್ತಿಗೆ ಪರಿಚಯಿಸಿವೆ ಎಂದರು.

ಗಾಳೇಶ್ವರ ಮಠದ ಚಿದಾನಂದ ಸ್ವಾಮೀಜಿ, ಕಿತ್ತೂರು ಮಂಡಲ ಅಧ್ಯಕ್ಷರಾದ ಶ್ರೀಕರ ಕುಲಕರ್ಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ, ಲಕ್ಷ್ಮಿ ಇನಾಮದಾರ, ಎಸ್.ಎಂ. ಪಾಟೀಲ, ಮಾಜಿ ಗ್ರಾಪಂ ಅಧ್ಯಕ್ಷ ಅಶೋಕ ವಕ್ಕುಂದ, ರಾಜು ಬುಗಡಿಗಟ್ಟಿ, ಮಹಾಂತೇಶ ಕೂಲಿನವರ, ಶ್ರೀಶೈಲ ಕಮತಗಿ, ಪ್ರಧಾನ ಕಾರ್ಯದರ್ಶಿಗಳಾದ ಸಿದ್ದು ಬೋಳನ್ನವರ, ಮಂಜು ತೊಟ್ಟಲಮನಿ, ನಾಗರಾಜ ದುರಗದ, ಲಕ್ಷ್ಮೀ ತಳವಾರ, ಸುಜಾತಾ ಬಾಳಿಗಟ್ಟಿ, ಸೇರಿದಂತೆ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು, ಅರಣ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.





ಬಗಳಿ: ಸ್ಥಳೀಯ ಲಿಂ. ಅಪ್ಪಯ್ಯ ಮಹಾ ಸ್ವಾಮಿಗಳ ಶತಮಾನೋತ್ಸವ ಸಮಿತಿ ಹಾಗೂ ಆದರ್ಶ ಶಿಕ್ಷಣ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಸಂಭ್ರಮ ಸಡಗರದಿಂದ ಆಚರಿಸಿದರು.



ಹಿರೇಬಾಗೇವಾಡಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶುಕ್ರವಾರ ಇಲ್ಲಿಯ ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲಾ ಆವರಣದಲ್ಲಿ ಮಾವಿನ ಸಸಿಗಳನ್ನು ನೆಡಲಾಯಿತು. ಹಿರೇಬಾಗೇವಾಡಿ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಅಭಿಷೇಕ ಪಾಂಡೆ, ಗ್ರಾಮ ಲೆಕ್ಕಿಗ ಅನಿಲ ಕಮ್ಮಾರ, ಮುಖ್ಯ ಶಿಕ್ಷಕಿ ಪಿ.ಡಿ. ಹಳಿಮನಿ, ಪಿ.ಸಿ. ಈಳಿಗೇರ, ಎಂ.ಬಿ. ರೊಟ್ಟಿ, ರಾಜಶೇಖರ ಪಾಟೀಲ, ಎಸ್.ಎಸ್. ಗಲಬಿ, ಗುರುಸಿದ್ದಯ್ಯ ವಸ್ತ್ರದ, ಮಹಾಂತೇಶ ಪೊಲೀಶಿ, ವಿದ್ಯಾವತಿ ತಿಗಡಿ, ಎಸ್.ಎಸ್. ಶಿಲಯ್ಯನವರಮಠ, ಬಾಳಗೌಡ ಪಾಟೀಲ, ನಾಗರಾಜ್, ಶಾಲಾ ಮಕ್ಕಳು, ಗ್ರಾಮಸ್ಥರು ಇದ್ದರು.

ಉಗಾರ ಖುರ್ದನಲ್ಲಿ ವಿಶ್ವ ಪರಿಸರ ದಿನ ಆಚರಣೆ

ಕಾಗವಾಡ: ಉಗಾರ ಖುರ್ದ್ ಪಟ್ಟಣದ ಸರ್ಕಾರಿ ಮಾದರಿ ಮರಾಠಿ ಮಕ್ಕಳ ಶಾಲೆ ಹಾಗೂ ಫೆಡರಲ್ ಬ್ಯಾಂಕ್ ಶಾಖೆ ಉಗಾರ ಖುರ್ದ್ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನವನ್ನು ನಮ್ಮ ಭೂಮಿ ನಮ್ಮ ಡ್ಯೂಟಿ ಎಂಬ ಘೋಷವಾಕ್ಯದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಫೆಡರಲ್ ಬ್ಯಾಂಕ್‌ನ ಸಹ ವ್ಯವಸ್ಥಾಪಕರಾದ ವಿಶ್ವನಾಥ ಕೆ. ವೈಭವ ಲಂಕೆ, ಆನಂದ್ ಕೋಳಿ, ಮುಖ್ಯೋಪಾಧ್ಯಾಯರಾದ ಎಸ್.ಬಿ. ತೋಡಕರ, ಬಿ.ಎನ್. ಸಂಗಾವೆ, ಎ.ಎ. ಮಗದುಮ್ಮ, ಮಲ್ಲಿಕಾರ್ಜುನ್ ಬಡಿಗೇರ್ ಹಾಗೂ ಪತ್ರಕರ್ತ ದಯಾನಂದ ಕೇರೂರೆ ಅವರು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿದರು.





ಕಬ್ಬೂರು: ಪಟ್ಟಣದ ಶ್ರೀ ಬಿ.ಜಿ ಬೆಲ್ಲದ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆಯ, ಓಂ ಸೆಂಟ್ರಲ್ ಪಬ್ಲಿಕ್ ಸ್ಕೂಲ್ ಹಾಗೂ ಶ್ರೀಮತಿ ಅನ್ನಪೂರ್ಣಾ ಬಿ. ಬೆಲ್ಲದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು.

ಮುಂದಿನ ಪೀಳಿಗೆಗಾಗಿ ಪರಿಸರ ಉಳಿಸಿ



ಸುರೇಬಾನ: ಪರಿಸರವು ನಮ್ಮೆಲ್ಲರ ತಾಯಿ ಇದ್ದಂತೆ ಮುಂದಿನ ಪೀಳಿಗೆಯ ಉಳಿವಿಗಾಗಿ ಪರಿಸರವನ್ನು ಸಂರಕ್ಷಿಸುವುದು ಅತ್ಯವಶ್ಯ ಎಂದು ಗೊಣ್ಣಾಗರ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಕೆಎನ್ ಯಡ್ರಾವಿ ಹೇಳಿದರು.

ಅವರು ಸುರೇಬಾನ ಸಮೀಪದ ಗೊಣ್ಣಾಗರ ಸ.ಮಾ.ಶಾಲೆಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಸಸಿ ನೆಟ್ಟು ಮಾತನಾಡಿದರು.

ಶಿವರಾಮ ಕಾರಂತ್ ಇಕೋ ಕ್ಲಬ್ ವತಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ಗಿಡ ನೆಡುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮಕ್ಕಳಿಗೆ ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳು ವಿಷಯದ ಕುರಿತಾಗಿ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಶಾಲೆಯ ಶಿಕ್ಷಕರಾದ ಬಿ ವಿ ಹೆರಕಲ್, ಮಲ್ಲಿಕಾರ್ಜುನ ಬಿ ಭಾವಿಕಟ್ಟಿ, ಜಹುರ್ ಕಲೆಗಾರ, ಮೋಹನ ಜಾಧವ, ಎಸ್ ಎಫ್ ರೋಣದ, ಡಿ ಪಿ ಗೋಕಾವಿ, ಎಲ್ ವಿ ಗುಡಿಸಾಗರ, ಎಸ್ ಆಯ್ ಯಲಿಗೋಡ, ಅಂಜಲಿ ತಳಗಡೆ, ಅಕ್ಷತಾ ಗೊಣಬಾಳ, ಕಾವೇರಿ ಮೊರಬದ ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಿತ್ತನೆ ಬೀಜ ವಿತರಣೆಗೆ ಚಾಲನೆ

ಕಕಮರಿ: ಪ್ರಸ್ತುತ ಮುಂಗಾರು ಹಂಗಾಮು ಆರಂಭವಾಗುತ್ತಿರುವುದರಿಂದ ರೈತರು ಶ್ರೀ ಅಮ್ಮಾಜೇಶ್ವರಿ ರೈತ ಸಂಪರ್ಕ ಕೇಂದ್ರದಿಂದ ಸಿಗುವ ಸೌಲಭ್ಯಗಳನ್ನು ರೈತರು ಪಡೆದುಕೊಳ್ಳಬೇಕೆಂದು ತೆಲಸಂಗ ಕೃಷಿ ಅಧಿಕಾರಿ ಯಂಕಪ್ಪ ಉಪ್ಪಾರ ಹೇಳಿದರು.

ಅವರು ಗ್ರಾಮದ ಶ್ರೀ ಅಮ್ಮಾಜೇಶ್ವರಿ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತರಿಗೆ ರಿಯಾಯಿತಿ ದರದಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಿ ಮಾತನಾಡಿದರು.

ಶ್ರೀ ಅಮ್ಮಾಜೇಶ್ವರಿ ದೇವಸ್ಥಾನ ಅಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿದರು.

ಹಿರಿಯರಾದ ಗಿರಮಲ್ಲ ಜನಗೌಡ, ಲಕ್ಷ್ಮಣ ಗುರ್ಕಿ, ಅಲ್ಲಯ್ಯಾ ಹಿರೇಮಠ, ಜಿಪಂ ಮಾಜಿ ಸದಸ್ಯ ಗುರಪ್ಪ ದಾಶ್ಯಾಳ, ಸಂಘದ ಅಧ್ಯಕ್ಷ ಸಿಕಂದರ ಮುಜಾವರ, ಶಿವಾಜಿ ಶಿಂದೆ, ಕಲ್ಲಪ್ಪ ಅಡಹಳ್ಳಿ, ಗುರಪ್ಪ ಮಠಾಣಿ, ರಾಜೇಂದ್ರ ವಾಲಿ, ಅಶೋಕ ಶಿರಗುಪ್ಪಿ, ಮಲಕಾರಿಸಿದ್ದ ಪೂಜಾರಿ, ಸದಾಶಿವ ಬಿಳ್ಳೂರ, ಸಂಘದ ಸಿಇಓ ಮಲ್ಲಿಕಾರ್ಜುನ ಜನಗೌಡ, ಹಾಗೂ ಸಿಬ್ಬಂದಿ ವರ್ಗದವರು ಇತರರಿದ್ದರು.



ಪರಿಸರ ರಕ್ಷಣೆಗೆ ಒತ್ತು ನೀಡಿ: ಪಮ್ಮಾರ



ಯರಗಟ್ಟಿ: ಗಿಡ ಮರಗಳ ನಾಶದಿಂದ ಪರಿಸರಕ್ಕೆ ಧಕ್ಕೆ ಉಂಟಾಗುತ್ತದೆ. ಆರೋಗ್ಯದ ಹಿತದೃಷ್ಟಿಯಿಂದ ಪ್ರತಿಯೊಬ್ಬರೂ ಪರಿಸರ ರಕ್ಷಣೆಗೆ ಒತ್ತು ನೀಡಬೇಕು ಎಂದು ನ್ಯಾಯಾಧೀಶರಾದ ಕೃಷ್ಣಪ್ಪ ಪಮ್ಮಾರ ಹೇಳಿದರು.

ಸ್ಥಳೀಯ ನ್ಯಾಯಾಲಯದ ಆವರಣದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪರಿಸರ ಉಳಿವಿಗೆ ಪ್ರತಿಯೊಬ್ಬರು ಮನೆಗೊಂದು ಸಸಿ ನೆಡಬೇಕು ಎಂದರು. ಉಪವಲಯ ಅರಣ್ಯ ಅಧಿಕಾರಿ ಎಂ. ಬಿ. ಬಾಗವಾನ ಮಾತನಾಡಿದರು. ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ ವ್ಹಿ. ಜಿ. ಬಿರಾದಾರ 'ಪಾಟೀಲ, ನ್ಯಾಯವಾದಿಗಳಾದ ಎಂ. ಎಂ. ಮಡಿವಾಳರ, ಸಿದ್ದು ಮಾಳಕ್ಕನ್ನವರ, ವೈ.ಬಿ. ನರಿ, ರೇವತಿ ಪಾಟೀಲ, ಎಸ್. ಎಂ. ಭರಮಗೌಡ್ರ, ಎಂ.ಬಿ. ಜಮಾದಾರ, ಗಸ್ತು ಅರಣ್ಯ ಪಾಲಕರಾದ ರಾಜು ಅಮರ್ಯಾಗೊಳ, ಖಾನಸಾಬ ಕಳಾವಂತ, ಮಹಾಂತೇಶ ಡೊಂಬರ, ಅಶೋಕ ವಾಘ ಇದ್ದರು.

ಪ್ಲಾಸ್ಟಿಕ್ ಮುಕ್ತ ಪರಿಸರಕ್ಕೆ ಶ್ರಮಿಸಿ

ರಾಯಬಾಗ: ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಪರಿಸರವನ್ನು ಪ್ಲಾಸ್ಟಿಕ್ ಮುಕ್ತವನ್ನಾಗಿ ಮಾಡಲು ಕೈಜೋಡಿಸೋಣ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸೇರೊಟ್ಟಿ ಹೇಳಿದರು.

ವಿಶ್ವ ಪರಿಸರ ದಿನ ನಿಮಿತ್ತ ಶುಕ್ರವಾರ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಸಸಿ ನೆಟ್ಟು, ನ್ಯಾಯಾಲಯಕ್ಕೆ ಆಗಮಿಸಿದ್ದ ಕಕ್ಷಿದಾರರಿಗೆ ಸಸಿಗಳು ನೀಡಿ ಮಾತನಾಡಿದ ಅವರು, ಅರಣ್ಯ ನಾಶದಿಂದ ಪರಿಸರದಲ್ಲಿ ಅಸಮತೋಲನ ಉಂಟಾಗಿ, ಮಳೆ ಕಡಿಮೆಯಾಗುವುದು. ಪ್ರತಿಯೊಬ್ಬ ವ್ಯಕ್ತಿ ಒಂದೊಂದು ಸಸಿ ನೆಡುವ ಮೂಲಕ ಪರಿಸರ ರಕ್ಷಣೆಗೆ ಕೈಜೋಡಿಸಬೇಕೆಂದರು.

ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರೀಯಾ ಭಟ್ಟಡ, ಹೆಚ್ಚುವರಿ ದಿವಾಣಿ ನ್ಯಾಯಾಧೀಶ ದಾನಪ್ಪ, ಸರ್ಕಾರಿ ಅಭಿಯೋಜಕರಾದ ಮಹಾವೀರ ಗಂಡವ್ವಗೋಳ, ಹನುಮಂತ ಅಚಮಟ್ಟಿ, ಛಾಯಾ ಬೇಡಿಕಿಹಾಳ, ವಕೀಲರ ಸಂಘ ಅಧ್ಯಕ್ಷ ಕೆ.ಆರ್. ಕೋಟಿವಾಲೆ, ಅರಣ್ಯ ವಲಯ ಅಧಿಕಾರಿ ಉಮೇಶ ಪ್ರಧಾನಿ, ವಕೀಲರಾದ ಎಲ್ .ಬಿ.ಚೌಗಲಾ, ಎ.ಬಿ.ಮಂಗಸೂಳಿ, ಎಮ್.ಕೆ.ಖೊಂಬಾರೆ, ಟಿ.ಕೆ.ಶಿಂಧೆ, ವಿ.ಎಸ್ .ಪೂಜಾರಿ, ಎನ್.ಎಮ್.ಯಡವನ್ನವ್ವರ, ಆರ್.ಎಸ್.ಹಳ್ಳಪ್ಪಗೋಳ, ಕೆ.ಎಲ್. ಕೆರೂರೆ, ಬಿ.ಎಮ್.ಬಂತಿ, ಎಸ್.ಎಮ್.ಸಲಗರೆ, ಪಿ.ಎಸ್.ಸನದಿ, ಕೆ.ಎಮ್. ಮದಾಳಿ ಹಾಗೂ ನ್ಯಾಯಾಲಯ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಇದ್ದರು.



ಕಿರುಸುದ್ದಿ

ಬಿ.ಕೆ.ಹರಿಪ್ರಸಾದಗೆ ಸನ್ಮಾನ



ಬೆಳಗಾವಿ: ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ ಅವರನ್ನು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಾಹುಲ ಜಾರಕಿಹೊಳಿ, ಸಚಿವ ಸತೀಶ ಜಾರಕಿಹೊಳಿ ಅವರ ಬೆಂಗಳೂರಿನ ಕಾರ್ಯಾಲಯದಲ್ಲಿ ಸತ್ಕರಿಸಿ, ಸನ್ಮಾನಿಸಿದರು. ಈ ವೇಳೆ ಸಚಿವ ಸತೀಶ ಜಾರಕಿಹೊಳಿ, ಶಾಸಕರಾದ ಆಸೀಫ್ ಸೇಠ್, ಬಾಬಾಸಾಹೇಬ ಪಾಟೀಲ , ಕಾಂಗ್ರೆಸ್ ನಾಯಕರು ಇದ್ದರು.

ಅರ್ಜಿ ಆಹ್ವಾನ

ಬೆಳಗಾವಿ: ಸವದತ್ತಿ ತೋಟಗಾರಿಕೆ ಇಲಾಖೆಯಿಂದ 2026–27ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹನಿ ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಆಸಕ್ತ ತೋಟಗಾರಿಕೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನವಾಗಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಹಳೆಯ ಮರಗಳ ಪುನಶ್ಚೇತನ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ರೈತರಿಗೆ ತರಬೇತಿ, ಕೃಷಿಹೊಂಡ, ಪ್ಲಾಸ್ಟಿಕ್ಹೊದಿಕೆ, ಕಳೆಚಾಪೆ, ಫಾಮ್ರ್ಲೈಟ್, ಪ್ಯಾಕ್ಹೌಸ್, ತೋಟಗಾರಿಕೆಯಲ್ಲಿ ಯಾಂತ್ರೀಕರಣ, ಹೈಡ್ರೋಪೋನಿಕ್, ಏರೋಪೋನಿಕ್, ಅಣಬೆ ಉತ್ಪಾದನಾ ಘಟಕ, ಎರೆಹುಳು ಗೊಬ್ಬರ ಘಟಕಗಳಿಗೆ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನದಡಿ ತಾಳೆ ಬೆಳೆ, ಪ್ರದೇಶ ವಿಸ್ತರಣೆ, ನಿರ್ವಹಣೆ, ಅಂತರ ಬೆಳೆ ಡಿಸೇಲ್ಪಂಪ್ಸೆಟ್, ಕೊಳವೆ ಬಾವಿಗಳಿಗೆ ಸಹಾಯಧನ, ಕೃಷಿಹೊಂಡ, ತಾಳೆಹಣ್ಣು ಕಟಾವು ಯಂತ್ರ, ಚಾಪ್ಕರ್ಟ, ಟ್ರಾಕ್ಟರ್ , ಟ್ರಾಲಿ ಖರೀದಿಗೆ ಸಹಾಯಧನ ಲಭ್ಯವಿರುತ್ತದೆ.ಹೆಚ್ಚಿನ ಮಾಹಿತಿಗೆ ತಾಲೂಕು ರೈತ ಸಂಪರ್ಕ ಕೇಂದ್ರ ಅಥವಾ ತೋಟಗಾರಿಕೆ ಇಲಾಖೆ ಕಚೇರಿಯನ್ನು ಸಂಪರ್ಕಿಸುವಂತೆ ಸವದತ್ತಿ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೀಕರ ಅಪಘಾತ: ಚಾಲಕ ಸ್ಥಳದಲ್ಲೇ ಸಾವು

ಯಮಕನಮರಡಿ: ಸಮೀಪದ ಹತ್ತರಗಿ ಟೋಲ್ ಪ್ಲಾಜಾ ಸಮೀಪ ಹಂಚಿನಾಳ ಹದ್ದಿನ ರಾಷ್ಟ್ರೀಯ ಹೆದ್ದಾರಿ–4ಯಲ್ಲಿ ಅಪಘಾತ ಸಂಭವಿಸಿ ಚಾಲಕ ಸ್ಥಳದಲ್ಲಿ ಸಾವನ್ನಪ್ಪಿದ್ದಾನೆ.ಸ್ಥಳೀಯ ಪೊಲೀಸ್ ಠಾಣೆ ಸಿಬ್ಬಂದಿ ಹಾಗೂ ಸಿಪಿಐ ಜಾವೀದ್ ಮೋಸಪೂರಿ ಅವರು ಘಟನಾ ಸ್ಥಳಕ್ಕೆ ಧಾವಿಶಿ ಸದರಿ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಮೃತಪಟ್ಟ ವ್ಯಕ್ತಿ ಚಾಲಕ ತಮಿಳುನಾಡಿನವರೆಂದು ಗುರುತಿಸಲಾಗಿದೆ. ಚಾಲಕನು ನಿರ್ಲಕ್ಷ್ಯತನದಿಂದ ತನ್ನ ವಾಹನ ಚಲಾಯಿಸುತ್ತಿದ್ದಾಗ ಮುಂದೆ ಹೊರಟಿದ್ದ ವಾಹನಕ್ಕೆ ಹಿಂದಿನ ಬದಿಯಲ್ಲಿ ಡಿಕ್ಕಿ ಹೊಡೆದು ಅಪಘಾತವಾಗಿದೆ ಎನ್ನಲಾಗಿದೆ.

ಅಪಘಾತ: ಮಹಿಳೆ ಸಾವು

ಕಾಗವಾಡ: ಪಟ್ಟಣದ ದುರ್ಗಾ ಧಾಬಾ ಬಳಿ, ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೈಕ್ ಹಿಂಬದಿ ಕುಳಿತಿದ್ದ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದು, ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. ಕಾಗವಾಡ–ಶೇಡಬಾಳ ರಸ್ತೆ ದುರ್ಗಾ ಧಾಬಾ ಸಮೀಪ ಈ ಅಪಘಾತ ಸಂಭವಿಸಿದೆ. ಮುಧೋಳ ತಾಲೂಕಿನ ಸಾಯಿನಗರ ನಿವಾಸಿ ಮಂಜುನಾಥ ಶ್ರೀಶೈಲ ಕಾಂಬಳೆಗೆ ಗಂಭೀರವಾಗಿ ಗಾಯಹೊಂಡಿದ್ದು, ಕಾರಿಗೆ ಡಿಕ್ಕಿಯ ಪರಿಣಾಮ ಬೈಕ್ ಹಿಂಬದಿ ಸಿಟ್‌ನಲ್ಲಿದ್ದ ಮಹಿಳೆ ಮಹಾನಂದಾ ಸಚಿನ್ ಚೌಗುಲೆ (38) ರಭಸವಾಗಿ ಬಿದ್ದಿರುವ ಪರಿಣಾಮವಾಗಿ ತಲೆಗೆ ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಘಟನಾ ಸ್ಥಳಕ್ಕೆ ಕಾಗವಾಡ ಪೊಲೀಸ್ ಬೇಟಿ ನೀಡಿ ಪರಿಶೀಲನೆ ನಡೆಸಿ, ಕಾರು ಚಾಲಕ ಮಂಜುನಾಥ ಕಾಂಬಳೆ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಈ ದುರ್ಘಟನೆಯಿಂದ ಸಾವಳಿ ಗ್ರಾಮ ಹಾಗೂ ಮೃತ ಮಹಿಳೆಯ ಕುಟುಂಬದಲ್ಲಿ ಶೋಕದ ವಾತಾವರಣ ನಿರ್ಮಾಣಕೊಂಡಿದೆ.



ಹಲ್ಯಾಳ : ವಿಶ್ವಪರಿಸರ ದಿನಾಚರಣೆಯ ಅಂಗವಾಗಿ ಹಲ್ಯಾಳ ಗ್ರಾಮದ ಭರಮದೇವರ ದೇವಸ್ಥಾನದ ಆವರಣದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಗಿಡ ನೆಡುವ ಕಾರ್ಯಕ್ರಮ ನಡೆಯಿತು.
ಕೃಷಿ ಅಧಿಕಾರಿ ಶಿವನಗೌಡ ಪಾಟೀಲ, ಧರ್ಮಸ್ಥಳ ಸಂಸ್ಥೆಯ ಪ್ರವೀಣ್ ತಿಮ್ಮಣ್ಣವರ ಸೇರಿದಂತೆ ಮತ್ತಿತರರು ಇದ್ದರು.

ಪರಿಸರ ದಿನ ಒಂದೇ ದಿನಕ್ಕೆ ಸೀಮಿತವಾಗದಿರಲಿ

ಮೂಡಲಗಿ: ತಾಲೂಕಿನ ಕಲ್ಲೋಳಿಯ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಸಸಿಗಳನ್ನು ನೆಡುವ ಮೂಲಕ ಜಾಗತಿಕ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾಲೇಜಿನ ಆವರಣದಲ್ಲಿ ವಿವಿಧ ಜಾತಿಯ ಉಪಯುಕ್ತ ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಮಾತನಾಡಿ, ಪರಿಸರ ಸಂರಕ್ಷಣೆ ಎಂಬುದು ಕೇವಲ ಒಂದು ದಿನದ ಆಚರಣೆಯಾಗಬಾರದು. ಅದು ನಮ್ಮ ದಿನನಿತ್ಯದ ಬದುಕಿನ ಭಾಗವಾಗಬೇಕು ಎಂದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿ ಶಂಕರ ನಿಂಗನೂರ, ಮೂಡಲಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಅಧ್ಯಾಪಕ ಪ್ರೊ. ಶಿವಕುಮಾರ, ಗ್ರಂಥಪಾಲಕ ಬಿ.ಬಿ. ವಾಲಿ, ಡಾ. ಕೆ.ಎಸ್. ಪರವ್ವಗೋಳ, ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ಎನ್‌ಎಸ್‌ಎಸ್ ಸ್ವಯಂಸೇವಕರು ಸೇರಿದಂತೆ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಪರಿಸರ ಕಾಳಜಿಯ ಸಂಕಲ್ಪ ತೊಟ್ಟರು.



ಮೂಡಲಗಿ: ತಾಲೂಕಿನ ಕಲ್ಲೋಳಿಯ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಸಸಿಗಳನ್ನು ನೆಡುವ ಮೂಲಕ ಜಾಗತಿಕ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಪ್ರಾಚಾರ್ಯ ಡಾ. ಸುರೇಶ ಹನಗಂಡಿ,ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿ ಶಂಕರ ನಿಂಗನೂರ, ಮೂಡಲಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಅಧ್ಯಾಪಕ ಪ್ರೊ. ಶಿವಕುಮಾರ ಇತರರು ಇದ್ದರು.

ಸಂಗೊಳ್ಳಿ ರಾಯಣ್ಣ ಶಾಲೆಯ ಆವರಣದಲ್ಲಿ ವನ ಮಹೋತ್ಸವ

ತಿಮ್ಮಕ್ಕಳ ಆದರ್ಶ ಸ್ಮರಿಸೋಣ: ಹಲಗೇಕರ

ಖಾನಾಪುರ: ತಾಲೂಕಿನ ನಂದಗಡ ಗ್ರಾಮದ ಹೊರವಲಯದ ಸಂಗೊಳ್ಳಿ ರಾಯಣ್ಣ ಸನಿವಾಸ ಶಾಲೆಯ ಆವರಣದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಾಮಾಜಿಕ ಅರಣ್ಯ ಇಲಾಖೆ ವನಮಹೋತ್ಸವ ಆಚರಿಸಲಾಯಿತು. ವನ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ವಿಠ್ಠಲ ಹಲಗೇಕರ, ''ಮರಗಿಡಗಳನ್ನು ಮಕ್ಕಳಂತೆ ಪೋಷಿಸಿದ ಸಾಲುಮರದ ತಿಮ್ಮಕ್ಕಳ ಆದರ್ಶವನ್ನು ಈ ದಿನದಂದು ನಾವೆಲ್ಲರೂ ನೆನೆಯಬೇಕು. ಪರಿಸರ ಸಂರಕ್ಷಣೆಗೆ ಶ್ರಮಿಸಬೇಕು. ಪರಿಸರ ದಿನದ ಅಂಗವಾಗಿ ಗಿಡ ನೆಡುವುದಷ್ಟೇ ಮುಖ್ಯವಲ್ಲ, ಇಂದು ನಾಟಿ ಮಾಡಿದ ಗಿಡವನ್ನು ಕಾಳಜಿವಹಿಸಿ ಪೋಷಿಸುವುದು ಅಷ್ಟೇ ಮುಖ್ಯ'' ಎಂದು ಅಭಿಪ್ರಾಯ ಪಟ್ಟರು.



ಕಾರ್ಯಕ್ರಮದಲ್ಲಿ ಖಾನಾಪುರ ಬಿಇಒ ಪಿ.ರಾಮಪ್ಪ, ಸಾಮಾಜಿಕ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಮೃತ್ಯುಂಜಯ ಗಣಾಚಾರಿ ಮಾತನಾಡಿ, ಪರಿಸರ ಸಂರಕ್ಷಣೆ ಮತ್ತು ವೃಕ್ಷಾರೋಪಣೆಯ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ನಂದಾ ಕಾಡಗಿ, ಬಿಜೆಪಿ ಬ್ಲಾಕ್ ಅಧ್ಯಕ್ಷ ಬಸವರಾಜ ಸಾಣಿಕೊಪ್ಪ, ಮಾಜಿ ತಾಪಂ ಸದಸ್ಯ ಶ್ರೀಕಾಂತ ಇಟಗಿ, ಹಿರಿಯ ವಕೀಲ ಚೇತನ ಮನೇರಿಕರ, ಅರಣ್ಯ ಅಧಿಕಾರಿಗಳಾದ ಅಶೋಕ ಹೂಲಿ, ಮಹಾಂತೇಶ ಮುರಗೋಡ, ಮಾಧುರಿ ದಳವಾಯಿ, ಗಸ್ತು ಅರಣ್ಯ ಪಾಲಕರಾದ ಪ್ರಕಾಶ ಲೋಕನ್ನವರ, ಮಹಾಂತೇಶ ದೊಡ್ಡಗೌಡ್ರ, ಸಿಬ್ಬಂದಿ ಅಮರ ಕುಲಕರ್ಣಿ, ಸಂಜು ಪಾಟೀಲ, ಪ್ರಶಾಂತ ಘಸ್ತೆ, ಮಹಾಂತೇಶ ಬಾಳೇಕುಂದ್ರಿ ಹಾಗೂ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಇತರರು ಇದ್ದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಕುರಿತು ಪ್ರತಿಜ್ಞೆ ಸ್ವೀಕರಿಸಿದರು.



ಚನ್ನಮ್ಮನ ಕಿತ್ತೂರು: ಸಮೀಪದ ಮುಗಳಿಹಾಳ ಗ್ರಾಮದಲ್ಲಿ ಬೆಳಗಾವಿ ವಿಭಾಗದ ಸಣ್ಣ ನೀರಾವರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸೇವಾನಿವೃತ್ತಿ ಹೊಂದಿದ ಮುಗಳಿಹಾಳ ಗ್ರಾಮದ ಶ್ರೀಕಾಂತ ತುಳಜಿ ಅವರನ್ನು ಈಚೆಗೆ ಗ್ರಾಮಸ್ಥರ ಪರವಾಗಿ ಸತ್ಕರಿಸಲಾಯಿತು. ತೋಲಗಿ ಪಿಕೆಪಿಎಸ್ ಅಧ್ಯಕ್ಷ ಮಾರುತಿ ಠಕ್ಕೆಕರ ಹಾಗೂ ಪ್ರಕಾಶ ಕೂಗಿ, ಬಸವರಾಜ ಅವರೇಕರ, ಶಂಕರ ದೇವಲತ್ತಿ, ಶಿವಪ್ಪ ಅರಳಿಕಟ್ಟಿ, ಭೀಮಣ್ಣ ಬಸರೀಕಟ್ಟಿ, ಸುನೀಲ ಕೂಗಿ, ಬಸವರಾಜ ಹುಬ್ಬಳಿಕರ, ವಿಠ್ಠಲ ಕಮ್ಮಾರ, ಸಂಜಯ ಸಾವಂತ, ದೇಮಣ್ಣ ಹುಬ್ಬಳಿಕರ, ಕಲ್ಲಪ್ಪ ಗಿರಿಯಾಲ, ಜ್ಯೋತಿಬಾ ಪಾಟೀಲ, ರಾಜು ಮಾದಾರ ಇತರರು ಇದ್ದರು.

ಗಿಡಗಳನ್ನು ಬೆಳೆಸಿ ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ

ಮುಗಳಖೋಡ: ಪ್ಲಾಸ್ಟಿಕ್ ಬ್ಯಾನ್ ಮಾಡಿ, ನೀರು ನಿಯಮಿತವಾಗಿ ಬಳಸಿ, ಸಮಾಜಕ್ಕೆ ನಮ್ಮ ಕೊಡುಗೆ ಕೊಡುವುದಾದರೆ ಒಬ್ಬರು 10 ಗಿಡಗಳನ್ನು ಬೆಳೆಸಿ ಸಮಾಜಕ್ಕೆ ಅದುವೇ ದೊಡ್ಡ ಕೊಡುಗೆಯಾಗುವುದು ಎಂದು ಶ್ರೀ. ಚವಿವ ಸಂಘದ ಅಧ್ಯಕ್ಷ ಸಂಜಯ್ ಕುಲಿಗೋಡ ಹೇಳಿದರು.

ಅವರು ಪಟ್ಟಣದ ಚವಿವ ಸಂಘದ ರೈನಬೋ ಸೆಂಟ್ರಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯ ಮುಖ್ಯ ಅತಿಥಿ ಸ್ಥಾನವಹಿಸಿ ಮಾತನಾಡಿ, ಗಿಡಗಳಿಲ್ಲದೆ ಪ್ರಾಣಿ ಪಕ್ಷಿಗಳು ಕಣ್ಮರೆಯಾಗುತ್ತಿವೆ. ಈ ವರ್ಷ ಒಂದು ಸಾವಿರ ಗಿಡಗಳನ್ನು ಮಕ್ಕಳಿಗೆ ನೀಡುತ್ತಿದ್ದೇವೆ. ಎಲ್ಲರೂ ಗಿಡಗಳನ್ನು ಬೆಳೆಸಿ ತಮ್ಮ ಭವಿಷ್ಯ ಉಜ್ವಲವಾಗಲಿ ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಎಸ್. ಎಸ್. ಮಧಾಳೆ ಮಾತನಾಡಿ ಪ್ರಕೃತಿಯನ್ನು ಹಿಂದೆ ದೇವರು ಎನ್ನುತ್ತಿದ್ದರು ಎಂದು ಅದೇ ಪ್ರಕೃತಿಯನ್ನ ಎಲ್ಲರೂ ಹಾಳು ಮಾಡುತ್ತಿದ್ದಾರೆ. ತಾವು ತಮ್ಮ ಹುಟ್ಟು ಹಬ್ಬಕ್ಕೆ ಕೊಡುಗೆಯನ್ನು ನೀಡುವುದಾದರೆ ಯಾರಿಗಾದರೂ ಒಂದು ಸಸಿಗಳನ್ನು ನೀಡಿ ಎಂದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ್ದ ಸಿಬಿಎಸ್ಸಿ ಶಾಲೆಯ ಪ್ರಾಚಾರ್ಯ ವಿಜಯ್ ಮಗದುಮ್ಮ ಎಲ್ಲರನ್ನ ಸ್ವಾಗತಿಸಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಹಲವಾರು ವಿದ್ಯಾರ್ಥಿಗಳು ಭಾಗಿಯಾಗಿ ಭೂಮಿಯನ್ನು ಸುರಕ್ಷಿತವಾಗಿಟ್ಟು ಮರುಬಳಕೆಯ ಸಂಪನ್ಮೂಲಗಳನ್ನು ಸರಿಯಾಗಿ ಮತ್ತು ನಿಯಮಿತವಾಗಿ ಬಳಸೋಣ ಎಂದು ಕಾರ್ಯಕ್ರಮ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಕ ಅನಿಲ ಕಾಂಬಳೆ ಸ್ವಾಗತಿಸಿ, ಕುಮಾರಿ ಭುವನೇಶ್ವರಿ ಅಲ್ಯಪ್ಪಗೋಳ ನಿರೂಪಿಸಿ, ಸೌಜನ್ಯ ಯಡವನ್ನವರು ವಂದಿಸಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ವಿಜಯ್ ಮಗದುಮ್, ಸಂಸ್ಥೆ ವ್ಯವಸ್ಥಾಪಕ ಶ್ರೀಮಂತ ಆಳಂದ, ಶ್ರೀಶೈಲ್ ಕುಲಿಗೋಡ, ರಾಜಶೇಖರ್ ಎತ್ತಿನಮನಿ, ಉಮೇಶ್ ಕನಾಳ, ಸೇರಿದಂತೆ ರೈನಬೋ ಸೆಂಟ್ರಲ್ ಆಂಗ್ಲ ಮಾಧ್ಯಮ ಶಾಲೆಯ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಇದ್ದರು.



ಶಿಬಿರದಿಂದ ಮದ್ಯ ವ್ಯಸನಿಗಳಿಗೆ ಪುನರ್ಜನ್ಮ

ಮುರಗೋಡ: ಮದ್ಯ ಸೇವನೆ ಹವ್ಯಾಸದಿಂದ ಬಲಿಯಾಗುತ್ತಿರುವ ಲಕ್ಷಾಂತರ ವ್ಯಸನಿಗಳಿಗೆ ಪುನರ್ಜನ್ಮ ನೀಡುವುದೇ ಮದ್ಯವರ್ಜನ ಶಿಬಿರದ ಉದ್ದೇಶ ಎಂದು ಧಾರವಾಡ ಪ್ರಾದೇಶಿಕ ವಿಭಾಗದ ಜನಜಾಗೃತಿ ಯೋಜನಾಧಿಕಾರಿ ಭಾಸ್ಕರ ಹೇಳಿದರು.

ಅವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯರಗಟ್ಟಿ ತಾಲೂಕಿನ ಮುರಗೋಡ ವಲಯದ ಮಹಾಂತ ದುರದುಂಡೀಶ್ವರ ಮಠದಲ್ಲಿ 2064ನೇ ಮದ್ಯವರ್ಜನ ಶಿಬಿರದ ಉದ್ಘಾಟನೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕುಡಿತದ ಚಟಕ್ಕೆ ಬಿದ್ದು ಮನೆ ಹೆಂಡತಿ ಮಕ್ಕಳಿಗೆ ತೊಂದರೆ ನೀಡುತ್ತಿರುವ 1.45 ಲಕ್ಷ ಮದ್ಯ ವ್ಯಸನಿಗಳಿಗೆ ಯಾವುದೇ ತೊಂದರೆ ಕೊಡದೆ ಮಾನಸಿಕವಾಗಿ ಮನ ಪರಿವರ್ತನೆ ಮಾಡಿ ಶಿಬಿರದಲ್ಲಿ ಯಶಸ್ವಿ ಮಾಡಿದ್ದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, 2064 ಶಿಬಿರದಿಂದ ಸಮಾಜಮುಖಿ ಕಾರ್ಯ ಕೈಗೊಂಡಿದ್ದು ಎಲ್ಲರ ಸಹಕಾರ ಅಗತ್ಯವೆಂದರು.

ಜಿಲ್ಲೆಯ ನಿರ್ದೇಶಕರಾದ ಎಚ್. ಆರ್. ಲವಕುಮಾರ್ ಶಿಬಿರದ ಸದುದ್ದೇಶ ಯೋಜನೆಯ ಕಾರ್ಯಕ್ರಮಗಳ ಪರಿಚಯದೊಂದಿಗೆ ಮಾಹಿತಿ ಮಾರ್ಗದರ್ಶನ ನೀಡಿದರು. ಉಪತಹಶೀಲ್ದಾರ್ ಡಿ.ಬಿ. ಅಲ್ಲಯ್ಯನವರಮಠ, ಸವದತ್ತಿ ತಾಲೂಕು ಕ್ಷೇತ್ರ ಸಮನ್ವಯಾಧಿಕಾರಿ ಬಸವರಾಜ ಬ್ಯಾಳಿ,

ಡಾ.ಆರ್. ಎಸ್. ಬಾಳಿಕಾಯಿ ಮಾತನಾಡಿದರು. ಪ್ರಾಚಾರ್ಯ.ರಮೇಶ್ ಭಜಂತ್ರಿ. ಯೋಗ ಗುರು ಗುರುಮಹಾಂತೇಶ ಹಿರೇಮಠ, ಜಿಲ್ಲಾ ಜನಜಾಗೃತಿ ಅಧ್ಯಕ್ಷ ಮಹಾಂತೇಶ ಅಳಾಜ, ಸುರೇಶ್ ಮ್ಯಾಕಲ, ಡಾ. ಎನ್. ಎಂ. ಪಾಟೀಲ, ವಿಜಯ ಸಾಣಿಕೊಪ್ಪ, ಮಹಾಂತೇಶ ಬೆಣ್ಣಿ, ಸುರೇಶ್ ಹಟ್ಟಿ , ಈರನಗೌಡ ಬ ಪಾಟೀಲ, ಸಿದ್ದಪ್ಪ ವಿ ಇಂಗಳಗಿ, ಬಸವರಾಜ ಹಲಕಿ, ಪರಮೇಶ ತಟ್ಟಿಮನಿ, ರಮೇಶ ಯಲ್ಲನಾಯ್ಕರ, ಉಪಸ್ಥಿತರಿದ್ದರು.

ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ಶ್ರೀಕಾಂತ್ ಎಮ್ ಸ್ವಾಗತಿಸಿದರು. ಕೃಷಿ ಮೇಲ್ವಿಚಾರಕ ಬಸವರಾಜ ಮಾದರ ನಿರೂಪಿಸಿದರು. ಮಂಜುಳಾ ಡಿ.ವಂದಿಸಿದರು. ಶಿಬಿರದಲ್ಲಿ ವಿವಿಧ ಗ್ರಾಮಗಳಿಂದ 61 ಶಿಬಿರಾರ್ಥಿಗಳು ಭಾಗವಹಿಸಿರುತ್ತಾರೆ,ತಾಲೂಕಿನ ಮೇಲ್ವಿಚಾರಕ ತತ್ಸಮಾನ ಸಿಬ್ಬಂದಿಗಳು,ಸೇವಾಪ್ರತಿನಿಧಿಗಳು, ವಿಎಲ್‌ಎಫ್‌ಗಳು ಸಂಘದ ಸದಸ್ಯರು ಭಾಗವಹಿಸಿದ್ದರು.



ಸವದತ್ತಿ: ವಿಶ್ವ ಪರಿಸರ ದಿನ ಆಚರಣೆ



ಸವದತ್ತಿ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸವದತ್ತಿ ತಾಲೂಕು ವತಿಯಿಂದ ಹುಲಿಕಟ್ಟಿ ವಲಯದ ಹುಲಿಕಟ್ಟಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಹನುಮಂತ ಭೈರಣ್ಣವರ, ಪಿಡಿಒ ತೀಪ್ಪಾ ನಾಯಕ್, ಯೋಜನಾಧಿಕಾರಿಗಳಾದ ಸುಬ್ರಾಯ್ ನಾಯ್ಕ್ , ಶಾಲೆಯ ಮುಖ್ಯ ಶಿಕ್ಷಕರಾದ ಎಸ್.ಎಫ್. ಕುರಿ, ಸಹ ಶಿಕ್ಷಕರಾದ ಯಲ್ಲಪ್ಪ ನಾಯ್ಕರ್ ಪಿ ಬಿ ಭಜಂತ್ರಿ ಕೃಷಿ ಮೇಲ್ವಿಚಾರಕರಾದ ಅಣ್ಣಪ್ಪ .ಎಸ್, ವಲಯ ಮೇಲ್ವಿಚಾರಕರಾದ ಯಲ್ಲಪ್ಪ , ಸೇವಾಪ್ರತಿನಿಧಿಗಳಾದ ಶ್ರುತಿ ಸನದಿ ಮಂಜುಳಾ ನಾಯ್ಕರ್ ಉಪಸ್ಥಿತರಿದ್ದರು.

ಸಸಿ ನೆಡುವ ಮೂಲಕ ಪರಿಸರ ದಿನ ಆಚರಣೆ

ಚಿಕ್ಕೋಡಿ: ತಾಲೂಕಿನ ನಣದಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಭಾರತ ಸೌಟ್ ಮತ್ತು ಗೈಡ್ಸ್ ಸಂಸ್ಥೆ ವತಿಯಿಂದ ಸಸಿಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಈ ಸಂದರ್ಭದಲ್ಲಿ ನಣದಿ ಗ್ರಾಮ ಪಂಚಾಯಿತಿ ಪಿಡಿಒ ಸಂತೋಷ ಕಮತೆ, ಮುಖ್ಯ ಶಿಕ್ಷಕ ಉಮೇಶ ಪಾಟೀಲ, ಭಾರತ ಸೌಟ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಸಂಘಟಕ ಎನ್ ಜಿ ಪಾಟೀಲ, ಮಲ್ಲು ಹವಾಲ್ದಾರ, ಅಣ್ಣಪ್ಪ ರವುಳುಕೇದಾರಿ, ಬಂಡು ನಾಯಿಕವಾಡಿ, ಕಾರ್ಯದರ್ಶಿ ಕಾಂಬಳೆ ಇತರರು ಇದ್ದರು.



ನಿತ್ಯವೂ ಪರಿಸರ ದಿನವಾಗಲಿ: ಡಾ. ತೋಂಟದಾರ್ಯ ಶ್ರೀ

ಬೆಳಗಾವಿ: ಪ್ರಕೃತಿಯಲ್ಲಿನ ಎಲ್ಲ ಜೀವರಾಶಿಗಳಿಗೆ ಅನ್ನ, ಆಶ್ರಯ ನೀಡಿರುವ ಪರಿಸರದ ಕುರಿತು ಪ್ರತಿದಿನ ಚಿಂತಿಸುವ ಅಗತ್ಯತೆ ಇದೆ. ಕಾರಣ ನಿತ್ಯವೂ ಪರಿಸರ ದಿನವಾಗಲಿ ಎಂದು ಯಡೆಯೂರು ಜಗದ್ಗುರು ತೊಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಶುಕ್ರವಾರ ಇಲ್ಲಿನ ಶಿವಬಸವ ನಗರದ ಎಸ್. ಜಿ. ಬಾಳೆಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಸಸಿ ನೆಡುವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್.ಜಿ.ಬಿ.ಐ.ಟಿ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಎಫ್. ವಿ. ಮಾನ್ವಿ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಬಿ. ಆರ್. ಪಟಗುಂದಿ, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ. ಮಂಜುನಾಥ ಶರಣಪ್ಪನವರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಇದೇ ಸಂದರ್ಭದಲ್ಲಿ ಕಾಲೇಜು ಆವರಣ ಹಾಗೂ ಮಹಾನಗರ ಪಾಲಿಕೆಯಿಂದ ದತ್ತು ಪಡೆದ ಮಹಾವಿದ್ಯಾಲಯದ ಮುಂಭಾಗದ ರಸ್ತೆ ವಿಭಜಕಗಳಲ್ಲಿ ವಿವಿಧ ಜಾತಿಯ ನೆರಳು ನೀಡುವ ಹಣ್ಣು ಹಾಗೂ ಔಷಧೀಯ ಸಸಿಗಳನ್ನು ಎನ್‌ಎಸ್‌ಎಸ್ ಘಟಕದ ವತಿಯಿಂದ ನೆಡಲಾಯಿತು.

ಕೆರೆ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ



ಹಾರೂಗೇರಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪುರಸಭೆ ವತಿಯಿಂದ ಸ್ಥಳೀಯ ಕೆರೆಯ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಜರುಗಿತು.

ಪುರಸಭೆ ಅಧ್ಯಕ್ಷರಾದ ಧ್ಯಾನೇಶ್ವರ ಧರ್ಮಟ್ಟಿ, ಉಪಾಧ್ಯಕ್ಷರಾದ ಬಸವರಾಜ ಅರಕೇರಿ, ಮುಖ್ಯಾಧಿಕಾರಿ ಬಸವರಾಜ ಮನಗೂಳಿ, ಪುರಸಭೆ ಸದಸ್ಯರಾದ ಪ್ರಶಾಂತ ಬದ್ನಿಕಾಯಿ, ಕಾಂತು ಬಾಡಗಿ, ಬಸವರಾಜ ಚೌಗಲಾ, ಮಾಳು ಹಾಡಕಾರ ಹಾಗೂ ಮುಖಂಡರಾದ ಶಿವಪ್ಪ ದಳವಾಯಿ, ಬುರಾನ್ ಶೇಕ್, ಹಾಗೂ ಆಧಾರ ಹಿರಿಯ ನಾಗರಿಕರ ಕಲ್ಯಾಣ ಸಂಸ್ಥೆಯ ಅಧ್ಯಕ್ಷರಾದ ಡಾ.ಚಂದ್ರಶೇಖರ ಗುಡಸಿ, ಕಂದಾಯಧಿಕಾರಿ ಶ್ರೀಶೈಲ ದಾಸ್ಯಾಳ, ಗುಮಾಸ್ತರಾದ ಶಂಕರ ಪಾಗೆ, ಸಂಜು ಗಸ್ತಿ, ಸಿಪಾಯಿ ಶ್ರಾವಣ ಮಾಂಗ, ಭರಮು ತಮದಡ್ಡಿ ಮತ್ತು ಸಿಬ್ಬಂದಿ ಹಾಗೂ ಕಾರ್ಮಿಕ ವೃಂದ ಉಪಸ್ಥಿತರಿದ್ದರು.

ಬೆಳಗಾವಿ ಪಾಲಿಕೆಯ ಕನ್ನಡ ವಿರೋಧಿ ನಿಲುವು ಖಂಡಿಸಿ ಪ್ರತಿಭಟನೆ

ಬೆಳಗಾವಿ: ಕರ್ನಾಟಕಪರವಾದಗೊತ್ತುವಳಿಅಂಗೀಕರಿಸಲುನಿರಾಕರಿಸುತ್ತಿರುವ ಬೆಳಗಾವಿ ಮಹಾನಗರ ಪಾಲಿಕೆಯ ಕನ್ನಡ ನಾಡು, ನುಡಿ ಹಾಗೂ ಗಡಿ ಹಿತಾಸಕ್ತಿ ವಿರೋಧಿ ನಿಲುವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿ ಕಿತ್ತೂರು ಕರ್ನಾಟಕ ಸೇನೆ ವತಿಯಿಂದ ಶುಕ್ರವಾರ ನಗರದ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಹಾಗೂ ಗಡಿವಿವಾದಕ್ಕೆ ಮಹಾಜನ ಆಯೋಗದ ವರದಿಯೇ ಅಂತಿಮ ಎಂಬ ಕರ್ನಾಟಕ ಪರವಾದ ಗೊತ್ತುವಳಿಯನ್ನು ಅಂಗೀಕರಿಸಬೇಕೆಂದು ಆಗ್ರಹಿಸಿ ಬೆಳಗಾವಿಯ 20ಕ್ಕೂ ಹೆಚ್ಚು ಕನ್ನಡಪರ ಸಂಘಟನೆಗಳು ಕಳೆದ ಮಾರ್ಚ್ 26 ರಿಂದ ನಿರಂತರ ಹೋರಾಟ ನಡೆಸುತ್ತಿದರು ಯಾವುದೇ ಪ್ರಯೋಜನೆ ಯಾಗಿಲ್ಲವೆಂದು ಆರೋಪಿಸಿದರು.

ಈ ವೇಳೆ ಕಿತ್ತೂರು ಕರ್ನಾಟಕ ಸೇನೆಯ ಹಲವು ಕಾರ್ಯಕರ್ತರು, ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಸೇರಿದಂತೆ ಹಲವರು ಇದ್ದರು.



ಖಾನಾಪುರ: ವಿಶ್ವ ಪರಿಸರ ದಿನ ಆಚರಣೆ



ಖಾನಾಪುರ: ಪಟ್ಟಣದ ಕೆಎಲ್‌ಇ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ನ್ಯಾ.ಚಂದ್ರಶೇಖರ ತಳವಾರ ಕಾಲೇಜಿನ ಆವರಣದಲ್ಲಿ ಸಸಿ ನೆಟ್ಟು ನೀರೆರೆಯುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಪ್ರೊಬೇಷನರಿ ಎಸಿಎಫ್ ಬೇಲಬಾದೇವಿ ಬಿರಾದಾರ, ಕಾಲೇಜಿನ ಪ್ರಾಂಶುಪಾಲರಾದ ವಿಜಯ ಕಲ್ಮಠ, ವಕೀಲರ ಸಂಘದ ಅಧ್ಯಕ್ಷ ಐ.ಆರ್. ಘಾಡಿ, ಸಹಾಯಕ ಸರ್ಕಾರಿ ಅಭಿಯೋಜಕಿ ಅಫಿಯಾ ನೇಸರಗಿಕರ ಹಾಗೂ ಇತರರು ಮಾತನಾಡಿ ಪರಿಸರ ಸಂರಕ್ಷಣೆಯ ಮಹತ್ವ, ಅರಣ್ಯ ರಕ್ಷಣೆಯ ಕಾನೂನುಗಳು ಮತ್ತು ಸುಸ್ಥಿರ ಭವಿಷ್ಯ ನಿರ್ಮಾಣದಲ್ಲಿ ವಿದ್ಯಾರ್ಥಿಗಳು ಹಾಗೂ ನಾಗರಿಕರ ಪಾತ್ರದ ಕುರಿತು ವಿವರವಾದ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೆಎಲ್‌ಇ ಬಿಸಿಎ ಕಾಲೇಜು ಪ್ರಾಚಾರ್ಯ ಆನಂದ ತವಂಶಿ ಸೇರಿದಂತೆ ವಕೀಲರು, ನ್ಯಾಯಾಲಯದ ಸಿಬ್ಬಂದಿ, ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಇದ್ದರು.

ಗಿಡ–ಮರ ರಕ್ಷಣೆ ಮಾಡೋಣ: ಜಕಾತಿ

ಚಿಕ್ಕೋಡಿ: ಮರಗಿಡಗಳನ್ನು ನೆಟ್ಟು ಬೆಳೆಸುವ ಕೈಗಳು ಪ್ರಕೃತಿಯನ್ನು ಸೃಷ್ಟಿಸುತ್ತವೆ. ಮರ ಕಾಪಾಡುವ ಹೃದಯ ನಾಗರಿಕತೆಯನ್ನು ಉಳಿಸುತ್ತದೆ ಎಂದು ಚಿಕ್ಕೋಡಿಯ ಶ್ರೀಮತಿ ಎ.ಎ. ಪಾಟೀಲ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್. ಸಿ. ಜಕಾತಿ ಹೇಳಿದರು.

ಪಟ್ಟಣದ ಸಿಟಿಇ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನೆಯ ಘಟಕದಿಂದ ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಉದ್ದೇಶಿಸಿಮಾತನಾಡಿದಅವರು, ಮನುಷ್ಯ ಎಲ್ಲಪ್ರಾಣಿಗಳಲ್ಲಿಬುದ್ಧಿಜೀವಿಯಾಗಿದ್ದು, ಪರಿಸರ ದುಷ್ಪರಿಣಾಮಕ್ಕೆ ಮನಷ್ಯನೇ ಕಾರಣನಾಗಿದ್ದಾನೆ. ನೀರು, ಗಾಳಿ, ಮಣ್ಣು ಶುದ್ಧವಾಗಿದ್ದರೆ ಪರಿಸರ ಶುದ್ಧವಾಯಿಯೂ, ಸುಂದರವಾಗಿಯೂ ಇರುತ್ತದೆ ಎಂದರು. ಪ್ರೊ. ಎಚ್.ಎಸ್. ಭೋಗಲೆ, ಪ್ರೊ. ವಿ.ವಿ. ನಾಯಕ, ಎನ್‌ಎಸ್‌ಎಸ್ ಅಧಿಕಾರಿ ರೋಹಿಣಿ ಕಂಬಾರ ಸೇರಿದಂತೆ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು. ಚಿಕ್ಕೋಡಿ ಪಟ್ಟಣದ ಸಿಟಿಇ ಸಂಸ್ಥೆಯ ಎ.ಎ. ಪಾಟೀಲ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ಸಸಿ ನೆಟ್ಟು ನೀರು ಎರೆಯುವ ಮೂಲಕ ಪ್ರಾಚಾರ್ಯ ಎಸ್.ಸಿ. ಜಕಾತೆ ವಿಶ್ವ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು.



ಕಿರುಸುದ್ದಿ



ಕಲಾದಗಿ: ಸಮೀಪದ ತುಳಸಿಗೇರಿ ಆಂಜನೇಯನ ದೇವಸ್ಥಾನಕ್ಕೆ ಶುಕ್ರವಾರ ಬೆಳಗಾವಿ ಉತ್ತರ ವಲಯ ನೂತನ ಐಜಿಪಿ ಸಂದೀಪ ಪಾಟೀಲ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಆಂಜನೇಯನ ಆಶೀರ್ವಾದ ಪಡೆದರು. ಬಾಗಲಕೋಟೆ ಗ್ರಾಮೀಣ ಸಿಪಿಐ ರಾಮಣ್ಣ ಬಿರಾದಾರ, ಕಲಾದಗಿ ಪೋಲೀಸ ಠಾಣೆ ಪಿಎಸ್ಐ ಪ್ರವೀಣ ಬೀಳಗಿ, ಸಿಬ್ಬಂದಿ ಶ್ರೀಶೈಲ ಕಳಸದ ಇದ್ದರು.

ವಿಪ ಸದಸ್ಯ ನಿರಾಣಿ ಭೇಟಿ, ಪರಿಶೀಲನೆ



ಕಲಾದಗಿ: ಗ್ರಾಮದ ಗುರುಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ಬೆಂಕಿ ಅವಘಡ ಸಂಭವಿಸಿದ ಹಿನ್ನೆಲೆ ವಿಧಾನ ಪರಿಷತ ಸದಸ್ಯ ಹನಮಂತ ನಿರಾಣಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಹಾನಿಯಾಗಿರುವ ಬಗ್ಗೆ ಮಾಹಿತಿ ಪಡೆದರು. ಶುಕ್ರವಾರ ಮಧ್ಯಾಹ್ನ ಕಾಲೇಜಿಗೆ ಭೇಟಿ ನೀಡಿದ ಅವರು ಪ್ರಾಂಶುಪಾಲ ಶಂಕರ ನಿಂಬರಗಿಯವರಿಂದ ಬೆಂಕಿ ದುರಂತದಲ್ಲಿ ಸಂಭವಿಸಿದ ದುರ್ಘಟನೆ ಬಗ್ಗೆ ಮಹತ್ವದ ದಾಖಲಾತಿಗಳು ಅದೃಷ್ಟವಶಾತ ಬೆಂಕಿ ಅವಘಡ ಸಂಭವಿಸಿದ ಸ್ಥಾನದಿಂದ ಅಲ್ಪ ದೂರದ ಆಲಮಾರಿಯಲ್ಲಿ ಇಟ್ಟಿರುವುದರಿಂದ ಬಚಾವಾಗಿದ್ದು ಇದ್ದುಳಿದ ವಿದ್ಯಾರ್ಥಿಗಳ ಹಲವು ದಾಖಲಾತಿಗಳು ಉತ್ತರ ಪತ್ರಿಕೆಗಳ ಸಮೇತ ಬೆಂಕಿಗಾಹುತಿಯಾಗಿರುವ ಬಗ್ಗೆ ವಿವರವಾಗಿ ಮಾಹಿತಿ ಪಡೆದು ವಿಧಾನ ಪರಿಷತ್ತಿನ ಮುಂದಿನ ದಿನಗಳಲ್ಲಿ ಅಗತ್ಯ ಅನುದಾನವನ್ನು ಕಾಲೇಜಿಗೆ ನೀಡುವ ಬಗ್ಗೆ ಪ್ರಾಂಶುಪಾಲ ಶಂಕರ ನಿಂಬರಗಿ ಅವರಿಗೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಬಸಿಷ್ಟಪ್ಪ ಅಂಗಡಿ, ಶ್ರೀಧರ ವಾಘ, ಕಾಲೇಜು ಶಿಕ್ಷಕ ಸಿಬ್ಬಂದಿ ಎಸ್.ಎಸ್.ಪಾಟೀಲ ಇದ್ದರು.

ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಿ: ಅಪ್ಪಾಜಿ

ಇಳಕಲ್: ಶಾಸಕ ವಿಜಯಾನಂದ ಎಸ್.ಕಾಶಪ್ಪನವರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ವಿಎಸ್ ಎಸ್ ವಿಷ್ಣು ಸೇನಾ ಸಂಘಟನೆಯ ಬಾಗಲಕೋಟೆ ಜಿಲ್ಲಾ ಅಧ್ಯಕ್ಷ ಚಂದ್ರು ಅಪ್ಪಾಜಿ ಆಗ್ರಹಿಸಿದರು.

ವಿಜಯಾನಂದ ಕಾಶಪ್ಪನವರ ಅವರು ಒಂದೇ ಧರ್ಮಕ್ಕೆ ಸೀಮಿತ ರಾಜಕಾರಣಿಯಲ್ಲ. ಸರ್ವಧರ್ಮ ಸಮನ್ವಯಿ ರಾಜಕಾರಣಿ, ಬಾಗಲಕೋಟೆ ಜಿಲ್ಲೆಯ ದಕ್ಷ ರಾಜಕಾರಣಿ. ಕಳೆದ ತಿಂಗಳಲ್ಲಿ ನಡೆದ ಬಾಗಲಕೋಟ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರ ಪರವಾಗಿ ಅಬ್ಬರದ ಪ್ರಚಾರ ಮಾಡಿ ಮೇಟಿ ಅವರ ಗೆಲುವಿಗೆ ಮುಖ್ಯ ಪಾತ್ರರಾಗಿದ್ದಾರೆ. ಚಂದ್ರು ಮೀನಜಗಿ ವಾ.ಎಂ.ಮೇಟಿ, ಪೃಥ್ವಿರಾಜ್ ಹಿರೇಮಠ, ಇಮಾಮ್ ಸಾಬ್ ವೆಂಕಟಾಪುರ ಮತ್ತಿತರರು ಉಪಸ್ಥಿತರಿದ್ದರು.

ವಸತಿಗಾಗಿ ಅರ್ಜಿ ಆಹ್ವಾನ

ಕೆರೂರ: ರಾಜೀವ ಗಾಂಧಿ ವಸತಿ ನಿಗಮದ ಸೂಚನೆಯಂತೆ ಪ್ರಧಾನಮಂತ್ರಿ ಆವಾಸ್ ಯೋಜನೆ(ನಗರ)2.0ರಲ್ಲಿ ನಿವೇಶನ ರಹಿತ ಹಾಗೂ ವಸತಿ ಸೌಲಭ್ಯ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಈ ಯೋಜನೆಯಡಿ ಇದುವರೆಗೆ ಯಾವುದೇ ಸೌಲಭ್ಯ ಪಡೆಯದ ಪಟ್ಟಣದ ನಿವಾಸಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ, ಅರ್ಜಿ ಸಲ್ಲಿಸಲು ಜೂ.30ರಂದು ಕೊನೆಯ ದಿನಾಂಕವಾಗಿದೆ. ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ರಮೇಶ ಮಾಡಬಾಳ ಪ್ರಕಟಣೆ ತಿಳಿಸಿದ್ದಾರೆ.

ನಿಧನ ಸುದ್ದಿ

ಸತ್ಯಪ್ಪ ಚಿಟಗುಬ್ಬಿ



ಕೆರೂರ: ಪಟ್ಟಣದ ಶಿವಶರಣ ಹರಳಯ್ಯ ಸಮಗಾರ ಸಮಾಜದ ಹಿರಿಯರಾದ ಸತ್ಯಪ್ಪ ದುರ್ಗಪ್ಪ ಚಿಟಗುಬ್ಬಿ(84) ಬುಧವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ.



ಜಮಖಂಡಿ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಎನ್‌ಎಸ್‌ಎಸ್ ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಪ್ರಾಧ್ಯಾಪಕಿ ಎಸ್.ಕೆ.ಡೆಂಬರೆ, ಪ್ರಾಂಶುಪಾಲ ಡಾ.ಸುನಂದಾ ಎಸ್. ಶಿರೂರ, ಪುಷ್ಪಾ ಹುಣಶ್ಯಾಳ, ಆರ್.ಎಸ್.ಜಾಧವ, ಡಾ.ವಿ.ಆರ್.ದಳವಾಯಿ, ಡಾ.ಜಿ.ಎನ್.ಹಿರೇಮಠ, ಎಸ್.ಎಂ.ಗುಡಿ, ಎಸ್.ಎಂ.ಯಡಹಳ್ಳಿ ಹಾಗೂ ಸಿಬ್ಬಂದಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಪರಿಸರದ ಕಾಳಜಿ ವಹಿಸಲಿ

ಗುಳೇದಗುಡ್ಡ: ಸಾವಯವ ಕೃಷಿಯು ಪರಿಸರಸ್ನೇಹಿಯಾಗಿದೆ. ರಾಸಾಯನಿಕಗೊಬ್ಬರಗಳು ಮಣ್ಣು ಹಾಗೂ ಜಲವನ್ನು ಹಾನಿ ಮಾಡುತ್ತವೆ. ಪರಿಸರ ರಕ್ಷಣೆಗಾಗಿ ಸಾವಯವ ಕೃಷಿಗೆ ಹೆಚ್ಚಿನ ಮಹತ್ವ ನೀಡಬೇಕು. ಭೂಮಿಯ ಮೇಲಿನ ವಾಯುವಿನ ಪದರುಗಳ ಉಳಿಯುವಿಕೆಗೆ ಗಿಡಮರಗಳು ಅತ್ಯಂತ ಮಹತ್ವವಾಗಿದ್ದು, ಹೆಚ್ಚು ಗಿಡಗಳನ್ನು ಬೆಳೆಸುವ ಮೂಲಕ ಪರಿಸರದ ಬಗ್ಗೆ ಕಾಳಜಿ ವಹಿಸಬೇಕು ಎಂದು ತಾಲೂಕು ಕೃಷಿ ಇಲಾಖೆಯ ಅಧಿಕಾರಿ ಆನಂದ ಗೌಡರ ಹೇಳಿದರು. ಶುಕ್ರವಾರ ಸ್ಥಳೀಯ ರಾಶಿ ಮತ್ತು ಕಾವಡೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿಶ್ವಪರಿಸರ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿ ದೆಸೆಯಿಂದಲೇ ಮಕ್ಕಳು ಪರಿಸರ ಬಗ್ಗೆ ಕಾಳಜಿ ವಹಿಸಬೇಕು ಎಂದರು. ಪಿಇಟಿ ಗೌರವ ಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಮುಂದಿನ ಪೀಳಿಗೆಗೆ ಬದುಕಿಗಾಗಿ ನಮ್ಮ ಸುತ್ತಮುತ್ತಲ ಪರಿಸರ ಉತ್ತಮವಾಗಿರಬೇಕು. ಗಿಡಗಳನ್ನು ಬೆಳೆಸುವುದರಿಂದ ಉತ್ತಮ ಪರಿಸರ ನಿರ್ಮಾಣವಾಗುತ್ತದೆ ಎಂದರು. ಶಾಲೆಯ ಚೇರಮನ್ ವಿಠಲ ಕಾವಡೆ, ವಿದ್ಯಾರ್ಥಿಗಳಾದ ಆದಿತಿ ಮೇಣಿ, ಪ್ರಿಯಾ ದೊಡಮನಿ, ಅಮೂಲ್ಯ ಕಲಬುರ್ಗಿ, ಶಿಕ್ಷಕಿ ವಿದ್ಯಾ ಬ್ಯಾಳಿ ಪರಿಸರ ದಿನಾಚರಣೆ ಕುರಿತು ಮಾತನಾಡಿದರು. ಸಂಸ್ಥೆಯ ಸದಸ್ಯರಾದ ರಾಮೇಶ್ವರಜಿ ರಾಶಿ, ಶ್ಯಾಮಸುಂದರ ಮಾಲಪಾಣಿ, ಸಿದ್ರಾಮಯ್ಯ ಪುರಾಣಿಕಮಠ, ಶಾಲೆಯ ಮುಖ್ಯಗುರುಗಳಾದ ಆರ್.ಎಸ್ ಜಿರ್ಲಿ, ವೀಣಾ ಹಳ್ಳೂರ, ಶಿಕ್ಷಕಿಯರಾದ ವೈಶಾಲಿ ಚವಾಣ, ಶಬಾನಾ ಮಕಾನದಾರ, ವೈಲೆಟ್ ಯರಗುಂಟ ಹಾಗೂ ವಿದ್ಯಾರ್ಥಿಗಳು ಇದ್ದರು.



ಗುಳೇದಗುಡ್ಡ: ಶುಕ್ರವಾರ ಸ್ಥಳೀಯ ರಾಶಿ ಮತ್ತು ಕಾವಡೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ವಿಶ್ವಪರಿಸರ ದಿನದ ಕಾರ್ಯಕ್ರಮ ನಡೆಯಿತು. ತಾಲೂಕು ಕೃಷಿ ಇಲಾಖೆಯ ಅಧಿಕಾರಿ ಆನಂದ ಗೌಡರ, ಪಿಇಟಿ ಗೌರವ ಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ ಸೇರಿದಂತೆ ಇತರರು ಇದ್ದರು.

ಪರಿಸರ ರಕ್ಷಣೆ ನಮ್ಮ ಕರ್ತವ್ಯವಾಗಲಿ

ಬಾಗಲಕೋಟೆ: ಪರಿಸರ ನಮ್ಮ ಜೀವನದ ಆಧಾರವಾಗಿದ್ದು, ಅದನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ಜಿಲ್ಲಾ ನ್ಯಾಯಾಧೀಶ ಮಾಸ್ಟರ ಆರ್‌ಕೆಜಿಎಂಎಂ ಮಹಾಸ್ವಾಮೀಜಿ ಹೇಳಿದರು.

ನವನಗರ ಸೆಕ್ಟರ ನಂ.70ರಲ್ಲಿರುವ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಉದ್ಯಾನವನದಲ್ಲಿ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಪ್ರಾದೇಶಿಕ ಹಾಗೂ ಅರಣ್ಯ ಇಲಾಖ, ಆದರ್ಶ ವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಉದ್ಯಾನವನದಲ್ಲಿ ಗಿಡ ನೆಟ್ಟು ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕೃತಿಯಲ್ಲಿ ನಮ್ಮ ಕಣ್ಣಿಗೆ ಕಾಣುವ ನೆಲ, ಜಲ, ಪ್ರಾಣಿ, ಪಕ್ಷಿ. ಗಿಡ, ಮರಗಳು ಪರಿಸರದ ಅಂಗಗಳಾಗಿವೆ. ಗಿಡಮರಗಳಿಂದ ನಮಗೆ ಆಮ್ಲಜನಿಕ ಲಭ್ಯವಾಗುತ್ತಿದ್ದು, ನಾವು ಪರಿಸರವನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ. ಪ್ರಕೃತಿಯಲ್ಲಿ ಸಿಗುವ ಸಂಪನ್ಮೂಲಗಳನ್ನು ಮಿತವಾಗಿ ಬಳಸುವ ಮೂಲಕ ಪರಿಸರ ಸಂರಕ್ಷಿಸಿಕೊಂಡು ಮುನ್ನಡೆಯಬೇಕಿದೆ. ಇದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ಪ್ಲಾಸ್ಟಿಕ್ ಮಾಲಿನ್ಯದಿಂದ ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕಿದೆ ಎಂದರು. ನಾವು ಭವಿಷ್ಯದ ಜನಾಂಗಕ್ಕೆ ಏನಾದರೂ ಒಳ್ಳೆಯದನ್ನು ಬಿಟ್ಟು ಹೋಗಬೇಕಿದ್ದರೆ ಅದರು ಉತ್ತಮ ಪರಿಸರ ಎಂದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಬಾಗಲಕೋಟೆ ಜಿಲ್ಲೆಯಲ್ಲಿ 80 ಸಾವಿರ ಹೆಕ್ಟೇರನಷ್ಟು ಅರಣ್ಯ ಪ್ರದೇಶವಿದ್ದು, ಈ ಪೈಕಿ ಶೇ.21ರಷ್ಟು ಅರಣ್ಯವಿದೆ. ಆದರೆ ಅದು ಶೇ.31ರಷ್ಟು ಇತರಬೇಕಿತ್ತು. ಇನ್ನು ಶೇ.10ರಷ್ಟು ಪರಿಸರ ಬೆಳೆಸಬೇಕಾದರೆ ಒಂದು ಕೋಟಿ ಗಿಡಗಳನ್ನು ಬೆಳೆಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಅರಣ್ಯ ಇಲಾಖೆ ಸಹಯೋಗದೊಂದಿಗೆ ಹೆಚ್ಚಿನ ಆದ್ಯತೆ ನೀಡಲಿದೆ ಎಂದು ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಮನೋಹರ ಮಾತನಾಡಿ, ಅರಣ್ಯ ವೃದ್ಧಿ ಹಾಗೂ ಜೀವ ವೈವಿಧ್ಯ ಸಂರಕ್ಷಣೆಗೆ ಸಾರ್ವಜನಿಕರ ಸಹಭಾಗಿತ್ವ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ಕನಿಷ್ಟ ಒಂದು ಸಸಿ ನೆಟ್ಟು ಅದರ ಪೋಷಣೆ ಮಾಡಬೇಕು ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಸ್.ಗೊರವರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ವಕೀಲರ ಸಂಘದ ಅಧ್ಯಕ್ಷ ಬಿ.ಜಿ.ಗದ್ದಿ, ಬಿಟಿಡಿಎ ಮುಖ್ಯ ಅಭಿಯಂತರ ಚಂದ್ರಹಾಸ್, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಆದರ್ಶ ವಿದ್ಯಾಲಯದ ಮುಖ್ಯೋಪಾದ್ಯಾಯ ಬಿ.ವಿ.ಪಾಟೀಲ, ತಹಶೀಲ್ದಾರ್ ವಾಸುದೇವ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮರುಕಳಿಸುತ್ತಿರುವ ಭಾರತದ ಗತವೈಭವ

ಮಹಾಲಿಂಗಪುರ: ಪಂಚಮುಖಿ ಶಿಕ್ಷಣವು ದೈಹಿಕ, ಮಾನಸಿಕ, ಭಾವನಾತ್ಮಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳ ಮೂಲಕಮಗುವಿನಸಮಗ್ರ, ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ವಿಭಾಗ ಸಂಯೋಜಕ ಶ್ರೀನಿವಾಸ ಪಾಟೀಲ ಹೇಳಿದರು.

ಸ್ಥಳೀಯ ಅಕ್ಷರ ವಿದ್ಯಾವಿಹಾರ ಮಾಡರ್ನ್ ಶಾಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ವತಿಯಿಂದ ನಡೆದ ಶಿಕ್ಷಕರ ಸಬಲೀಕರಣ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಮಗುವಿನಲ್ಲಿಯೂ ಅದಮ್ಯ ಶಕ್ತಿ ಇರುತ್ತದೆ ಅದನ್ನು ಹೊರ ತಂದು ಆ ಮಗು ದೇಶದ ಶಕ್ತಿಯಾಗಿ ಬೆಳೆಯಲು 5 ಆಯಾಮಗಳಲ್ಲಿ ತರಬೇತಿ ನೀಡಿದಾಗ ಮಗು ವ್ಯಕ್ತಿಯಾಗುವ ಬದಲು ಶಕ್ತಿಯಾಗುತ್ತದೆ. ಪ್ರತಿಯೊಂದು ಮಗುವು ಈ ದೇಶದ ಆಸ್ತಿಯಾಗಬೇಕು. ಆ ಮೂಲಕ ಸಮೃದ್ಧ ರಾಷ್ಟ್ರ ನಿರ್ಮಾಣವಾಗಬೇಕು, ಭಾರತ ಮತ್ತೆ

ವಿಶ್ವಗುರುವಾಗಬೇಕು ಎಂಬ ಉದ್ದೇಶದೊಂದಿಗೆ ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ನಿರಂತರವಾಗಿ ಶ್ರಮಿಸುತ್ತಿದ್ದು ಸಾಹಿತ್ಯ, ಶಿಕ್ಷಣ, ಸೇವೆ, ಆರೋಗ್ಯ ಈನಾಲ್ಕುಆಯಾಮಗಳಲ್ಲಿಯೂ ನಿರಂತರ ದುಡಿಯುತ್ತಿದ್ದು ಸ್ವಸ್ಥ ಸಮಾಜ, ಸಮೃದ್ಧ ರಾಷ್ಟ್ರ ನಿರ್ಮಾಣಕ್ಕಾಗಿ ದುಡಿಯುತ್ತಿದೆ. ಸರ್ವರೂ ಕೈಜೋಡಿಸಿ, ಭಾರತದ ಗತವೈಭವ ಮರುಕಳಿಸುವ ಕಾಲ ಸನ್ನಿಹಿತವಾಗಿದೆ ಎಂದರು.

ಪ್ರಶಿಕ್ಷಣ ಭಾರತಿ ಸಂಪನ್ಮೂಲ ವ್ಯಕ್ತಿ ಸಪನಾ ಅನಿಗೋಳ ಮಾತನಾಡಿ, ಸಂಸ್ಕಾರ ಕೇಂದ್ರಿತ ಚಟುವಟಿಕೆಗಳ ಬಗ್ಗೆ ಪ್ರಾಯೋಗಿಕವಾಗಿ ವಿವರಿಸಿದರು. ಮದರಖಂಡಿ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕ ಮತ್ತು ಸಂಪನ್ಮೂಲ ವ್ಯಕ್ತಿ ಡಿ.ಬಿ.ಹಿರೇಮಠ ಸಮರ್ಥ ಶಿಕ್ಷಕ ಎಂಬ ವಿಷಯದ ಮೇಲೆ ಮತ್ತು ಸಾವಳಗಿ ವಲಯ ಸಂಪನ್ಮೂಲ ವ್ಯಕ್ತಿ ಮತ್ತು ಪ್ರಶಿಕ್ಷಣ ಭಾರತಿ ಸಂಪನ್ಮೂಲ ವ್ಯಕ್ತಿ ರಘು ಹಿರೇಮಠ ವೇದ ಗಣಿತ ವಿಷಯ ಕುರಿತು ತರಬೇತಿ ನೀಡಿದರು.

ರಾಷ್ಟ್ರೋತ್ಥಾನ ಪರಿಷತ್ ಜಿಲ್ಲಾ ಸಹ ಸಂಚಾಲಕ ನಾರನಗೌಡ ಉತ್ತಂಗಿ ಸಮಾರೋಪ ನುಡಿ ಆಡಿದರು. ಪ್ರಶಿಕ್ಷಣ ಭಾರತಿ ಸಂಪನ್ಮೂಲ ವ್ಯಕ್ತಿ ಪ್ರೀತಿ ಕಲ್ಯಾಣಿ, ಪ್ರಾಂಶುಪಾಲ ಶರಣು ಅಂಗಡಿ, ಪ್ರಶಿಕ್ಷಣ ಭಾರತಿ ಬಾಗಲಕೋಟೆ ಜಿಲ್ಲಾ ಸಂಯೋಜಕ ಹನಮಂತ ನಾಗರಾಳ ಉಪಸ್ಥಿತರಿದ್ದರು.



ವಿದ್ಯುತ್ ಸ್ಥಗಿತ: ನಾಳೆಗೆ ಮುಂದೂಡಿಕೆ

ತೇರದಾಳ: ತೇರದಾಳ ಶಾಖೆಯ ತೇರದಾಳ 110/11 ಕೆ.ವಿ ಉಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮೊದಲನೇ ತ್ರೈಮಾಸಿಕ ನಿರ್ವಹಣೆ ಕೈಕೊಳ್ಳಬೇಕಾಗಿರುವುದರಿಂದ 110/11 ಕೆ.ವಿ ತೇರದಾಳ ಉಪಕೇಂದ್ರದಿಂದ ವಿತರಣೆಯಾಗುವ ಎಲ್ಲ 11 ಕೆ.ವಿ ವಿದ್ಯುತ್ ಮಾರ್ಗಗಳನ್ನು ಜೂ.5ರಂದು ಶುಕ್ರವಾರ ವಿದ್ಯುತ್ ವ್ಯತ್ಯಯವಾಗುವುದೆಂದು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಆದರೆ ತಾಂತ್ರಿಕ ಕಾರಣಗಳಿಂದ ಅದನ್ನು ಜೂ.7ರಂದು ಭಾನುವಾರ ನಿಗದಿ ಮಾಡಲಾಗಿದೆ. ಕಾರಣ ಜೂ.7ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳ್ಳುವುದು. ಪಟ್ಟಣದ ಗ್ರಾಹಕರು ಸಹಕರಿಸಬೇಕೆಂದು ತೇರದಾಳ ಶಾಖಾಧಿಕಾರಿ ತಿಳಿಸಿದ್ದಾರೆ.

ಆರ್ಥಿಕ ತೊಂದರೆಯಿದ್ದವರಿಗೆ ಸಹಾಯ ಮಾಡಿ

ಬೀಳಗಿ: ಸಹಕಾರ ಸಂಘದಲ್ಲಿ ಸಾಲ ತೆಗೆದುಕೊಂಡವರು ಸಮಯಕ್ಕೆ ಸರಿಯಾಗಿ ಅಸಲು, ಬಡ್ಡಿಯನ್ನು ಭರಣಾ ಮಾಡುವ ಮೂಲಕ ಸಂಘದ ಅಭಿವೃದ್ಧಿಯ ಜೊತೆಗೆ ಆರ್ಥಿಕ ತೊಂದರೆಯಲ್ಲಿದ್ದವರಿಗೆ ಸಹಾಯ ಮಾಡಲು ಕೈಜೋಡಿಸಬೇಕು ಎಂದು ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ತಾಲೂಕಿನ ಅನಗವಾಡಿ ಗ್ರಾಮದಲ್ಲಿ ಅನಗವಾಡಿ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘವನ್ನು ಉದ್ಘಾಟಿಸಿ ಮಾತನಾಡಿ, ಸಾಲ ತೆಗೆದುಕೊಂಡು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಹೇಳಿ, ಸಂಘ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಶುಭ ಹಾರೈಸಿದರು.

ಪೂರ್ಣಾನಂದ ಆಶ್ರಮದ ಮಾತೋಶ್ರೀ ಅನಸೂಯಾ ತಾಯಿ ಸಾನ್ನಿಧ್ಯ ವಹಿಸಿ ಮಾತನಾಡಿ, ಸಹಕಾರಿ ಸಂಘಗಳನ್ನು ಜಾತ್ಯಾತೀತ, ಪಕ್ಷಾತೀತ, ಧರ್ಮಾತೀತವಾಗಿ ಕಟ್ಟಿ ಮುನ್ನಡೆಸಿದಾಗ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಸಾಲಗಾರರನ್ನು ಮತ್ತು ಠೇವುದಾರರನ್ನು ಸಮಾನವಾಗಿ ಕಾಣಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಹಕಾರಿ ಸಂಘದ ಅಭಿವೃದ್ಧಿಗೆ ಆಡಳಿತ ಮಂಡಳಿಯ ಪ್ರಾಮಾಣಿಕ ಪ್ರಯತ್ನ ಮುಖ್ಯವಾಗಿದ್ದು, ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳು ಪ್ರಮುಖ ಪಾತ್ರ ವಹಿಸುತ್ತವೆ. ಸದಸ್ಯರು ಸಾಲ ಸೌಲಭ್ಯ ಪಡೆದು ಸಮಯಕ್ಕೆ ಸರಿಯಾಗಿ ಪಾವತಿಸುವ ಮೂಲಕ ಸಂಘದ ಏಳಿಗೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಹೇಳಿದರು.

ಕೆಪಿಸಿಸಿ ಮಾಜಿ ಕಾರ್ಯದರ್ಶಿ ಶ್ರೀಮಂತ ಬಸವಪ್ರಭು ಸರನಾಡಗೌಡ, ಜಿಪಂ ಮಾಜಿ ಸದಸ್ಯ ಬಸವರಾಜ ಖೋತ, ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಬಿ.ಕಂಬಿ, ಅನಗವಾಡಿ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಮಿಥುನ ನಾಯಕ, ಗೌರವಾಧ್ಯಕ್ಷ ಮಲ್ಲಪ್ಪ ಅಂಗಡಿ, ಉಪಾಧ್ಯಕ್ಷ ರುದ್ರಪ್ಪ ಮೇಟಿ, ನಿರ್ದೇಶಕರಾದ ಮುತ್ತಣ್ಣ ಅಂಗಡಿ, ಸಂಗಯ್ಯ ಕಂಬಿ, ನಿರಂಜನ ಸಿದ್ದಿಂಗಪ್ಪನವರ, ಮಲ್ಲಪ್ಪ ಕುಂಬಾರ, ಮುತ್ತಪ್ಪ ತೆಗ್ಗಿ, ಮಲ್ಲಪ್ಪ ಹಕಾರಿ, ಶಿವಬಾಯಿ ಕಂಬಿ, ಕಾಸವ್ವ ಜಾನಮಟ್ಟಿ, ರೇಣುಕಾ ಭಬ್ಬಿ, ರುಕ್ಕವ್ವ ಚೂರಿ, ವ್ಯವಸ್ಥಾಪಕ ಮಹಾಂತೇಶ ಕಂಬಿ, ತುಮ್ಮರಮಟ್ಟಿ, ಹೆರಕಲ್, ಯಳ್ಳಿಗುತ್ತಿ, ಬೂದಿಹಾಳ, ಸುನಗ ಗ್ರಾಮದ ಗಣ್ಯರು ಪಾಲ್ಗೊಂಡಿದ್ದರು.



ಪರಿಸರ ರಕ್ಷಣೆಯಿಂದ ಆರೋಗ್ಯಪೂರ್ಣ ಸಮಾಜ ನಿರ್ಮಾಣ

ತೇರದಾಳ: ಪ್ರಪಂಚದಲ್ಲಿರುವ ಪ್ರತಿಯೊಂದು ಜೀವಿಗೂ ಈ ಪ್ರಕೃತಿ ಬದುಕಲು ಅವಕಾಶ ನೀಡಿದೆ. ಈ ಪ್ರಕೃತಿ ಇಲ್ಲದಿದ್ದರೆ ಜೀವಿಯೇ ಇರುತ್ತಿರಲಿಲ್ಲ. ಪ್ರಕೃತಿಯಿಂದ ಬದುಕುವ ನಾವುಗಳು ಸುಂದರವಾದ ಪರಿಸರ ಮಲೀನ ಮಾಡುತ್ತಿದ್ದೇವೆ. ನಾವು ಪರಿಸರದ ಮಹತ್ವ ಮರೆತಿದ್ದೇವೆ. ನಾವೆಲ್ಲರೂ ಆರೋಗ್ಯಪೂರ್ಣ ಸಮಾಜ ಕಟ್ಟಬಹುದಾಗಿದೆ ಎಂದು ತಹಶೀಲ್ದಾರ್ ವಿಜಯಕುಮಾರ ಕಡಕೋಳ ಹೇಳಿದರು.

ಶುಕ್ರವಾರ ಪುರಸಭೆಯಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರದ ರಕ್ಷಣೆಗಾಗಿ ನಾವೆಲ್ಲರೂ ಪಣ ತೊಡಬೇಕೆಂದರು.

ಮುಖ್ಯಾಧಿಕಾರಿ ಐ.ಬಿ.ಝೂರೆ ಮಾತನಾಡಿ, ಜೂ.5ರಂದು ವಿಶ್ವದಾದ್ಯಂತ ವಿಶ್ವಪರಿಸರ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಪ್ರತಿಯೊಬ್ಬರೂ ಗಿಡ ನೆಡುವ ಮೂಲಕ ಪರಿಸರ ರಕ್ಷಣೆ ಮಾಡಬೇಕಾಗಿದೆ ಎಂದರು.ಪ್ರವಿಣ ನಾಡಗೌಡ ಮಾತನಾಡಿ, ನಮ್ಮ ಪೂರ್ವಜರು ಪ್ರಕೃತಿಯನ್ನೇ ದೇವರೆಂದು ಪೂಜಿಸುತ್ತಿದ್ದರು. ಮುಂದಿನ ಪೀಳಿಗೆಗೆ ಅನುಕೂಲವಾಗಲಿ ಎನ್ನುವ ಕಾರಣದಿಂದ ರಸ್ತೆಗಳ ಎಡಬದಿಗೆ ಮರಗಳನ್ನು ಹಚ್ಚುತ್ತಿದ್ದರು. ಜಮಖಂಡಿಯ ಪಟವರ್ಧನ್ ಅವರು ಜಮಖಂಡಿಯಿಂದ ದೂರದ ಪುಣೆ ವರಗೂ ರಸ್ತೆಗಳ ಪಕ್ಕದಲ್ಲಿ ಗಿಡನೆಟ್ಟು ಪರಿಸರದ ಬಗ್ಗೆ ಕಾಳಜಿ ವಹಿಸಿದ್ದರು. ಮರಗಳನ್ನೇ ಇಮಕ್ಕಳೆಂದು ಸಾಕಿ ಸಲುಹಿದ ತಾಯಿ ಸಾಲುಮರದ ತಿಮ್ಮಕ್ಕನನ್ನು ನೆನೆಪಿಸಿಕೊಳ್ಳೋಣ. ಕೊನೆ ಪಕ್ಷ ಒಂದು ಮರವನ್ನಾದರೂ ನೆಟ್ಟು ನಮ್ಮ ಜವಾಬ್ದಾರಿ ಅರಿಯೋಣ ಎಂದರು. ಗೌತಮ ರೋಡಕರ, ಮಲ್ಲಿಕಾರ್ಜುನ ಪಾಟೀಲ ಇದ್ದರು. ಗೌರಿ ಮಾಲಾಪೂರ ನಿರೂಪಿಸಿದರು.



ಮೌಲ್ಯಯುತ ಶಿಕ್ಷಣ ನೀಡಿ: ಹೋಟಿ

ಕಮತಗಿ: ಶಾಲೆಯಲ್ಲಿ ಕಲಿಯುವ ಮಕ್ಕಳನ್ನು ಸಸಿಯ ಮೊಗ್ಗು ಅರಳಿಸುವಂತೆ ಮಕ್ಕಳಲ್ಲಿ ವಿದ್ಯಾರ್ಜಣೆ ಮತ್ತು ಮೌಲ್ಯಯುತ ಶಿಕ್ಷಣ ನೀಡಿ ಅರಳಿಸಬೇಕು ಎಂದು ದೇವಾಂಗ ಸಮಾಜದ ಅಧ್ಯಕ್ಷ ಪಾಂಡುರಂಗ ಹೋಟಿ ಹೇಳಿದರು. ಬನಶಂಕರಿ ಪೂರ್ವ ಹಾಗೂ ಕಿರಿಯ ಪ್ರಾಥಮಿಕ ಶಾಲೆ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ಮತ್ತು ಪರಿಸರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಮತ್ತು ಪ್ರಕೃತಿಯ ಮಹತ್ವದ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ವಹಿಸಿಕೊಳ್ಳಬೇಕು. ಹಾಗೂ ಭೂಮಿಯ ರಕ್ಷಣೆಗೆ ಕ್ರಮ ಕೈಗೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು. ಸಂಸ್ಥೆಯ ನಿರ್ದೇಶಕ ವೀರಭದ್ರಪ್ಪ ಆರಿ, ಸಂತೋಷಕುಮಾರ ಗೌಡರ, ಶ್ರೀಕಾಂತ ಧೂಪದ, ರಾಜು ಗಾಡದ, ಮೋಹನ ಹವೇಲಿ, ಶಂಕರ್ ವನಕಿ, ಮುಖ್ಯಶಿಕ್ಷಕಿ ವಿದ್ಯಾಶ್ರೀ ವನಕಿ, ಶಿಲ್ಪಾ ಧೂಪದ, ಸುಧಾ ಅಳ್ಳಿಚೆಂಡಿ, ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಪರಿಸರ ಸಂರಕ್ಷಣೆ ಅಗತ್ಯ: ಡಾ.ಕಿತ್ತಲಿ



ಕೆರೂರ: ಭೂಮಿಯ ಮೇಲಿನ ಸಕಲ ಜೀವ ರಾಶಿಗಳಿಗೆ ಪರಿಶುದ್ಧ ಗಾಳಿ ಮತ್ತು ಆರೋಗ್ಯಕರ ವಾತಾವರಣಕ್ಕಾಗಿ ಪ್ರತಿಯೊಬ್ಬರೂ ಸುತ್ತಮುತ್ತಲಿನ ಪರಿಸರ ಸಂರಕ್ಷಣೆ ಮಾಡುವುದು ಅಗತ್ಯವಾಗಿದೆ ಎಂದು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ ಹೇಳಿದರು. ಪಟ್ಟಣದ ಬಸ್ ನಿಲ್ದಾಣದ ಹತ್ತಿರ ವಿರುವ ಉದ್ಯಾನವನದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಶುಕ್ರವಾರ ಸಸಿ ನೆಟ್ಟು ಮಾತನಾಡಿದರು. ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ರಮೇಶ ಮಾಡಬಾಳ ಮಾತನಾಡಿ, ನೆಪಮಾತ್ರಕ್ಕೆ ಸಸಿ ನೆಡುವುದು ಆಗ ಬಾರದು, ಸಸಿ ನೆಟ್ಟಾದ ಮೇಲೆ ಸುತ್ತಮುತ್ತಲಿನ ಪ್ರತಿಯೊಬ್ಬರೂ ಅದರ ಬಗ್ಗೆ ಕಾಳಜಿ ವಹಿಸಿ ಸಸಿಗಳಿಗೆ ನೀರು ಹಾಕಿ ಸಸಿ ಎತ್ತರವಾಗಿ ಬೆಳೆಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.ಡಾ.ಬಿ.ಕೆ.ಕೊವಳ್ಳಿ, ಕುಮಾರ ಐಹೊಳ್ಳಿ, ಎಂಜಿನಿಯರ್ ಎಂ.ಐ.ಹೊಸಮನಿ, ಸಿಬ್ಬಂದಿಗಳಾದ ರಮೇಶ ಕಡ್ಲಿಮಟ್ಟಿ, ಮಾಂತೇಶ ಅಣ್ಣೆನ್ನವರ, ಅಶ್ವತ್ಥ ರಂಗನಗೌಡ್ರ, ಸಂಗಮೇಶ ಮಾದರ, ಪೌರಕಾರ್ಮಿಕ ಸಿಬ್ಬಂದಿ ಹಾಗೂ ವಾಟರಮೆನ್ ಸಿಬ್ಬಂದಿ ಭಾಗವಹಿಸಿದ್ದರು.

ಪರಿಸರ ರಕ್ಷಣೆಗೆ ಮುಂದಾಗಿ: ಪೂಜಾರ



ಬಾಗಲಕೋಟೆ: ಪರಿಸರ ದಿನಾಚರಣೆ ಒಂದು ದಿನ ಆಚರಿಸದೇ ನಿರಂತರವಾಗಿ ನಾವು ಪರಿಸರ ಕಾಪಾಡಬೇಕು. ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ನಗರದ ಸೇಂಟ್ ಆ್ಯನ್ಸ್‌ಲೈನ್ಸ್ ಪ್ರೈಮರಿ ಸ್ಕೂಲಿನಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಸಸಿ ನೆಟ್ಟು ಮಾತನಾಡಿದರು. ನಿತ್ಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಪಡೆದುಕೊಳ್ಳುವ ಜತೆಗೆ ನಮ್ಮ ಸುತ್ತಮುಲಿನ ಪರಿಸರ ಸಹ ಕಾಪಾಡಬೇಕಾದ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು. ಪರಿಸರ ಉಳಿಸಿ ಬೆಳೆಸಿಕೊಂಡು ಹೋದಾಗ ನಮ್ಮ ಆರೋಗ್ಯ ಕೂಡ ಉತ್ತಮವಾಗಿರುತ್ತದೆ. ಗಿಡಗಳನ್ನು ಹೆಚ್ಚೆಚ್ಚು ಬೆಳೆಸುವುದರಿಂದ ಉತ್ತಮವಾದ ಮಳೆ, ನಮಗೆಲ್ಲ ಆಕ್ಸಿಜನ್ ಸಹ ದೊರೆಯುತ್ತದೆ. ಹೀಗಾಗಿ ಗಿಡಗಳನ್ನು ಬೆಳೆಸಿದರೆ ನಾವೆಲ್ಲ ಆರೋಗ್ಯವಾಗಿ ಜೀವನ ನಡೆಸಲು ಸಾಧ್ಯವಾಗುತ್ತದೆ. ಮನೆಯ ಸುತ್ತಮುತ್ತ ಸಹ ವಿದ್ಯಾರ್ಥಿಗಳು ಗಿಡಗಳನ್ನು ನೆಡಬೇಕು ಎಂದು ಸಲಹೆ ನೀಡಿದರು.ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯಗುರು ಸಿಸ್ಟರ್ ಯನ್ಸಿಲಾ ಮಾತನಾಡಿ, ವಿದ್ಯಾರ್ಥಿಗಳು ಪರಿಸರ ರಕ್ಷಣೆ ಮಾಡುವ ಜವಾಬ್ದಾರಿ ಇದೆ. ಸಸಿಗಳನ್ನು ನೆಡುವ ಮೂಲಕ ನಮ್ಮ ಸುತ್ತಮುತ್ತ ಉತ್ತಮ ಪರಿಸರ ಬೆಳೆಸಬೇಕಾಗಿದೆ. ಇದಕ್ಕಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಹೇಳಿದರು. ರವಿ ಕುರಡೇಕರ, ರಾಜು ಚಿತ್ತವಾಡಗಿ ಭಾಗವಹಿಸಿದ್ದರು.

ಪರಿಸರ ರಕ್ಷಣೆ ನಮ್ಮ ಜವಾಬ್ದಾರಿ

ಅಮೀನಗಡ: ಪರಿಸರ ಸಂರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಗಿಡ-ಮರಗಳನ್ನು ಬೆಳೆಸುವುದರಿಂದ ಮಾತ್ರ ಮುಂಬರುವ ಪೀಳಿಗೆಗೆ ಶುದ್ಧ ಗಾಳಿ ಮತ್ತು ಉತ್ತಮ ಆರೋಗ್ಯ ನೀಡಲು ಸಾಧ್ಯ ಎಂದು ಅಮೀನಗಡ ಪಪಂ ಅಧ್ಯಕ್ಷ ಬೇಬಿ ರಮೇಶ ಚವ್ಹಾನ್ ಹೇಳಿದರು.

ಸ್ಥಳೀಯ ಪಟ್ಟಣ ಪಂಚಾಯತಿ ಆವರಣದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪಟ್ಟಣ ಹಸಿರಾಗಿಸಲು ಮತ್ತು ಸ್ವಚ್ಛವಾಗಿಡಲು ಸಾರ್ವಜನಿಕರು ಪಂಚಾಯಿತಿಯೊಂದಿಗೆ ಕೈಜೋಡಿಸಬೇಕು ಎಂದರು.

ಪಪಂ ಉಪಾಧ್ಯಕ್ಷೆ ಶ್ರೀದೇವಿ ಮಲ್ಲಪ್ಪ ನಿಡಗುಂದಿ, ಸ್ಥಾಯಿ ಸಮಿತಿ ಅಧ್ಯಕ್ಷ ಸಂತೋಷ ಕಂಗಳ ಮಾತನಾಡಿದರು. ಪಪಂ ಮುಖ್ಯಾಧಿಕಾರಿ ಮುಜಾವರ ಕಾರ್ಯಕ್ರಮದ ನೇತೃತ್ವ ವಹಿಸಿ, ಪಟ್ಟಣದಾದ್ಯಂತ ಸಸಿಗಳನ್ನು ನೆಟ್ಟು ಪೋಷಿಸುವ ಜವಾಬ್ದಾರಿ ಪ್ರತಿಯೊಬ್ಬರೂ ತೆಗೆದುಕೊಳ್ಳಬೇಕು ಎಂದರು. ಕಾಂಗ್ರೆಸ್ ಮುಖಂಡರಾದ ಡಿ.ಪಿ.ಅತ್ತಾರ ಸೂಗೂರು ಅಭಿಯಾನಕ್ಕೆ ಬೆಂಬಲ ಸೂಚಿಸಿದರು. ಪಪ ಸಿಬ್ಬಂದಿಗಳಾದ ಮಾಗುಂಡಪ್ಪ, ನಾಗರಾಜ, ದುರ್ಗಪ್ಪ ಸೇರಿದಂತೆ ಸಿಬ್ಬಂದಿ, ಸ್ಥಳೀಯ ಮುಖಂಡರು ಸಸಿಗಳನ್ನು ನೆಟ್ಟರು.



ಪ್ರತಿಯೊಬ್ಬರೂ ಮನೆ ಮುಂದೆ ಸಸಿ ನೆಡಿ




ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಬಿ.ಎನ್.ಖೋತ ಸಮೂಹ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ವೃಕ್ಷೋ ರಕ್ಷತಿ ರಕ್ಷಿತ ಎಂಬ ತತ್ವದಡಿಯಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಖೋತ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಯಾನಕ ರೋಗ ಕರೋನಾದಿಂದ ನಾವು ಬದುಕಿದ್ದೆ ಗಿಡಮರಗಳ ಗಾಳಿಯಿಂದ ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ಮನೆಯ ಮುಂದೆ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಿಸಿ ಎಂದು ಹೇಳಿದರು. ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ ಮಾತನಾಡಿ, ಗಿಡಗಳನ್ನು ನೆಟ್ಟು ಸಂರಕ್ಷಣೆ ಮಾಡುವ ಮೂಲಕ ಉತ್ತಮ ಪರಿಸರ ನಿರ್ಮಾಣ ಮಾಡಬೇಕು ಎಂದರು. ಪ್ರಾಂಶುಪಾಲ ಸುರೇಶ ಹವಾಲ್ದಾರ ಮಾತನಾಡಿ, ಇಂದಿನ ದಿನಗಳಲ್ಲಿ ಜಾಗತೀಕರಣ ಮತ್ತು ಕೈಗಾರೀಕರಣದ ಪರಿಣಾಮದಿಂದ ಪರಿಸರ ಮಾಲಿನ್ಯದಲ್ಲಾಗುವ ತೊಂದರೆಗಳನ್ನು ಹೋಗಲಾಡಿಸಲು ನಾವು ಕಾಡು ಬೆಳೆಸಿ ನಾಡು ಉಳಿಸಿ ಎಂಬ ವಾಕ್ಯವನ್ನು ಜಾಗೃತಗೊಳಿಸುವುದೇ ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದು ತಿಳಿಸಿದರು. ವೀರೇಂದ್ರ ಶೀಲವಂತ, ಹೊಳಬಸು ಬಾಳಶೆಟ್ಟಿ, ಮಿಥುನ ನಾಯಕ, ಮುತ್ತಣ್ಣ ಅಂಗಡಿ, ಬಸು ಭಬ್ಬಿ, ಶ್ರೀಶೈಲ ಮಧರಖಂಡಿ, ರವಿ ಕುಂಚನೂರ, ಸಂಸ್ಥೆಯ ಸಿಬ್ಬಂದಿ ಇದ್ದರು.

ಕೃಷ್ಣರಾಜ ಒಡೆಯರ ಕೊಡುಗೆ ಅಪಾರ

ಗಲಗಲಿ: ಕನ್ನಡಿಗರ ಪ್ರಾತನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ ಮಾಡುವದರೊಂದಿಗೆ ನಾಡುನುಡಿಗಾಗಿ ವಿಶೇಷವಾಗಿ ಸೇವೆ ಸಲ್ಲಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಸೇವೆ ಅಗಾಧವಾದದ್ದು ಎಂದು ಸ್ಥಳೀಯ ಬಸವೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ನಿಂಗಣ್ಣ ಗೋಳಿಪಲ್ಲೆ ಹೇಳಿದರು. ಸಂಸ್ಥೆಯ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಬಾಗಲಕೋಟೆ ಜಿಲ್ಲಾ ಘಟಕ, ಕಸಾಪ ಗಲಗಲಿ ವಲಯ ಘಟಕ ಮತ್ತು ಬಸವೇಶ್ವರ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಸಹಯೋಗದಲ್ಲಿ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಮಾತನಾಡಿ ಅಧುನಿಕ ಮೈಸೂರಿನ ಶಿಲ್ಪಿ, ಶೈಕ್ಷಣಿಕ ಹಾಗೂ ಕೈಗಾರಿಕಾ ಹರಿಕಾರರು ಜನಸಾಮಾನ್ಯರ ಪ್ರೀತಿಗೆ ಪಾತ್ರರಾಗುವಂತೆ ಆಡಳಿತ ಮಾಡಿದ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಜನಮುಖಿಸೇವೆ ಅಪಾರವಾದದ್ದು ಎಂದರು, ಗಾಲವ ಶಿಕ್ಷಣ ಸಂಸ್ಥೆಯ ನಿರ್ದೇಶಕ ಸುನೀಲಗೌಡ ನ್ಯಾಮಗೌಡ , ಬಾಲವಿಕಾಸ ಅಕ್ಯಾಡೆಮಿ ಸದಸ್ಯ ಎಚ್.ವೈ.ಜರಾಳಿ, ಹಿರಿಯ ಸಾಹಿತಿ ಅಶೋಕ ಚಿಚಖಂಡಿ ಮಾತನಾಡಿದರು. ಕೆ.ಎಚ್.ಬಾಚಕ, ಕಾಮಣ್ಣ ಗೋಕಾವಿ, ಶಿವಬಸು ಮಲ್ಲನ್ನವರ, ಲಿಯಾಕತ್ ಬಾಗವಾನ ಕಲಾವಿದ ಅರುಣ ಘೋರತ, ಮಲ್ಲಪ್ಪ ಕುಟಕನಕೇರಿ ಉಪಸ್ಥಿತರಿದ್ದರು.



ಕಿರುಸುದ್ದಿ



ಝುಳಕಿ: ಸ್ಥಳೀಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮುಖ್ಯಗುರು ಪಿ.ಡಿ.ಕಾಸರ ಹಾಗೂ ವಲಯ ಕರವೇ ಅಧ್ಯಕ್ಷ ರವಿ ಹೂಗಾರ ಗಿಡ ನೆಟ್ಟು ನೀರು ಹಾಕುವ ಮೂಲಕ ಚಾಲನೆ ನೀಡಿದರು. ಎಸ್ಡಿಎಂಸಿ ಅಧ್ಯಕ್ಷ ನಿಂಬಣ್ಣ ವಾಲಿಕಾರ, ಎಂ.ಎ.ಕಂಬಾರ, ಎಸ್.ಎಂ.ಕುಲಕರ್ಣಿ, ಎಸ್.ಎಂ.ಪಾಟೀಲ, ಎಸ್.ಎಚ್.ಭಜಂತ್ರಿ, ಬಿ.ಎಸ್. ಮದಬಾವಿ, ಜಿ.ಎಸ್.ಬಗಲಿ, ಎಸ್.ಎಸ್. ಆಕಳವಾಡಿ, ಮಕ್ಕಳು ಉಪಸ್ಥಿತರಿದ್ದರು.

ಶಂಕರ ಹೆಬ್ಬಾಳಗೆ ಮಾಧ್ಯಮ ರತ್ನಸಿರಿ ಪ್ರಶಸ್ತಿ



ಮುದ್ದೇಬಿಹಾಳ: ತಾಳಿಕೋಟಿಬಿ ಪಟ್ಟಣದ ವಿರಕ್ತೇಶ್ವರ ಭರತನಾಟ್ಯ ತರಬೇತಿ ಶಾಲೆಯಿಂದ ಮಾಧ್ಯಮ ಕ್ಷೇತ್ರದಲ್ಲಿನ ಸಾಧಕರಿಗೆ ಕೊಡಮಾಡುವ ರಾಜ್ಯಮಟ್ಟದ ಮಾಧ್ಯಮ ರತ್ನ ಸಿರಿ ಪ್ರಶಸ್ತಿಗೆ ಪತ್ರಕರ್ತ ಶಂಕರ ಈ.ಹೆಬ್ಬಾಳ ಅವರನ್ನು ಆಯ್ಕೆ ಮಾಡಲಾಗಿದೆ. ಶಂಕರ ಹೆಬ್ಬಾಳ ಅವರು ತಾಲ್ಲೂಕಿನಲ್ಲಿ ಪತ್ರಕರ್ತರಾಗಿ ಕಳೆದ 16 ವರ್ಷಗಳಿಂದ ವಿವಿಧ ರಾಜ್ಯಮಟ್ಟದ ದಿನ ಪತ್ರಿಕೆಗಳಿಗೆ ವರದಿಗಾರರಾಗಿ ಸೇವೆ ಸಲ್ಲಿಸಿದ್ದಾರೆ. ತಾಳಿಕೋಟಿ ಪಟ್ಟಣದ ಖಾಸ್ಗತೇಶ್ವರ ಸಭಾಭವನದಲ್ಲಿ ಜೂ.7ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿರಕ್ತೇಶ್ವರ ಭರತನಾಟ್ಯ ತರಬೇತಿ ಶಾಲೆಯ ಸಂಸ್ಥಾಪಕ ಅಧ್ಯಕ್ಷ ವಿ.ಪಿ.ಚಿಕ್ಕಮಠ ತಿಳಿಸಿದ್ದಾರೆ.

ಪರಿಸರ ಸಂರಕ್ಷಣೆಗೆ ಒತ್ತು ನೀಡಿ



ದೇವರಹಿಪ್ಪರಗಿ: ಪರಿಸರ ನಾವು ಕಾಪಾಡಿದರೆ ಪರಿಸರ ನಮ್ಮನ್ನು ಕಾಪಾಡುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಗಿಡ ಮರಗಳನ್ನು ಬೆಳೆಸುವುದರ ಮೂಲಕ ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಬೇಕು ಎಂದು ಮಾಜಿ ಗ್ರಾಪಂ ಅಧ್ಯಕ್ಷರು ಹಾಗೂ ಬಸವ ಹಸಿರು ಸೇನೆ ಬಳಗದ ಸಿದ್ದಗೊಂಡಪ್ಪಗೌಡ ಪಾಟೀಲ ಹೇಳಿದರು.

ತಾಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಶುಕ್ರವಾರ ಸಿಂದಗಿ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಲಯ, ಗ್ರಾಮ ಪಂಚಾಯತಿ ಹಾಗೂ ಬಸವ ಹಸಿರು ಸೇನೆ ಬಳಗ ಇವರ ಸಹಯೋಗದಲ್ಲಿ ಪ್ರಕೃತಿಯಿಂದ ಪ್ರೇರಿತ, ಹವಮಾನಕ್ಕಾಗಿ. ನಮ್ಮ ಭವಿಷ್ಯಕ್ಕಾಗಿ ಎಂಬ ಘೋಷಣೆಯೊಂದಿಗೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಟ್ಟು ನೀರೆರೆದು ಮಾತನಾಡಿದ ಅವರು, ಪರಿಸರ ಸಂರಕ್ಷಣೆಗೆ ಹೆಚ್ಚಿನ ಗಮನ ಹರಿಸಬೇಕಿದೆ. ಗ್ರಾಮದ ಬಸವ ಹಸಿರು ಸೇನೆ ಬಳಗದಿಂದ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಹೆಚ್ಚು ಗಿಡಗಳನ್ನು ನೆಟ್ಟು ಪಾಲನೆ ಪೋಷಣೆ ಮಾಡಿದವರಿಗೆ ಸೂಕ್ತ ಬಹುಮಾನ ನೀಡಲಾಗುವುದು. ಪ್ರತಿಯೊಬ್ಬರೂ ಗಿಡ ನೆಟ್ಟು ನೀರುಣಿಸಿ ಪೋಷಿಸಿ ದೊಡ್ಡ ಮರವನ್ನಾಗಿ ಬೆಳೆಸುವುದೇ ಪರಿಸರಕ್ಕೆ ನೀಡುವ ಬಹುದೊಡ್ಡ ಕೊಡುಗೆಯಾಗಿದೆ ಎಂದರು.

ಅರಣ್ಯ ಇಲಾಖೆಯ ಜಿ.ಬಿ.ರಾಮಗಿರಿಮಠ ಮಾತನಾಡಿ, ಪ್ರಾಣಿ ಸಂಕುಲಕ್ಕೆ ಪರಿಸರವೇ ಜೀವನಾಧಾರ. ಹಾಗಾಗಿ ಪರಿಸರವನ್ನು ಉಳಿಸಿ ಬೆಳೆಸುವುದರ ಮೂಲಕ ಮುಂದಿನ ಪೀಳಿಗೆಗೆ ರಕ್ಷಿಸಬೇಕು. ಬಸವ ಹಸಿರು ಸೇನೆಯ ಬಳಗದ ಸಹಯೋಗದಲ್ಲಿ ಸುಮಾರು 1100 ಗಿಡಗಳನ್ನು ನೆಡಲು ಸಿದ್ದರಾಗಿದ್ದೇವೆ ಗ್ರಾಮಸ್ಥರ ಸಹಕಾರದಿಂದ ಪರಿಸರ ರಕ್ಷಣೆಗೆ ಪ್ರತಿಯೊಬ್ಬರ ಮನೆ, ದೇವಸ್ಥಾನ, ಶಾಲಾ ಕಾಲೇಜಿನ ಆವರಣದಲ್ಲಿ ಗಿಡಗಳನ್ನು ನೆಡವುರೊಂದಿಗೆ ಪರಿಸರ ಉಳಿಸಿ ಬೆಳೆಸಬೇಕಾಗಿದೆ ಎಂದರು. ಗ್ರಾಮ ಪಂಚಾಯತಿ ಕಾರ್ಯದರ್ಶಿ ವಸಂತ ನಾಯಕ, ಗ್ರಾಪಂ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಬಿರಾದಾರ ಸೇರಿದಂತೆ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಬಸವ ಸೇನೆಯ ಬಳಗದವರು ಇದ್ದರು.



ನಾಲತವಾಡ: ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಾಲೇಜು (ಪ.ಜಾ-243) ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯ ಆಚ್ಚರಿಸಲಾಯಿತು. ಪ್ರಾಚಾರ್ಯ ಜಿ.ಬಿ.ಗೂಳಿಗಿ, ನಾಗಯ್ಯ ಸ್ಥಾವರಮಠ, ಅಲ್ಲಾಭಕ್ಷ ಕುಳಗೇರಿ ಮೊರಾರ್ಜಿ ದೇಸಾಯಿ ಶಾಲೆಯ ಸಿಬ್ಬಂದಿ ಹಾಗೂ ಮಕ್ಕಳು ಇದ್ದರು.

ಗಿಡ-ಮರಗಳ ಪೋಷಣೆ ಅಗತ್ಯ

ಕೊಲ್ಹಾರ: ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ಮಾನವನ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಪರಿಸರ ಸಮತೋಲನ ಕಾಪಾಡಲು ಗಿಡ-ಮರಗಳ ಲಾಲನೆ ಪೋಷಣೆ ಮಾಡುವುದು ತೀರಾ ಅಗತ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹರೀಶ ಎ. ಹೇಳಿದರು. ವಿಶ್ವ ಪರಿಸರ ದಿನದ ಅಂಗವಾಗಿ ತಾಲೂಕಿನ ಕೂಡಗಿ ಎನ್‌ಟಿಪಿಸಿ ವಿದ್ಯುತ್ ಸ್ಥಾವರದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬೃಹತ್ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸಿ ಹಸಿರು ವಿಸ್ತರಣೆಗೆ ಎನ್‌ಟಿಪಿಸಿ ಕೈಗೊಂಡಿರುವ ಕಾರ್ಯವನ್ನು ನ್ಯಾಯಾಧೀಶರು ಪ್ರಶಂಸಿಸಿದ ಅವರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಈ ಮಹತ್ವದ ಅಭಿಯಾನದಲ್ಲಿ ಭಾಗಿಯಾಗಿಸಿರುವುದಕ್ಕೆ ಎನ್‌ಟಿಪಿಸಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು. ಕೂಡಗಿ ಎನ್‌ಟಿಪಿಸಿ ಯೋಜನೆಯ ಮುಖ್ಯಸ್ಥ ಮಧು ಎಸ್.ಅಧ್ಯಕ್ಷತೆ ವಹಿಸಿ, ಪರಿಸರ ಸಂರಕ್ಷಣೆಯ ಭಾಗವಾಗಿ ಸಂಸ್ಥೆ ಈ ವರ್ಷ ತನ್ನ ವಿದ್ಯುತ್ ಸ್ಥಾವರದ ಆವರಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಒಟ್ಟು 30 ಸಾವಿರ ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಅದರ ಅಂಗವಾಗಿ ಈ ಬೃಹತ್ ಅಭಿಯಾನ ಆರಂಭಿಸಲಾಗಿದೆ ಎಂದರು. ಹಿರಿಯ ಸಿವಿಲ್ ನ್ಯಾಯಾಧೀಶ ಎ.ಎಸ್.ಹಾಗರಗಿ, ಕರ್ನಾಟಕ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಇದ್ದರು.



ಕೊಲ್ಹಾರ: ವಿಶ್ವ ಪರಿಸರ ದಿನದ ಅಂಗವಾಗಿ ತಾಲೂಕಿನ ಕೂಡಗಿ ಎನ್‌ಟಿಪಿಸಿ ವಿದ್ಯುತ್ ಸ್ಥಾವರದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬೃಹತ್ ಸಸಿ ನೆಡುವ ಅಭಿಯಾನಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹರೀಶ ಎ. ಚಾಲನೆ ನೀಡಿದರು. ಎನ್‌ಟಿಪಿಸಿ ಸಂಸ್ಥೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಪರಿಸರ ಉಳಿವಿನಲ್ಲಿಯೇ ನಮ್ಮ ಉಳಿವು



ವಿಜಯಪುರ: ಪರಿಸರ ರಕ್ಷಣೆಯನ್ನೇ ಉಸಿರಾಗಿಸಿಕೊಂಡಿದ್ದ ಪರಿಸರ ಪ್ರೇಮಿ ದಿ.ಉದಯ ನಾವಲಗಿ ಅವರ ಸ್ಮರಣೆ ಹಾಗೂ ಪರಿಸರ ದಿನಾಚರಣೆ ನಿಮಿತ್ತ ನನ್ನ ಗಿಡ-ನನ್ನ ಭೂಮಿ ಸಂಸ್ಥೆಯ ವತಿಯಿಂದ ನಗರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಇಲ್ಲಿನ ಅರಳಿಕಟ್ಟೆ ಆಂಜನೇಯ ಮಂದಿರ ಆವರಣದಲ್ಲಿ 100ಕ್ಕೂ ಹೆಚ್ಚು ಸಸಿಗಳನ್ನು ಏಕಕಾಲಕ್ಕೆ ನೆಡಲಾಯಿತು. ಪರಿಸರ ರಕ್ಷಣೆಯ ಜಾಗೃತಿಯ ಜೊತೆಗೆ ಆರೋಗ್ಯ ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಿಯೂ ಈ ಸಮಾರಂಭ ಗಮನ ಸೆಳೆಯಿತು.

ಖ್ಯಾತ ಚಲನಚಿತ್ರ ನಿರ್ಮಾಪಕ ಹಾಗೂ ಪರಿಸರ ಪ್ರೇಮಿ ಬಸಂತಕುಮಾರ ಪಾಟೀಲ ಸಸಿಗಳನ್ನು ನೆಡುವ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಪರಿಸರ ಉಳಿವಿನಲ್ಲಿಯೇ ನಮ್ಮ ಉಳಿವು ಅಡಗಿದೆ, ಪರಿಸರ ರಕ್ಷಣೆ ಎಂಬುದು ದೈನಂದಿನ ಜೀವನದ ಭಾಗವಾಗಬೇಕು ಎಂದರು.

ವೈದ್ಯ ಡಾ.ಆನಂದ ಚೌಧರಿ ಮಾತನಾಡಿ, ಮೆದಳಿಗೆ ಅನೇಕ ರೋಗಗಳು ಬಾಧಿಸುತ್ತಿವೆ, ಅದರ ಬಗ್ಗೆ ಸಮಾಜದಲ್ಲಿ ಇನ್ನು ಜಾಗೃತಿ ಬಂದಿಲ್ಲ, ಹೃದಯಾಘಾತ ಬಗ್ಗೆ ಸಾಕಷ್ಟು ಜಾಗೃತಿ ಇದೆ. ಆದರೆ ಮೆದುಳಿನ ರೋಗಗಳಲ್ಲಿ ಕೆಲವು ಎಮರ್ಜೆನ್ಸಿ ರೋಗಗಳಾದ ಸ್ಟ್ರೋಕ್, ಮೆದುಳು ಜ್ವರ, ಲಕ್ವಾ ಬಗ್ಗೆ ಇನ್ನು ಜಾಗೃತಿ ಇಲ್ಲ, ಇವುಗಳನ್ನು ಅಲಕ್ಷಿಸಿದರೆ ಅಪಾಯ ತಪ್ಪಿದ್ದಲ್ಲ ಎಂದರು.

ಯುವ ಭಾರತ ಸಂಸ್ಥಾಪಕ ಅಧ್ಯಕ್ಷ ಉಮೇಶ ಕಾರಜೋಳ ಮಾತನಾಡಿ, ಪರಿಸರ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗಬಾರದು, ಪ್ರತಿದಿನವೂ ಪರಿಸರ ದಿನವಾಗಿರಬೇಕು ಎಂದು ಕರೆ ನೀಡಿದರು. ಸಂಘದ ಅಧ್ಯಕ್ಷ ಬಸವರಾಜ ಬೈಚಬಾಳ, ಮೇಯರ್ ಎಂ.ಎಸ್. ಕರಡಿ, ಎನ್.ಡಿ.ಪಾಟೀಲ, ಯುವಜನ ಸೇವಾ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ, ಡಾ.ಬಸವರಾಜ ಬಡದಾಳ, ಬಸವರಾಜ ಯಾದವಾಡ, ಚಿದಾನಂದ ಔರಂಗಬಾದ, ಗಿರೀಶ ಪಾಟೀಲ, ರವಿ ಬಿರಾದಾರ, ಸಂತೋಷ ಅಜೂರ ಇದ್ದರು.

ಪರಿಸರ ಸಂರಕ್ಷಣೆಗೆ ಕರೆ

ವಿಜಯಪುರ: ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಶುಕ್ರವಾರ ಬೆಳಗ್ಗೆ ಆವರಣ ಸ್ವಚ್ಛತಾ ಹಾಗೂ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಿದರು. ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಸಸಿ ನೆಟ್ಟು ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು, ಹಸಿರು ಪರಿಸರ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಹಸಿರೇ ಉಸಿರಾಗಿದೆ. ಹಸಿರನ್ನು ಉಳಿಸುವ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಬಹುದೊಡ್ಡ ಕೊಡುಗೆ ನೀಡೋಣ. ಮರಗಳನ್ನು ಬೆಳೆಸುವ ಮೂಲಕ ಪರಿಸರದ ಸಮತೋಲನ ಕಾಪಾಡಲು ಎಲ್ಲರೂ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು. ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸ್ವಚ್ಛತಾ ಕಾರ್ಯವೂ ನಡೆಸಲಾಯಿತು. ಪರಿಸರ ಸ್ವಚ್ಛತೆ ಮತ್ತು ಹಸಿರು ವಾತಾವರಣ ನಿರ್ಮಾಣ ಎರಡೂ ಪರಸ್ಪರ ಪೂರಕವಾಗಿದ್ದು, ಸ್ವಚ್ಛ ಮತ್ತು ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದರು. ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕಾರಿ, ಸಿಬ್ಬಂದಿ, ಆಹಾರ ಇಲಾಖೆಯ, ಜಿಲ್ಲಾ ಖಜಾನೆ ಇಲಾಖೆ, ನಗರಾಭಿವೃದ್ಧಿ ಕೋಶ, ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿ ಇದ್ದರು.



ಗಿಡ-ಮರ ಬೆಳೆಸಿ; ಪರಿಸರ ಸಂರಕ್ಷಿಸಿ

ಸಿಂದಗಿ: ಪರಿಸರ ರಕ್ಷಣೆ ಮಾಡಿದರೆ ಪರಿಸರ ನಮ್ಮನ್ನು ರಕ್ಷಣೆ ಮಾಡುತ್ತದೆ. ಮನುಷ್ಯನಿಗೆ ನೈಸರ್ಗಿಕವಾಗಿ ಉಸಿರಾಟ ದೊರೆಯಲು ಗಿಡ-ಮರಗಳು ಪರಿಸರದ ಜೀವನಾಡಿಗಳು ಎಂದು ಹಿರಿಯ ದಿವಾಣಿ ನ್ಯಾಯಾದೀಶ ನಾಗೇಶ ಮೊಗೇರ ಹೇಳಿದರು.

ಪಟ್ಟಣದ ಹಿರಿಯ ಶ್ರೇಣಿ ನ್ಯಾಯಾಲಯದ ಆವರಣದಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಿಭಾಗ ವಿಜಯಪುರ, ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಲಯ ಹಾಗೂ ಕಾನೂನು ಸೇವಾ ಸಮಿತಿ ಇವರ ಸಹಯೋಗದಲ್ಲಿ ಪರಿಸರ ದಿನಾಚರಣೆ ನಿಮಿತ್ತ ಸಸಿಗೆ ನಿರೂಣಿಸುವ ಮೂಲಕ ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸಿ ಮಾತನಾಡಿ, ಭೂಮಿ ತಾಯಿಯ ಒಡಲಲ್ಲಿ ಗಿಡ ಮರ ಬೆಳೆಸಿದರೆ ನಮಗೆ ಶುದ್ಧವಾದ ಗಾಳಿ, ಸಕಾಲಕ್ಕೆ ಮಳೆ ಬೆಳೆ ಹಾಗೂ ಪರಿಸರದ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಸಹಕಾರಿಯಾಗಿದ್ದು, ಎಲ್ಲೆಡೆ ಗಿಡ ಮರಗಳನ್ನು ಬೆಳೆಸುವ ಪರಿಪಾಠ ಬೆಳೆಸಬೇಕಾಗಿದೆ ಎಂದು ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಎಸ್.ಬಿ.ಪಾಟೀಲ ಗುಂದಗಿ ಮಾತನಾಡಿ, ಮರ ಗಿಡಗಳು ಮನುಷ್ಯನಿಗೆ ಶುದ್ಧ ಗಾಳಿ ನೀಡುತ್ತವೆ. ನೆರಳು, ಹಣ್ಣು ನೀಡಿ ನೆರವಾಗುತ್ತವೆ ಆದರೆ ಮನುಷ್ಯ ದುರಾಸೆಯಿಂದ ಪರಿಸರ ಹಾಳು ಮಾಡಿ ನಾಶ ಮಾಡುತ್ತಿದ್ದಾನೆ. ಪರಿಸರದ ಉಳಿವಿಗಾಗಿ ಪ್ರತಿಯೊಬ್ಬರೂ ಒಂದೊಂದು ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರದ ಸಂರಕ್ಷಣೆಗೆ ಕೊಡುಗೆ ನೀಡಬೇಕು ಎಂದರು.

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾದೀಶ ಎ.ಆರ್.ಎ.ಮುಲ್ಲಾ, ದಿವಾಣಿ ನ್ಯಾಯಾದೀಶೆ ಪಂಕಜಾ ಕೊಣ್ಣೂರ, ಸರಕಾರಿ ಅಭಿಯೋಜಕ ಆನಂದ ರಾಠೋಡ, ಮಾಜಿ ಅಧ್ಯಕ್ಷ ಎಸ್.ಬಿ.ದೊಡಮನಿ, ಅರಣ್ಯಾಧಿಕಾರಿಗಳಾದ ರಾಜೀವ ಬಿರಾದಾರ, ಇರ್ಶಾದ ನೇವಾರ, ಯಲ್ಲಪ್ಪ ಸಿಂದಕೇಡ, ಧನರಾಜ ಮುಜಗೊಂಡ, ಅನೀಲ ಸಾಳುಂಕೆ, ಬಸವರಾಜ ಕೊಣ್ಣೂರ, ಅನೀಲ ವಾಲೀಕಾರ, ಮಹಾದೇವ ಯಂಕಂಚಿ, ವಕೀಲರಾದ ಸಿ.ಎಂ.ಸೂರ್ಯವಂಶಿ, ಬಿ.ಸಿ.ಪಾಟೀಲ, ಆರ್.ಎಂ.ಚೌರ, ಎಂ.ಎಸ್.ಬಿರಾದಾರ, ಬಿ.ಪಿ.ಬಿರಾದಾರ, ಸಿ.ಎಸ್.ಕುಂಬಾರ, ಆರ್.ಎಸ್.ಹೊಸಮನಿ, ಶಮಾ ಕಾಚೂರ ಸೇರಿದಂತೆ ಅನೇಕರಿದ್ದರು. ಅಪರ ಸರಕಾರಿ ಅಭಿಯೋಜಕ ಬಿ.ಜಿ.ನೆಲ್ಲಗಿ ಮಾತನಾಡಿದರು.



ದೂರುಗಳಿಗೆ ಸ್ಪಂದಿಸಿದ ಆಹಾರ ಇಲಾಖೆ

ಚಡಚಣ: ಪಟ್ಟಣದ ನಿಶಾಂತ್ ಭಾರತ್ ಗ್ಯಾಸ್ ವಿತರಕರ ವಿರುದ್ಧ ಗೃಹೋಪಯೋಗಿ ಎಲ್‌ಪಿಜಿ ಸಿಲಿಂಡರ್‌ಗಳಿಗೆ ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗುತ್ತಿದೆ ಎಂಬ ಸಾರ್ವಜನಿಕರ ದೂರುಗಳ ಹಿನ್ನೆಲೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವಿತರಕರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಪ್ರತಿ ಗೃಹೋಪಯೋಗಿ ಸಿಲಿಂಡರ್‌ಗೆ 29.50 ಹೆಚ್ಚುವರಿ ಹಣ ಪಡೆಯಲಾಗುತ್ತಿದೆ ಎಂಬ ಆರೋಪದ ಕುರಿತು ಸಾರ್ವಜನಿಕರು ದಾಖಲೆಗಳು, ರಸೀದಿಗಳು ಹಾಗೂ ಛಾಯಾಚಿತ್ರಗಳನ್ನು ವಿಜಯಪುರ ಜಿಲ್ಲಾ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಉಪನಿರ್ದೇಶಕ ವಿನಯಕುಮಾರ ಪಾಟೀಲ ಅವರಿಗೆ ಸಲ್ಲಿಸಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು.

ದೂರುಗಳನ್ನು ಪರಿಗಣಿಸಿದ ಉಪನಿರ್ದೇಶಕರು ಚಡಚಣ ತಾಲೂಕು ಆಹಾರ ನಿರೀಕ್ಷಕ ಶಿವಾನಂದ ಕೋಳಿ ಅವರಿಗೆ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದರು.

ಶುಕ್ರವಾರ ನಿಶಾಂತ್ ಭಾರತ್ ಗ್ಯಾಸ್ ವಿತರಣಾ ಕೇಂದ್ರಕ್ಕೆ ಭೇಟಿ ನೀಡಿದ ಶಿವಾನಂದ ಕೋಳಿ ಅವರು ವಿತರಕರ ಕಾರ್ಯವೈಖರಿ ಪರಿಶೀಲಿಸಿದರು. ಅಧಿಕೃತ ದರಪಟ್ಟಿ ಕಚೇರಿಯಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವುದು, ಗ್ರಾಹಕರಿಗೆ ಪ್ರತಿಯೊಂದು ಸಿಲಿಂಡರ್ ವಿತರಣೆಗೆ ಬಿಲ್ ನೀಡುವುದು, ಸಿಲಿಂಡರ್ ಸಂಖ್ಯೆಯನ್ನು ರಸೀದಿಯಲ್ಲಿ



ನಮೂದಿಸುವುದು ಹಾಗೂ ಡಿಜಿಟಲ್ ಪಾವತಿ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು.

ಎರಡು ದಿನಗಳಿಂದ ಸರ್ವರ್ ಸಮಸ್ಯೆ ನೆಪ ಹೇಳಿ ಸಿಲಿಂಡರ್ ನೀಡುತ್ತಿಲ್ಲ, ದೂರದ ಗ್ರಾಮಗಳಿಂದ ಹಾಗೂ ಎರಡು-ಮೂರು ಕಿಲೋ ಮೀಟರ್ ದೂರದಿಂದ ಸಿಲಿಂಡರ್ ಹೊತ್ತುಕೊಂಡು ಬಂದು ಮತ್ತೆ ಹೊತ್ತುಕೊಂಡು ಹಿಂದಿರುಗಬೇಕಾಗಿದೆ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಿವಾನಂದ ಕೋಳಿ, ಸಿಲಿಂಡರ್ ಲಭ್ಯವಿಲ್ಲದಿದ್ದರೆ ಗ್ರಾಹಕರ ಹೆಸರು ಮತ್ತು ದೂರವಾಣಿ ಸಂಖ್ಯೆ ದಾಖಲಿಸಿಕೊಂಡು ಖಾಲಿ ಸಿಲಿಂಡರ್ ಸ್ವೀಕರಿಸಿ ರಸೀದಿ ನೀಡಬೇಕು. ನಂತರ ತುಂಬಿದ ಸಿಲಿಂಡರ್ ಬಂದ ತಕ್ಷಣ ಗ್ರಾಹಕರ ಮನೆಗೆ ತಲುಪಿಸಬೇಕು ಎಂದು ಸೂಚಿಸಿದರು.

ಸರ್ಕಾರದ ನಿಯಮಾನುಸಾರ ಮಾತ್ರ ವಾಹನ ಬಾಡಿಗೆ ಪಡೆಯಬೇಕು ಎಂದೂ ತಿಳಿಸಿದರು.

ಮುಂದಿನ ದಿನಗಳಲ್ಲಿ ಇದೇ ರೀತಿಯ ದೂರುಗಳು ಬಂದರೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗ

ಮುದ್ದೇಬಿಹಾಳ: ತಾಲೂಕಿನ ಯರಗಲ್ ಗ್ರಾಮದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬಾಲಾಜಿ ಸಕ್ಕರೆ ಮತ್ತು ರಾಸಾಯನಿಕ ಕಾರ್ಖಾನೆಯಲ್ಲಿ ಪರಿಸರ ಜಾಗೃತಿ ಹಾಗೂ ಸಂರಕ್ಷಣೆಯ ಸಂದೇಶ ಸಾರುವ ಉದ್ದೇಶದಿಂದ ವಿಶೇಷ ಪರಿಸರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಆಡಳಿತ ಮಂಡಳಿ ಸದಸ್ಯ ಎಚ್.ಎಲ್.ಪಾಟೀಲ ಮಾತನಾಡಿ, ಪರಿಸರ ಸಂರಕ್ಷಣೆಯ ಮಹತ್ವ, ಹಸಿರು ವಾತಾವರಣದ ಅಗತ್ಯತೆ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಉಳಿಸಿ ಬೆಳೆಸುವ ಜವಾಬ್ದಾರಿಯ ಕುರಿತು ಅರಿವು ಮೂಡಿಸಲು ಕಾರ್ಖಾನೆ ಕಟಿಬದ್ಧವಾಗಿದೆ. ಪರಿಸರ ಸಂರಕ್ಷಣೆ ಕೇವಲ ಒಂದು



ದಿನದ ಆಚರಣೆಯಾಗದೆ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು ಎಂದರು.

ನಿರ್ದೇಶಕ ರಾಹುಲ್ ಪಾಟೀಲ ಮಾತನಾಡಿ, ಸಂಸ್ಥೆಯ ಪರಿಸರ ಸ್ನೇಹಿ ಕಾರ್ಯಚಟುವಟಿಕೆಗಳ ಭಾಗವಾಗಿ ಗಿಡ ನೆಡುವಿಕೆ, ಅವುಗಳ ಸಂರಕ್ಷಣೆ ಹಾಗೂ ಹಸಿರು ಪರಿಸರ ನಿರ್ಮಾಣಕ್ಕೆ ಕೈಗೊಳ್ಳಲಾಗುತ್ತಿದೇ. ಪರಿಸರದ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು ಅದರ ಪೋಷಣೆಯ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಹೇಳಿದರು.

ಸಂಸ್ಥೆಯ ಅದಿಕ್ ಪಾಟೀಲ, ಶ್ರೀನಿವಾಸ ಅರಕೇರಿ, ಪ್ರಫುಲ್ ಪಾಟೀಲ ಹಾಗೂ ಶ್ರುತಿ ಪಾಟೀಲ, ಮಾರುತಿ ಗುರವ್, ಸಿದ್ದು ಐನಾಪುರ್, ಗಿರೀಶ ಪಾಟೀಲ್, ಸಿದ್ದಣ್ಣನವರ, ಅನಿಲ್ ಕುಮಾರ್, ಪರಮಣ್ಣಗೌಡ ಬೆಳ್ಳಿ, ಈರಣ್ಣ ಮದರಿ, ನಿಂಗಪ್ಪ ಮೆಕಲಿ, ಸಂಜೀವ ರೆಡ್ಡಿ ಪಾಟೀಲ, ಸಂತೋಷ ಚಿಪ್ಪಲಕಟ್ಟಿ, ರಾಘವೇಂದ್ರ ನಿಂಗಸಾನಿ, ಎಂ.ಎಸ್.ರೊಳ್ಳಿ, ಚಂದ್ರು ಸಾಲಿಮಠ ಸೇರಿದಂತೆ ಸಂಸ್ಥೆಯ ವಿವಿಧ ವಿಭಾಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮನೆಗೊಂದು ಮರ ನೀಗುವುದು ಬರ



ವಿಜಯಪುರ: ಮನೆಗೊಂದು ಮರ ನೀಗುವುದು ಬರ ಎನ್ನುವುದನ್ನು ಅರಿತುಕೊಂಡು ಪ್ರತಿಯೊಬ್ಬ ವ್ಯಕ್ತಿಯೂ ಸಹ ಮರ ಬೆಳೆಸುವಲ್ಲಿ ನಿರತನಾಗಿದ್ದೇ ಆದಲ್ಲಿ ಪರಿಸರ ಸಂರಕ್ಷಣೆಯ ಜೊತೆಗೆ ಶುದ್ಧವಾದ ಆಮ್ಲಜನಕ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಪ್ರಾಂಶುಪಾಲ ಮಂಜುನಾಥ ಜುನಗೊಂಡ ಹೇಳಿದರು.ನಗರದ ಎಕ್ಸಲಂಟ್ ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಸಸಿ ನೆಟ್ಟು ಅವರು ಮಾತನಾಡಿದರು. ಇಂದು ನಾವು ಉಸಿರಾಡಾಬೇಕಾದರೆ ಹಸಿರು ಇರಲೇಬೇಕು. ಹಸಿರಿಲ್ಲದೆ ಉಸಿರಿಲ್ಲ, ಅದಕ್ಕಾಗಿ ನಾವು ಹಸಿರು ಪರಿಸರ ನಿರ್ಮಿಸುವ ಕಾರ್ಯ ಮಾಡಬೇಕು. ಈ ಕಾರಣದಿಂದಾಗಿಯೇ ನಮ್ಮ ಮನೆಯನ್ನು ರಕ್ಷಿಸುವುದು ಎಷ್ಟು ಮುಖ್ಯವಾಗುತ್ತದೆಯೋ ಪರಿಸರವನ್ನು ರಕ್ಷಣೆ ಮಾಡುವುದು ಅದಕ್ಕಿಂತಲೂ ಮುಖ್ಯವಾಗಿರುತ್ತದೆ ಎಂದರು.ಕಾಲೇಜಿನ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.

ಪರಿಸರ ರಕ್ಷಣೆಯಿಂದ ಮಾನವನ ಉಳಿವು

ವಿಜಯಪುರ: ಹಸಿರೇ ಉಸಿರಾಗಿದ್ದು, ಪರಿಸರ ಸಂರಕ್ಷಣೆಯಿಂದ ಮಾನವ ಕುಲ ಉಳಿಯಲು ಸಾಧ್ಯ ಎಂದು ವೇದ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ.ಶಿವಾನಂದ ಕೆಲೂರ ಹೇಳಿದರು.ನಗರದ ಹೊರ ವಲಯ ಇಟ್ಟಂಗಿಹಾಳದ ವೇದ ಇಂಟರ್ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡ ವಿಶ್ವ ಪರಿಸರ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಸದ್ಯ ವಾತಾವರಣ ಬದಲಾವಣೆಯಿಂದ ಮಾನವನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಕಾರಣ ಪರಿಸರ ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಕಾರ್ಯ ಮಾಡಬೇಕಾಗಿರುವುದು ನಮ್ಮ ಕರ್ತವ್ಯ ಎಂದರು.500 ಮಕ್ಕಳಿಗೆ ಸಸಿಗಳನ್ನು ನೀಡಿ, ಅವುಗಳ ಮಹತ್ವವನ್ನು ತಿಳಿಸಲಾಯಿತು. ನಿರ್ದೇಶಕಿ ಶಿವಲೀಲಾ ಕೆಲೂರ, ನೇಹಾ ಕೆಲೂರ, ಮುಖ್ಯ ಶಿಕ್ಷಕ ಸುನೀಲ ಬಿ.ಎಂ., ಸೇರಿ ಶಿಕ್ಷಕರು ಇದ್ದರು.



ಅರ್ಥಪೂರ್ಣ ವಿಶ್ವ ಪರಿಸರ ದಿನಾಚರಣೆ



ತಾಳಿಕೋಟೆ: ಸ್ಥಳೀಯ ಎಸ್‌ಕೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ವಿಜ್ಞಾನ ವಿಭಾಗದ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಉಸಿರಾಗಲಿ ಹಸಿರು' ಎಂಬ ಅರ್ಥಪೂರ್ಣ ಶೀರ್ಷಿಕೆ ನೀಡಲಾಗಿತ್ತು.ಮಹಾವಿದ್ಯಾಲಯದ ಪ್ರಾಚಾರ್ಯರು, ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಒಟ್ಟಾಗಿ ಕಾಲೇಜು ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಶಿಕ್ಷಣಾರ್ಥಿಗಳಿಗೆ ಪರಿಸರ ಸಂರಕ್ಷಣೆ ಮತ್ತು ಹಸಿರು ಬೆಳವಣಿಗೆಯ ಕುರಿತು ಜಾಗೃತಿ ಮೂಡಿಸಲಾಯಿತು. ಗಿಡ ನೆಡುವಿಕೆ ಹಾಗೂ ಅವುಗಳ ನಿರಂತರ ಪೋಷಣೆಯ ಅಗತ್ಯತೆಯನ್ನು ಸಾರುವ ಮೂಲಕ, ಈ ಕಾರ್ಯಕ್ರಮವು ನೆರೆದಿದ್ದ ಎಲ್ಲರಲ್ಲೂ ಪ್ರಕೃತಿಯ ಬಗ್ಗೆ ಕಾಳಜಿ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಯಿತು.ಇಂದು ನೆಡುವ ಒಂದು ಗಿಡ, ನಾಳೆಯ ಶುದ್ಧ ಗಾಳಿ; ಇಂದು ಉಳಿಸುವ ಪರಿಸರ, ನಾಳೆಯ ಸುಂದರ ಬದುಕು ಎಂಬ ಉದಾತ್ತ ಸಂದೇಶದೊಂದಿಗೆ ಪರಿಸರ ದಿನಾಚರಣೆಯು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಕಾಲೇಜಿನ ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ನೂರಾರು ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ವಿಶ್ವ ಪರಿಸರ ದಿನ ಆಚರಣೆ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ಪಬ್ಲಿಕ್ (ಸಿಬಿಎಸ್‌ಇ) ಶಾಲೆಯಲ್ಲಿ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.ಶಾಲೆಯ ಉಪಪ್ರಾಚಾರ್ಯೆ ವಸುಧಾ ನಾರ್ವೇಕರ ಮಾತನಾಡಿ, ಪರಿಸರ ಮಾಲಿನ್ಯದಿಂದ ಜಾಗತಿಕವಾಗಿ ಎದುರಾಗಿರುವ ಹವಾಮಾನ ವೈಪರಿತ್ಯ ಮತ್ತು ಅದರ ದುಷ್ಪರಿಣಾಮಗಳ ಕುರಿತು ಮಾಹಿತಿ ನೀಡಿದರು. ಅಲ್ಲದೇ, ಸಸಿ ನೆಡುವ ಮೂಲಕ ಎಲ್ಲರೂ ಪರಿಸರ ಸಂರಕ್ಷಣೆಯಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.ವಿದ್ಯಾರ್ಥಿಗಳು ಪರಿಸರ ಗೀತೆ ಹಾಡಿದರು. ಏಳನೇ ತರಗತಿ ವಿದ್ಯಾರ್ಥಿಗಳು ಕಾಡು ರಕ್ಷಣೆ ಕುರಿತು ರೂಪಕ ಪ್ರದರ್ಶಿಸಿದರು. ಒಂಬತ್ತನೆಯ ತರಗತಿಯ ವಿದ್ಯಾರ್ಥಿನಿಯರಾದ ಐಶಾ ಸೌದಾಗರ, ಹೀನಲ್ ಚೋಪ್ರಾ ಪರಿಸರ ಜಾಗೃತಿಯ ಕುರಿತು ಮಾತನಾಡಿದರು.ಸಾಂಸ್ಕೃತಿಕ ಕಾರ್ಯ ಸಂಯೋಜಕಿ ಫರಾ ಜಹಾಗೀರದಾರ ಮತ್ತು ಶಿವಾನಿ ಪರಿಸರದ ರಕ್ಷಣೆ ಪ್ರತಿಜ್ಞಾವಿಧಿ ಬೋಧಿಸಿದರು. ವಿಜ್ಞಾನ ಶಿಕ್ಷಕಿಯರಾದ ಗಂಗಾಂಬಿಕಾ ಪಾಟೀಲ್ ಹಾಗೂ ಶೋಭಾ ಬಗಲಿ ಇವರು ಕಾಡುಗಳ ಕೊಡುಗೆ ಮತ್ತು ಅವುಗಳನ್ನು ಬೆಳೆಸುವ ಉದ್ದೇಶ ಜೀವ ಸಂಕುಲಗಳ ಮಹತ್ವ ಪರಿಸರ ಸಮತೋಲನ ಕಾಯ್ದುಕೊಳ್ಳುವ ಬಗೆಯನ್ನು ಮಕ್ಕಳಿಗೆ ಮನನವಾಗುವಂತೆ ತಿಳಿಸಿದರು. ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.



ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ



ಝುಳಕಿ: ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದು ಇಂಡಿ ತಾಲೂಕು ಯೋಜನಾಧಿಕಾರಿ ಎಲ್.ಎಂ.ನಟರಾಜ ಹೇಳಿದರು. ಸಮೀಪದ ಅಂಜುಟಗಿ ಗ್ರಾಮದ ಮುದ್ದೇಶಪ್ರಭು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ.ಟ್ರಸ್ಟ್) ಇಂಡಿ ವತಿಯಿಂದ ಹಮ್ಮಿಕೊಂಡಿದ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಪ್ರಕೃತಿ ಉಳಿಸುವ ಮೂಲಕವೇ ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯ ನಿರ್ಮಿಸಬಹುದು ಎಂದು ಹೇಳಿದರು. ಶಾಲಾ ಮುಖ್ಯಗುರು ಎ.ಜಿ.ಬಳಗಾರ ಮಾತನಾಡಿ, ವಿದ್ಯಾರ್ಥಿಗಳು ಪರಿಸರದ ಬಗ್ಗೆ ಕಾಳಜಿ ಬೆಳೆಸಿಕೊಂಡು ಪ್ರಕೃತಿ ಸಂಪತ್ತಿನ ರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿ, ಪ್ರಕೃತಿ ಸಂಪತ್ತಿನ ಉಳಿವಿಗೆ ತಮ್ಮದೇ ಆದ ಕೊಡುಗೆ ನೀಡುವ ಸಂಕಲ್ಪ ಮಾಡಿದರು. ಪರಿಸರ ಉಳಿದರೆ ಜೀವನ ಉಳಿಯುತ್ತದೆ ಎಂಬ ಸಂದೇಶದೊಂದಿಗೆ ನಡೆದ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಎಂದು ಹೇಳಿದರು. ಪೂರ್ಣಿಮಾ ಊಟಗಿ ಮತ್ತು ತಾಲೂಕು ಕೃಷಿ ಮೇಲ್ವಿಚಾರಕ ಎಸ್.ಕೆ.ಸುದೀಪ ಮತ್ತು ವಲಯದ ಮೇಲ್ವಿಚಾರಕಿ ಅಶ್ವಿನಿ ಸಂಗೊಳ್ಳಿ ಸೇವಾ ಪ್ರತಿನಿಧಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

ವಿಜಯಪುರ: ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಚಡಚಣ ವಲಯ ಶಿಕ್ಷಣ ಸಂಯೋಜಕ ಎನ್.ಜೆ.ಸಿನಾಖೆಡ್ ಹೇಳಿದರು.ಜಿಲ್ಲೆಯ ಚಡಚಣ ವಲಯ ಬಸನಾಳ ಗ್ರಾಮದ ಮಾತೋಶ್ರೀ ಗುರವ್ವ ಚನ್ನಪ್ಪ ಸಾವುಕಾರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಸಿನೆಟ್ಟು ಅವರು ಮಾತನಾಡಿದರು. ಇಂದಿನ ಆಧುನಿಕ ಯುಗದಲ್ಲಿ ಪರಿಸರ ನಾಶವಾಗುತ್ತಿದೆ. ಆದನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿ ಎಲ್ಲರ ಮೇಲೆ ಇದೆ. ಪ್ರತಿಯೊಬ್ಬ ನಾಗರಿಕರು ಸಸಿಗಳನ್ನು ನೆಟ್ಟು, ಗಿಡ-ಮರಗಳನ್ನು ಪೋಷಿಸಬೇಕು ಎಂದರು.ಹಡಲಸಂಗ ಸಮೂಹ ಸಂಪನ್ಮೂಲ ವ್ಯಕ್ತಿ ಶರಣು ಹೀರಾಪುರ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಹುಟ್ಟುಹಬ್ಬವನ್ನು ಶಾಲೆಗೆ ಸಸಿಗಳನ್ನು ಹಾಗೂ ಪುಸ್ತಕವನ್ನು ಕೊಡುವ ಮೂಲಕ ಪರಿಸರವನ್ನು ಕಾಪಾಡಬೇಕೆಂದು ಕರೆಕೊಟ್ಟರು.ಮುಖ್ಯೋಪಾಧ್ಯಾ ಎಂ.ಬಿ.ಪೂಜಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ, ಶಾಲೆ ಮನೆಗಳ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಪರಿಸರದ ಜಾಗೃತಿಯನ್ನು ಮೂಡಿಸಬೇಕು ಎಂದರು. ಶಿಕ್ಷಕರಾದ ಬಸವರಾಜ ನಾಶಿ, ಸೋಮಶೇಖರ ಸಜ್ಜನ, ಶೋಭಾ ಭಾರಸ್ಕರ್, ಸುಮನ್ ಭಾರಸ್ಕರ, ಉಮಾಶ್ರೀ, ಸುಶೀಲಾಬಾಯಿ ಹತ್ತೂರ, ಇಕೋ ಕ್ಲಬ್ ಸಂಘಟಕಿ ಸಂಗೀತಾ ಪಾಟೀಲ ಇದ್ದರು.



ಕಿರುಸುದ್ದಿ

ಪರಿಸರ ರಕ್ಷಣೆಗೆ ಗಿಡ-ಮರ ಬೆಳೆಸಿ



ಕನಕಗಿರಿ: ವಿಶ್ವ ಪರಿಸರ ದಿನವನ್ನು ಪ್ರತಿ ವರ್ಷ ಜೂ.5ರಂದು ವಿಶ್ವಾದ್ಯಂತ ಆಚರಿಸಲಾಗುತ್ತದೆ. ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು, ಸುಸ್ಥಿರ ಭವಿಷ್ಯದ ದೃಷ್ಟಿಯಿಂದ, ಪರಿಸರವನ್ನು ಉಳಿಸಬೇಕು ಗಿಡ-ಮರಗಳನ್ನು ಬೆಳೆಸಬೇಕು ಎಂದು ಕಾಲೇಜಿನ ಪ್ರಾಂಶುಪಾಲ ಬಜರಂಗ ಬಲಿ ಹೇಳಿದರು.

ಅವರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾಲೇಜಿನ ಆವರಣದಲ್ಲಿ 50 ಕ್ಕುಎಚ್ಚು ಗಿಡ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಿ ಮಾತನಾಡಿದ ಅವರು, ಪರಿಸರವು ಸಕಲ ಜೀವ ಸಂಕುಲಗಳ ಬದುಕಿನ ಅಡಿಪಾಯ. ಪ್ರಸ್ತುತ, ಈ ಪರಿಸರವೇ ಅನೇಕ ಗಂಭೀರ ಸಮಸ್ಯೆಗಳೊಂದಿಗೆ ಹೋರಾಡುತ್ತಿದೆ. ಹವಾಮಾನ ಬದಲಾವಣೆ, ಕೈಗಾರಿಕೀಕರಣ, ಇಂಧನಗಳ ಅತಿಯಾದ ಬಳಕೆ ಮತ್ತು ಅರಣ್ಯನಾಶವು ವಾತಾವರಣದಲ್ಲಿನ ಹಸಿರುಮನೆ ಅನಿಲಗಳ ಪ್ರಮಾಣವನ್ನು ಹೆಚ್ಚಿಸುತ್ತಿದೆ. ಪರಿಣಾಮವಾಗಿ, ಜಾಗತಿಕ ತಾಪಮಾನವು ಏರುತ್ತಿದೆ. ಹವಾಮಾನ ಬದಲಾವಣೆಯು ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರವಾಹಗಳು, ಬರಗಳು, ಚಂಡಮಾರುತಗಳು, ಕಾಡ್ಗಿಚ್ಚು, ತೀವ್ರವಾದ ಶಾಖ ಸೇರಿದಂತೆ ಪ್ರಕೃತಿ ವಿಕೋಪಗಳಿಗೆ ಕಾರಣವಾಗುತ್ತಿದೆ. ನಗರಿಕರ, ಅಭಿವೃದ್ಧಿ, ಅರಣ್ಯನಾಶ, ಪ್ಲಾಸ್ಟಿಕ್‌ನ ಅತಿಯಾದ ಬಳಕೆ ಒಟ್ಟಾರೆಯಾಗಿ ಮನುಷ್ಯನ ಸ್ವಾರ್ಥದಿಂದ ಪರಿಸರ ನಾಶವಾಗುತ್ತಿದೆ. ಹಾಗಾಗಿ ಪರಿಸರವನ್ನು ಉಳಿಸಬೇಕು ಗಿಡ-ಮರಗಳನ್ನು ಬೆಳೆಸಬೇಕು ಎಂದು ಹೇಳಿದರು.

ಇದೇ ವೇಳೆ ಸಹಾಯಕ ಪ್ರಾಧ್ಯಾಪಕ ಸಂಗಮೇಶ, ದತ್ತಾಂಶ ನಮೂದು ಸಹಾಯಕಿ ಜ್ಯೋತಿ ಸಿ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ರಾಯರೆಡ್ಡಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಕುಕನೂರು: ಯಲಬುರ್ಗಾ ಶಾಸಕ ಬಸವರಾಜ್ ರಾಯರೆಡ್ಡಿ ಅವರಿಗೆ ಸಚಿವ ಖಾತೆ ನೀಡಬೇಕೆಂದು ಕಾಂಗ್ರೆಸ್ ಮುಖಂಡ ರಾಘವೇಂದ್ರ ಕಾತರಕಿ ಆಗ್ರಹಿಸಿದ್ದಾರೆ. ಯಲಬುರ್ಗಾ ವಿಧಾನಸಭಾ ಕ್ಷೇತ್ರದಿಂದ 6 ಬಾರಿ ಶಾಸಕರಾಗಿ ಆಯ್ಕೆಯಾಗಿ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿ ಮಾಡಿದ ಶಾಸಕ ಬಸವರಾಜ್ ರಾಯರಡ್ಡಿ ಅವರಿಗೆ ಸಚಿವ ಸ್ಥಾನ ನೀಡಲು ಮುಂದಾಗಬೇಕು. ಇವರಿಗೂ 1994-1996 ರಲ್ಲಿ ವಸತಿ ಸಚಿವರಾಗಿ, 2016-2018ರಲ್ಲಿ ಉನ್ನತ ಶಿಕ್ಷಣ ಸಚಿವರಾಗಿ ಹಾಗೂ 1996-1998ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಸಿಎಂ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾಗಿ 3 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಈ ಬಾರಿ ನಮ್ಮ ತಾಲೂಕಿನ ಹೆಮ್ಮೆಯ ಶಾಸಕರಿಗೆ ಸಚಿವ ಸ್ಥಾನ ಕೊಡಲೇಬೇಕೆಂದು ಮುಖಂಡ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ವಿಶ್ವ ಪರಿಸರ ದಿನಾಚರಣೆ



ಗಂಗಾವತಿ: ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ಗಂಗಾವತಿ ವಿಧಾನಸಭಾ ಕ್ಷೇತ್ರದ ಗಡ್ಡಿ- ಉಡಮಕಲ್, ಚಿಕ್ಕ ಬೊಮ್ಮನಾಳ, ಹಾಸಗಲ್, ಮೆತಗಲ್ , ಇರಕಲ್ಲಗಡ, ಕಾಮನೂರು, ಕಲ್ಲ ತಾವರಗೆರೆ ಗ್ರಾಮಗಳಲ್ಲಿ ಆಸ್ಪತ್ರೆ ರಸ್ತೆ ಬದಿ ಶಾಲಾ ಕಾಂಪೌಂಡ್ ಗಳಲ್ಲಿ ಗಂಗಾವತಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಸಸಿಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಣೆ ಮಾಡಲಾಯಿತು. ಮುಖಂಡ ಸಿಂಗನಾಳ ವಿರೂಪಾಕ್ಷಪ್ಪ , ಭಾರತೀಯ ಜನತಾ ಪಾರ್ಟಿ ಗ್ರಾಮೀಣ ಮಂಡಲ ಅಧ್ಯಕ್ಷ ಆಗೋಲಿ ದುರ್ಗಪ್ಪ, ವೀರಬಸಪ್ಪ ಶೆಟ್ರು, ಅಶೋಕ್ ಕಲ್ಲಾವರಗೇರಿ, ದೇವಾನಂದ ದಾಸನಾಳ, ಮಂಜುನಾಥ್ ಗೊಂದಿ, ಮಲ್ಲೇಶಪ್ಪ ಗುಮಗೇರಿ, ಮನೋಹರ್ ಗೌಡ ಹೇರೂರು, ಸಂಗಮೇಶ್ ಬಾಗವಾಡಗಿ,ಗಂಗಾಧರ್ ಸ್ವಾಮಿ, ಪ್ರಶಾಂತ್ ಕುಲಕರ್ಣಿ, ವಿರೂಪಾಕ್ಷಿ ದನಕನ್ ದೊಡ್ಡಿ, ಯಮನೂರಪ್ಪ ತಾಳಕನಕಪುರ, ಪರಸಪ್ಪ ನಾಯಕ್, ಸಿದ್ದಲಿಂಗಯ್ಯ ಸ್ವಾಮಿ ಗಡ್ಡಿ ಮಠ, ವಿರೂಪಾಕ್ಷ ಗೌಡ ಹಾಸಗಲ್ ಉಪಸ್ಥಿತರಿದ್ದರು.



ಮಸ್ಕಿ: ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,ಧನಗರವಾಡಿಯಲ್ಲಿ 'ಏಕ್ ಪೆಡ್ ಮಾ ಕೆ ನಾಮ್' (ತಾಯಿಗೊಂದು ಮರ) ಹಸಿರು ಆಂದೋಲನ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿ ಜರುಗಿತು.

ಬಿಜೆಪಿಯಿಂದ ಸಸಿ ನೆಡುವ ಕಾರ್ಯಕ್ರಮ

ಕಲಬುರಗಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಯುವ ಮೋರ್ಚಾ ಮಹಾನಗರ ಜಿಲ್ಲಾ ಘಟಕದ ವತಿಯಿಂದ ನಗರದ ರೋಟರಿ ಕ್ಲಬ್ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಳ್ಳಲಾಯಿತು. ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ಚವ್ಹಾಣ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮಕ್ಕೆ ಬಿಜೆಪಿ ಜಿಲ್ಲಾ ಅಧ್ಯಕ್ಷ ಚಂದು ಪಾಟೀಲ್ ಚಾಲನೆ ನೀಡಿದರು. ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣ ನಿರ್ಮಾಣದ ಮಹತ್ವವನ್ನು ಪ್ರತಿಪಾದಿಸಿದ ಮುಖಂಡರು ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸಿದರು. ಮಾತನಾಡಿದ ಮುಖಂಡರು, ವಿಶ್ವ ಪರಿಸರ ದಿನವು ಕೇವಲ ಆಚರಣೆಗೆ ಸೀಮಿತವಾಗದೆ, ಪರಿಸರ ಸಂರಕ್ಷಣೆಯ ಸಂಕಲ್ಪವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ದಿನವಾಗಬೇಕು ಎಂದು ಅಭಿಪ್ರಾಯಪಟ್ಟರು. ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಅಶೋಕ್ ಬಗಲಿ, ಶಾಸಕ ಅವಿನಾಶ ಜಾಧವ, ಅವ್ವಣ್ಣಾ ಮ್ಯಾಕೇರಿ,ಶರಣಪ್ಪ ತಳವಾರ, ಉಮೇಶ್ ಪಾಟೀಲ್, ಮಹಾದೇವ ಬೆಳಮಗಿ, ಶಿವಯೋಗಿ ನಾಗನಹಳ್ಳಿ, ಲಿಂಗರಾಜ ಬಿರಾದಾರ, ಶಂಭುಲಿಂಗ ಬಳಬಟ್ಟಿ, ಶರಣು ಸಜ್ಜನ, ಶಿವಲಿಂಗ ಪಾಟೀಲ್ (ಸಂಚಾಲಕರು), ಸೌರಭ ರಂಗದಳ (ಸಹ-ಸಂಚಾಲಕರು), ಚನ್ನಬಸಪ್ಪ ಭಂಗೆ, ಶರಣು ಲೆಂಗಟಿ, ಮಹೇಶ್ ಹರ್ವಾಲ, ಸಚಿನ್ ಬನ್ನಿ, ಗಂಗಾಧರ, ಅಮಿತ್ ಕುಲಕರ್ಣಿ, ಮಲ್ಲಿಕಾರ್ಜುನ ಕೊಂಡೆದ ಸೇರಿದಂತೆ ಹಲವಾರು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಕಲಬುರಗಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಯುವ ಮೋರ್ಚಾ ಮಹಾನಗರ ಜಿಲ್ಲಾ ಘಟಕದ ವತಿಯಿಂದ ನಗರದ ರೋಟರಿ ಕ್ಲಬ್ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಳ್ಳಲಾಯಿತು.

ವಿಶ್ವ ಪರಿಸರ ದಿನಾಚರಣೆ | ನ್ಯಾಯಾಧೀಶೆ ಮಾಲಾ ಸಲಹೆ

ಮುಂದಿನ ಪೀಳಿಗೆಗೆ ಪರಿಸರ ರಕ್ಷಿಸಿ

ರಾಯಚೂರು: ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಮರ ಗಿಡಗಳನ್ನು ಕಡಿಯುವ ಮೂಲಕ ನಮ್ಮ ಉತ್ತಮ ಪರಿಸರ ಹಾಳು ಮಾಡುತ್ತಿದ್ದು, ನಾವೆಲ್ಲರೂ ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಪ್ರಸ್ತುತ ಸಂಭವಿಸುತ್ತಿರುವ ಪ್ರಕೃತಿ ವಿಕೋಪದ ಜತೆಗೆ ಮತ್ತಷ್ಟು ಘೋರ ವಿಕೋಪಗಳನ್ನು ನಾವು ಎದುರಿಸಬೇಕಾಗುತ್ತದೆ ಎಂದು ರಾಯಚೂರಿನ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಮಾಲಾ ಎನ್.ಡಿ. ಹೇಳಿದರು.

ಶುಕ್ರವಾರ ನೂತನ ನ್ಯಾಯಾಲಯ ಕಟ್ಟಡದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ, ಜಿಲ್ಲಾಡಳಿತ, ಅರಣ್ಯ ಇಲಾಖೆ ಹಾಗೂ ಜಿಲ್ಲಾ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಂದಿನ ಪೀಳಿಗೆಗೆ ಒಳ್ಳೆಯ ಬದುಕು ನೀಡುವ ನಿಟ್ಟಿನಲ್ಲಿ ಉತ್ತಮ ಪರಿಸರವನ್ನು ನೀಡುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಗಿಡಗಳನ್ನು ನೆಟ್ಟಾಕ್ಷಣ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಅದನ್ನು ಒಂದು ಹಂತದವರೆಗೆ ಅವುಗಳ ಪೋಷಣೆ ಮಾಡಿ ಜನ, ಜಾನುವಾರುಗಳಿಗೆ ಬಲಿಯಾಗದಂತೆ ಕಾಪಾಡ ಬೇಕಿದೆ ಎಂದರು.

ಪ್ರಕೃತಿಯಿಂದ ಪ್ರೇರಿತವಾಗಿದೆ. ಹವಾಮಾನಕ್ಕಾಗಿ. ನಮ್ಮ ಭವಿಷ್ಯಕ್ಕಾಗಿ ಎಂಬುದು 2026ರವಿಶ್ವಪರಿಸರದಿನದಅಧಿಕೃತಘೋಷವಾಕ್ಯ ಆಗಿದ್ದು, ಕಲ್ಯಾಣ ಕರ್ನಾಟಕದ ಭಾಗದಲ್ಲಿ ಪರಿಸರ ಪ್ರಮಾಣ ಕಡಿಮೆ ಇದೆ. ಮಳೆಗಾಲದಲ್ಲಿ ಸಸಿಗಳನ್ನು ನೆಟ್ಟರೆ ಮುಂದಿನ ದಿನಗಳಲ್ಲಿ ತಾಪಮಾನವನ್ನು ತಗ್ಗಿಸಿ ವಾತಾವರಣದಲ್ಲಿ ಬದಲಾವಣೆಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು.



> **ರಾಯಚೂರಿನಲ್ಲಿ ವರ್ಷದಿಂದ ವರ್ಷಕ್ಕೆ ತಾಪಮಾನವು ಹೆಚ್ಚಳವಾಗುತ್ತಿದ್ದು, ಅದನ್ನು ನಿಯಂತ್ರಣ ಮಾಡಲು ಗಿಡಮರಗಳಿಂದ ಸಾಧ್ಯ. ರಾಜ್ಯ ಕಾನೂನು ಪ್ರಾಧಿಕಾರದ ಆದೇಶದಂತೆ ರಾಜ್ಯದಲ್ಲಿ 5 ಕೋಟಿ ಸಸಿಗಳನ್ನು ನೆಡಲಾಗುತ್ತದೆ. 2 ಕೋಟಿ ಸಸಿಗಳನ್ನು ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಹಾಗೂ 3 ಕೋಟಿ ಸಸಿಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಾಕಲಾಗುತ್ತದೆ. ಶಾಲಾ ಹಾಗೂ ಕಾಲೇಜು ಸೇರಿದಂತೆ ಸ್ಥಳವಕಾಶ ಇರುವ ಕಡೆಗಳಲ್ಲಿ ಸಸಿಗಳನ್ನು ಹಾಕಲಾಗುತ್ತದೆ.**
>
> ■ **ಸಿದ್ದರಾಮಪ್ಪ ಕಲ್ಯಾಣರಾವ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ**

ಜಿಲ್ಲಾವಕೀಲರಸಂಘದಅಧ್ಯಕ್ಷಮಲ್ಲಿಕಾರ್ಜುನ, ರಾಯಚೂರಿನ ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ ಬಾಬು, ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಗೌರವಾನ್ವಿತ ಶ್ರೀಕಾಂತ್ ಎಸ್.ವಿ., ಸಿಜೆಎಂ ನ್ಯಾಯಾಲಯದ ಪ್ರಧಾನ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ಬಿ.ಟಿ.ಅನ್ನಪೂರ್ಣೇಶ್ವರಿ, ಜೆಎಂಎಫ್‌ಸಿ ನ್ಯಾಯಾಲಯದ 1ನೇ ಹೆಚ್ಚುವರಿ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ಶಂಕರಪ್ಪ ಮಾಲಶೆಟ್ಟಿ, ಜೆಎಂಎಫ್‌ಸಿ ನ್ಯಾಯಾಲಯದ 2ನೇ ಹೆಚ್ಚುವರಿ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ಸಾಗರ್ ಗುರುಗೌಡ ಪಾಟೀಲ, ಜೆಎಂಎಫ್‌ಸಿ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಚನ್ನಬಸಪ್ಪ ಕೂಡಿ, ವಲಯ ಅರಣ್ಯ ಅಧಿಕಾರಿ ರಾಜೇಶ ನಾಯಕ ಸೇರಿದಂತೆ ಇತರರಿದ್ದರು.

ಪರಿಸರದ ಮೂಲ ಸ್ವರೂಪ ಉಳಿಸಿಕೊಳ್ಳೋಣ

ಕುಷ್ಟಗಿ: ಪರಿಸರದ ಮೂಲ ಸ್ವರೂಪವನ್ನು ಉಳಿಸಿಕೊಂಡಾಗ ಮಾತ್ರ ನೈಜ ಪರಿಸರ ರಕ್ಷಣೆಯಾಗುತ್ತದೆ ಎಂದು ಎಸ್‌ವಿಸಿ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಜಗದೀಶ್ ಅಂಗಡಿ ಹೇಳಿದರು.

ಎಸ್‌ವಿಸಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಜಗತ್ತು ಪರಿಸರವನ್ನು ತಾನೇ ನಿರ್ಮಿಸಿಕೊಳ್ಳುತ್ತದೆ. ಸಹಸ್ರ ವರ್ಷಗಳಿಂದ ಈ ಪ್ರಕ್ರಿಯೆಯಿಂದಾಗಿ ಕಾಡುಗಳು ನಿರ್ಮಾಣಗೊಂಡವು. ಗಿಡ ನೆಡುವ ಮೂಲಕ ಬೆಳೆಸುವ ಕಾಡು ಮೂಲ ಪರಿಸರದ ಸ್ವರೂಪಕ್ಕೆ ಪೂರಕವಾಗುವುದಿಲ್ಲ. ವಿಶ್ವ ಸೃಷ್ಟಿಸಿರುವ ಕಾಡನ್ನು ಹಾಗೂ ಪರಿಸರದ ಮೂಲ ಸ್ವರೂಪವನ್ನು ಹಾಳಾಗದಂತೆ ಉಳಿಸಿಕೊಳ್ಳುವುದೇ ನಿಜವಾದ ಅರ್ಥದಲ್ಲಿ ಪರಿಸರದ ಸಂರಕ್ಷಣೆ. ಆದ್ದರಿಂದ ಪರಿಸರದ ಮೂಲ ಸ್ವರೂಪ ಉಳಿಸಿಕೊಳ್ಳಲು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯ ಎಂದು ಹೇಳಿದರು.

ಗಿಡ ನೆಡುವುದನ್ನು ವಿದ್ಯಾರ್ಥಿಗಳು ಕಾಯಕವನ್ನಾಗಿ ಮಾಡಿಕೊಳ್ಳಬೇಕು. ನೆಟ್ಟ ಗಿಡ ಬಲಿಷ್ಠ ವಾಗುವವರೆಗೂ ಅದಕ್ಕೆ ನೀರುಣಿಸಬೇಕು. ವಿಶ್ವಪರಿಸರದಿನಾಚರಣೆಯ ಸಂದರ್ಭದಲ್ಲಿ ಮಾತ್ರ ಗಿಡ ಮರಗಳ ಕುರಿತು ಮಾತನಾಡದೇ ಪರಿಸರ ಸಂರಕ್ಷಣೆಯನ್ನು ನಿತ್ಯದ ಮಂತ್ರವನ್ನಾಗಿಸಿಕೊಳ್ಳಬೇಕು ಎಂದು ಎಸ್‌ವಿಸಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಸುರೇಶ್ ಹೊಸಮನಿ ಹೇಳಿದರು. ಎಸ್‌ವಿಸಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಸ್.ಸಿ.ತಿಪ್ಪಾಶೆಟ್ಟಿ ಮಾತನಾಡಿ, ಶುದ್ಧವಾದ ಗಾಳಿ, ನೀರು ಮತ್ತು ಕಾಡು ಉಳಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳು ನಿರಂತರ ಪ್ರಯತ್ನ ಮಾಡಿದರೆ ಮುಂದಿನ ಪೀಳಿಗೆಗೆ ಉತ್ತಮವಾದ ಪರಿಸರ ಉಳಿಸಲು ಸಾಧ್ಯ ಎಂದು ಹೇಳಿದರು.

> **ಪರಿಸರಕ್ಕೆ ಮಾರಕವಾಗುವ ಪ್ಲಾಸ್ಟಿಕ್ ಪದಾರ್ಥಗಳನ್ನು ತ್ಯಜಿಸಬೇಕು. ಶುದ್ಧವಾದ ನೀರಿನ ಮೂಲಗಳನ್ನು ಉಳಿಸಿಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮ ಕುಟುಂಬದ ಸದಸ್ಯರಲ್ಲಿ ಪರಿಸರ ಜಾಗೃತಿ ಮೂಡಿಸಬೇಕು.**
>
> ■ **ಮಹದೇವ್ ಮಧಾಳೆ, ಸಿಬಿಎಸ್‌ಇ ಶಾಲೆಯ ಪ್ರಾಂಶುಪಾಲ**

ಪರಿಸರ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳು ಪ್ರತಿಯೊಬ್ಬ ಶಿಕ್ಷಕರಿಗೆ ವಿವಿಧ ಗಿಡಗಳನ್ನು ಉಡುಗೊರೆಯಾಗಿ ನೀಡಿದರು.



ಪರಿಸರ ಸಂರಕ್ಷಣೆಗೆ ಕೈಜೋಡಿಸಿ: ನ್ಯಾ.ಪ್ರಮೀಳಾ

ಯಲಬುರ್ಗಾ: ಪ್ರತಿಯೊಬ್ಬರೂ ಮರ, ಗಿಡಗಳನ್ನು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ಪ್ರಮೀಳಾ ಎಂ.ಹೇಳಿದರು.

ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ನಿಮಿತ್ತ ಶುಕ್ರವಾರ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇವಲ ಸಸಿಗಳನ್ನು ನೆಟ್ಟರೆ ಸಾಲದು ನೀರುಣಿಸುವ ಮೂಲಕ ಅವುಗಳನ್ನು ಕಾಪಾಡುವ ಕಾಯಕವನ್ನು ನಾವುಗಳು ಮಾಡಬೇಕು ಎಂದರು.

ಉತ್ತಮ ಪರಿಸರ ನಿರ್ಮಾಣದಿಂದ ನಮ್ಮ ಸುತ್ತಲಿನ ಪರಿಸರ ಮಾಲಿನ್ಯತಡೆಗಟ್ಟುವ ಜತೆಗೆ ಪರಿಸರ ಸಂರಕ್ಷಣೆಯಿಂದ ಆರೋಗ್ಯಯುತ ಸಮಾಜ ನಿರ್ಮಾಣದಿಂದ ಉತ್ತಮ ಮಳೆ,ಬೆಳೆ ಸಂಪಾದಿಸಿಕೊಳ್ಳಲು ಸಾಧ್ಯವಿದೆ. ಪರಿಸರವನ್ನು ನಾವು ಪ್ರೀತಿಸಿದರೆ ಪರಿಸರ ನಮ್ಮನ್ನು ಪ್ರೀತಿಸುತ್ತದೆ. ಪರಿಸರ ಮೇಲಿನ ಕಾಳಜಿಯಿಂದ ಮನುಕುಲದ ಬದುಕು ಸಮೃದ್ಧಿಗೊಳ್ಳಲು ಸಾಧ್ಯ ಎಂದು ಹೇಳಿದರು.

ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಸಂಜುಕುಮಾರ ಪಚ್ಚೆಪುರೆ ಮಾತನಾಡಿ ಇನ್ನೂ ಪ್ರಕೃತಿ ಇಲ್ಲದೆ ಮಾನವನಿಲ್ಲ ಪರಿಸರ ತನ್ನ ಹಿಂದಿನ ರೂಪವನ್ನು ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಕಾಳಜಿ ಮೂಡಿಸುವಲ್ಲಿ ಇಡೀ ಸಮುದಾಯ ಹೆಚ್ಚು ಶ್ರಮವಹಿಸುವುದು ಅಗತ್ಯವಾಗಿದೆ ಎಂದರು.

ತಹಶೀಲ್ದಾರ್ ಪ್ರಕಾಶ ನಾಶಿ ಮಾತನಾಡಿ, ಪರಿಸರ ನಾಶ ಹೀಗೆ ಮುಂದುವರಿದರೆ ಉಸಿರಾಡುವ ಗಾಳಿಗೂ ಪರಿತಪಿಬೇಕಾದ ಅನಿರ್ವಾಯತೆ ಬಂದದೂಗಿದೆ ಹೀಗಾಗಿ ನಾವುಗಳು ಗಿಡ,ಮರಗಳನ್ನು ಹೆಚ್ಚು ಬೆಳೆಸುವ ಮೂಲಕ ಅವುಗಳ ಸಂರಕ್ಷಣೆ ಮಾಡಿದಾಗ ಸಕಾಲಕ್ಕೆ ಮಳೆ,ಬೆಳೆಯಿಂದ ಸಮೃದ್ಧಿ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಅತಿಥಿಗಳಾಗಿ ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್.ಹೊಂಬಳ, ಸಹಾಯಕ ಸರ್ಕಾರಿ ಅಭಿಯೋಜಕಿ ಗೀತಾ ಅಸೂಟಿ, ವಲಯ ಅರಣ್ಯಾಧಿಕಾರಿ ಬಸವರಾಜ ಗೋಗೇರಿ,ಬಾಬುರಾವ್, ವಕೀಲರಾದ ಸಿ.ಎಸ್.ಗದಗ, ರಾಜಶೇಖರ ನಿಂಗೋಜಿ, ಎ.ಎಂ.ಪಾಟೀಲ, ಎಸ್.ಅಂಗಡಿ, ಕಳಕಪ್ಪ ಬೆಟಗೇರಿ,ನ್ಯಾಯಾಂಗ ಸಿಬ್ಬಂದಿಗಳಾದ ರಾಘವೇಂದ್ರ ಕೋಳಿಹಾಳ, ವಿನಾಯಕ ಮತ್ತಿತರರು ಇದ್ದರು.



ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ವಿಶ್ವ ಪರಿಸರ ದಿನಾಚರಣೆ

ಕಲಬುರಗಿ: ನಗರದ ಶರಣ ಸಿರಸಗಿಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ವೃಕ್ಷಾರೋಪಣ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಡಾ.ಓಂ.ಪ್ರಕಾಶ ಹೆಬ್ಬಾಳ, ನಿವೃತ್ತ ಪ್ರಾಧ್ಯಾಪಕರು ಹಾಗೂ ಪಿಡಿಎ ಕಾಲೇಜಿನ ಉಪ ಪ್ರಾಂಶುಪಾಲರು, ಪರಿಸರ ಸಂರಕ್ಷಣೆ ಮತ್ತು ಪ್ರಕೃತಿಯಲ್ಲಿ ವೃಕ್ಷಗಳ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಪ್ರಸ್ತುತ ಕಾಲದಲ್ಲಿ ವಿಷಪೂರಿತ ಆಹಾರ ಸೇವನೆ, ಹೆಚ್ಚುತ್ತಿರುವ ಪ್ಲಾಸ್ಟಿಕ್ ಬಳಕೆ ಹಾಗೂ ಪರಿಸರ ಮಾಲಿನ್ಯವು ಮಾನವ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಹೆಚ್ಚು ಮರಗಳನ್ನು ನೆಡುವುದು, ನೀರಿನ ಉಳಿತಾಯ ಮಾಡುವುದು ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ರಾಷ್ಟ್ರದ ಸಮೃದ್ಧಿಯನ್ನು ಅಲ್ಲಿನ ಪರಿಸರ ಮತ್ತು ಸದೃಢ ವ್ಯಕ್ತಿತ್ವದ ಆಧಾರದ ಮೇಲೆ ಅಳೆಯಲಾಗುತ್ತದೆ ಎಂದು ಹೇಳಿದರು.



ಶಾಲೆಯ ಕರೆಸ್ಪಾಂಡೆಂಟ್ ಕೃಷ್ಣ ಜೋಶಿ, ಪ್ರಧಾನಾಚಾರ್ಯ ಲಾಲ್ ದೀಪ್ ಶ್ರೀನಿವಾಸನ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಅತಿಥಿಗಳು ಮತ್ತು ವಿದ್ಯಾರ್ಥಿಗಳು ಸೇರಿ ವೃಕ್ಷಾರೋಪಣ ನಡೆಸಿದರು.ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪರಿಸರ ಜಾಗೃತಿಗೆ ಸಂಬಂಧಿಸಿದ ನೃತ್ಯ ಹಾಗೂ ಗೀತೆಗಳ ಪ್ರದರ್ಶನ ನೀಡಿ ಗಮನ ಸೆಳೆದರು. ವಿದ್ಯಾರ್ಥಿನಿ ಅಮೋಜು ಸ್ವಾಗತಿಸಿದರು. ಭಾಗ್ಯಶ್ರೀ ವಂದಿಸಿದರು. ಕುಶಾಲ್ ನಿರೂಪಿಸಿದರು.

ಎಂಎಸ್‌ಎಂಎಸ್ ಕಾನೂನು ಕಾಲೇಜಿನಲ್ಲಿ ಪರಿಸರ ದಿನಾಚರಣೆ

ಶ್ರೀರಾಮನಗರ: ಸಮೀಪದ ಮರಳಿಯ ಎಂಎಸ್‌ಎಂಎಸ್ ಕಾನೂನು ಮಹಾವಿದ್ಯಾಲಯದಲ್ಲಿ ಶುಕ್ರವಾರದಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹಸಿರು ಆವರಣವನ್ನು ನಿರ್ಮಿಸುವ ಮತ್ತು ಪರಿಸರ ಜಾಗೃತಿ ಮೂಡಿಸುವ ನಿಮಿತ್ತ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದ ಸಂಸ್ಥೆಯ ಆಡಳಿತಾಧಿಕಾರಿಗಳಾದ ಎಚ್.ಎಂ.ಬಸವರಾಜ ಸ್ವಾಮಿ ಅವರು ಮಹಾವಿದ್ಯಾಲಯದ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಕೃತಿಯನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಮತ್ತು ಭವಿಷ್ಯದ ವಕೀಲರ ಕರ್ತವ್ಯವಾಗಿದೆ. ಕೇವಲ ಸಸಿ ನೆಡುವುದಷ್ಟೇ ಅಲ್ಲದೆ, ಅವುಗಳನ್ನು ಮರಗಳಾಗಿ ಬೆಳೆಸುವ ಜವಾಬ್ದಾರಿಯನ್ನು ನಾವು ಹೊರಬೇಕಿದೆ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಶಿಲ್ಪಾ ಜಿ.ಬಿರಾದಾರ ಅವರು ಸಸಿಗಳಿಗೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಹತ್ವ ಹಾಗೂ ಕಾನೂನು ಚೌಕಟ್ಟಿನಲ್ಲಿ ಪರಿಸರವನ್ನು ಹೇಗೆ ರಕ್ಷಿಸಬಹುದು ಎಂಬ ಕುರಿತು ಮಾರ್ಗದರ್ಶನ ನೀಡಿದರು.



ಮಹಾವಿದ್ಯಾಲಯದ ಉಪನ್ಯಾಸಕರುಗಳಾದ ವೆಂಕೋಬ ಹಾಗೂ ಶರಣಪ್ಪ ಆರ್.ಸಿ.ಅವರು ಭಾಗವಹಿಸಿ ಪರಿಸರ ದಿನಾಚರಣೆಯ ಮಹತ್ವದ ಕುರಿತು ಮಾತನಾಡಿದರು. ಇವರೊಂದಿಗೆ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು, ಸಸಿಗಳನ್ನು ನೆಟ್ಟು ಪರಿಸರ ಕಾಪಾಡುವ ಸಂಕಲ್ಪ ಮಾಡಿದರು.

ಒಂದೇ ದಿನಕ್ಕೆ ಪರಿಸರ ಕಾಳಜಿ ಸೀಮಿತವಾಗದಿರಲಿ

ಕುಷ್ಟಗಿ: ತಾಲೂಕಿನ ನಿಡಶೇಸಿ ಕೆರೆಯಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಿಭಾಗ, ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಲಯ, ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ವಕೀಲರ ಸಂಘ, ಪೊಲೀಸ್ ಇಲಾಖೆ, ತಾಲೂಕು ಆಡಳಿತ, ತಾಪಂ ಕುಷ್ಟಗಿ ಹಾಗೂ ಕೊರಡಕೇರಾ ಗ್ರಾಪಂ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ್ ಆರ್. ಸಸಿ ನಡುವ ಮೂಲಕ ಚಾಲನೆ ನೀಡಿ ಮಾತನಾಡಿ, ಶುದ್ಧವಾದ ಗಾಳಿ, ಪರಿಸರ ಅವಶ್ಯಕತೆ ಇದೆ. ಮುಂದಿನ ಬಹುಷ್ಯಕ್ಕೆ ಸ್ವಚ್ಛ ಪರಿಸರಬೇಕು. ಇದು ಒಂದು ದಿನಕ್ಕೆ ಸೀಮತವಾಗಬಾರದು ವರ್ಷ ಪೂರ್ತಿ ಪರಿಸರದ ಬಗ್ಗೆ ಕಾಳಜಿ ಇರಬೇಕು. ಗಿಡ, ಮರಗಳನ್ನು ಬೆಳೆಸುವ ಮೂಲಕ ಪರಿಸರ ಬೆಳಿಸಿ ಉಳಿಸಬೇಕಿದೆ ಎಂದರು.



ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್ .ಪೂಜೇರಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮಹಾಂತೇಶ ಚೌವಲಗಿ, ತಹಸೀಲ್ದಾರ ಗುರುರಾಜ ಸಿಪಿಐ ವಿಶ್ವನಾಥ ಹಿರೆಗೌಡ್ರ ಮಾತನಾಡಿದರು.

ವಲಯ ಅರಣ್ಯಾಧಿಕಾರಿ ಶಿವರಾಜ ಮೇಟಿ, ಸಮಾಜಿಕ ವಲಯ ಅರಣ್ಯಾಧಿಕಾರಿ ಶಿವರಾಜ ಜಿ. ತಾಪಂ ನೂತನ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ, ವಕೀಲರ ಸಂಘದ ಅಧ್ಯಕ್ಷ ಎಚ್.ಆರ್.ನಾಯಕ, ಸಹಾಯಕ ಸರಕಾರಿ ಅಭಿಯೋಜಕ ರಾಯನಗೌಡ ಎಲ್., ಅಹಾಯಕ ಅರಕಾರಿ ಅಭಿಯೋಜಕಿ ಇಂದಿರಾ ಸುಹಾಸಿನಿ, ವಕೀಲರ ಸಂಘದ ಕಾರ್ಯದರ್ಶಿ ಶಶಿಧರ ಶೆಟ್ಟರ್, ಪಿಎಸ್‌ಐ ಹನಮಂತಪ್ಪ ತಳವಾರ, ಡಾ.ದೇವೆಂದ್ರಪ್ಪ ಬಳೂಟಗಿ, ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಪ್ರತಿನಿಧಿಗಳು ಮದಲಗಟ್ಟಿ, ನಿಡಶೇಸಿ, ಬೆಂಚಮಟ್ಟಿ, ಬ್ಯಾಲಿಹಾಳ, ಕೊರಡಕೇರಾ ಗ್ರಾಮಸ್ಥರು ಇತರರಿದ್ದರು.

ನಿತ್ಯವೂ ಪರಿಸರ ಸಂರಕ್ಷಣೆಗೆ ಮುಂದಾಗಿ

ಗಂಗಾವತಿ: ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಉತ್ತಮ ಆರೋಗ್ಯ ಹೊಂದಲು ನಮ್ಮ ಸುತ್ತಮುತ್ತ ಸ್ವಚ್ಛ, ಸುಂದರ ಪರಿಸರ ನಿರ್ಮಿಸುವುದು ಅತ್ಯಗತ್ಯವಾಗಿದೆ ಎಂದು ವಡ್ಡರಹಟ್ಟಿ ಗ್ರಾಮ ಪಂಚಾಯತ್ ಪಿಡಿಒ ಸುರೇಶ ಚಲವಾದಿ ಹೇಳಿದರು.

ತಾಲೂಕಿನ ವಡ್ಡರಹಟ್ಟಿ ಗ್ರಾಪಂ ಕಾರ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಗ್ರಾಮಸಭೆಯಲ್ಲಿ ಕಾರ್ಯಕ್ರಮದಲ್ಲಿ ಮಾತನಾಡಿದರು. ವರ್ಷದ ಒಂದು ದಿನ ಬದಲಿಗೆ ನಿತ್ಯವೂ ಪರಿಸರ ಸಂರಕ್ಷಣೆಗಾಗಿ ಮುಂದಾಗಬೇಕು. ಶಾಲಾ ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಬಾಲ್ಯದಲ್ಲೇ ಪರಿಸರ ಕಾಳಜಿ ಬಗ್ಗೆ ಜಾಗೃತಿ ಮೂಡಿಸಬೇಕು. ಪ್ರತಿಯೊಬ್ಬರೂ ಮನೆಗೊಂದು ಸಸಿ ನೆಡಬೇಕು ಎಂದರು.

ಗ್ರಾಪಂ ಆವರಣ ಸೇರಿ ವಿವಿಧೆಡೆ ಸಸಿ ನೆಡಲಾಯಿತು. ಗ್ರಾಪಂ ಕಾರ್ಯದರ್ಶಿಗಳಾದ ಈಶಪ್ಪ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಪಂ ಸಿಬ್ಬಂದಿ ಸೇರಿ ಇತರರಿದ್ದರು.



ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿ



ಮುನಿರಾಬಾದ್: ಅರಣ್ಯ ವಲಯದ ಬಂಡಿಹರ್ಲಾಪುರ ಸರ್ಕಾರಿ ಪ್ರಾಥಮಿಕ ಶಾಲೆ ಸೇರಿದಂತೆ ವಲಯದ ವಿವಿಧ ಶಾಲೆಗಳಲ್ಲಿ ಸಸಿ ನೆಡುವ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪರಿಸರ ದಿನಾಚರಣೆ ಇವತ್ತು ಕೊನೆಯಾಗಿ ಬಾರದು ಪ್ರತಿ ದಿನ ಆಚರಿಸಬೇಕು. ಈಗಿನ ಅವಮಾನ ವಾತಾವರಣ ಸಿಕ್ಕಾಪಟ್ಟೆ ಬದಲಾಗುತ್ತಿದೆ. ಈ ಬದಲಾವಣೆ ತಡೆಗಟ್ಟಲು ಪ್ರತಿ ಮನೆಗೊಂದು ಮರ ಅಥವಾ ಶಾಲೆ ಆವರಣದಲ್ಲಿ ಮರಗಳನ್ನು ಬೆಳೆಸಿ ಪ್ರಾಕೃತಿಗೆ ನಮ್ಮದೆಯಾದ ಕೊಡುಗೆ ಕೊಡಬೇಕು ಎಂದರು.

ಉಪವಲಯ ಅರಣ್ಯ ಅಧಿಕಾರಿ ಲಿಂಗರಾಜ ಶಾಲಾ ಮುಖ್ಯ ಶಿಕ್ಷಕಿ ಪದ್ಮಾವತಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸಿದ್ದಿ ಬಾಷಾ ಗೊರೆಬಾಳ, ಉಪಾಧ್ಯಕ್ಷೆ ಪುಷ್ಪಾ ತಾರಪತಿ, ಶಿಕ್ಷಕಿ ಶೋಭಾ ಸೇರಿದಂತೆ ಸಹ ಶಿಕ್ಷಕರು ಅರಣ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ತಾಯಿಗೊಂದು ಮರ ಕಾರ್ಯಕ್ರಮ

ಮಸ್ಕಿ: ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,ಧನಗರವಾಡಿಯಲ್ಲಿ 'ಏಕ್ ಪೆಡ್ ಮಾ ಕೆ ನಾಮ್' (ತಾಯಿಗೊಂದು ಮರ) ಹಸಿರು ಆಂದೋಲನ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿ ಜರುಗಿತು. ಕಾರ್ಯಕ್ರಮದ ಅಂಗವಾಗಿ ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು,ಶಿಕ್ಷಕರು ಹಾಗೂ ವಾರ್ಡಿನ ಸಾರ್ವಜನಿಕರು ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು. ಅಷ್ಟೇ ಅಲ್ಲದೆ ಈ ಒಂದು ಕಾರ್ಯಕ್ರಮವು ಪರಿಸರ ಜಾಗೃತಿ ಮೂಡಿಸುವುದರ ಜೊತೆಗೆ ತಾಯಿಯ ಮೇಲಿನ ಗೌರವವನ್ನು ವ್ಯಕ್ತಪಡಿಸುವ ವಿಶಿಷ್ಟ ಪ್ರಯತ್ನವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶಾಲೆಯ ಮುಖ್ಯೋಪಾಧ್ಯಾಯ ಶ್ರೀಕಾಂತಮ್ಮ ಮಾತನಾಡಿ, ಮರಗಳು ಪರಿಸರದ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಬೆಳೆಸುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗದ ಉಪನ್ಯಾಸಕರಾದ ಎಚ್.ಕೆ.ಬಡಿಗೇರ ಕಡುಬೂರು, ಮಲ್ಲಪ್ಪ ಎಸ್. ಗೋನಾಳ, ದಲಿತ ಸಂಘರ್ಷ ಸಮಿತಿ ಸಂಯೋಜಕ ಬಣದ ಜಿಲ್ಲಾ ಅಧ್ಯಕ್ಷ, ಶಾಲೆಯ ಶಿಕ್ಷಕಿಯರಾದ ಮಧುಮತಿ, ಮಲ್ಲಮ್ಮ, ಪವಿತ್ರ, ಶಿಕ್ಷಕ ಶಿವಾನಂದ ಪತ್ತಾರ, ಮಲ್ಲಯ್ಯ ಬುಕ್ಕಣ್ಣ ಇತರರಿದ್ದರು.

ಕಿರುಸುದ್ದಿ

ಮತದಾರರ ಪಟ್ಟಿ ಪರಿಷ್ಕರಣೆಗೆ ಜೂ.16 ಕೊನೆ ದಿನ: ಡಿಸಿ ಮನ್ನಿಕೇರಿ

• **ವಿಜಯನಗರ:** ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಪ್ರಗತಿಯಲ್ಲಿದೆ. ಮತದಾರರ ಪಟ್ಟಿಗೆ ಹೆಸರು ಸೇರಿಸಲು, ತೆಗೆದುಹಾಕಲು ಹಾಗೂ ಪ್ರೊಜಿನಿ ಮ್ಯಾಪಿಂಗ್ ಮಾಡಲು ಜೂ.16ರವರೆಗೆ ಅವಕಾಶವಿದೆ. ಆ ಬಳಿಕ ಪೋರ್ಟಲ್ ಫ್ರೀಜ್ ಆಗಲಿದ್ದು, ಕರಡು ಮತದಾರರ ಪಟ್ಟಿ ಪ್ರಕಟವಾಗುವವರೆಗೆ ಯಾವುದೇ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 18 ವರ್ಷ ತುಂಬಿದ ಯುವಕರು ಇನ್ಮುಂದೆ ಚುನಾವಣಾ ಆಯೋಗದ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅಥವಾ ಸ್ಥಳೀಯ ಸರ್ಕಾರಿ ಕಚೇರಿಗಳಲ್ಲಿ ಮತದಾರರ ಸಹಾಯ ಕೇಂದ್ರಯಲ್ಲಿ ಅರ್ಜಿ ಸಲ್ಲಿಸಬಹುದು.ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 1,234 ಮತಗಟ್ಟೆಗಳಿದ್ದು, ಪುರುಷರು 5,65,999, ಮಹಿಳೆಯರು 5,76,735 ಹಾಗೂ 127 ಇತರರು ಸೇರಿದಂತೆ 11,42,861 ಮತದಾರರಿದ್ದಾರೆ. 2002ರ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು ಆಧರಿಸಿ ಅರ್ಹ ಮತದಾರರನ್ನು ಪಟ್ಟಿಯಲ್ಲಿ ಉಳಿಸಲಾಗುತ್ತದೆ. ಜೂನ್ 30ರಿಂದ ಜುಲೈ 29ರವರೆಗೆ ಬಿಎಲ್‌ಒಗಳು ಪ್ರತಿ ಮನೆಗೆ ಗರಿಷ್ಠ 3 ಬಾರಿ ಭೇಟಿ ನೀಡಿ ಪರಿಶೀಲಿಸಲಿದ್ದಾರೆ. ಆಗಸ್ಟ್ 5ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದ್ದು, ಅಕ್ಟೋಬರ್ 7 ರಂದು ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ. ಯಾವುದೇ ಗೊಂದಲಗಳಿಗೆ ಕಿವಿಗೊಡದೆ ಸಾರ್ವಜನಿಕರು ಬಿಎಲ್ ಒಗಳಿಗೆ ಸೂಕ್ತ ಮಾಹಿತಿ ನೀಡಿ ಸಹಕರಿಸಬೇಕು.

ಈ ಕುರಿತಂತೆ ರಾಜಕೀಯ ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟ್(ಬಿಎಲ್‌ಎ)ಗಳಿಗೂ ತಿಳುವಳಿಕೆ ನೀಡಲಾಗುವುದು. ಅವರಿಂದಲೂ ಅಗತ್ಯ ಸಹಕಾರ ಪಡೆಯಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಈ.ಬಾಲಕೃಷ್ಣ ಉಪಸ್ಥಿತರಿದ್ದರು.

ಮುಂದಿನ ಪೀಳಿಗೆಗಾಗಿ ಪರಿಸರ ಉಳಿಸಿ



• **ಮಾನ್ವಿ:** ಪಟ್ಟಣದ ಕಲ್ಮಠದ ವಿರೂಪಾಕ್ಷ ಶಿವಾಚಾರ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಆವರಣದಲ್ಲಿ ಅರಣ್ಯ ಇಲಾಖೆ, ಪ್ರಾದೇಶಿಕ ಅರಣ್ಯ ವಲಯ ಮಾನವಿ, ತಾಲೂಕಾ ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ಕೆಪಿಎಸ್‌ವಿಎಸ್ ಆಯುರ್ವೇದಿಕ್ ಕಾಲೇಜಿನ ದ್ರವ್ಯಗುಣ ವಿಭಾಗ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕಂಚಿ ಮಾಯಣ್ಣ ಗೌತಮ್ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರು ಕೂಡ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಹಾಗೂ ಪ್ರಕೃತಿಯಲ್ಲಿ ಇರುವುದನ್ನು ಬಳಸಿಕೊಳ್ಳುವುದರ ಜೊತೆಗೆ ಮುಂದಿನ ಪೀಳಿಗೆಗಾಗಿ ಅವುಗಳನ್ನು ಉಳಿಸುವ ಕಾರ್ಯವನ್ನು ಮಾಡಬೇಕು. ಗಿಡಗಳನ್ನು ನೆಡುವುದರ ಜೊತೆಗೆ ಅವುಗಳನ್ನು ಕಾಪಾಡಿಕೊಳ್ಳುವುದು ಕೂಡ ಅವಶ್ಯವಾಗಿದೆ ಎಂದು ತಿಳಿಸಿದರು. ವಲಯ ಅರಣ್ಯಾಧಿಕಾರಿ ಪುರುಷೋತ್ತಮ ರಾವಜೀ ಮಾತನಾಡಿದರು. ಕೆಪಿಎಸ್ ವಿಎಸ್ ಆಯುರ್ವೇದಿಕ್ ಕಾಲೇಜಿನ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ನೂರಾರು ವಿವಿಧ ತಳಿಯ ಸಸಿಗಳನ್ನು ನೆಡಲಾಯಿತು. ಕಲ್ಮಠದ ವಿರೂಪಾಕ್ಷ ಶಿವಾಚಾರ್ಯ ಶ್ರೀಗಳು ದಿವ್ಯಸಾನಿಧ್ಯ ವಹಿಸಿದರು. ಸಿವಿಲ್ ನ್ಯಾಯಾಧೀಶರಾದ ಆನಂದ ಎಚ್.ಕೊಣ್ಣೂರು, ಸಹಾಯಕ ಸರ್ಕಾರಿ ಅಭಿಯೋಜಕ ಅರ್ಚನಾ ಯಾದವ, ಕೆಪಿಎಸ್‌ವಿಎಸ್ ಆಯುರ್ವೇದಿಕ್ ಕಾಲೇಜ್ ಪ್ರಾಚಾರ್ಯ ಡಾ.ಜೀವನೇಶ್ವರಯ್ಯ,ತಾ. ವಕೀಲರ ಸಂಘದ ಅಧ್ಯಕ್ಷ ರವಿಕುಮಾರ ಪಾಟೀಲ, ಮಡಿಲು ಹೆಲ್ತ್ ಕೇರ್ ಆಸ್ಪತ್ರೆ ವೈದ್ಯ ಡಾ.ವಸಂತ, ಸಾಮಾಜಿಕ ಅರಣ್ಯ ವಲಯ ಮಾನ್ವಿ ವಲಯ ಅರಣ್ಯಾಧಿಕಾರಿ ಉಮಕಾಂತ, ಪರಿಸರ ಪ್ರೇಮಿ ಸಲಾವುದ್ದೀನ್, ನ್ಯಾಯಾವಾದಿಗಳಾದ ಯಲ್ಲಪ್ಪ ಬಾದರದಿನ್ನಿ, ಚನ್ನಬಸವನಾಯಕ, ಶಶಿಕಾಂತಯ್ಯಸ್ವಾಮಿ ಸೇರಿದಂತೆ ವಕೀಲರ ಸಂಘದ ಪದಾಧಿಕಾರಿಗಳು , ಕೆ.ಪಿ.ಎಸ್.ವಿ.ಎಸ್. ಆಯುರ್ವೇದಿಕ್ ಕಾಲೇಜಿನ ಉಪನ್ಯಾಸಕರು ಹಾಗೂ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದರು.



ಬಳ್ಳಾರಿ: ಸಿಎಂ ಡಿ.ಕೆ.ಶಿವಕುಮಾರ ಅವರ ನೂತನ ಸರ್ಕಾರದಲ್ಲಿ ಡಿಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಡಾ.ಜಿ.ಪರಮೇಶ್ವರ ಅವರನ್ನು ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಹೂಗುಚ್ಛ ನೀಡಿ ಶುಭಾಶಯ ಕೋರಿ ಅಭಿನಂದಿಸಿದರು. ಈ ವೇಳೆ ಯುವ ನಾಯಕ ಬೆಣಕಲ್ ಬಸವರಾಜ ಗೌಡ ಸೇರಿದಂತೆ ಇತರರು ಇದ್ದರು.

ಜೆಸ್ಕಾಂ ಇಲಾಖೆಯಿಂದ ಕಂದಾಯ ವಸೂಲಾತಿ ಅಭಿಯಾನ

• **ಹಗರಿಬೊಮ್ಮನಹಳ್ಳಿ:** ವಿದ್ಯುಚ್ಛಕ್ತಿಯ ಬಿಲ್ ಬಾಕಿ ವಸೂಲಾತಿಗಾಗಿ ಕಂದಾಯ ಅಭಿಯಾನವನ್ನು ಕೈಗೊಳ್ಳಲಾಗಿದೆ ಎಂದು ಜೆಸ್ಕಾಂ ಇಲಾಖೆ ಎಇಇ ಕೆ.ನಾಗರಾಜ ತಿಳಿಸಿದರು. ಶುಕ್ರವಾರ ವಿದ್ಯುಚ್ಛಕ್ತಿ ಬಿಲ್ ಬಾಕಿ ವಸೂಲಾತಿ ಜೂನ್ 2026 ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜೆಸ್ಕಾಂ ಇಲಾಖೆ ಗುಲ್ಬರ್ಗ ನಿಗಮದ ವ್ಯವಸ್ಥಾಪಕರ ಆದೇಶದ ಮೇರೆಗೆ ಹಗರಿಬೊಮ್ಮನಹಳ್ಳಿ ಉಪವಿಭಾಗದ ಎಲ್ಲ ಶಾಖೆ ವ್ಯಾಪ್ತಿಯಲ್ಲಿ ಜೆಸ್ಕಾಂ ಇಲಾಖೆಯಿಂದ ವಿಶೇಷ ಕಂದಾಯ ವಸೂಲಾತಿ ತಂಡಗಳನ್ನು ರಚಿಸಲಾಗಿದೆ. ಈ ವ್ಯಾಪ್ತಿಯಲ್ಲಿ ಬರುವ ಗ್ರಾಹಕರ ವಿದ್ಯುತ್ ಬಾಕಿ ಬಿಲ್‌ನ್ನು ವಸೂಲಾತಿ ಮಾಡುವುದು ಬಿಲ್ ಕೊಡದಿದ್ದರೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವುದು ಈ ತಂಡಗಳ ಕಾರ್ಯನಿರ್ವಹಣೆಯಾಗಿದೆ. ಈ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸುವುದು ವಿದ್ಯುಚ್ಛಕ್ತಿ ಕಂದಾಯ ವಸೂಲಾತಿ ಅಭಿಯಾನದ ಉದ್ದೇಶವಾಗಿದೆ. ಈ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರು ವಿದ್ಯುತ್ ಸಂಪರ್ಕ ಕಟ್ಟು ಮಾಡುವ ಮುನ್ನ 2026 ಜೂನ್ ತಿಂಗಳಿಂದ ವಿದ್ಯುತ್ ಬಿಲ್ ಬಾಕಿ ಮೊತ್ತವನ್ನು ಜೆಸ್ಕಾಂ ವೆಬ್‌ಸೈಟ್ Https\\ gescom.Karnataka.Gov.In ಮೂಲಕ ಅಥವಾ ಫೋನ್ ಪೇ, ಗೂಗಲ್ ಪೇ ಮುಖಾಂತರವಾಗಲಿ ವಿದ್ಯುತ್ ಬಾಕಿ ಬಿಲ್ ಸಕಾಲದಲ್ಲಿ ಪಾವತಿಸುವಂತೆ ತಿಳಿಸಿದರು. ಜೆಸ್ಕಾಂ ಇಲಾಖೆ ರವಿ ಚಂದ್ರಮೋಹನ ನಂದೀಶಪ್ಪ ಮುಂತಾದ ಅಧಿಕಾರಿಗಳು ಮೀಟರ್ ರೀಡರ್‌ಗಳು ಲೈನ್ ಮ್ಯಾನ್ ಇಲಾಖೆ ಸಿಬ್ಬಂದಿಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.



ಹಗರಿಬೊಮ್ಮನಹಳ್ಳಿ: ಗ್ರಾಹಕರಲ್ಲಿ ಜಾಗೃತಿ ಮೂಡಿಸುವುದು ಉದ್ದೇಶದಿಂದ ಶುಕ್ರವಾರ ಹಮ್ಮಿಕೊಂಡಿದ್ದ ವಿದ್ಯುಚ್ಛಕ್ತಿ ಬಿಲ್ ಬಾಕಿ ವಸೂಲಾತಿ ಜೂನ್ 2026 ಅಭಿಯಾನಕ್ಕೆ ಜೆಸ್ಕಾಂ ಇಲಾಖೆ ಎಇಇ ಕೆ.ನಾಗರಾಜ ಚಾಲನೆ ನೀಡಿದರು. ಜೆಸ್ಕಾಂ ಇಲಾಖೆ ರವಿ ಚಂದ್ರಮೋಹನ ನಂದೀಶಪ್ಪ ಮುಂತಾದ ಅಧಿಕಾರಿಗಳು ಮೀಟರ್ ರೀಡರ್‌ಗಳು ಲೈನ್ ಮ್ಯಾನ್ ಇಲಾಖೆ ಸಿಬ್ಬಂದಿಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ವಿಶ್ವ ಪರಿಸರ ದಿನಾಚರಣೆ | ನ್ಯಾ.ಸಿದ್ದಲಿಂಗಪ್ರಭು ಅಭಿಮತ

ಆರೋಗ್ಯಕ್ಕೆ ಉತ್ತಮ ಪರಿಸರ ಅವಶ್ಯ

• **ಬಳ್ಳಾರಿ:** ಮಾನವನ ಉತ್ತಮ ಆರೋಗ್ಯಕ್ಕೆ ಶುದ್ಧವಾದ ಗಾಳಿ, ನೀರು ಮತ್ತು ಉತ್ತಮ ಆಹಾರ ಅತ್ಯಂತ ಪ್ರಮುಖವಾದ ಅಗತ್ಯಗಳಾಗಿದ್ದು, ಇವೆಲ್ಲವೂ ನಮಗೆ ಪ್ರಕೃತಿಯಿಂದಲೇ ದೊರೆಯುತ್ತಿವೆ. ನಮ್ಮ ದೈನಂದಿನ ಜೀವನ ಕ್ರಮಕ್ಕೂ ಮತ್ತು ಪರಿಸರಕ್ಕೂ ಒಂದು ಅವಿನಾಭಾವ ಸಂಬಂಧವಿದೆ ಎಂದು ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಸಿದ್ದಲಿಂಗಪ್ರಭು ಅವರು ಹೇಳಿದರು.



ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಶುಕ್ರವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಪಂ, ಅರಣ್ಯ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಳ್ಳಾರಿ ಪ್ರಾದೇಶಿಕ ಕಚೇರಿ ಆಶ್ರಯದಲ್ಲಿ ಪ್ರಕೃತಿಯಿಂದ ಪ್ರೇರಿತ-ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ ಎಂಬ ಘೋಷ ವಾಕ್ಯದೊಂದಿಗೆ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪರಿಸರದಿಂದ ಪ್ರೇರಣೆಗೊಂಡು, ನಮ್ಮ ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಮತ್ತು ಅತ್ಯುತ್ತಮ ಹವಾಮಾನಕ್ಕಾಗಿ ನಾವು ಪಣತೊಡಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ ಎನ್.ಹೊಸಮನೆ ಅವರು ಹಾಗೂ ಅರಣ್ಯ ಇಲಾಖೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ ಕೆ.ಎನ್ ಮಾತನಾಡಿದರು.

> **ಪರಿಸರ ದಿನಾಚರಣೆ ಎಂದರೆ ಕೇವಲ ಗಿಡ ನಡುವುದು ಮಾತ್ರವಲ್ಲ, ನಮ್ಮ ದೈನಂದಿನ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವುದಾಗಿದೆ. ಆದಕ್ಕಾಗಿ 3ಆರ್ ಸೂತ್ರ ಪಾಲಿಸಬೇಕಾಗಿದೆ. ಪ್ಲಾಸ್ಟಿಕ್ ಬಳಕೆಯನ್ನು ಗಣನೀಯವಾಗಿ ಕಡಿಮೆ ಮಾಡಬೇಕು.**
> ■ ಡಾ.ಬಸವರಾಜ ಕೆ.ಎನ್, ಅರಣ್ಯ ಇಲಾಖೆ ಉಪ ಅರಣ್ಯ ಸಂರಕ್ಷಣಾಧಿಕಾರಿ

ವಿಶ್ರೀಕೃ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ನಾಗಭೂಷಣ ವಿ.ಚರಂತಿಮಠ ಹಾಗೂ ವೀರಶೈವ ಕಾಲೇಜ್ ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಜಿ.ಮನೋಹರ ವಿಶೇಷ ಉಪನ್ಯಾಸ ನೀಡಿದರು.

ಇದಕ್ಕೂ ಮುನ್ನ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಆವರಣದಲ್ಲಿ ಗಣ್ಯರು ಸಸಿಗಳನ್ನು ನೆಡುವ ಮೂಲಕ ಗಣ್ಯರು ನಿರೂಣಿಸಿದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಸರ್ಕಾರಿ, ಖಾಸಗಿ, ಅನುದಾನಿತ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜೆ.ಎಂ.ತಿಪ್ಪೇಸ್ವಾಮಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಿ.ಎಸ್.ಮುರಳೀಧರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಳ್ಳಾರಿ ಪ್ರಾದೇಶಿಕ ಕಚೇರಿ ಪರಿಸರ ಅಧಿಕಾರಿ ಟಿ.ಎಂ.ಸಿದ್ದೇಶ್ವರ ಬಾಬು, ಸ್ಕೌಟ್ ಮತ್ತು ಗೈಡ್ಸ್ ಅಧಿಕಾರಿಗಳು ಇದ್ದರು.

1 ಸಾವಿರ ಎಕರೆ ಅರಣ್ಯ ವಿಸ್ತರಣೆ ಗುರಿ

• **ವಿಜಯನಗರ:** ಚಿಕ್ಕಜೋಗಿಹಳ್ಳಿಯಲ್ಲಿ 300 ಎಕರೆ ಪ್ರದೇಶದಲ್ಲಿ ಮಿಯಾವಾಕಿ ಮಾದರಿಯ ದಟ್ಟ ಕಾಡು ಬೆಳೆಸುವ ಕಾರ್ಯಕ್ಕೆ ಚಾಲನೆ ದೊರೆಕಿದ್ದು, ಮುಂದಿನ ದಿನಗಳಲ್ಲಿ ಇದನ್ನು 1,000 ಎಕರೆಗೆ ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ಶಾಸಕ ಡಾ.ಎನ್ .ಟಿ.ಶ್ರೀನಿವಾಸ ಹೇಳಿದರು.

ಜಿಲ್ಲಾಡಳಿತ, ಜಿಪಂ, ಅರಣ್ಯ ಇಲಾಖೆ ವತಿಯಿಂದ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಚಿಕ್ಕಜೋಗಿಹಳ್ಳಿಯಲ್ಲಿ ಶುಕ್ರವಾರ ನಡೆದ ಅಮ್ಮನಿಗಾಗಿ ಒಂದು ಗಿಡ ಸಸಿ ನೆಡುವ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, 1972ರಲ್ಲಿ ಚಿಕ್ಕಜೋಗಿಹಳ್ಳಿಗೆ ಭೇಟಿ ನೀಡಿದ್ದ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು ಈ ಭಾಗದ ಅಭಿವೃದ್ಧಿ ಕನಸು ಕಂಡಿದ್ದರಾದರೂ, ಈಗ ಅದು ಸಾಕಾರಗೊಳ್ಳುತ್ತಿದೆ. ಈ ಹಿಂದೆ ಹುಣಸೆ ಸಂಸ್ಕರಣಾ ಘಟಕ, ಈಗ ಸಿಎಸ್‌ಆರ್ ನಿಧಿಯಡಿ ನಾಲ್ಕು ಕೆರೆಗಳ ಅಭಿವೃದ್ಧಿ ಹಾಗೂ ಅರಣ್ಯ ಸಸಿಗಳನ್ನು ನೆಡುವುದರಿಂದ ಈ ಭಾಗದ ಅಭಿವೃದ್ಧಿಗೆ ಪೂರಕವಾಗಿಲದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಕಾರ್ಯವನ್ನು ಅಭಿನಂದಿಸಿದರು.

ಗಿಡ ನೆಟ್ಟ ಪ್ರತಿಯೊಂದು ಮಗುವಿನ ಹೆಸರನ್ನು ಕಲ್ಲಿನ ಫಲಕದ ಮೇಲೆ ಕೆತ್ತಿ ಆಯಾ ಗಿಡದ ಪಕ್ಕದಲ್ಲಿ ಇಡಲು ಸಚಿವರು ಸೂಚಿಸಿದ್ದು, ಇದು ಪರಿಸರ ಕಾಳಜಿಗೆ ಹೊಸ ಇತಿಹಾಸ ಬರೆಯಲಿದೆ ಎಂದರು.

ಇದರೊಂದಿಗೆ ತಾಲೂಕಿಗೆ ಕೃಷಿ ವಿಜ್ಞಾನ ಕೇಂದ್ರ ಮಂಜೂರಾಗಿದ್ದು, ಅದಕ್ಕಾಗಿ ಕೂಡ್ಲಿಗಿ ಬಳಿ 50 ಎಕರೆ ಜಮೀನು ಕಾಯ್ದಿರಿಸಲಾಗಿದೆ. ರೈತರಿಗಾಗಿ ಹುಣಸೆಹಣ್ಣು ಸಂಸ್ಕರಣಾ ಘಟಕವೂ ಬರಲಿದೆ. ಗ್ರಾಮದಲ್ಲಿ ಎಲ್‌ಕೆಜಿಯಿಂದ ಪಿಯುಸಿವರೆಗಿನ ಸಮಗ್ರ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್) ಹಾಗೂ ಎಸ್‌ಟಿ ಹೆಣ್ಣು ಮಕ್ಕಳ ಮೆಟ್ರಿಕ್ ನಂತರದ ವಸತಿ ನಿಲಯ ಮಂಜೂರಾಗಿದೆ. ಜೊತೆಗೆ ಏಕಲವ್ಯ ಮಾದರಿ ವಸತಿ ಶಾಲೆ ಸ್ಥಾಪನೆಗೆ ಕೇಂದ್ರದ ಅಂತಿಮ ಅನುಮೋದನೆ ಬಾಕಿ ಇದೆ ಎಂದು ಸಚಿವರ ಗಮನ ಸೆಳೆದರು.

ವೇದಿಕೆ ಮೇಲೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಚೀಫ್ ಜನರಲ್ ಮ್ಯಾನೇಜರ್ ಜೂಲಿ ಸ್ಮಿತಾ ಸಿನ್ಹಾ, ಎನ್‌ಟಿಎಂಸಿಎಲ್ ವ್ಯವಸ್ಥಾಪಕ ನಿರ್ದೇಶಕ ವಿಜಯರಂಜನ್ ಸಿಂಗ್, ವಿತ್ತ ಸಚಿವರ ಆಪ್ತ ಕಾರ್ಯದರ್ಶಿ ಅನಿರುದ್ಧ ಶ್ರವಣ, ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಜಿಪಂ ಸಿಇಒ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಅರಣ್ಯ ಇಲಾಖೆ ಉಪ ಸಂರಕ್ಷಣಾಧಿಕಾರಿ ಅನುಪಮಾ ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ಪ್ರಕೃತಿ ಮೇಲೆ ಮನುಷ್ಯನ ದಾಳಿ ಸಲ್ಲದು

• **ಯಾದಗಿರಿ:** ಜಾಗತಿಕರಣದ ಇಂದಿನ ದಿನಗಳಲ್ಲಿ ನಗರೀಕರಣದ ಹೆಚ್ಚಿನ ಪ್ರಭಾವದಿಂದ ಪ್ರಕೃತಿ ಮೇಲೆ ದಾಳಿಯಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ ಜೈನ್ ಕಳವಳ ವ್ಯಕ್ತಪಡಿಸಿದರು.

ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಲುಂಬಿನಿ ಉದ್ಯಾನವನದಲ್ಲಿ ಸಸಿನೆಟ್ಟು ಮಾತನಾಡಿ, ವರ್ಷದಿಂದ ವರ್ಷಕ್ಕೆ ಬೇಸಿಗೆ ಕಾಲದಲ್ಲಿ ಬಿಸಿಲಿನ ಪ್ರಖರತೆ ಹೆಚ್ಚುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಳೆ ಪ್ರಮಾಣ ಕಡಿಮೆಯಾಗುತ್ತಿದೆ. ಇದಕ್ಕೆ ಪರಿಸರದ ಅಸಮತೋಲನವೇ ಕಾರಣವಾಗಿದೆ ಎಂದರು.

ಜಿಲ್ಲಾಧಿಕಾರಿ ರಾಹುಲ ತುಕಾರಾಮ ಪಾಂಡ್ವೆ ಮಾತನಾಡಿ, ಪರಿಸರ ರಕ್ಷಣೆ, ಜಲ ಮೂಲಗಳು, ಕೆರೆ ಕಟ್ಟೆಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪರಿಸರ, ನೀರು, ಆಹಾರ ಶುಚಿಯಾದಾಗ ಜೀವಸಂಕುಲದ ರಕ್ಷಣೆಯಾಗಲಿದೆ. ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಹಸಿರು ಹೊದಿಕೆಯನ್ನು ಹೆಚ್ಚಿಸುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದರು.

ಇದಕ್ಕೂ ಮುನ್ನ ಲುಂಬಿನಿ ಉದ್ಯಾನವನದ ಆವರಣದಲ್ಲಿ ಗಣ್ಯರು ಗಿಡಗಳನ್ನು ನೆಡುವ ಮೂಲಕ ಹಸಿರು ಅಭಿಯಾನಕ್ಕೆ ಚಾಲನೆ ನೀಡಿ, ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನೂರಾರು ಉಚಿತ ಸಸಿಗಳನ್ನು ವಿತರಿಸಲಾಯಿತು.

> **ಎಲ್ಲರೂ ತಮ್ಮ ಸುತ್ತಲಿನ ಪರಿಸರ ಶುಚಿಯಾಗಿ ಗಿಡಬೇಕು. ಹಸಿ ಕಸ ,ಒಣ ಕಸ ವಿಂಗಡಿಸಿ ವಿಲೇವಾರಿ ಮಾಡಬೇಕು. ಸಸಿಗಳನ್ನು ನೆಟ್ಟು ಅರಣ್ಯ ಬೆಳೆಸುಬೇಕು.**
> ■ ಮನೋಜ ಜೈನ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸಸಿಗಳನ್ನು ಸಾರ್ವಜನಿಕರು ತಮ್ಮ ಮನೆಗಳ ಸುತ್ತಮುತ್ತ ನೆಟ್ಟು, ಪೋಷಿಸಿ ಬೆಳೆಸುವ ಮೂಲಕ ಯಾದಗಿರಿ ಜಿಲ್ಲೆಯನ್ನು ಹಸಿರು ಜಿಲ್ಲೆಯನ್ನಾಗಿ ಮಾಡಲು ಕೈಜೋಡಿಸಬೇಕು ಎಂಬ ಸಂದೇಶವನ್ನು ನೀಡಿದರು.

ಜಿಪಂ ಸಿಇಒ ಲವಿಶ್ ಓರಡಿಯಾ, ಯುಡಾ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ, ಸಹಾಯಕ ಆಯುಕ್ತ ಶ್ರೀಧರ ಗೋಟುರ, ಉಪ ಅರಣ್ಯ ಸಂರಕ್ಷಣಾಧಿಕಾರಿ ಚೇತನ ಗಸ್ತಿ, ನಗರಸಭೆ ಆಯುಕ್ತ ಉಮೇಶ ಚವ್ಹಾಣ ಇದ್ದರು.



ಉತ್ತಮ ಅಧ್ಯಯನದಿಂದ ಸಾಧನೆ ಸಾಧ್ಯ: ಶಾಸಕ ಕೃಷ್ಣಾ

• **ಹೂವಿನಹಡಗಲಿ:** ಉತ್ತಮ ಅಧ್ಯಯನ ಮಾಡುವ ಮೂಲಕ ಶೈಕ್ಷಣಿಕ ಸಾಧನೆ ಮಾಡಿ ಎಂದು ಶಾಸಕ ಕೃಷ್ಣಾ ನಾಯ್ಕ್ ಹೇಳಿದರು.

ಪಟ್ಟಣದ ಎಸ್‌ಆರ್‌ಎಂಪಿ ಪ್ರಥಮ ದರ್ಜೆ ಪದವಿ ಕಾಲೇಜ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ತಾಲೂಕಿನ ಎಲ್ಲ ಸರ್ಕಾರಿ ಕಾಲೇಜ್‌ಗಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಲಾಗಿದ್ದು, ಗ್ರಾಮಾಂತರ ವಿದ್ಯಾರ್ಥಿಗಳು ಸಹ ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಯಾಗಲು ಪೂರಕ ವ್ಯವಸ್ಥೆ ಕಲ್ಪಿಸುತ್ತಿದ್ದೇನೆ. ಕಳೆದ ಮೂರು ವರ್ಷಗಳಿಂದಲೂ ನಿರಂತರವಾಗಿ ಈ ಕಾಲೇಜಿಗೆ ಹೆಚ್ಚಿನ ಅನುದಾನವನ್ನು ನೀಡಿ ಅಭಿವೃದ್ಧಿ ಪಡಿಸಿದ್ದೇನೆ ಇನ್ನೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಸಿದ್ದನಾಗಿದ್ದು, ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ಸಾಧನೆಯನ್ನು ಕೈಗೊಳ್ಳಿರಿ ಎಂದರು.

ಹೊಸಪೇಟೆಯ ಸಾಹಿತಿ ವಾಸುದೇವ ಕರ್ಣಂ ಭಟ್ ಮಾತನಾಡಿ, ಪದವಿ ಹಂತವು ಪ್ರತಿಯೊಬ್ಬ ವಿದ್ಯಾರ್ಥಿಗೆ ಜೀವನದಲ್ಲಿ ಪ್ರಮುಖ ಘಟ್ಟ, ಇಲ್ಲಿ ಎಚ್ಚರಿಕೆಯಿಂದ ವಿದ್ಯಾಭ್ಯಾಸ ಮಾಡಿದರೆ ಜೀವನದಲ್ಲಿ ಯಶಸ್ವಿಯಾಗುತ್ತಿರಿ. ಕಾರಣ ಜೀವನವನ್ನು ರೂಪಿಸಿಕೊಳ್ಳಲು ಇದು ಸಕಲವಾಗಿದ್ದು ಈ ಸಮಯವನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಹೇಳಿದರು.



ಕಾಲೇಜಿನ ಪ್ರಾಚಾರ್ಯ ವಿಜಯಕುಮಾರ ಹೇಮಪ್ಪ ಮಾತನಾಡಿ, ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಅಧ್ಯಯನ ನಡೆಸುವ ನಮ್ಮ ಮಹಾ ವಿದ್ಯಾಲಯದಲ್ಲಿ ಈ ಬಾರಿ ನಾಲ್ಕು ರ್‍ಯಾಂಕ್ ಲಭಿಸಿದೆ. ಅಲ್ಲದೆ ಸಾಂಸ್ಕೃತಿಕ ಮತ್ತು ಕ್ರೀಡೆ ಎಲ್ಲ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಬರುವ ದಿನಗಳಲ್ಲಿ ನಮ್ಮ ಸಿಬ್ಬಂದಿ ಇನ್ನು ಹೆಚ್ಚಿನ ಶ್ರಮವಹಿಸಿ ಕಾರ್ಯನಿರ್ವಹಿಸುವ ಮೂಲಕ ಮಾದರಿ ಕಾಲೇಜ್‌ನ್ನಾಗಿ ಮಾಡುವ ಸಂಕಲ್ಪ ಹೊಂದಿದ್ದೇವೆ ಎಂದರು.

ಸಿಡಿಸಿ ಸದಸ್ಯ ಎಂಟುಮನಿ ರಮೇಶ, ಎಚ್.ಡಿ.ಜಗ್ಗಿನ್, ಟಿ.ಮಹಾಂತೇಶ, ಕೆ.ಅಯ್ಯನಗೌಡ್ರು, ಉಪನ್ಯಾಸಕ ಸಿಬ್ಬಂದಿ ಇದ್ದರು.



ಕೊಟ್ಟೂರು: ಪಪಂ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಪಪಂ ಆವರಣದಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ಪಪಂ ಮುಖ್ಯ ಅಧಿಕಾರಿ ಎ.ನಸರುಲ್ಲಾ, ಇಂಜಿನಿಯರ್ ಸಿದ್ದಯ್ಯ, ನಿಬ್ಬೂರ್ ವಿಜಯಕುಮಾರ, ಪರಶುರಾಮ್, ಪಪಂ ಇತರೆ ಸಿಬ್ಬಂದಿಗಳು ಹಾಜರಿದ್ದರು.

ವಿಶ್ವ ಪರಿಸರ ದಿನಾಚರಣೆ

• **ಬಳ್ಳಾರಿ (ಕರೂರು):** ಸಮೀಪದ ಉತ್ತನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆ ಮುಖ್ಯಗುರು ಗಂಗಾಧರ ಅವರು, ಸಸಿಗಳಿಗೆ ನೀರು ಹಾಕುವ ಮೂಲಕ ಅರಣ್ಯ ಬೆಳೆಸಿ, ನಾಡು ಉಳಿಸಿ, ಪ್ರತಿಯೊಬ್ಬರು ಮನೆ ಆವರಣದಲ್ಲಿ ಗಿಡಗಳನ್ನು ಬೆಳೆಸಿ ಸಂರಕ್ಷಿಸಬೇಕು ಎಂದು ಪ್ರತಿಜ್ಞಾವಿಧಿ ಬೋಧಿಸಿದರು. ಈ ವೇಳೆ ಉತ್ತನೂರು ಗ್ರಾಪಂ ಪಿಡಿಒ ಶಿವಕುಮಾರ, ಕಾರ್ಯದರ್ಶಿ ಕೆ ಶಿವಮೂರ್ತಿ ಅವರು ಮಾತನಾಡಿದರು. ಶಿಕ್ಷಕರಾದ ಪಿರಣ್ಣ, ದಿನೇಶ್, ಭೀಮರೆಡ್ಡಿ ಸೇರಿದಂತೆ ಶಾಲೆಯ ಮುದ್ದು ಮಕ್ಕಳು ಇದ್ದರು.



ತಾಪಮಾನ ತಣಿಸಲು, ಜೀವರಾಶಿ ಉಳಿಸಲು ಪರಿಸರ ಸಂರಕ್ಷಣೆ ಅಗತ್ಯ

• **ಹಗರಿಬೊಮ್ಮನಹಳ್ಳಿ:** ಪರಿಸರ ಅಸಮತೋಲನದಿಂದಾಗಿ ಹವಾಮಾನ ವೈಪರಿತ್ಯದಿಂದಾಗಿ ಪ್ರಕೃತಿ ವಿಕೋಪ ಜಾಗತಿಕ ತಾಪಮಾನದಂತಹ ಸಮಸ್ಯೆಗಳು ಹೆಚ್ಚಾಗಿವೆ. ಪರಿಸರ ಸಮತೋಲನಕ್ಕಾಗಿ ತಾಪಮಾನ ತಣಿಸಲು ಮುಂದಿನ ಪೀಳಿಗೆಯ ಸಕಲ ಜೀವರಾಶಿಗಳನ್ನು ಉಳಿಸಲು ಹೆಚ್ಚೆಚ್ಚು ಗಿಡ ಮರಗಳನ್ನು ಬೆಳೆಸಿ, ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರದಾಗಿದೆ ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ ನಾಯ್ಕ್ ತಿಳಿಸಿದರು.

ಶುಕ್ರವಾರ ಆಡಳಿತ ಸೌಧದ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೊರೊನಾ ಸಂದರ್ಭದಲ್ಲಿ ಆಮ್ಲಜನಕದ ಅಗತ್ಯತೆ ಬಗ್ಗೆ ಪಾಠ ಕಲಿತಿದ್ದೇವೆ. ಶುದ್ಧವಾದ ಗಾಳಿ, ನೀರು, ಆಹಾರಕ್ಕೆ ಹೆಚ್ಚೆಚ್ಚು ಮರ ಗಿಡಗಳನ್ನು ಬೆಳೆಸುವುದು. ಸಾಂಕ್ರಾಮಿಕ ರೋಗಗಳಿಂದ ದೂರವಿರಲು ಪರಿಸರ ಸ್ವಚ್ಛತೆ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ತಾಪಂ ಇಒ ಪಲ್ಲಯ್ಯನ ಕೋಟಿ ವಿಶ್ವನಾಥ ಮಾತನಾಡಿ, ರೈತರು ತಮ್ಮ ಹೊಲಗಳ ಬದುವಿನಲ್ಲಿ ಹೊಂಗೆ, ಗ್ಲೀರಿ ಸಿಡಿಣೆ ಮುಂತಾದ ಗಿಡ ಮರಗಳನ್ನು ಬೆಳೆಸುವುದರಿಂದ ಮರಗಳ ಎಲೆಗಳಿಂದ ಹೊಲಗಳಿಗೆ ನೈಸರ್ಗಿಕವಾಗಿ ಗೊಬ್ಬರ ಸಿಗುತ್ತದೆ. ಶುದ್ಧವಾದ ಗಾಳಿ ಮಳೆ ಸಿಗಲು ಸಹಕಾರಿ ಆಗುತ್ತದೆ. ಪರಿಸರ ಸಂರಕ್ಷಣೆ ಮಾಡಿದಂತಾಗುತ್ತದೆ ಎಂದರು.



> **ಡಿ.ಕೆ.ಶಿವಕುಮಾರ ಸರ್ಕಾರ ರೈತರಿಗೆ ಹೆಚ್ಚಾಗಿ ನೀರಾವರಿ ಸೌಲಭ್ಯವನ್ನು ಕಲ್ಪಿಸಬೇಕು. ರೈತರು ಹಾಗೂ ಬಡವರ ಮಕ್ಕಳಿಗೆ ಉನ್ನತ ಶಿಕ್ಷಣದ ವರೆಗೂ ಉಚಿತ ಶಿಕ್ಷಣ ನೀಡಬೇಕು. ಬಗರ್ ಹುಕುಂ ಸಾಗುವಳಿ ಮಾಡುವ ರೈತರಿಗೆ ಪಟ್ಟ ನೀಡಬೇಕು.**
> ■ ಕೆ. ನೇಮಿರಾಜ ನಾಯ್ಕ್, ಶಾಸಕರು

ಜೆಡಿಎಸ್ ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು, ತಾಲೂಕ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಮುಖಂಡರಾದ ಈ ಕೃಷ್ಣಮೂರ್ತಿ, ಚಿತವಾಡಗಿ ಪ್ರಕಾಶ, ಹೋಟೆಲ್ ಸಿದ್ದರಾಜು ಆಪ್ತ ಸಹಾಯಕ ಬ್ಯಾಟಿ ನಾಗರಾಜ ರಾಹುಲ, ಉಪ ತಹಶೀಲ್ದಾರ್ ಶಿವಕುಮಾ ಗೌಡ, ಶಿಕ್ಷಣ ಇಲಾಖೆ ಜಗದೀಶ, ನೀರು ಸರಬರಾಜು ಇಲಾಖೆ ಬಸವ ರೆಡ್ಡಿ, ಲೋಕೋಪಯೋಗಿ ಇಲಾಖೆ ಸತೀಶ ನಾಯಕ, ಬಿಸಿಎಂ ಇಲಾಖೆ ಕೊಟ್ರೇಶ ನಾಯ್ಕ್, ತೋಟಗಾರಿಕೆ ಇಲಾಖೆ ವಿಜಯಕುಮಾರ, ತಾಲೂಕ ವೈದ್ಯಾಧಿಕಾರಿ ಡಾ.ಪ್ರವೀಣಕುಮಾರ, ಸಾಮಾಜಿಕ ಹಾಗೂ ವಲಯ ಅರಣ್ಯ ಇಲಾಖೆ ಡಿಆರ್‌ಎಫ್‌ಗಳಾದ ಕೆ.ಎಂ.ಮಧುಸೂದನ್, ಮಂಜು ನಾಯ್ಕ, ಅರಣ್ಯ ಇಲಾಖೆ ಗಂಟಿ ರಮೇಶ, ನಾಗರಾಜ ಸಿಬ್ಬಂದಿಗಳಾದ ಕೆ.ಎಂ.ಮಲ್ಲಿಕಾರ್ಜುನ ಮಾಬುಸಾಬ್ ಪಾಲ್ಗೊಂಡಿದ್ದರು.

ಪರಿಸರ ಸ್ನೇಹಿ ಅಭ್ಯಾಸಗಳನ್ನು ಅಳವಡಿಸಿಕೊಳ್ಳಿ

• **ಸಿರುಗುಪ್ಪ:** ದೈನಂದಿನ ಜೀವನದಲ್ಲಿ ಪರಿಸರ ಸ್ನೇಹಿ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಸರಳ ಮತ್ತು ಪ್ರಭಾವಶಾಲಿಯಾಗಿದೆ ಎಂದು ಸಹಾಯಕ ಸರ್ಕಾರಿ ಅಭಿಯೋಜಕ ಶಿವರಾಜ ಹೇಳಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೊನಿ ಇಂದಿರಾ ಪ್ರಿಯದರ್ಶಿನಿ ಉದ್ಯಾನವನದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ನಗರಸಭೆ ಕಾರ್ಯಾಲಯ, ಅರಣ್ಯ ಇಲಾಖೆ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಶುಕ್ರವಾರ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಗರದ ಹನುಮಂತಮ್ಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಜಾಥ ನಡೆಸಿದರು. ಉಪತಹಶೀಲ್ದಾರ್ ಸಿದ್ಧಾರ್ಥ ಕಾರಂಜಿ, ನಗರಸಭೆ ಪೌರಾಯುಕ್ತ ಕೆ.ಗಂಗಾಧರ, ವಕೀಲರ ಸಂಘದ ಅಧ್ಯಕ್ಷ ಯು. ವೆಂಕೋಬ, ವಲಯ ಅರಣ್ಯಾಧಿಕಾರಿಗಳಾದ ಕೆ.ಕಾಂತರಾಜು, ರಾಘವೇಂದ್ರಯ್ಯ, ಉಪವಲಯ ಅರಣ್ಯಾಧಿಕಾರಿಗಳಾದ ನಾಡಗೌಡರ ಬಸವನಗೌಡ, ಕೆಂಚಪ್ಪ, ಶಂಕರ, ವಕೀಲರಾದ ವೆಂಕಟೇಶ ನಾಯ್ಕ, ಮಲ್ಲಿಗೌಡ, ಅಬ್ದುಲ್ ಸಾಬ್ ಭಾಗವಹಿಸಿದ್ದರು.



ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ: ಪ್ರಭಂಜನ್

• **ಬಳ್ಳಾರಿ:** ಪರಿಸರ ನಾಶವಾದರೆ ಆಪತ್ತು ಕಟ್ಟಿಟ್ಟ ಬುತ್ತಿ, ಪರಿಸರ ರಕ್ಷಣೆ, ಪರಿಸರ ಉಳಿವಿಗಾಗಿ ಎಲ್ಲರೂ ಶ್ರಮಿಸಬೇಕು ಎಂದು ರೂಟ್ಸ್ ಪಬ್ಲಿಕ್ ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ, 1ನೇ ವಾರ್ಡ್ ಮಹಾನಗರ ಪಾಲಿಕೆ ಸದಸ್ಯ ಎಂ.ಪ್ರಭಂಜನ್ ಕುಮಾರ್ ಹೇಳಿದರು.

ನಗರದ ಪ್ರತಿಷ್ಠಿತ ರೂಟ್ಸ್ ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರ ದಿನಾಚರಣೆ ವೇದಿಕೆ ಕಾರ್ಯಕ್ರಮಕ್ಕೆ ಸೀಮಿತವಾಗಬಾರದು. ಪ್ರತಿಯೊಬ್ಬರೂ ಪರಿಸರದ ಕುರಿತು ಕಾಳಜಿ, ಉಳಿಸಿ, ಬೆಳೆಸುವ ಕಾರ್ಯವಾಗಬೇಕು. ಉತ್ತಮ ಪರಿಸರದಿಂದ ಆಚರಿಸುವ ನಾನಾ ರೋಗಗಳು ದೂರವಾಗಲಿವೆ. ಪ್ರತಿಯೊಬ್ಬರು ಮನೆ ಆವರಣದಲ್ಲಿ ಮರಗಳನ್ನು ಬೆಳೆಸಿ, ಉಳಿಸುವ ಸಂಕಲ್ಪ ಮಾಡಬೇಕು. ಅರಣ್ಯ ಸಂಪತ್ತು ಉಳಿದರೆ, ಕಾಲಕಾಲಕ್ಕೆ ಮಳೆಯಾಗಿ ಫಸಲು ಸಮೃದ್ಧಿಯಾಗಿ ಬರಲಿದೆ. ಜೊತೆಗೆ ವಾತಾವರಣ ಶುದ್ಧಿಯಾಗಿರಲಿದೆ. ಕೇವಲ ಅಧಿಕಾರಿಗಳೇ ಈ ಕೆಲಸಕ್ಕೆ ಮುಂದಾಗಬೇಕು ಎನ್ನುವುದಲ್ಲ. ಅವರೊಂದಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.



ಇದಕ್ಕೂ ಮುನ್ನ ಶಾಲೆ ಆವರಣದಲ್ಲಿ ಮಕ್ಕಳೊಂದಿಗೆ ನೂರಾರು ಸಸಿಗಳನ್ನು ನೆಡುವ ಮೂಲಕ ಪರಿಸರ ಪ್ರೇಮ ಮೆರೆದರು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿಗಳು, ಮಕ್ಕಳು, ವಿವಿಧ ಗಣ್ಯರು ಉಪಸ್ಥಿತರಿದ್ದರು.